# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತಮೂರನೆಯ ಅಧಿವೇಶನ

24ನೇ ಜುಲೈ 2024
ಬುಧವಾರ

## ವಿಷಯಾನುಕ್ರಮಣಿಕೆ (INDEX)


1. ಪ್ರಕಟಣೆ

"ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿಯವರು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರನ್ನಾಗಿ ನೇಮಿಸಿರುವ ಕುರಿತು."

2. ಸದನದಲ್ಲಿ ಹಾಜರಿರಬೇಕಾದ ಸಚಿವರುಗಳ ಗೈರುಹಾಜರಿ ಬಗ್ಗೆ.

- ಶ್ರೀ ಎಸ್.ಎಲ್.ಭೋಜೇಗೌಡ

3. ಅಭಿನಂದನೆ

"ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿಯವರು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರ ಸ್ಥಾನಕ್ಕೆ ನೇಮಕಗೊಂಡಿರುವ ಕುರಿತು."

- ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು)
- ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ)
- ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು)
- ಶ್ರೀ ಸಿ.ಟಿ.ರವಿ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)
- ಶ್ರೀಮತಿ ಹೇಮಲತಾ ನಾಯಕ್
- ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ
- ಶ್ರೀ ಐವನ್ ಡಿ'ಸೋಜಾ
- ಶ್ರೀ ತಿಪ್ಪಣ್ಣಪ್ಪ ಕಮಕನೂರ
- ಶ್ರೀ ಎಸ್.ವ್ಹಿ.ಸಂಕನೂರ
- ಶ್ರೀ ಕೇಶವ ಪ್ರಸಾದ್ ಎಸ್.
- ಶ್ರೀ ಎನ್.ರವಿಕುಮಾರ್
- ಶ್ರೀ ಗೋವಿಂದ ರಾಜು
- ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.

- ಶ್ರೀ ಎಂ.ನಾಗರಾಜು
- ಶ್ರೀ ಎ.ವಸಂತ ಕುಮಾರ್
- ಶ್ರೀಮತಿ ಭಾರತಿ ಶೆಟ್ಟಿ
- ಶ್ರೀ ಟಿ.ಎ.ಶರವಣ
- ಶ್ರೀ ಪಿ.ಹೆಚ್.ಪೂಜಾರ್
- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಎಂ.ಎಲ್.ಅನಿಲ್ ಕುಮಾರ್
- ಶ್ರೀಮತಿ ಉಮಾಶ್ರೀ
- ಶ್ರೀ ಶಶೀಲ್ ಜಿ.ನಮೋಶಿ
- ಶ್ರೀ ಪ್ರಾಣೇಶ್ ಎಂ.ಕೆ. (ಉಪ ಸಭಾಪತಿಯವರು)
- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)

## 4. ಪ್ರಶ್ನೋತ್ತರಗಳು

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**1006 – ರೈತರಿಗೆ ಬೆಳೆ ನಷ್ಟ ಪರಿಹಾರ ನೀಡುವ ಕುರಿತು.**
- ಶ್ರೀ ಕೇಶವ ಪ್ರಸಾದ್. ಎಸ್(ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿಯವರ ಪರವಾಗಿ)
- ಶ್ರೀ ಕೃಷ್ಣಭೈರೇಗೌಡ (ಕಂದಾಯ ಸಚಿವರು)

**950 – ಕೊಡಗು ಜಿಲ್ಲೆಯಲ್ಲಿ ಅವ್ಯಾಹತವಾಗಿ ನಡೆಯುತ್ತಿರುವ ಭೂ ಪರಿವರ್ತನೆಯ ಕುರಿತು.**
- ಶ್ರೀ ಕುಶಾಲಪ್ಪ ಎಂ.ಪಿ.(ಸುಜಾ)
- ಶ್ರೀ ಕೃಷ್ಣಭೈರೇಗೌಡ (ಕಂದಾಯ ಸಚಿವರು)

**927 – ಶ್ರೀ ಕುಕ್ಕೆ ಸುಬ್ರಮಣ್ಯ ದೇವಾಲಯದಲ್ಲಿ ಅನ್ನ ಪ್ರಸಾದಕ್ಕೆ ದಿನಸಿ ಖರೀದಿ ಕುರಿತು.**
- ಶ್ರೀ ಯು.ಬಿ.ವೆಂಕಟೇಶ್
- ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಮತ್ತು ಮುಜರಾಯಿ ಸಚಿವರು)

**910– ಮೀನುಗಾರಿಕೆ ಇಲಾಖೆಯಲ್ಲಿ ಹಣ ದುರುಪಯೋಗವಾಗಿರುವ ಬಗ್ಗೆ.**
- ಶ್ರೀ ತಿಪ್ಪಣ್ಣಪ್ಪ ಕಮಕನೂರ
- ಶ್ರೀ ಮಂಕಾಳ ಎಸ್.ವೈದ್ಯ (ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)

**882– ವಿಕಲಚೇತನರಿಗೆ ನೀಡುತ್ತಿರುವ ಪಿಂಚಣಿಯನ್ನು ಹೆಚ್ಚು ಮಾಡುವ ಬಗ್ಗೆ.**
- ಶ್ರೀ ವೈ.ಎಂ.ಸತೀಶ್
- ಶ್ರೀ ಕೃಷ್ಣಭೈರೇಗೌಡ (ಕಂದಾಯ ಸಚಿವರು)
-

**919 – ಗೃಹ ಮಂಡಳಿಯಿಂದ ನಿರ್ಮಾಣ ಮಾಡಲಾಗಿರುವ ಟೌನ್‌ಶಿಪ್‌ಗಳ ಬಗ್ಗೆ.**
- ಶ್ರೀ ಗೋವಿಂದ ರಾಜು
- ಶ್ರೀ ಬಿ.ಝಡ್ ಜಮೀರ್ ಅಹ್ಮದ್ ಖಾನ್ (ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

**೮೫೮ – ಕಾವೇರಿ 2.0 ತಂತ್ರಾಂಶದಲ್ಲಿ ಸಾರ್ವಜನಿಕರಿಗೆ ಉಂಟಾಗಿರುವ ಸಮಸ್ಯೆಯ ಕುರಿತು.**

- ಶ್ರೀ ಚಿದಾನಂದ್ ಎಂ.ಗೌಡ
- ಶ್ರೀ ಕೃಷ್ಣಭೈರೇಗೌಡ (ಕಂದಾಯ ಸಚಿವರು)

**೯೫೮ – ಲೋಕೋಪಯೋಗಿ ಇಲಾಖೆಯಿಂದ ಕಾಮಗಾರಿಗಳು ಮಂಜೂರಾಗಿರುವ ಬಗ್ಗೆ.**

- ಶ್ರೀ ಎಂ.ಎಲ್.ಅನಿಲ್ ಕುಮಾರ್
- ಶ್ರೀ ಸತೀಶ್ ಜಾರಕಿಹೊಳಿ (ಲೋಕೋಪಯೋಗಿ ಸಚಿವರು)

**೮೮೦ – ರಸ್ತೆ ಸಾರಿಗೆಯ ನಿಗಮಗಳಿಗೆ ಹಣ ಬಿಡುಗಡೆ ಮಾಡುವ ಕುರಿತು.**

- ಶ್ರೀಮತಿ ಭಾರತಿ ಶೆಟ್ಟಿ
- ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಮತ್ತು ಮುಜರಾಯಿ ಸಚಿವರು)
-

**೮೬೨ – ಬೆಳಗಾವಿ ನಗರಕ್ಕೆ ರಿಂಗ್ ರಸ್ತೆ ನಿರ್ಮಿಸುವ ಕುರಿತು.**

- ಶ್ರೀ ಎಂ.ನಾಗರಾಜು
- ಶ್ರೀ ಸತೀಶ್ ಜಾರಕಿಹೊಳಿ (ಲೋಕೋಪಯೋಗಿ ಸಚಿವರು)

**೯೫೯ – ಬೆಳಗಾವಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಕೊಳಗೇರಿ ಪ್ರದೇಶಗಳ ಕುರಿತು.**

- ಡಾ: ತಳವಾರ್ ಸಾಬಣ್ಣ
- ಶ್ರೀ ಬಿ.ಝೆಡ್ ಜಮೀರ್ ಅಹ್ಮದ್ ಖಾನ್ (ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

**೯೦೮ – ಶ್ರೀ ಧರ್ಮರಾಯಸ್ವಾಮಿ ದೇವಸ್ಥಾನದ ಆಸ್ತಿಯ ಕುರಿತು.**

- ಶ್ರೀ ಎನ್.ರವಿಕುಮಾರ್
- ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಮತ್ತು ಮುಜರಾಯಿ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

5. ಕಾಲಾವಕಾಶದ ಕೊರತೆಯಿಂದ ಹಾಗೂ ಸದನದಲ್ಲಿ ಉದ್ಭವಿಸಿದ ಗೊಂದಲದ ವಾತಾವರಣದಿಂದ ಮೊಟಕುಗೊಂಡ ಪ್ರಶ್ನೋತ್ತರವನ್ನು ಕೈಗೆತ್ತಿಕೊಳ್ಳುವಂತೆ ಮಾನ್ಯ ಸದಸ್ಯರಿಂದ ಒತ್ತಾಯ.

**– ಶ್ರೀ ಪಿ.ಹೆಚ್.ಪೂಜಾರ್**

6. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು.

**ಅ) ಗುಮ್ಮಟ ನಗರಿಯಲ್ಲಿ ಮಾದಕ ವ್ಯಸನವು ಯುವಕರ ಆರೋಗ್ಯ, ಶಿಕ್ಷಣ ಹಾಗೂ ವೈಯಕ್ತಿಕ ಸಂಬಂಧಗಳ ಜೊತೆ ಜೀವನವನ್ನು ಹಾನಿ ಮಾಡುತ್ತಿದ್ದು, ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವ ಕುರಿತು.**

- ಶ್ರೀ ಕೇಶವ ಪ್ರಸಾದ್ ಎಸ್.
- ಡಾ: ಜಿ.ಪರಮೇಶ್ವರ (ಗೃಹ ಸಚಿವರು)

**ಆ) ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಕಲಶೇಶ್ವರ ಸ್ವಾಮಿ ದೇವಸ್ಥಾನಕ್ಕೆ ಸೇರಿದ ಸಾವಿರಾರು ಎಕರೆ ಜಮೀನನ್ನು ನ್ಯಾಯಾಲಯವು ಅರಣ್ಯ ಭೂಮಿ ಎಂದು ತೀರ್ಪು ನೀಡಿರುವ ಹಿನ್ನೆಲೆಯಲ್ಲಿ ಸಾಗುವಳಿದಾರರಿಗೆ ಪರ್ಯಾಯ ಜಮೀನು ನೀಡುವ ಕುರಿತು.**

- ಶ್ರೀ ಸಿ.ಟಿ.ರವಿ
- ಶ್ರೀ ಕೃಷ್ಣಭೈರೇಗೌಡ (ಕಂದಾಯ ಸಚಿವರು) (ಮುಜರಾಯಿ ಹೊರತುಪಡಿಸಿ)

**ಇ) ಬೆಳೆ ವಿಮೆ ನೋಂದಣಿ ಸಮಸ್ಯೆಗಳನ್ನು ತ್ವರಿತಗತಿಯಲ್ಲಿ ಸರಿಪಡಿಸಿ, ರೈತರ ಬೆಳೆ ವಿಮೆ ನೋಂದಣಿಗೆ ಅನುಕೂಲ ಮಾಡಿಕೊಡುವ ಕುರಿತು.**

- ಶ್ರೀ ಎಸ್.ಎಲ್. ಭೋಜೇಗೌಡ
- ಶ್ರೀ ಕೃಷ್ಣಭೈರೇಗೌಡ (ಕಂದಾಯ ಸಚಿವರು) (ಮುಜರಾಯಿ ಹೊರತುಪಡಿಸಿ)

**ಈ) ಕುಂದಾಪುರ, ಕಾರ್ಕಳ ಮತ್ತು ಪಶ್ಚಿಮಘಟ್ಟದ ತಪ್ಪಲಿನ ಜನರ ಹಿತದೃಷ್ಟಿಯಿಂದ ಸರ್ವೆ ನಡೆಸಿ, ಅಗತ್ಯವಾಗಿ ಸಂಪರ್ಕ ಸೇತುವೆಯನ್ನು ನಿರ್ಮಿಸುವ ಬಗ್ಗೆ.**

- ಶ್ರೀ ಮಂಜುನಾಥ ಭಂಡಾರಿ
- ಶ್ರೀ ಸತೀಶ್ ಜಾರಕಿಹೊಳಿ (ಲೋಕೋಪಯೋಗಿ ಸಚಿವರು)

**ಉ) 2024-25 ನೇ ಸಾಲಿನ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ವಿಷಯಗಳ ಉಪನ್ಯಾಸಕರನ್ನು ಹೆಚ್ಚುವರಿ ಎಂದು ಗುರ್ತಿಸಿ ತಾತ್ಕಾಲಿಕ ಪಟ್ಟಿ ಮಾಡಿರುವುದನ್ನು ರದ್ದುಪಡಿಸುವ ಕುರಿತು**

- ಶ್ರೀ ಪುಟ್ಟಣ್ಣ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**7. ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳು ಹಾಗೂ ಇನ್ನಿತರ ಸೂಚನೆಗಳಿಗೆ ಸರ್ಕಾರ ಉತ್ತರಗಳನ್ನು ಒದಗಿಸದಿರುವ ಕುರಿತು.**

- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಟಿ.ಎ.ಶರವಣ
- ಶ್ರೀ ಸಿ.ಟಿ.ರವಿ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**8. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಊ) ಗೃಹಲಕ್ಷ್ಮೀ ಯೋಜನೆ" ಅಡಿಯಲ್ಲಿ ಫಲಾನುಭವಿಗಳ ಖಾತೆಗೆ ಹಣ ಜಮೆಯಾಗದಿರುವ ಬಗ್ಗೆ.**

- ಶ್ರೀಮತಿ ಭಾರತಿ ಶೆಟ್ಟಿ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಋ) ತುಮಕೂರು ಜಿಲ್ಲೆಯಲ್ಲಿ ವಸತಿ ಮತ್ತು ನಿವೇಶನರಹಿತರಾದವರು ಸರ್ಕಾರಿ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದು ಅವರುಗಳಿಗೆ ಆದಷ್ಟು ಶೀಘ್ರ ವಸತಿ ಸೌಲಭ್ಯ ಒದಗಿಸುವ ಕುರಿತು.**

- ಶ್ರೀ ಚಿದಾನಂದ್ ಎಂ. ಗೌಡ

– ಶ್ರೀ ಬಿ.ಝಡ್. ಜಮೀರ್ ಅಹ್ಮದ್ ಖಾನ್ (ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

**ಎ) ವರುಣಾರ್ಭಟಕ್ಕೆ ಕೊಡಗು ಜಿಲ್ಲೆಯಲ್ಲಿ ಅತಿವೃಷ್ಟಿ ಉಂಟಾಗಿದ್ದು, ಬೆಳೆನಾಶ, ಕೊಳೆರೋಗ ಕುರಿತು ಸಮೀಕ್ಷೆ ನಡೆಸಿ ಬೆಳೆಗಾರರಿಗೆ ಪರಿಹಾರ ನೀಡುವ ಕುರಿತು.**

– ಶ್ರೀ ಕುಶಾಲಪ್ಪ ಎಂ.ಪಿ (ಸುಜಾ)
– ಶ್ರೀ ಕೃಷ್ಣಭೈರೇಗೌಡ (ಕಂದಾಯ ಸಚಿವರು)

**ಏ) ತಳವಾರ ಜಾತಿಯವರಿಗೆ ಪರಿಶಿಷ್ಟ ಪಂಗಡದ ಜಾತಿ ಪ್ರಮಾಣ ಪತ್ರ ಮತ್ತು ಸಿಂಧುತ್ವ ಪ್ರಮಾಣ ಪತ್ರ ಪಡೆಯಲು ಆಗುತ್ತಿರುವ ತೊಂದರೆಯ ಕುರಿತು.**

– ಡಾ॥ ತಳವಾರ್ ಸಾಬಣ್ಣ
– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಐ) ಹಿಂಬಡ್ತಿಗೊಳಗಾದ ಶಿಕ್ಷಕರನ್ನು ಆಯಾ ಪದವಿಯನ್ನು ಪರಿಗಣಿಸಿ GPT ಶಿಕ್ಷಕರೆಂದು ಸೇವಾ ಜೇಷ್ಠತೆಯೊಂದಿಗೆ ಪದನಾಮೀಕರಣಗೊಳಿಸಿ ಅನುಕೂಲ ಕಲ್ಪಿಸುವ ಕುರಿತು.**

– ಶ್ರೀ ರಾಮೋಜಿ ಗೌಡ
– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಒ) ಹಿಂದಿನ ಸರ್ಕಾರದ ಅವಧಿಯಲ್ಲಿ ಸಂಬಂಧವೇ ಇಲ್ಲದವರಿಗೆ ಬೆಳೆ ನಷ್ಟ ಪರಿಹಾರ ಪಾವತಿಸಿರುವ ಪ್ರಕರಣದ ಬಗ್ಗೆ ಸಮಗ್ರ ತನಿಖೆ ನಡೆಸಿ, ಕಾನೂನು ರೀತ್ಯಾ ಕ್ರಮ ಜರುಗಿಸುವ ಕುರಿತು.**

– ಶ್ರೀ ಯು.ಬಿ.ವೆಂಕಟೇಶ್
– ಶ್ರೀ ಕೃಷ್ಣಭೈರೇಗೌಡ (ಕಂದಾಯ ಸಚಿವರು)

**ಓ) ದಕ್ಷಿಣ ಕನ್ನಡ/ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಆಸುಪಾಸಿನ ಅಡಿಕೆ ಕೃಷಿಕರಿಗೆ ಕೊಳೆರೋಗ ಭೀತಿ ಎದುರಾಗಿರುವ ಬಗ್ಗೆ.**

– ಶ್ರೀ ಐವನ್ ಡಿ'ಸೋಜಾ
– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

9. ಕಾಲಾವಕಾಶದ ಕೊರತೆಯಿಂದ ಹಾಗೂ ಸದನದಲ್ಲಿ ಉದ್ಭವಿಸಿದ ಗೊಂದಲದ ವಾತಾವರಣದಿಂದ ಮೊಟಕುಗೊಂಡ ಪ್ರಶ್ನೋತ್ತರವನ್ನು ಕೈಗೆತ್ತಿಕೊಳ್ಳುವಂತೆ ಮಾನ್ಯ ಸದಸ್ಯರಿಂದ ಒತ್ತಾಯ.

– ಶ್ರೀ ಪಿ.ಹೆಚ್.ಪೂಜಾರ್

10. ಸದನದಲ್ಲಿ ಮೌಖಿಕವಾಗಿ ಉತ್ತರಿಸುವ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳ ಮಂಡನೆ.

11. ವಿಧಾನಪರಿಷತ್ತಿನ ಸಭಾಂಗಣ ಪ್ರವೇಶ ದ್ವಾರದ ಆವರಣಕ್ಕೆ ಹೊಂದಿಕೊಂಡಿರುವ ಉಪಹಾರ ಗೃಹದ ಮುಂಭಾಗದಲ್ಲಿ ಅಧಿವೇಶನದ ಸಂದರ್ಭದಲ್ಲಿ ಜನಸಂದಣಿ ಉಂಟಾಗುತ್ತಿರುವುದರಿಂದ ಸದನಕ್ಕೆ ಆಗಮಿಸುವ ಮಾನ್ಯ ಸಚಿವರು ಹಾಗೂ ಶಾಸಕರ ಚಲನವಲನಕ್ಕೆ ತೊಂದರೆಯಾಗುತ್ತಿರುವ ಕುರಿತು.

- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಪ್ರಾಣೇಶ್ ಎಂ.ಕೆ. (ಉಪ ಸಭಾಪತಿಯವರು)

**12. ನಿಯಮ 59ರ ಮೇರೆಗೆ ನಿಲುವಳ ಸೂಚನೆಯಡಿ ವಿಷಯ ಮಂಡಿಸಲು ಅನುಮತಿ ಕೋರಿಕೆ, ಒತ್ತಾಯ ಮತ್ತು ಧರಣಿ.**

**"ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನ ಹಂಚಿಕೆಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಕುರಿತು"**

- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)
- ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು)
- ಶ್ರೀ ಕೆ.ಎಸ್.ನವೀನ್
- ಶ್ರೀ ಎನ್.ರವಿಕುಮಾರ್
- ಶ್ರೀ ಸಿ.ಟಿ.ರವಿ
- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಪುಟ್ಟಣ್ಣ
- ಶ್ರೀ ಎಸ್.ವ್ಹಿ.ಸಂಕನೂರ
- ಶ್ರೀ ಡಿ.ಎಸ್.ಅರುಣ್
- ಡಾ: ಯತೀಂದ್ರ. ಎಸ್
- ಶ್ರೀ ಐವನ್ ಡಿ'ಸೋಜಾ
- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಪ್ರಕಾಶ್ ಕೆ.ರಾಥೋಡ್
- ಶ್ರೀ ಕೆ.ಜೆ.ಜಾರ್ಜ್ (ಇಂಧನ ಸಚಿವರು)

**(ಸಭಾಪತಿಯವರು ತೀರ್ಪನ್ನು ಕಾಯ್ದಿರಿಸಿದರು)**

**13. ಗಮನ ಸೆಳೆಯುವ ಸೂಚನೆ**

**"ರಾಜ್ಯ ಸರ್ಕಾರದ ಅಧಿಕಾರಿಗೆ, ಕೇಂದ್ರ ಸರ್ಕಾರದ ಅಧಿಕಾರಿಗಳು ನಮ್ಮ ರಾಜ್ಯ ಸರ್ಕಾರ ಹಾಗೂ ಮುಖ್ಯಮಂತ್ರಿಗಳು ಮತ್ತು ಸಚಿವರುಗಳ ಹೇಳಿಕೆಯನ್ನು ದಾಖಲಿಸುವಂತೆ ಒತ್ತಾಯವನ್ನು ಹೇರಿ, ಜೀವ ಬೆದರಿಕೆಯನ್ನು ಹಾಕಿರುತ್ತಾರೆ. ಈ ಸಂಬಂಧ ಸಮಾಜ ಕಲ್ಯಾಣ ಇಲಾಖೆಯ ಹೆಚ್ಚುವರಿ ನಿರ್ದೇಶಕರು ದಿನಾಂಕ 22.07.2024ರಂದು ವಿಲ್ಸನ್ ಗಾರ್ಡನ್ ಪೋಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿದ್ದು, ಕೇಂದ್ರ ಸರ್ಕಾರದ ಉನ್ನತ ಅಧಿಕಾರಿಗಳು ರಾಜ್ಯ ಸರ್ಕಾರಿ ಅಧಿಕಾರಿಗಳ ಕೆಲಸಕ್ಕೆ ಅಡ್ಡಿಯುಂಟು ಮಾಡುತ್ತಿರುವ ಕುರಿತು."**

- ಶ್ರೀ ಯು.ಬಿ.ವೆಂಕಟೇಶ್

**14. ನಿಯಮ 59ರ ಮೇರೆಗೆ ನಿಲುವಳ ಸೂಚನೆಯಡಿ ವಿಷಯ ಮಂಡಿಸಲು ಅನುಮತಿ ಕೋರಿಕೆ, ಒತ್ತಾಯ ಮತ್ತು ಧರಣಿ.**

**"ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನ ಹಂಚಿಕೆಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಕುರಿತು."**

- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)

- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)
- ಶ್ರೀ ಎಸ್.ಎಲ್.ಭೋಜೇಗೌಡ

**15. ಪ್ರಕಟಣೆ**

**"ಕರ್ನಾಟಕ ವಿಧಾನ ಸಭೆಯು ದಿನಾಂಕ 24.07.2024 ರಂದು ಅಂಗೀಕರಿಸಿರುವ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುವ ಕುರಿತು."**

1) ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2024
2) ಕರ್ನಾಟಕ ಮುನಿಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2024
3) ಕರ್ನಾಟಕ ನೀರಾವರಿ (ತಿದ್ದುಪಡಿ) ವಿಧೇಯಕ, 2024
4) ಕರ್ನಾಟಕ ಧನವಿನಿಯೋಗ (ಸಂ:04) ವಿಧೇಯಕ, 2024

**16. ನಿಯಮ 59ರ ಮೇರೆಗೆ ನಿಲುವಳಿ ಸೂಚನೆಯಡಿ ವಿಷಯ ಮಂಡಿಸಲು ಅನುಮತಿ ಕೋರಿಕೆ, ಒತ್ತಾಯ ಮತ್ತು ಧರಣಿ.**

**"ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನ ಹಂಚಿಕೆಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಕುರಿತು."**

- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಯು.ಬಿ.ವೆಂಕಟೇಶ್
- ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು)
- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಸಿ.ಟಿ.ರವಿ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)
- ಶ್ರೀ ಎನ್.ರವಿಕುಮಾರ್

~ ~ ~ ~

(655)24-07-2024/10-00/bkp-vk

**ಕರ್ನಾಟಕ ವಿಧಾನ ಪರಿಷತ್ತು**

**ಬುಧವಾರ, 24ನೇ ಜುಲೈ 2024**

**ಸದನವು ಬೆಂಗಳೂರಿನ ವಿಧಾನಸೌಧದಲ್ಲಿರುವ**

**ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಪೂರ್ವಾಹ್ನ 10 ಗಂಟೆ 08 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು**

**ಪೀಠದಲ್ಲಿ ಉಪಸ್ಥಿತರಿದ್ದರು.**

1. **ಪ್ರಕಟಣೆ**

**"ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿಯವರು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಾಗಿ ನೇಮಕಗೊಂಡಿರುವ ಕುರಿತು."**

- - - -

**ಸಭಾಪತಿಯವರು:-** ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ನಿಯಮ 2(2)ರ ಪ್ರಕಾರ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ ಇವರನ್ನು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರನ್ನಾಗಿ ದಿನಾಂಕ: 24-07-2024 ರಿಂದ ಜಾರಿಗೆ ಬರುವಂತೆ ಮಾನ್ಯತೆ ನೀಡಲಾಗಿದೆ.

ಶ್ರೀಯುತ ಛಲವಾದಿ ಟಿ. ನಾರಾಯಣಸ್ವಾಮಿಯವರೆ, ವಿರೋಧ ಪಕ್ಷದ ನಾಯಕರ ಸ್ಥಾನಕ್ಕೆ ಬನ್ನಿ.

**(ಈ ಹಂತದಲ್ಲಿ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರು ವಿರೋಧ ಪಕ್ಷದ ನಾಯಕರ ಸ್ಥಾನದಲ್ಲಿ ಆಸೀನರಾದರು)**

(ಮುಂದು)

(656) 24.07.2024 10.10 ಎಸ್‌ವಿ-ವಿಕೆ (ಸಭಾಪತಿಯವರ ಉಪಸ್ಥಿತಿ)

**2. ಸದನದಲ್ಲಿ ಹಾಜರಿರಬೇಕಾದ ಸಚಿವರುಗಳ ಗೈರುಹಾಜರಿ ಬಗ್ಗೆ.**

- - - - -

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಪುನಃ ನಮಗೆ ಇದೊಂದು ಬಾಯಿಪಾಠವಾಗಿದೆ. ಏಳು ಜನ ಸಚಿವರಿರಬೇಕು. ಅವರು ಎಲ್ಲಿಯವರೆಗೆ correct ಆಗಿ ಕೂರುವುದಿಲ್ಲವೋ ಅಲ್ಲಿಯವರೆಗೆ ನಾನು ಹೇಳುತ್ತಲೇ ಇರುತ್ತೇನೆ. ನಾನು ನಿಲ್ಲಿಸುವುದಿಲ್ಲ. ಈ ರೀತಿ ಏಕೆ? ಮಾನ್ಯ ಸಭಾಪತಿಯವರ ಗಮನಕ್ಕೆ ತರಬೇಕಾದುದು ನನ್ನ ಕರ್ತವ್ಯ. ಹಾಗಾಗಿ ನಾನು ನನ್ನ ಕರ್ತವ್ಯ ಮಾಡಿದ್ದೇನೆ.

**೩. ಅಭಿನಂದನೆ**

**"ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿಯವರು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರ ಸ್ಥಾನಕ್ಕೆ ನೇಮಕಗೊಂಡಿರುವ ಕುರಿತು."**

**ಶ್ರೀ ಕೃಷ್ಣಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರನ್ನು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಾಗಿ ಅವರ ಪಕ್ಷದವರು ಗುರುತಿಸಿದ್ದು, ಅಧಿಕೃತವಾಗಿ ಇಂದು ಅವರು ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತಿದ್ದಾರೆ. ಅವರಿಗೆ ಸರ್ಕಾರದ ಪರವಾಗಿ ಅಭಿನಂದನೆಗಳನ್ನು ತಿಳಿಸುತ್ತೇನೆ. ಹಾಗೂ ಅವರು ವಿರೋಧ ಪಕ್ಷದ ನಾಯಕರಾಗಿ ಯಶಸ್ವಿಯಾಗಿ ಕೆಲಸ ಮಾಡಲಿ ಎಂದು ನಾನು ಹಾರೈಸುತ್ತೇನೆ. ಎಲ್ಲರಿಗೂ ತಿಳಿದಿರುವಂತೆ ಮೇಲ್ಮನೆಯ ಬಗ್ಗೆ ತಮಗೆ ಹೆಚ್ಚಿನ ವಿಷಯ ಗೊತ್ತಿರುತ್ತದೆ. ಕರ್ನಾಟಕದ ಮೇಲ್ಮನೆ ಬಹಳ ಇತಿಹಾಸವಿರುವಂಥದ್ದು. ಕೆಳಮನೆಗಿಂತಲೂ ಮೊದಲೇ ಮೈಸೂರು ರಾಜಮನೆತನದಲ್ಲಿ ಮೇಲ್ಮನೆ ಇದ್ದುದನ್ನು ನಾವು ನೋಡಿದ್ದೇವೆ. ಅಂದಿನಿಂದ ಇಲ್ಲಿಯವರೆಗೆ ತನ್ನದೇ ಆದ ಮಹತ್ವವನ್ನು ಹೊಂದಿದೆ. ಹಾಗಾಗಿ ನಮ್ಮ ಕರ್ನಾಟಕ ವಿಧಾನ ಪರಿಷತ್ತು ಬಹಳ ಇತಿಹಾಸವನ್ನು ಹೊಂದಿದೆ. ಕರ್ನಾಟಕ ವಿಧಾನ ಪರಿಷತ್ತು ಬಹಳ ಮಹತ್ವವಾದ ಜವಾಬ್ದಾರಿಯನ್ನು, ಕೊಡುಗೆಯನ್ನು ರಾಜ್ಯದ ಅಭಿವೃದ್ಧಿಯಲ್ಲಿ ನೀಡುತ್ತಾ ಬಂದಿದೆ. ಅಂತಹ ಸದನದಲ್ಲಿ ಇವತ್ತು ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರು ವಿರೋಧ ಪಕ್ಷದ ನಾಯಕರ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ. ಸರ್ಕಾರ ಯಶಸ್ವಿಯಾಗಿ ಕೆಲಸ ಮಾಡಬೇಕೆಂದರೆ ಸಮರ್ಪಕವಾದಂತಹ ವಿರೋಧ ಪಕ್ಷದ ಅವಶ್ಯಕತೆ ಬಹಳಷ್ಟು ಇದೆ. ಅನೇಕ ಬಾರಿ ನಾನು ಇಲ್ಲಿ ಹೇಳಿದ್ದೇನೆ. British Parliamentary system ನಲ್ಲಿ ವಿರೋಧ ಪಕ್ಷ ಎಂದರೆ ಒಂದು ಪರ್ಯಾಯ ಸರ್ಕಾರ. 'Shadow Government' ಎಂದು ಹೇಳುತ್ತಾರೆ. ಹಾಗಾಗಿ ಸರ್ಕಾರ ಯಶಸ್ವಿಯಾಗಿ ಕೆಲಸ ಮಾಡಬೇಕೆಂದರೆ ನಿರಂತರವಾದ ಒಂದು ಎಚ್ಚರಿಕೆಯ ಪ್ರತಿಬಿಂಬ ಸದಾಕಾಲ ಇರಬೇಕು. ಯಾವುದೇ ಸರ್ಕಾರವಾಗಲಿ, ಜನರ ನಿರೀಕ್ಷೆ ಏನಿದೆಯೋ ಅದು ಈಡೇರಬೇಕು. ಪ್ರಜಾಪ್ರಭುತ್ವದಲ್ಲಿ ಸರ್ಕಾರ ಉತ್ತಮವಾಗಿ ಕೆಲಸ ಮಾಡಬೇಕು ಎಂದರೆ ವಿರೋಧ ಪಕ್ಷಕ್ಕೆ ಕೂಡ ಸದಾ ಕಾಲ ಜವಾಬ್ದಾರಿ ಇರುತ್ತದೆ. ಒಮ್ಮೊಮ್ಮೆ ಅನಿವಾರ್ಯವಾಗಿ ಪ್ರತಿಭಟನೆ ಮುಂತಾದವುಗಳನ್ನು ಮಾಡುವ ವಾಡಿಕೆ ಸಹ ಇರುತ್ತದೆ. ಅದನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕು. ಅದನ್ನು ಮೀರಿ ಒಂದು ಸಕಾರಾತ್ಮಕ, ರಚನಾತ್ಮಕ ವಿರೋಧ ಪಕ್ಷವಾಗಿ ಕೆಲಸ ಮಾಡಿದರೂ ಸಹ ಜನಗಳ ಹಿತವನ್ನು ಕಾಪಾಡಲಿಕ್ಕೆ ಸಾಧ್ಯವಾಗುತ್ತದೆ. ಆ ರೀತಿಯಾಗಿ ರಚನಾತ್ಮಕ ವಿರೋಧ ಪಕ್ಷವಾಗಿ ಸಕಾರಾತ್ಮಕವಾಗಿ ಕೆಲಸ ಮಾಡಬೇಕು. ಸರ್ಕಾರ ತಪ್ಪು ಮಾಡಿದಾಗ ಟೀಕೆ ಟಿಪ್ಪಣಿಗಳ ಮೂಲಕ ತಿದ್ದುವ ಜವಾಬ್ದಾರಿ ಅವಶ್ಯವಾಗಿ ವಿರೋಧ ಪಕ್ಷದ ಮೇಲಿದೆ. ಅದನ್ನೂ ಸಹ ಅವರು

ಮಾಡುವುದರ ಜೊತೆಗೆ ರಚನಾತ್ಮಕವಾಗಿ ವಿರೋಧ ಪಕ್ಷವಾಗಿ ಕೆಲಸ ಮಾಡುವಂಥದ್ದು ಅವರ ನಾಯಕತ್ವದಲ್ಲಿ ಆಗಲಿ. ಬಹಳ ವರ್ಷಗಳ ಹೋರಾಟದ ಹಿನ್ನೆಲೆಯಿಂದ ಅವರು ಬಂದವರಾಗಿದ್ದಾರೆ. ತಮಗೂ ಇದರಿಂದ ಶ್ರೇಯಸ್ಸು ಸಿಗಲಿ. ಮುಖ್ಯವಾಗಿ ನಾವೆಲ್ಲರೂ ರಾಜ್ಯದ ಜನಗಳ ಹಿತಕ್ಕಾಗಿ ಇಲ್ಲಿದ್ದೇವೆ. ಆ ನಿಟ್ಟಿನಲ್ಲಿ ನಾವೆಲ್ಲರೂ ಕೆಲಸ ಮಾಡೋಣವೆಂದು ಆಶಿಸುತ್ತೇನೆ. ಮತ್ತೊಮ್ಮೆ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರು ಇವತ್ತು ವಿರೋಧ ಪಕ್ಷದ ನಾಯಕರಾಗಿ ಅಧಿಕೃತವಾಗಿ ಆಯ್ಕೆಗೊಂಡು, ಈಗ ತಾನೇ ತಮ್ಮ ಸ್ಥಾನವನ್ನು ಅಲಂಕರಿಸಿರುವ ಸಂದರ್ಭದಲ್ಲಿ ನಮ್ಮ ಪಕ್ಷದ ಪರವಾಗಿ ಹಾಗೂ ವೈಯಕ್ತಿಕವಾಗಿ ಅಭಿನಂದನೆಗಳನ್ನು ಹೇಳಲಿಚ್ಛಿಸುತ್ತೇನೆ. ಈಗಾಗಲೇ ಮಾನ್ಯ ಕೃಷ್ಣ ಬೈರೇಗೌಡರು ಹೇಳಿದಂತೆ ವಿರೋಧ ಪಕ್ಷ ಎನ್ನುವುದು ಒಂದು 'Shadow Government or Shadow Chief Minister' ಇದ್ದಂತೆ. ಪ್ರತಿಯೊಂದು ಹಂತದಲ್ಲಿಯೂ ಗುಣಾತ್ಮಕವಾಗಿ ಮತ್ತು ರಚನಾತ್ಮಕವಾಗಿ ಅವರ ಟೀಕೆಗಳು ಇರಬೇಕು. ಟೀಕೆಗಳು ಇಲ್ಲದಿದ್ದರೆ ಅಷ್ಟೊಂದು ಶೋಭೆಯನ್ನು ತರುವುದಿಲ್ಲ. ಅವರು ಕೊಡತಕ್ಕಂತಹ ಟೀಕೆಗಳನ್ನು ಸರ್ಕಾರವು ಗಂಭೀರವಾಗಿ ತೆಗೆದುಕೊಂಡರೂ ಬಹಳ sportive ಆಗಿ ತೆಗೆದುಕೊಳ್ಳಬೇಕು. ಜೊತೆಗೆ ಆ ಟೀಕೆಗಳಿಗೆ ಯಾವಾಗ ಉತ್ತರವನ್ನು ಕೊಡಬೇಕು ಎಂಬುದನ್ನು ಮಾನ್ಯ ಸಚಿವರಂತಹ ಮೇಧಾವಿಗಳಿಗೆ ಹೇಳುವಷ್ಟು ಶಕ್ತಿ ನನಗಿಲ್ಲ. ಆ ಟೀಕೆಗಳನ್ನು ತಡೆದುಕೊಳ್ಳುವ ಶಕ್ತಿ ಭಗವಂತ ಕೊಡಲಿ ಎಂದು ನಾನು ಕೇಳಿಕೊಳ್ಳುತ್ತೇನೆ. ಯಾವಾಗಲೂ ಟೀಕೆಗಳನ್ನು ತಡೆದುಕೊಳ್ಳಬೇಕು. ಚುಚ್ಚುವುದನ್ನು ತಡೆದುಕೊಳ್ಳುವುದಕ್ಕಾಗುವುದಿಲ್ಲ ಎಂದರೆ ಹೇಗೆ? ವಿರೋಧ ಪಕ್ಷದವರು ಸೂಜಿಯಲ್ಲಿ ಚುಚ್ಚಿದರೆ ನಾಳೆ ದಬ್ಬಳದಲ್ಲಿ ಚುಚ್ಚುವಷ್ಟು ಅವಕಾಶ ಸರ್ಕಾರಕ್ಕಿದೆ.

**ಸಭಾಪತಿಯವರು:-** ಎರಡೂ ಬಿಟ್ಟು ಬೇರೆಯದರಲ್ಲಿ ನೀವು ಚುಚ್ಚುತ್ತೀರಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಎಲ್ಲದಕ್ಕಿಂತ ಹೆಚ್ಚಾಗಿ ಯಾವ ಟೀಕೆಗಳಿದ್ದರೂ ಕೂಡ ನಾವೆಲ್ಲರೂ ಸಮಾಜದ ಹಿತದೃಷ್ಟಿಯಿಂದ ಸಮಾಜದ ಕಟ್ಟಕಡೆಯ ವ್ಯಕ್ತಿಯ ಸರ್ವತೋಮುಖ ಅಭಿವೃದ್ಧಿಯ ವಿಚಾರದಲ್ಲಿ ಸರ್ಕಾರವನ್ನು ಎಚ್ಚರಿಸುವ ಶಕ್ತಿ ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿ ಅವರಿಗಿದೆ. ಅವರ ಹೆಸರಿನಲ್ಲಿಯೇ "ಛಲವಾದಿ" ಎಂದು ಇದೆ. ಆ ಛಲವನ್ನು ಬಿಡದೆ ಹೋರಾಟ ಮಾಡತಕ್ಕಂತಹ ಸರ್ವಶಕ್ತಿ ಭಗವಂತ ಅವರಿಗೆ ಕೊಡಲಿ. ಪಕ್ಷ ಅವರ ಜೊತೆಯಲ್ಲಿ ಯಾವಾಗಲೂ ಇದೆ. ಪಕ್ಷ ನಿಮ್ಮನ್ನು ಗುರುತು ಮಾಡಿ ಜವಾಬ್ದಾರಿ ನೀಡಿದೆ. ಅಧಿಕಾರ

ಯಾವಾಗಲೂ ಶಾಶ್ವತವಲ್ಲ. ತಮ್ಮ ಛಲದ ಮೂಲಕ ಯಾವ ರೀತಿ ಸರ್ಕಾರವನ್ನು ಎಚ್ಚರಿಸಬೇಕು ಎನ್ನುವ ಪ್ರತಿ ಹಂತದಲ್ಲಿಯೂ ಸಮಾಜಮುಖಿಯಾಗಿ ಕೆಲಸ ಮಾಡುವಂತಾಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದ ನಾಯಕರಾಗಿ ಆಯ್ಕೆಯಾಗಿರುವ ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಅವರ ಮೇಲೆ ದೊಡ್ಡ ಜವಾಬ್ದಾರಿ ಇದೆ. ಅದನ್ನು ಅವರು ನಿರ್ವಹಣೆ ಮಾಡುತ್ತಾರೆ ಎನ್ನುವ ವಿಶ್ವಾಸವಿದೆ. ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರು ಕಾಂಗ್ರೆಸ್ ಪಕ್ಷದಲ್ಲಿ ಹಲವಾರು ವರ್ಷಗಳಿದ್ದರು. ನಂತರ ಬಿ.ಜೆ.ಪಿ.ಗೆ ಹೋಗಿ ಅಲ್ಲಿ ಹೋರಾಟ ಮನೋಭಾವದೊಂದಿಗೆ ಕೆಲಸ ಮಾಡಿಕೊಂಡು ಬಂದಿದ್ದಾರೆ. ಅವರಿಗೆ ಈಗ ಅವಕಾಶ ಸಿಕ್ಕಿದೆ. ದಯವಿಟ್ಟು ತಾವು ಸದನ ನಡೆಯಲು ಸಹಕಾರ ಕೊಡಬೇಕು. ಎಲ್ಲರೂ ಒಟ್ಟಾಗಿ ಸೇರಿ ಸದನದಲ್ಲಿ ಚರ್ಚೆ ಮಾಡಬೇಕು. ಅದಕ್ಕೆ ಅವರ ಸಂಪೂರ್ಣ ಬೆಂಬಲವನ್ನು ಕೋರಿ ನನ್ನೆರಡು ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿ ಅವರು ವಿರೋಧ ಪಕ್ಷದ ನಾಯಕರಾಗಿ ವಿಧಾನ ಪರಿಷತ್ತಿನಲ್ಲಿ ಆಯ್ಕೆಯಾಗಿರುವುದಕ್ಕೆ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಸುಮಾರು 4 ದಶಕಗಳ ಸಾರ್ವಜನಿಕ ಜೀವನದ ಅನುಭವದೊಂದಿಗೆ ಈ ಒಂದು ವಿರೋಧ ಪಕ್ಷದ ನಾಯಕರ ಸ್ಥಾನವನ್ನು ಸಮರ್ಥವಾಗಿ ನಿರ್ವಹಿಸಲಿ. ಯಾವಾಗಲೂ ವಿರೋಧ ಪಕ್ಷದ ನಾಯಕರು ಒಂದು ಕೈಯಲ್ಲಿ ಚಾಟಿಯನ್ನು ಹಿಡಿದಿರಬೇಕು. ಏಕೆಂದರೆ ರಾಜ್ಯದ ಹಿತದೃಷ್ಟಿಯಿಂದ ಆಡಳಿತ ಪಕ್ಷ ದಾರಿ ತಪ್ಪದಿರಲಿ ಎನ್ನುವುದಕ್ಕೆ ಆ ಚಾಟಿಯನ್ನು ಬಳಸಬೇಕು. ಆ ರೀತಿ ನೀವು ಸಮರ್ಥವಾಗಿ ಮಾತಿನ ಚಾಟಿಯ ಮೂಲಕ ವಿರೋಧ ಪಕ್ಷದ ನಾಯಕರಾಗಿ ಸರ್ಕಾರ ಒಳ್ಳೆಯ ಕೆಲಸವನ್ನು ಮಾಡಿದಾಗ ಮೆಚ್ಚುಗೆಯನ್ನು ವ್ಯಕ್ತ ಪಡಿಸುತ್ತಾ, ಆಡಳಿತ ಪಕ್ಷ ತಪ್ಪು ಮಾಡಿದಾಗ ಆ ಚಾಟಿಯಿಂದ ಸರಿ ದಾರಿಗೆ ತರುವಂತಹ ಕೆಲಸವನ್ನು ಮಾಡಿ ಯಶಸ್ವಿಯಾಗಿ ಎಂದು ಶುಭ ಹಾರೈಸಿ, ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರು ವಿರೋಧ ಪಕ್ಷದ ನಾಯಕರಾಗಿ ಆಯ್ಕೆಯಾಗಿರುವ ಈ ಸಂದರ್ಭದಲ್ಲಿ ಅವರನ್ನು ಅಭಿನಂದಿಸುತ್ತೇನೆ. ಅವರು ಹೋರಾಟಗಾರರಾಗಿದ್ದು, ಸಂಘಟನೆಯಲ್ಲಿ ಬಹಳಷ್ಟು ಶ್ರಮ ವಹಿಸಿದ್ದು, ಇಂದು ವಿರೋಧ ಪಕ್ಷದ ನಾಯಕರಾಗುವುದಕ್ಕೆ ಒಂದು ಅವಕಾಶ ಲಭಿಸಿದೆ. ಅವರು ನಾನೂ ಕೂಡಿ ಅನೇಕ ವಿಷಯಗಳ ಬಗ್ಗೆ

ಮಾತನಾಡುತ್ತಿರುತ್ತೇವೆ. ಅವರು ಕಾಂಗ್ರೆಸ್ ಪಕ್ಷದ ಸಂಘಟನೆಯಲ್ಲಿ ಅನೇಕ ವರ್ಷಗಳಿಂದಲೂ ಇದ್ದರು. ಕಾಂಗ್ರೆಸ್ ಪಕ್ಷದಿಂದ ಕಾರ್ಪೊರೇಷನ್ ಅಧ್ಯಕ್ಷರಾಗಿ ಬಹಳ ಉತ್ತಮ ರೀತಿಯಲ್ಲಿ ನಿಭಾಯಿಸಿದ್ದಾರೆ. ಅವರು ವಿರೋಧ ಪಕ್ಷದ ನಾಯಕರಾಗಿ ಜನರ ಹಿತದೃಷ್ಟಿಯಿಂದ ಮತ್ತು ಆಡಳಿತದ ಹಿತದೃಷ್ಟಿಯಿಂದ ಮುಂದುವರೆಯಬೇಕು.

(ಮುಂದು)

(657) ದಿನಾಂಕ 24.7.2024 (10.20) ಕೆಜಿ:ಬಿಎಸ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಎನ್.ಬೋಸರಾಜು (ಮುಂದು):**

ಆ ದಿಶೆಯಲ್ಲಿ ಯಾವುದೇ ಸಂದರ್ಭದಲ್ಲಿ ಕೊಡುವಂತಹ ವಿಷಯಗಳನ್ನು ಅವರು ಗಮನಿಸಿ, ಇಡೀ ಆಡಳಿತ ದೃಷ್ಟಿಯಿಂದ ನಾವು ಮತ್ತು ಅವರು ಕೂಡಿ ಒಟ್ಟಾಗಿ ಈ ಸದನದಲ್ಲಿ ವಿಷಯಗಳನ್ನು ಚರ್ಚಿಸುವಂತಹ ಸಂದರ್ಭದಲ್ಲಿ ಇರಬಹುದು ಹಾಗೂ ಹೊರಗಡೆ ಬಹಿರಂಗವಾಗಿ ಇರುವಂತಹ ಇತರೆ ವಿಷಯಗಳಲ್ಲಿ ಇರಬಹುದು, ವಿರೋಧ ಪಕ್ಷದ ನಾಯಕರಾಗಿ ಅವರು ತಮ್ಮ ವ್ಯಕ್ತಿತ್ವವನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಬೆಳಸಿಕೊಳ್ಳಲಿ ಎಂದು ಈ ಸಂದರ್ಭದಲ್ಲಿ ಹಾರೈಸುತ್ತೇನೆ.

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ನಾನು ಮೊಟ್ಟ ಮೊದಲ ಬಾರಿಗೆ ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿಯವರನ್ನು ಕಛೇರಿಯಲ್ಲಿ ಭೇಟಿಯಾದಂತಹ ಸಂದರ್ಭದಲ್ಲಿ ಅವರು ಅವರ ಪರಿಚಯವನ್ನು ಮಾಡಿಕೊಂಡರು. ಅವರು "ನಾನು ಚಲುವಾದ ನಾರಾಯಣಸ್ವಾಮಿ ಅಲ್ಲ, ಛಲವಾದಿ ಟಿ.ನಾರಾಯಣಸ್ವಾಮಿ" ಎಂದು ಪರಿಚಯ ಮಾಡಿಕೊಂಡರು. ನಿಜವಾಗಲೂ ಸಹ ಬಹಳ ಹೋರಾಟದ ಒಂದು ಮನೋಭಾವನೆ, ಸಾಂಗತ್ಯವಾಗಿರುವಂತಹ ವ್ಯಕ್ತಿ ಇವತ್ತಿನ ದಿವಸ ಸಂವಿಧಾನಬದ್ಧವಾದ ನಿಯಮಗಳ ಅಡಿಯಲ್ಲಿ ಅವರಿಗೆ ವಿರೋಧ ಪಕ್ಷದ ನಾಯಕನ ಸ್ಥಾನ ಸಿಕ್ಕಿರುವುದು ಬಹು ದೊಡ್ಡ ಗೌರವವಾಗಿದ್ದು, ಇದು ನಮ್ಮ ಜನಾಂಗಕ್ಕೆ ಮತ್ತು ನಮಗೆಲ್ಲರಿಗೂ ಸಹ ಬಹಳ ಸಂತೋಷ ತಂದಿದೆ. ಹಾಗಾಗಿ, ಅವರಿಗೆ ಭಗವಂತ ಆಯಸ್ಸು ಮತ್ತು ಆರೋಗ್ಯ ಕೊಡಲಿ ಎಂದು ಈ ಸಂದರ್ಭದಲ್ಲಿ ಹಾರೈಸುತ್ತೇನೆ. ಅವರಿಗೆ ಉತ್ತಮವಾದಂತಹ ಅವಕಾಶಗಳು ಸಿಕ್ಕಿವೆ. ಅದನ್ನು ಅವರು ಸಮರ್ಥವಾಗಿ ನಿಭಾಯಿಸುತ್ತಾರೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಅವರಿಗೆ ಮೊತ್ತೊಮ್ಮೆ ನನ್ನ ಪರವಾಗಿ ಶುಭ ಹಾರೈಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರ.

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ಇವತ್ತು ಮಾನ್ಯ ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿಯವರು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಾಗಿ ಆಯ್ಕೆಯಾಗಿದ್ದಾರೆ. ಒಟ್ಟಾರೆಯಾಗಿ, ಇದರಿಂದ ನಮ್ಮ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಾಂಗಕ್ಕೆ ವಿಧಾನ ಪರಿಷತ್ತಿನಲ್ಲಿ

ಒಂದು ಶಕ್ತಿ ಬಂದಂತೆ ಆಗಿದೆ. ನನಗೆ ಅವರು ಕಳೆದ ಮೂರು ವರ್ಷಗಳಿಂದ ಪರಿಚಯ ಇದ್ದಾರೆ. ಇತ್ತೀಚೆಗೆ ಅವರು ಬಹಳ ಆತ್ಮೀಯರಾಗಿ ನಮ್ಮ ಜೊತೆಗೆ ಬೆರೆತಿದ್ದಾರೆ. ಅವರು ಒಬ್ಬ ಸಾಮಾನ್ಯ ಕಾರ್ಯಕರ್ತನನ್ನು ಸಹ ಬಹಳ ಬೇಗ ಪರಿಚಯ ಮಾಡಿಕೊಂಡು ಅವರ ಜೊತೆಗೆ ಒಡನಾಡುವಂತಹ ಸ್ವಭಾವದವರು. ಅಲ್ಲದೇ, ಅವರು ನಮ್ಮ ಊರಿಗೂ ಸಹ ಬಂದಿದ್ದರು. ಒಟ್ಟಾರೆಯಾಗಿ, ಈ ಪರಿಷತ್ತಿನಲ್ಲಿ ಮತ್ತು ಹೊರಗಡೆ ನಾವೇನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅನೇಕ ಸಮಸ್ಯೆಗಳನ್ನು ತೆಗೆದುಕೊಂಡು ಹೋರಾಟ ಮಾಡುತ್ತಿರುತ್ತೇವೆ, ಆ ಹೋರಾಟಕ್ಕೆ ಅವರು ಶಕ್ತಿಯಾಗಿದ್ದರು. ಈಗ ಅದು ಇಮ್ಮಡಿ ಆಯಿತು. ಅವರು ವಿರೋಧ ಪಕ್ಷದ ನಾಯಕರಾಗಿ ಆಯ್ಕೆಯಾದಂತಹ ಸಂದರ್ಭದಲ್ಲಿ ನಾನು ಅವರಿಗೆ ಹಾರ್ಧಿಕವಾಗಿ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಧನ್ಯವಾದಗಳು.

**ಶ್ರೀ ಐವನ್ ಡಿ'ಸೋಜಾ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರು ಮತ್ತು ನಾನು ಬಹಳ ವರ್ಷಗಳಿಂದ ಬಹಳ ಆತ್ಮೀಯರು. ಅವರು ಕಾಂಗ್ರೆಸ್ ಪಕ್ಷದಲ್ಲಿ ಕಾರ್ಯದರ್ಶಿಯಾಗಿದ್ದ ಸಂದರ್ಭದಲ್ಲಿ ನಾನು ಕಾರ್ಯದರ್ಶಿಯಾಗಿದ್ದೆ. ಅವರ ಮತ್ತು ನನ್ನ ಚಿಂತನೆಗಳು ಸಾಧಾರಣವಾಗಿ ಒಂದೇ ರೀತಿ ಇದ್ದವು. ಅವರು ವಕ್ತಾರರಾಗಿದ್ದಾಗ, ನಾವಿಬ್ಬರೂ ವಕ್ತಾರರಾಗಿ ಟಿ.ವಿ.ಗಳಲ್ಲಿ ವಾದ ಮಂಡನೆ ಮಾಡುತ್ತಿದ್ದೆವು. ಇತ್ತೀಚಿನ ದಿವಸಗಳಲ್ಲಿ ಅವರು ಒಂದು ಪಕ್ಷದಲ್ಲಿ ಕುಳಿತುಕೊಳ್ಳುತ್ತಿದ್ದರು. ನಾನು ಇನ್ನೊಂದು ಪಕ್ಷದಲ್ಲಿದ್ದೆ. ನಾನು ಕಾಂಗ್ರೆಸ್‌ನಲ್ಲಿದ್ದರೆ, ಅವರು ಬಿಜೆಪಿಯಲ್ಲಿ ಕುಳಿತುಕೊಳ್ಳುತ್ತಿದ್ದರು. ಆದರೆ, ಕೆಲವು ವಿಚಾರಗಳ ಬಗ್ಗೆ ಸಾಮಾಜಿಕ ಚಿಂತನೆಗಳು ಬಂದಾಗ, ಸಮಾಜದ ಕಟ್ಟಕಡೆಯ ವ್ಯಕ್ತಿಯ ಬಗ್ಗೆ ಚಿಂತನೆಗಳು ಬಂದಾಗ ಅವರ ವಾದ ಮತ್ತು ನನ್ನ ವಾದ ಒಂದೇ ರೀತಿ ಇತ್ತು. ಅವರು ನಿಜವಾಗಿಯೂ ಕಾಂಗ್ರೆಸ್ ಪಕ್ಷದಲ್ಲಿ ಹೋರಾಟ ಮಾಡಿಕೊಂಡು ನಮ್ಮಲ್ಲಿಯೂ Chairman ಆಗಿದ್ದರು. ಆದರೆ, ಅವರು ಬಿಜೆಪಿಗೆ ಹೋದ ಮೇಲೆ ಅತ್ಯಂತ ಕಡಿಮೆ ಅವಧಿಯಲ್ಲಿ ಬಹಳ ದೊಡ್ಡ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದಾರೆ. ಹಾಗಾಗಿ, ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅಧಿಕಾರ ಶಾಶ್ವತ ಅಲ್ಲ. ಅಧಿಕಾರ ನೀರಿನ ಮೇಲಿನ ಗುಳ್ಳೆಯಂತೆ. ಅದು ಯಾವಾಗ ಒಡೆಯುತ್ತದೆ ಎಂದು ಗೊತ್ತಾಗುವುದಿಲ್ಲ. ಹಾಗಾಗಿ, ಅಧಿಕಾರ ಸಿಕ್ಕಿದಂತಹ ಸಂದರ್ಭದಲ್ಲಿ ಅದರಲ್ಲೂ ವಿರೋಧ ಪಕ್ಷದ ನಾಯಕನಾಗಿ ಅವರು ನಿರ್ವಹಿಸುವಂತಹ ಜವಾಬ್ದಾರಿ ಅತ್ಯಂತ ಕಠಿಣ ಮತ್ತು ಅದು ಅತ್ಯಂತ ಪರಿಣಾಮಕಾರಿಯಾಗಿರಬೇಕೆಂದು ನಾನು ಆಸೆ ಪಡುತ್ತೇನೆ. ಏಕೆಂದರೆ, ವಿರೋಧ ಪಕ್ಷವು ಆಡಳಿತ ಪಕ್ಷವನ್ನು ಎಚ್ಚರಿಕೆ ಮಾಡುವಂತಹದ್ದು ಹಾಗೂ ಒಳ್ಳೆಯದು, ಕೆಟ್ಟದ್ದನ್ನು ಎತ್ತಿಹಿಡಿದು ತೋರಿಸುವ ಮೂಲಕ ಒಳ್ಳೆಯದನ್ನು ಮಾಡಿ ಎಂದು ಈ ಸಂದರ್ಭದಲ್ಲಿ ಶುಭ ಹಾರೈಸುತ್ತೇನೆ. ಹಾಗಾಗಿ, ಅವರನ್ನು ಪ್ರತಿಪಕ್ಷದ ನಾಯಕ ಎಂದು ಕರೆಯುವುದಕ್ಕೆ ಇಚ್ಛೆಪಡುತ್ತೇನೆ. ಶ್ರೀ ಛಲವಾದಿ ಟಿ ನಾರಾಯಣಸ್ವಾಮಿಯವರ ಬಳಿ ಎಲ್ಲಾ ಶಕ್ತಿ ಇದೆ ಎಂದು ನಾನು ಕಂಡುಕೊಂಡಿದ್ದೇನೆ. ಹಾಗಾಗಿ, ನಾನು ಅವರಿಗೆ ಶುಭ ಹಾರೈಕೆಯನ್ನು ಮಾಡುತ್ತೇನೆ. I wish him all the best.

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ನಮ್ಮ ಆಪ್ತ ಮಿತ್ರರಾದಂತಹ ಶ್ರೀ ಛಲವಾದಿ ಟಿ ನಾರಾಯಣಸ್ವಾಮಿಯವರು ವಿರೋಧ ಪಕ್ಷದ ನಾಯಕರಾಗಿ ಆಯ್ಕೆಯಾಗಿದ್ದಾರೆ. ಅವರಿಗೆ ನಾನು ಹೃದಯಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅವರು ಮತ್ತು ನಾನು ಕಾಂಗ್ರೆಸ್ ಪಕ್ಷದಲ್ಲಿ ಇದ್ದೆವು. ನಾವಿಬ್ಬರೂ ಕಾಂಗ್ರೆಸ್ ಪಕ್ಷದಲ್ಲಿ ಇದ್ದಾಗ, ನಾವು ಶ್ರೀ ಮಲ್ಲಿಕಾರ್ಜುನ ಖರ್ಗೆಯವರ ಶಿಷ್ಯರು. ಅವರು Central Railway Board ನ ಅಧ್ಯಕ್ಷರಾಗಿ ಅವರ ಅವಧಿಯಲ್ಲಿ ಕರ್ನಾಟಕದ ಭಾಗಕ್ಕೆ ಉತ್ತಮವಾದಂತಹ ಕೆಲಸವನ್ನು ಮಾಡಿದ ಕೀರ್ತಿ ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿಯವರಿಗೆ ಸಲ್ಲುತ್ತದೆ. ಈಗ ಅವರು ವಿರೋಧ ಪಕ್ಷದ ನಾಯಕರಾಗಿದ್ದಾರೆ. ಅವರು ನಮ್ಮನ್ನು ಬಿಟ್ಟು ಬಿಜೆಪಿ ಪಕ್ಷವನ್ನು ಸೇರಿದ ಮೇಲೆ, ಮೊಟ್ಟಮೊದಲಿಗೆ ಅವರಿಗೆ ಈ ಅವಕಾಶ ಸಿಕ್ಕಿದೆ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಈ ಸಂದರ್ಭದಲ್ಲಿ ಹಿರಿತನದ ಆಧಾರದ ಮೇಲೆ ನಮಗೆ ಒಬ್ಬ ಒಳ್ಳೆಯ ಸಭಾಪತಿಯವರು ಸಿಕ್ಕಿರುವುದರಿಂದ, ಈ ಸದನವನ್ನು ಅತ್ಯಂತ ಅಚ್ಚುಕಟ್ಟಾಗಿ ಆಡಳಿತ ಪಕ್ಷದವರು ಇರಲಿ ಅಥವಾ ವಿರೋಧ ಪಕ್ಷದವರು ಇರಲಿ, ನಾವು ಅತ್ಯಂತ ಘನತೆ ಗೌರವದಿಂದ ನಡೆದುಕೊಂಡು ಹೋಗಬೇಕಾಗಿದೆ. ಮಾನ್ಯ ಸಭಾಪತಿಯವರು "ಸದನದ ಘನತೆ ಕುಸಿತ: ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಬೇಸರ" ಎಂದು ದಿನ ಪತ್ರಿಕೆಯಲ್ಲಿ ವರದಿಯಾಗಿತ್ತು.

ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಯಡಹಳ್ಳಿ ಎಂಬ ಗ್ರಾಮದಲ್ಲಿ ಸುಮಾರು 07 ಎಕರೆ ಜಮೀನನ್ನು, ಅಂದರೆ, ಸುಮಾರು 14 ಕೋಟಿ ರೂಪಾಯಿಗಳ ಬೆಲೆ ಬಾಳುವ ಆಸ್ತಿಯನ್ನು ಸರ್ಕಾರಿ ಶಾಲೆಯ ಮಕ್ಕಳಿಗೆ ಉತ್ತಮವಾದ ಶಿಕ್ಷಣ ಸಿಗಲಿ ಎನ್ನುವ ಭಾವನೆಯಿಂದ ದೇಣಿಗೆಯಾಗಿ ಕೊಟ್ಟು ಅಲ್ಲಿನ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾಗಿದ್ದಾರೆ. ಅಲ್ಲದೇ, ಅವರು ಇನ್ನಿತರೆ ಧರ್ಮದ ಕೆಲಸಗಳನ್ನು ಮಾಡುತ್ತಿರುತ್ತಾರೆ. ಇಂತಹ ಅನುಭವ ಇರುವಂತಹ ಸಭಾಪತಿಯವರು ನಮಗೆ ಸಿಕ್ಕಾಗ, ನಾವೆಲ್ಲರೂ ಸಹ ಅವರಿಗೆ ಬೇಸರವಾಗದ ರೀತಿಯಲ್ಲಿ ಕೆಲಸಗಳನ್ನು ಮಾಡಬೇಕಾಗಿದೆ. ಮಾನ್ಯ ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿಯವರು ಯಾವಾಗಲೂ ಹೋರಾಟದ ಮನೋಭಾವದಿಂದ ಬಂದವರು. ವಿರೋಧ ಪಕ್ಷದ ನಾಯಕನ ಸ್ಥಾನ ಬಹಳ ಮುಖ್ಯ. ಈಗ ಅವರು ನಿರ್ವಹಣೆ ಮಾಡುವಂತಹ ಸ್ಥಾನ ಅತ್ಯಂತ ಪ್ರಮುಖವಾಗಿದೆ. ಹಾಗಾಗಿ, ಇಡೀ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಒಬ್ಬ ವಿರೋಧ ಪಕ್ಷದ ನಾಯಕನಾಗಿ, ಅವರು ಯಾವುದೇ ಒಂದು ಮಾತನ್ನು ಎತ್ತಿದರೂ ಸಹ, ಇಡೀ ಸದನ ಒಕ್ಕೊರಲಿನಿಂದ ಸಹಾಯ ಮಾಡುವಂತಹದ್ದು ಹಾಗೂ ಅವರ ಮಾತುಗಳನ್ನು ಕೇಳುವಂತಹ ರೀತಿಯಲ್ಲಿ ಕಾರ್ಯ ನಿರ್ವಹಿಸಬೇಕಾಗುತ್ತದೆ. ಇಡೀ ರಾಜ್ಯಕ್ಕೆ ಒಂದು ಮಾದರಿಯಾದಂತಹ ರೀತಿಯಲ್ಲಿ ಈ ಸದನವನ್ನು ನಡೆಸಿಕೊಂಡು ಹೋಗುವಂತಹ ಕೆಲಸ ಮಾನ್ಯ ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿಯವರ ನೇತೃತ್ವದಲ್ಲಿ ಆಯಿತು ಎನ್ನುವಂತಹ ಭಾವನೆ ಬರುವಂತಹ ರೀತಿಯಲ್ಲಿ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳ ನಡುವೆ ಇದ್ದು, ಅದನ್ನು ಸಮರ್ಥವಾಗಿ ನಿಭಾಯಿಸಿಕೊಂಡು ಹೋಗುವಂತಹ ಕೆಲಸವನ್ನು ಮಾಡಬೇಕಾಗಿದೆ.

ಬಿಜೆಪಿಯಲ್ಲಿ ಯಾವಾಗಲೂ ಸಹ ಹಿಂದುಳಿದ ಜನಾಂಗದವರಿಗೆ ಹೆಚ್ಚಿಗೆ ಅವಕಾಶಗಳು ಸಿಗುವುದಿಲ್ಲ ಎಂಬ ಆರೋಪ ಇತ್ತು. ಅದರಲ್ಲಿ ದಲಿತ, ಕ್ಷಮಿಸಿ, ಈಗ ದಲಿತ ಎಂಬ ಪದ ಬಳಸಬಾರದು ಎಂದು ಹೇಳಿದ್ದಾರೆ. ಪರಿಶಿಷ್ಟ ಪಂಗಡದವರಿಗೆ ಅವಕಾಶ ಸಿಗುವುದಿಲ್ಲ. ಕೇವಲ ಮೇಲ್ವರ್ಗದವರಿಗೆ ಅವಕಾಶ ಸಿಗುತ್ತದೆ ಎನ್ನುವಂತಹ ಭಾವನೆ ಇತ್ತು. ಅದನ್ನು ತೆಗೆದು ಹಾಕಿ ಈಗ ಮಾನ್ಯ ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿಯವರಿಗೆ ಅವಕಾಶ ಕೊಟ್ಟಿದ್ದಾರೆ. ಅದರ ಘನತೆ ಮತ್ತು ಗೌರವಕ್ಕೆ ತಕ್ಕಂತೆ, ನಾವು ಯಾರಿಗೂ ಕಡಿಮೆ ಇಲ್ಲ ಎನ್ನುವಂತಹ ಭಾವನೆಯನ್ನು ತೋರಿಸಿಕೊಡುವಂತಹ ಕೆಲಸವನ್ನು ಅವರು ಅತ್ಯಂತ ಪ್ರಮಾಣಿಕವಾಗಿ ಮಾಡಬೇಕು. ಆಡಳಿತ ಪಕ್ಷದವರಾಗಿ ನಾವೆಲ್ಲರೂ ಅವರಿಗೆ ಸಂಪೂರ್ಣ ಬೆಂಬಲವನ್ನು ಕೊಡುತ್ತೇವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಅವರಿಗೆ ಹೃದಯಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಭಾರತೀಯ ಜನತಾ ಪಕ್ಷದ ವಿರೋಧ ಪಕ್ಷದ ನಾಯಕರಾಗಿ ಆಯ್ಕೆಯಾಗಿರುವ ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿಯವರಿಗೆ ನಾನು ತುಂಬು ಹೃದಯದ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

**(ಗೊಂದಲ)**

**ಸಭಾಪತಿಯವರು:-** ಶ್ರೀ ಎಸ್.ವ್ಹಿ.ಸಂಕನೂರರವರು ಸರಿಯಾಗಿ ಹೇಳಿದ್ದಾರೆ.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಆಯಿತು. ಈಗ ಸರಿಪಡಿಸಿಕೊಂಡಿದ್ದೇನೆ. ಕರ್ನಾಟಕ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಾಗಿ ಆಯ್ಕೆಯಾಗಿರುವ ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿಯವರಿಗೆ ನಾನು ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಅವರು ಪ್ರಥಮ ಬಾರಿಗೆ ವಿಧಾನ ಪರಿಷತ್ತಿನ ಸದಸ್ಯರಾದರೂ ಸಹ, ನಮ್ಮ ಪಕ್ಷ ಅವರಲ್ಲಿರುವಂತಹ ಸಾಮರ್ಥ್ಯವನ್ನು ಗುರುತಿಸಿ ಅವರನ್ನು ವಿರೋಧ ಪಕ್ಷದ ನಾಯಕರನ್ನಾಗಿ ಇವತ್ತು ಆಯ್ಕೆ ಮಾಡಿದ್ದಾರೆ. ಇದರ ಜೊತೆಯಲ್ಲಿ ನಮ್ಮ ಪಕ್ಷದ ವರಿಷ್ಠರಾಗಿರುವಂತಹ ಶ್ರೀ ಜೆ.ಪಿ.ನಡ್ಡಾರವರಿಗೆ, ನಮ್ಮ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರಿಗೆ, ಶ್ರೀ ಅಮಿತ್ ಷಾರವರಿಗೆ ಹಾಗೂ ಎಲ್ಲಾ ರಾಷ್ಟ್ರೀಯ ನಾಯಕರಿಗೆ ಮತ್ತು ನಮ್ಮ ಪಕ್ಷದ ರಾಜ್ಯ ಅಧ್ಯಕ್ಷರಾಗಿರುವಂತಹ ಶ್ರೀ ವಿಜಯೇಂದ್ರರವರಿಗೆ ಹಾಗೂ ರಾಜ್ಯದ ನಮ್ಮ ಎಲ್ಲಾ ನಾಯಕರಿಗೂ ಧನ್ಯವಾದಗಳನ್ನು ಆರ್ಪಿಸುವುದಕ್ಕೆ ಬಯಸುತ್ತೇನೆ. ಇವತ್ತು ಒಬ್ಬ ಎಸ್.ಸಿ. ವ್ಯಕ್ತಿಯನ್ನು ಭಾರತೀಯ ಜನತಾ ಪಕ್ಷ ನಮ್ಮ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರನ್ನಾಗಿ ಆಯ್ಕೆ ಮಾಡುವುದರ ಮೂಲಕ ಪಕ್ಷದಲ್ಲಿರುವಂತಹ ಸಮಾಜಿಕ ನ್ಯಾಯದ ಬದ್ಧತೆಯನ್ನು ಇವತ್ತು ಪ್ರಕಟ ಮಾಡಿದೆ, ಪ್ರದರ್ಶನ ಮಾಡಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಶ್ರೀ ಛಲವಾದಿ ಟಿ ನಾರಾಯಣಸ್ವಾಮಿಯವರು ನನಗೆ ತಿಳಿದ ಮಟ್ಟಿಗೆ ಅವರು ಸುಮಾರು 40 ವರ್ಷಗಳಿಗೂ ಹೆಚ್ಚು ಕಾಲದಿಂದ ಸಾಮಾಜಿಕ ಸೇವೆಯಲ್ಲಿ ತೊಡಗಿದ್ದಾರೆ. ಹಾಗಾಗಿ, ಬಡವರ, ಹಿಂದುಳಿದವರ ಹಾಗೂ ಎಸ್.ಸಿ. ಮತ್ತು ಎಸ್.ಟಿ. ಜನಾಂಗದವರ ಸಮಸ್ಯೆಗಳನ್ನು ಅರಿತುಕೊಂಡಿದ್ದಾರೆ. ಇದರ ಜೊತೆಗೆ ಅವರು

ಬಿಜೆಪಿಗೆ ಬಂದ ಮೇಲೆ ರಾಜ್ಯ ಮಟ್ಟದ ಎಸ್.ಸಿ. ಮೋರ್ಚಾದ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಅವರು ಇಡೀ ರಾಜ್ಯವನ್ನು ಪ್ರವಾಸ ಮಾಡಿದ್ದಾರೆ.

(ಮುಂದು)

(658) 24-07-2024 (10.30) ಎಂವಿ-ಬಿಎನ್ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ವ್ಹಿ.ಸಂಕನೂರ (ಮುಂದು):-**

ಅದರ ಜೊತೆಗೆ ಬಹಳ ಮುಖ್ಯವಾಗಿ ಅವರು ಭಾರತೀಯ ಜನತಾ ಪಕ್ಷದ ವಕ್ತಾರರಾಗಿ ಕೆಲಸ ಮಾಡಿದ್ದಾರೆ. ಒಟ್ಟಾರೆಯಾಗಿ ಅವರು ಸಾಕಷ್ಟು ಅನುಭವವನ್ನು ಹೊಂದಿರುವಂತಹವರು. ಹಾಗಾಗಿ, ಅವರ ನೇತೃತ್ವದಲ್ಲಿ ವಿಧಾನ ಪರಿಷತ್ತಿನಲ್ಲಿ ನಮ್ಮ ಪಕ್ಷದ ಸದಸ್ಯರೆಲ್ಲರೂ ಕೂಡ ಅವರ ನಾಯಕತ್ವದಲ್ಲಿ ಯಶಸ್ವಿಯಾಗಿ ಕೆಲಸ ಮಾಡುತ್ತೇವೆ ಎಂಬ ಆಶಾಭಾವನೆಯನ್ನು ವ್ಯಕ್ತಪಡಿಸುತ್ತೇನೆ.

**ಶ್ರೀ ಕೇಶವ ಪ್ರಸಾದ್.ಎಸ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ವಿರೋಧ ಪಕ್ಷದ ನಾಯಕರಾಗಿ ಆಯ್ಕೆಯಾಗಿರುವ ಮಾನ್ಯ ಛಲವಾದಿ ಟಿ. ನಾರಾಯಣಸ್ವಾಮಿಯವರ ಹಿನ್ನೆಲೆಯನ್ನು ಕೇಳಿದಾಗ, ಅವರು ಅತ್ಯಂತ ಸಾಮಾನ್ಯ ಕುಟುಂಬದಿಂದ ಬಂದಂತಹವರು. ಮತ್ತೆ ಅವರು ಹೋರಾಟಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದಂತಹವರು. ಅವರು ದೆಹಲಿಗೆ ಹೋದಂತಹ ಸಂದರ್ಭಗಳಲ್ಲಿ ಬಹಳಷ್ಟು ಬಾರಿ ರೈಲ್ವೆ ಸ್ಟೇಷನ್‌ಗಳಲ್ಲಿ ಮಲಗುವಂತಹ ಪರಿಸ್ಥಿತಿ ಇತ್ತು. ಏಕೆಂದರೆ, ಆಗ ಅವರಿಗೆ ಯಾವುದೇ ನಾಯಕರು ಪರಿಚಿತರಾಗಿರಲಿಲ್ಲ. ಹಾಗಾಗಿ, ಅವರು ರಾತ್ರಿಯ ಸಮಯದಲ್ಲಿ ರೈಲ್ವೆ ಸ್ಟೇಷನ್‌ನಲ್ಲಿ ಮಲಗಿಕೊಂಡು, ಬೆಳಗ್ಗಿನ ಸಮಯದಲ್ಲಿ ಹೋರಾಟಗಳಲ್ಲಿ ಭಾಗವಹಿಸಿ ಬಂದಿರುವಂತಹ ಸಂದರ್ಭಗಳು ಆ ದಿನಗಳಲ್ಲಿ ಇದೆ. ಹಾಗೆಯೆ ಅವರು ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ದಿವಂಗತ ಎಸ್.ಬಂಗಾರಪ್ಪನವರಿಗೆ ಬಹಳ ಹತ್ತಿರವಾಗಿದ್ದಂತಹವರು. ಇವರು ಅವರ ಜೊತೆಯಲ್ಲಿ ಬಹು ವರ್ಷಗಳ ಕಾಲ ರಾಜಕೀಯ ಜೀವನವನ್ನು ಕಳೆದಿದ್ದರು ಸಹ ದಿವಂಗತ ಎಸ್.ಬಂಗಾರಪ್ಪನವರು ಭಾರತೀಯ ಜನತಾ ಪಕ್ಷಕ್ಕೆ ಬಂದ ಮೇಲೆ ಇವರು ಮಾತ್ರ ಕಾಂಗ್ರೆಸ್ ಪಕ್ಷದಲ್ಲಿಯೇ ಉಳಿದುಕೊಂಡರು. ಅವರಿಗೆ ಕಾಂಗ್ರೆಸ್‌ನಲ್ಲಿ ಉಸಿರುಗಟ್ಟಿದ ವಾತಾವರಣ ನಿರ್ಮಾಣವಾಯಿತು ಎಂದಾಗ, ಅವರು ಭಾರತೀಯ ಜನತಾ ಪಕ್ಷದ ಕಡೆಗೆ ಮುಖ ಮಾಡಿದರು. ಅವರು ನಮ್ಮ ಪಕ್ಷಕ್ಕೆ ಬಂದ ನಂತರ, ನಮ್ಮ ಪಕ್ಷದ ವಕ್ತಾರರಾಗಿ, ಎಸ್.ಸಿ. ಮೋರ್ಚಾದ ರಾಜ್ಯಾಧ್ಯಕ್ಷರಾಗಿ ಸಕ್ರಿಯವಾಗಿ ಪಕ್ಷವನ್ನು ಮುನ್ನಡೆಸಿದರು. ನಮ್ಮ ಪಕ್ಷ ನಮ್ಮನ್ನು ಮೇಲ್ಮನೆ ಸದಸ್ಯರನ್ನಾಗಿ ಕಳುಹಿಸಿಕೊಟ್ಟಿತ್ತು. ನಾನು ಮತ್ತು ಅವರು ಒಂದೇ ದಿವಸ ಮೇಲ್ಮನೆ ಸದಸ್ಯರಾಗಿ ಬಂದೆವು. ನಾನು ಆ ಸಂದರ್ಭವನ್ನು ನೆನಪಿಸಿಕೊಂಡಾಗ, ಜೊತೆಯಲ್ಲಿಯೇ ಬಂದಂತಹವರಿಗೆ ರಾಜಕೀಯದಲ್ಲಿ ಏನು ಬೇಕಾದರೂ ಆಗಬಹುದು ಎನ್ನುವಂಥದ್ದಕ್ಕೆ ವಿರೋಧ ಪಕ್ಷದ ನಾಯಕರಾದ ಮಾನ್ಯ ಛಲವಾದಿ ಟಿ. ನಾರಾಯಣಸ್ವಾಮಿಯವರು ಒಂದು ಜ್ವಲಂತ ಉದಾಹರಣೆಯಾಗಿದ್ದಾರೆ. ಸಾರ್ವತ್ರಿಕ

ಚುನಾವಣೆ ಬಂದಾಗ, ನಾವು ನಮ್ಮ ಪಕ್ಷದ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರನ್ನು ಚುನಾವಣಾ ಕಣಕ್ಕೆ ಇಳಸುತ್ತೇವೆ. ಆಗ ಆ ಜಾಗ ತೆರವು ಆಗುತ್ತದೆ. ಆ ಜಾಗಕ್ಕೆ ನನ್ನ ಜೊತೆಯಲ್ಲಿಯೇ ಆಯ್ಕೆಯಾದಂತಹ ಮಾನ್ಯ ಛಲವಾದಿ ಟಿ. ನಾರಾಯಣಸ್ವಾಮಿಯವರು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಾಗುತ್ತಾರೆಂದು ನಾನು ಕನಸು ಮನಸ್ಸಿನಲ್ಲೂ ಎಣಿಸಿರಲಿಲ್ಲ. ಅವರು ವಿರೋಧ ಪಕ್ಷದ ನಾಯಕರಾಗಿ ಆಯ್ಕೆಯಾಗಿ ಬಂದಿರುವಂಥದ್ದು ಬಹಳ ಸಂತೋಷವಾಗಿದೆ. ಅವರಿಗೆ ಇರುವಂತಹ ಅಪಾರವಾದಂತಹ ಅನುಭವ, ವಿಷಯದ ಮೇಲೆ ಇರುವಂತಹ ಹಿಡಿತ, ಹಾಗೆಯೇ ಅವರು ಅತ್ಯುತ್ತಮವಾದಂತಹ ವಾಗ್ಮಿ, ಅವರು ಭಾಷೆಯನ್ನು ಸುಲಲಿತವಾಗಿ ಬಳಸಿಕೊಳ್ಳುವಂತಹ ರೀತಿ, ಇವೆಲ್ಲವೂ ಸಹ ಸದನಕ್ಕೆ ಆಶಯವಾಗಲಿ. ಸದನದಲ್ಲಿ ವಿರೋಧ ಪಕ್ಷದ ನಾಯಕರಾಗಿ ಆಡಳಿತ ಪಕ್ಷವನ್ನು ಎಚ್ಚರಿಸುತ್ತಾ, ಮತ್ತೆ ವಿರೋಧ ಪಕ್ಷಕ್ಕೆ ಸದಾ ಮಾರ್ಗದರ್ಶನ ಮಾಡುತ್ತಾ, ಇಡೀ ಕರ್ನಾಟಕಕ್ಕೆ ಒಬ್ಬ ಮೇಲ್ಮನೆಯ ಮಾದರಿ ವಿರೋಧ ಪಕ್ಷದ ನಾಯಕರಾಗಿ ಮೆರೆಯಲಿ ಎನ್ನುವಂತಹ ಆಶಯವನ್ನು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಕೃಷ್ಣ ಭೈರೆಗೌಡ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೆ, ನಾವು ಅಭಿನಂದನೆ ಕಾರ್ಯಕ್ರಮ ಮಾಡುವಾಗಲಾದರೂ ಸಹ ಪಕ್ಷಾತೀತವಾಗಿ ಮಾತನಾಡಬೇಕು.

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಕೇಶವ ಪ್ರಸಾದ್ ರವರು...

**ಶ್ರೀ ಕೃಷ್ಣ ಭೈರೆಗೌಡ:–** ಮಾನ್ಯ ಸಭಾಪತಿಯವರೆ, ಅದಕ್ಕೆ ನಾನು ಮಾನ್ಯ ಸದಸ್ಯರಲ್ಲಿ ಮನವಿ ಮಾಡುತ್ತೇನೆ. ನಾವು ಎಲ್ಲದರಲ್ಲೂ ಸಹ ರಾಜಕೀಯ ಬೆರೆಸುವುದಕ್ಕೆ ಹೋದರೆ, ಇದಕ್ಕೆ ಕೊನೆ ಎಂಬುದು ಇದೆಯೇ?

**ಸಭಾಪತಿಯವರು:–** ಈಗ ಏನಾಯಿತು ಎಂದರೆ,...

**ಶ್ರೀ ಕೃಷ್ಣ ಭೈರೆಗೌಡ:–** ಮಾನ್ಯ ಸಭಾಪತಿಯವರೆ, ಅದು ತಮಗೆ ಅರ್ಥವಾಗುತ್ತದೆ. ಬಹುಶಃ ಬೇರೆಯವರಿಗೆ ಅರ್ಥವಾಗುತ್ತದೆಯೋ ಇಲ್ಲವೋ? ಅದಕ್ಕೆ ಸಂಬಂಧಪಟ್ಟಂತೆ ನನ್ನ ಹತ್ತಿರ ಉತ್ತರ ಹೇಳುವುದಕ್ಕೆ ಇದೆ. ನನ್ನ ಹತ್ತಿರ ಉತ್ತರ ಇಲ್ಲವೆಂದು ಅಲ್ಲ. ಆದರೆ, ಕೆಲವು ಸಂದರ್ಭದಲ್ಲಾದರೂ ನಾವು ರಾಜಕೀಯವನ್ನು ಸ್ವಲ್ಪ ಬದಿಗಿಡುವಂತಹ ಮನವಿಯನ್ನು ಮಾಡುತ್ತೇನೆ. ನಾನು ಏನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ.

**ಸಭಾಪತಿಯವರು:–** Correct, ನಾನು ಅದನ್ನು ಒಪ್ಪುತ್ತೇನೆ.

**ಶ್ರೀ ಕೃಷ್ಣ ಭೈರೆಗೌಡ:–** ಮಾನ್ಯ ಸಭಾಪತಿಯವರೆ, ಇದನ್ನು ನನಗೆ ನಾನೇ ಹೇಳಿಕೊಳ್ಳಬೇಕು ಅಷ್ಟೆ. ಇದನ್ನು ಮತ್ತೊಬ್ಬರಿಗೆ ಹೇಳಿದರೂ ಸಹ ಪ್ರಯೋಜನವಿಲ್ಲ. ನನ್ನ ಹತ್ತಿರ ಉತ್ತರ ಹೇಳುವುದಕ್ಕೆ ಇದೆ. ಇಲ್ಲವೆಂದು ಅಲ್ಲ. ಆದರೆ, ಉತ್ತರ ಹೇಳುತ್ತಾ ಹೋದರೆ, ಸಮಯ ಮತ್ತು ಸಂದರ್ಭ ಏನು? ಅದು ಎಲ್ಲೋ ಒಂದು ಕಡೆ ವಿಷಯಾಂತರವಾಗುತ್ತದೆ. ಹಾಗಾಗಿ, ಅದು ಬೇಡವೆಂದು ಹೇಳುತ್ತಿದ್ದೇನೆ ಅಷ್ಟೆ. ದಯವಿಟ್ಟು ಮಾನ್ಯ ಸದಸ್ಯರು ಒಪ್ಪುವುದಾದರೆ, ಆ ಒಂದು ಪದವನ್ನು ಕಡತದಿಂದ ತೆಗೆಸಿಬಿಡಿ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರ ರವರು start ಮಾಡಿದರು. ಇವರು ಅದನ್ನು ಮುಂದುವರೆಸಿದರು.

**ಸಭಾಪತಿಯವರು:-** ಅವರು ಏನೂ ಹೇಳಿಲ್ಲ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರ ರವರು ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡುತ್ತಾ, ಬಿ.ಜೆ.ಪಿ.ಯಲ್ಲಿ ಸಾಮಾಜಿಕ ನ್ಯಾಯ, ಹಿಂದುಳಿದ ಎಂದು ಇತ್ಯಾದಿಗಳನ್ನು ಹೇಳಿದರು. ಈಗ ನಮ್ಮ ದೇಶದ ಪ್ರಧಾನ ಮಂತ್ರಿಗಳೇ ಹಿಂದುಳಿದ ವರ್ಗದವರು. ಆದುದರಿಂದ, ಇದರಲ್ಲಿ ರಾಜಕಾರಣ ಬೆರೆಸುವುದು ಬೇಡ. ಮಾನ್ಯ ಸಚಿವರಾದ ಶ್ರೀ ಕೃಷ್ಣಭೈರೆಗೌಡರು ಏನು ಹೇಳಿದ್ದಾರೆ, ಅದಕ್ಕೆ ನಮ್ಮ ಸಹಮತ ಇದೆ. ಇದು ಒಂದು ಒಳ್ಳೆಯ ಸಂದರ್ಭ.

**ಸಭಾಪತಿಯವರು:-** ಮಾನ್ಯ ಸಚಿವರು ಇದು ಒಂದು ಒಳ್ಳೆಯ ಸಂದರ್ಭ, ಅದಕ್ಕೆ ಇದು ಬೇಡವೆಂದು ಹೇಳಿದರು.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ನಿನ್ನೆಯ ದಿವಸ ಮಾನ್ಯ ಪ್ರಧಾನ ಮಂತ್ರಿಗಳು ಏನು ಹೇಳಿದ್ದಾರೆಂದರೆ, ದೇಶದ ಸಂಸತ್ ಇರುವುದು ದೇಶದ ಬಗ್ಗೆ ಆಲೋಚನೆ ಮಾಡುವುದಕ್ಕೆ. ಅದು ಪಕ್ಷದ ರಾಜಕಾರಣಕ್ಕೆ ಅಲ್ಲವೆಂದು. ನಾನು ಅದನ್ನು ವಿಧಾನ ಪರಿಷತ್ತಿಗೂ ಅಳವಡಿಸುತ್ತಾ, ನಾವು ಅದನ್ನು ಮೀರಿ ಆಲೋಚನೆ ಮತ್ತು ಕೆಲಸ ಮಾಡುವುದನ್ನು ಅಭ್ಯಾಸ ಮಾಡಬೇಕಾಗುತ್ತದೆ. ಹಾಗಾಗಿ, ಮಾನ್ಯ ಸಚಿವರ ಭಾವನೆಗೆ ನಮ್ಮ ಸಹಮತ ಇದೆ.

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ತಾವು ಆ ಪದವನ್ನು ಕಡತದಿಂದ ತೆಗೆಸಿಬಿಡಿ. ಏಕೆಂದರೆ, ಇದು ಒಂದು ಒಳ್ಳೆಯ ಸಂದರ್ಭ.

**ಶ್ರೀ ಎಸ್.ವಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಆ ಪದವನ್ನು ಕಾಂಗ್ರೆಸ್ ಪಕ್ಷದವರದು ಸಹ ತೆಗೆಸಿಬಿಡಿ. ಆ ರೀತಿ ಅವರು ಸಹ ಹೇಳಿದ್ದಾರೆ. ಆದುದರಿಂದ, ಎರಡನ್ನು ಸಹ ತೆಗೆಯಿರಿ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೆ, ಈಗ ನಾವೂ ಸಹ ಆ ರೀತಿ ಮಾತನಾಡಬಹುದಿತ್ತು. ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರು ಕಾಂಗ್ರೆಸ್ ಪಕ್ಷದಲ್ಲಿ ಇದ್ದರು ಎಂದು ಹೇಳಿ, ಅದನ್ನು ಅಷ್ಟಕ್ಕೆ ಬಿಟ್ಟುಬಿಟ್ಟರು. ಇಲ್ಲವಾದರೆ ನಾವು ಇನ್ನೂ ಹೇಳಬಹುದಾಗಿತ್ತು. ಅಂದರೆ, ಅವರಿಗೆ ಕಾಂಗ್ರೆಸ್‌ನಲ್ಲಿ ಅಧಿಕಾರವಿತ್ತು ಎಂದು. ಆದುದರಿಂದ, it is not in good taste.

**ಶ್ರೀ ಕೃಷ್ಣ ಭೈರೆಗೌಡ:-** ಮಾನ್ಯ ಸಭಾಪತಿಯವರೆ, ಅವರು ಹೇಳಿರುವುದರಲ್ಲಿ objectionable ಎಂದು ಇದ್ದರೆ, ಆ ಪದವನ್ನು ಸಹ ತೆಗೆದು ಹಾಕಿ.

**ಸಭಾಪತಿಯವರು:-** ಆಯಿತು, ನಾನು ಆ ಎರಡನ್ನೂ ಸಹ ನೋಡುತ್ತೇನೆ.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಇವತ್ತು ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರಿಗೆ ನಮ್ಮ ಪಕ್ಷ ಅವರನ್ನು ವಿಪಕ್ಷ ನಾಯಕರನ್ನಾಗಿ ನೇಮಕ ಮಾಡಿದೆ. ಆ ಹಿನ್ನೆಲೆಯಲ್ಲಿ ಇವತ್ತು ಪ್ರತಿಪಕ್ಷದ ನಾಯಕರಾಗಿ ಜವಾಬ್ದಾರಿಯನ್ನು ತೆಗೆದುಕೊಂಡಿರುವಂತಹ ಮಾನ್ಯ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರು ಛಲವಾದಿಗಳಾಗಲಿ, ಬಲವಾದ ಪ್ರತಿಪಕ್ಷ ಎಷ್ಟು ಚೆನ್ನಾಗಿ ತನ್ನ ಕಾರ್ಯವನ್ನು ನಿರ್ವಹಿಸುತ್ತದೆ, ಸರ್ಕಾರ ಅಷ್ಟು ಸರಿ ದಾರಿಯಲ್ಲಿ ಇರುತ್ತದೆ ಎನ್ನುವಂಥದ್ದನ್ನು ಇತಿಹಾಸ ಹೇಳುತ್ತದೆ. ಆ ಪ್ರಕಾರವಾಗಿ ನಮ್ಮ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರು ಒಬ್ಬ ಒಳ್ಳೆಯ ವಾಕ್ಪಟು ಹೌದು, ಒಳ್ಳೆಯ ಮಾತುಗಾರರು, ಸಂಘಟಕರು ಆ ಹಿನ್ನೆಲೆಯಲ್ಲಿ ಪಕ್ಷ ಅವರನ್ನು ಗುರುತಿಸಿ ಪ್ರತಿಪಕ್ಷದ ನಾಯಕರನ್ನಾಗಿ ಮಾಡಿದೆ. ಅವರು ಈ ಒಂದು ಸ್ಥಾನದಲ್ಲಿ ಯಶಸ್ವಿಯಾಗಲಿ ಮತ್ತೆ ಉತ್ತುಂಗ ಸ್ಥಾನವನ್ನು ತಲುಪಲಿ ಎಂದು ಹೇಳುತ್ತಾ, ನನ್ನ ಎರಡು ಮಾತನ್ನು ಮುಗಿಸುತ್ತೇನೆ.

**ಶ್ರೀ ಗೋವಿಂದ ರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಬಹಳ ಮುಖ್ಯವಾದ ವಿಚಾರವೇನೆಂದರೆ, ಸನ್ಮಾನ್ಯ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರು ನಮ್ಮ ಕೋಲಾರ ಜಿಲ್ಲೆಯ ಭಾಗದವರು. ಹಾಗಾಗಿ, ನನಗಂತೂ ಬಹಳ ಹೆಮ್ಮೆ ಇದೆ. ನಮ್ಮ ಜಿಲ್ಲೆಯವರಿಗೆ ಮುಖ್ಯಮಂತ್ರಿಯಾಗುವಂತಹ ಅವಕಾಶವಿಲ್ಲ. ಆದರೂ shadow Chief Minister ಗಾದರೂ ನಮ್ಮ ಜಿಲ್ಲೆಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಮಾನ್ಯ ಛಲವಾದಿ ಟಿ. ನಾರಾಯಣಸ್ವಾಮಿಯವರಿಗೆ ಕೋಲಾರ ಜಿಲ್ಲೆಯ ಹೆಚ್ಚಿನ ಸಮಸ್ಯೆಗಳು ಗೊತ್ತಿದೆ.

**ಶ್ರೀ ಕೃಷ್ಣ ಭೈರೆಗೌಡ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ದಿವಂಗತ ಕೆ.ಸಿ.ರೆಡ್ಡಿಯವರನ್ನು ಮರೆತುಬಿಟ್ಟಿದ್ದಾರೆ.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೆ, ದಿವಂಗತ ಕೆ.ಸಿ.ರೆಡ್ಡಿಯವರು ಹಿಂದೆ ಮುಖ್ಯಮಂತ್ರಿಗಳಾಗಿದ್ದರು. ಈಗ ಇಲ್ಲವಲ್ಲ. ಈಗ ಮಾನ್ಯ ಸಚಿವರಾದ ಶ್ರೀ ಕೃಷ್ಣ ಭೈರೆಗೌಡರು ಮುಂದೆ ಮುಖ್ಯಮಂತ್ರಿಗಳಾಗುವುದಕ್ಕೆ ಶಕ್ತಿ ಇದೆ. ಮಾನ್ಯ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರು ನಮ್ಮ ಭಾಗದಿಂದ ಬಂದಿದ್ದಾರೆ. ಈಗ ಮಾನ್ಯ ಸಚಿವರಾದ ಶ್ರೀ ಕೃಷ್ಣ ಭೈರೆಗೌಡರಿಗೆ ಆಸೆ ಇಲ್ಲದೇ ಇದ್ದರೂ ಕೂಡ ಅವರಿಗೆ ಮುಖ್ಯಮಂತ್ರಿಗಳಾಗುವಂತಹ ಶಕ್ತಿ ಇದೆ. ಅವರು ಮುಂದಕ್ಕೆ ಮುಖ್ಯಮಂತ್ರಿಗಳಾಗಲಿ ಎಂಬುದು ನಮ್ಮ ಆಸೆ. ಈಗ ಸದ್ಯಕ್ಕೆ ನಮಗೆ ಭಾರತೀಯ ಜನತಾ ಪಕ್ಷದವರು shadow Chief Minister ಅನ್ನು ಕೊಟ್ಟಿದ್ದಾರೆ. ಆದುದರಿಂದ, ನಮ್ಮ ಭಾಗದವರಿಗೆ ಕೊಟ್ಟಿರುವುದಕ್ಕೆ ನಾನು ಭಾರತೀಯ ಜನತಾ ಪಕ್ಷದ ಎಲ್ಲಾ ಹಿರಿಯ ಮುಖಂಡರಿಗೆ ಧನ್ಯವಾದಗಳನ್ನು ಸಮರ್ಪಣೆ ಮಾಡುತ್ತೇನೆ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಛಲವಾದಿಯೂ ಆಗಿದ್ದಾರೆ, ಚೆಲುವಾದಿಯೂ ಸಹ ಆಗಿದ್ದಾರೆ. ಅವರ ಚೆಲುವು ಏನಿದೆ ಎಂದರೆ, ಅವರ ಮೊಗದಲ್ಲಿ ಇರುವಂತಹ ಕಳೆ. ನಾನು ಯಾವೊತ್ತು ಸಹ ಅವರ ಮುಖದಲ್ಲಿ ಆಯಾಸವನ್ನೇ ಕಂಡಿಲ್ಲ. ಅವರ ವಯಸ್ಸು ಸುಮಾರು ಎಪ್ಪತ್ತು ವರ್ಷವಾಗಿರಬಹುದೇನೋ. ಅದು ನನಗೆ ಗೊತ್ತಿಲ್ಲ. ಆದರೂ ಸಹ ಅವರಲ್ಲಿ ಇರುವಂತಹ ಉಲ್ಲಾಸ, ಉತ್ಸಾಹ ಮತ್ತೆ

ಇನ್ನು ಹೆಚ್ಚಿನ ರೀತಿಯಲ್ಲಿ ಆ ಸ್ಥಾನದಲ್ಲಿ ಇರಲಿ ಎಂದು ಹೇಳುತ್ತೇನೆ. ಈಗ ಮಾನ್ಯ ಸದಸ್ಯರಾದ ಬಿ.ಕೆ.ಹರಿಪ್ರಸಾದ್‌ರವರಲ್ಲಿ ಇರುವಂತಹ ಒಂದು ಶಕ್ತಿ ಕೂಡ ಇವರಿಗೆ ಬರಲಿ ಎಂದು ಹೇಳುತ್ತೇನೆ. ನಾನು ಏನು ಮುಚ್ಚುಮರೆ ಇಟ್ಟುಕೊಂಡು ಹೇಳುವುದಿಲ್ಲ. ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಸಹ ಆ ಸ್ಥಾನದಲ್ಲಿ ಬಹಳ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿದ್ದಾರೆ. ಆಗ ನಾನು ಹೊಸಬನಾದರೂ ಸಹ ಅವರು ಎಲ್ಲರ ಮನಸ್ಸಿಗೆ ಇಚ್ಛೆಯಾಗುವಂತಹ ರೀತಿ ಈ ಸದನದ ಗೌರವ ಮತ್ತು ಮರ್ಯಾದೆಯನ್ನು ಎತ್ತಿ ಹಿಡಿಯುವ ರೀತಿಯಲ್ಲಿ ಇವರು ಕೆಲಸ ಮಾಡಲಿ ಎಂದು ನಮ್ಮ ಕೋಲಾರ ಜಿಲ್ಲೆಯ ಎಲ್ಲಾ ಜನತೆಯ ಪರವಾಗಿ ಮಾನ್ಯ ಛಲವಾದಿ ಟಿ. ನಾರಾಯಣಸ್ವಾಮಿಯವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಪ್ರಥಮವಾಗಿ ವಿಧಾನ ಪರಿಷತ್ತಿನಲ್ಲಿ ಪ್ರತಿಪಕ್ಷದ ನಾಯಕರಾಗಿ ಆಯ್ಕೆಯಾಗಿರುವಂತಹ ಸನ್ಮಾನ್ಯ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರಿಗೆ ನಾನು ಹೃದಯಪೂರ್ವಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಭಾರತೀಯ ಜನತಾ ಪಕ್ಷದ ಹಿರಿಯ ನೇತಾರರಾದ ದಿವಂಗತ ಅಟಲ್ ಬಿಹಾರಿ ವಾಜಪೇಯಿಯವರು ಏನು ಹೇಳುತ್ತಿದ್ದರು ಎಂದರೆ, ಯಾವುದೇ ಒಂದು ಸ್ಥಾನ ಬರುತ್ತದೆಂದು ಹೇಳಿದರೆ, ಅದು ಅಧಿಕಾರವಲ್ಲ, ಅದು ಜವಾಬ್ದಾರಿ ಎಂದು ಹೇಳುತ್ತಿದ್ದರು. ಆ ಜವಾಬ್ದಾರಿಯುತ ಸ್ಥಾನಕ್ಕೆ ನಮ್ಮ ಪಕ್ಷ ಮಾನ್ಯ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರನ್ನು ವಿರೋಧ ಪಕ್ಷದ ನಾಯಕರನ್ನಾಗಿ ನೇಮಕ ಮಾಡಿದೆ. ಎಲ್ಲರೂ ಇಲ್ಲಿ ಮಾತನಾಡುವಾಗ, ವಿರೋಧ ಪಕ್ಷವೆಂಬ ಶಬ್ದ ಹೆಚ್ಚಾಗಿ ಉಪಯೋಗವಾಗುತ್ತದೆ. ಬಹುಶಃ 'ಪ್ರತಿಪಕ್ಷ' ಎಂದು ಹೇಳುವಂಥದ್ದು ಹೆಚ್ಚು ಸೂಕ್ತ. ವಿರೋಧ ಎಂದು ಹೇಳುವಾಗ, ವಿರೋಧ ಎಂಬ ಭಾವನೆ ನಮ್ಮಲ್ಲಿ ಹೆಚ್ಚಾಗಿ ಬರುತ್ತದೆ. ಡಾ: ಬಿ.ಆರ್.ಅಂಬೇಡ್ಕರ್‌ರವರ ಸಂವಿಧಾನದ ಸೊಬಗು ಸಮಾಜದ ಕಟ್ಟಕಡೆಯ ವ್ಯಕ್ತಿಗಳನ್ನು ಯಾವ ಸ್ಥಾನಕ್ಕೂ ಸಹ ಏರಿಸಬಲ್ಲದು ಎಂದು ಹೇಳುವಂಥದ್ದಕ್ಕೆ ಮತ್ತೊಮ್ಮೆ ಮತ್ತೊಂದು ಉದಾಹರಣೆಯಾಗಿ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರು ಇವತ್ತು ವಿರೋಧ ಪಕ್ಷದ ನಾಯಕನ ಸ್ಥಾನದಲ್ಲಿ ಕುಳಿತಿದ್ದಾರೆ. ಎಷ್ಟೋ ಬಾರಿ ಯಾರಾದರೂ ಒಂದು ಸ್ಥಾನಕ್ಕೆ ಬಂದಾಗ, ಅದೊಂದು ಯೋಗ ಎಂದು ಹೇಳುವಂತಹ ಭಾವನೆಯನ್ನು ಸಾಮಾನ್ಯವಾಗಿ ನಾವು ಉಪಯೋಗ ಮಾಡುತ್ತೇವೆ. ಅದು ಕೇವಲ ಯೋಗವಲ್ಲ. ಅದರ ಜೊತೆಗೆ ಅವರ ಪರಿಶ್ರಮ ಮತ್ತೆ ಅವರು ತಮ್ಮ ರಾಜಕೀಯ ಜೀವನದಲ್ಲಿ ಮಾಡಿದಂತಹ ಹೋರಾಟಗಳು. ಅದು ಯಾವುದೇ ಸ್ಥಾನ ಇರಬಹುದು.

(ಮುಂದು)

(659) 24.07.2024 10.40 LL-KS (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.(ಮುಂದು):**

ಮತ್ತೊಂದು ಕಾಲಚಕ್ರ. ಈ ಕಾಲಚಕ್ರದಲ್ಲಿ ಕೆಳಗಿರುವವರು ಯಾವತ್ತಿದ್ರು ಒಂದಲ್ಲಾ ಒಂದು ದಿನ ಕಾಲಚಕ್ರದ ನಿಯಮದಡಿಯಲ್ಲಿ ಮೇಲೆ ಬಂದೇ ಬರುತ್ತಾರೆ. ಆ ದೃಷ್ಟಿಯಲ್ಲಿ ನಮ್ಮ ಪಕ್ಷದ ದೃಷ್ಟಿಯಿಂದಲೂ ತುಂಬಾ ಮಂದಿ ಒಂದು ಮಾತನ್ನು ಹೇಳುತ್ತಾರೆ. ನಮಗೆ ಸಿಕ್ಕಿದ ಒಂದು ಸಣ್ಣ ಅವಧಿಯಲ್ಲಿ ರಾಷ್ಟ್ರಪತಿಯಿಂದ ಪ್ರಾರಂಭಗೊಂಡು ಯಾವ್ಯಾವ ಸಂದರ್ಭದಲ್ಲಿ ಅವಕಾಶ ಸಿಕ್ಕಿದೆಯೋ ಆಗೆಲ್ಲಾ ಸಾಮಾಜಿಕ ನ್ಯಾಯ ಕೊಡುವಂತಹ ದೃಷ್ಟಿಯಲ್ಲಿ ಅವಕಾಶ ನೀಡಿದಂತಹ ಉದಾಹರಣೆಗಳು ಸಾಕಷ್ಟಿವೆ. ಆ ದೃಷ್ಟಿಯಲ್ಲಿ ಮಾನ್ಯ ಛಲವಾದಿ ಟಿ. ನಾರಾಯಣಸ್ವಾಮಿಯವರು ಇವೊತ್ತಿನ ದಿವಸ ಪ್ರತಿಪಕ್ಷದ ನಾಯಕರ ಸ್ಥಾನವನ್ನು ಅಲಂಕರಿಸಿದ್ದಾರೆ. ಅವರ ಜವಾಬ್ದಾರಿಯನ್ನು ಅವರು ಅತ್ಯಂತ ಪ್ರಭಾವಯುತವಾಗಿ ನಿರ್ವಹಿಸುತ್ತಾರೆ ಎಂದು ಹೇಳುವಂತಹ ಆಶಯದ ಜೊತೆಗೆ, ಅವರಿಗೆ ನಾನು ವೈಯಕ್ತಿಕವಾಗಿ ಹಾಗೂ ನಮ್ಮೆಲ್ಲಾ ವಿಧಾನ ಪರಿಷತ್ತಿನ ಸದಸ್ಯರ ವತಿಯಿಂದ ಹೃತ್ಪೂರ್ವಕವಾದ ಅಭಿನಂದನೆಯನ್ನು ಸಲ್ಲಿಸುತ್ತೇನೆ.

**ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವೊತ್ತು ನಮಗೆ ಒಂದು ವಿಶೇಷ ಸಂದರ್ಭ. ಒಂದು ಶೋಷಿತ ವರ್ಗದಿಂದ ಬೆಳೆದು ಬಂದಂತಹ ಒಬ್ಬ ಧೀಮಂತ ನಾಯಕನಿಗೆ ಇವೊತ್ತಿನ ದಿವಸ ವಿರೋಧ ಪಕ್ಷದ ನಾಯಕನ ಸ್ಥಾನವನ್ನು ಕೊಟ್ಟಿರುವುದಕ್ಕೆ ಆ ಪಕ್ಷದ ನಾಯಕರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಜೊತೆಗೆ, ಅವರಿಗೂ ಸಹ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ನನಗೆ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರು ಸುಮಾರು 30-35 ವರ್ಷಗಳಿಂದ ಪರಿಚಯ ಇರುವಂತಹವರು ಮತ್ತು ಹಿರಿಯ ಸಹೋದರರಾಗಿ ಒಂದೇ ಕಾರ್ಪೋರೇಷನ್ ವಾರ್ಡ್‌ನಲ್ಲಿ ನಾವು ಇದ್ದಂತಹವರು. ಅವರು ಹಲವಾರು ಪಕ್ಷಗಳಲ್ಲಿ ಅಂದರೆ, ಕಾಂಗ್ರೆಸ್ ಅಥವಾ KCP (Karnataka Congress Party) ಇರಬಹುದು ಅಥವಾ ಬಿಜೆಪಿ ಇರಬಹುದು ಎಲ್ಲಾ ಪಕ್ಷಗಳಲ್ಲಿ ಕೆಲಸ ಮಾಡಿದಂತಹ ನಾಯಕರು ಅವರು. ಜೊತೆಗೆ, ಅವರು ಎಲ್ಲಾ ಪಕ್ಷಗಳ ideology ಗಳನ್ನು ತಿಳಿದುಕೊಂಡಿದ್ದಾರೆಂದು ನಾನು ಭಾವಿಸುತ್ತೇನೆ. ವಿಶೇಷವಾಗಿ ಹೇಳಬೇಕೆಂದರೆ, ನನ್ನ ಮತ್ತು ಅವರ ಗೆಳೆತನ ಎಷ್ಟರಮಟ್ಟಿಗೆ ಇತ್ತೆಂದರೆ, ಪ್ರತಿದಿನ ನಾವು ಜೊತೆಯಲ್ಲಿದ್ದರೂ ಸಹ, ಸಾಯಂಕಾಲ ಟಿ.ವಿ. ಮಾಧ್ಯಮದಲ್ಲಿ ಜಟಾಪಟಿ ನಡೆಸುತ್ತಿದ್ದೆವು. ಅವರು ಬಿಜೆಪಿ ಪಕ್ಷದ ಪರವಾಗಿ ಮತ್ತು ನಾನು ಕಾಂಗ್ರೆಸ್ ಪರವಾಗಿ ಹೋಗುತ್ತಿದ್ದೆವು. ಬಹಳ ಹೋರಾಟಗಳನ್ನು ಮಾಡಿರುವಂಥದ್ದು, ಕಿತ್ತಾಡಿರುವಂಥದ್ದು ಸಹ ಇದೆ. ಆದರೆ, ಹೊಡೆದಾಟ ಒಂದು ಆಗಿರುವುದಿಲ್ಲ. ಆ ರೀತಿ ಇದ್ದಾಗಿಯೂ ಕೂಡ, **(ಗೊಂದಲ)** ಹಾಗಾಗಿ, ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರು ಟಿ.ವಿ. ಮಾಧ್ಯಮಗಳಲ್ಲಿ ಎಷ್ಟೇ ಮಾತನಾಡಿದರೂ ಸಹ ನಮ್ಮ ಜೊತೆ ಹೊರಗಡೆ ಬಹಳ ಪ್ರೀತಿ ವಿಶ್ವಾಸದಿಂದ ಇರುತ್ತಿದ್ದರು. ಆ ಮನುಷ್ಯತ್ವದ ಭಾವನೆಗಳನ್ನು ಇಟ್ಟುಕೊಂಡು ಮಾತನಾಡುತ್ತಿದ್ದರು. ಇವೊತ್ತಿನ ದಿವಸ ನಾನು ಅವರಿಗೆ ಹೇಳುವುದೇನೆಂದರೆ, ಅವರು ವಿರೋಧ ಪಕ್ಷದ ನಾಯಕರಾದರೂ ಕೂಡ, ಕೇವಲ ವಿರೋಧ

ಮಾಡಬೇಕೆನ್ನುವ ದೃಷ್ಟಿಕೋನದಿಂದ ಕೆಲಸ ಮಾಡಿದರೆ ನ್ಯಾಯ ಸಿಗುವುದಿಲ್ಲ. ಅವರು ರಚನಾತ್ಮಕವಾಗಿರತಕ್ಕಂತಹವರು. ಡಾ: ಬಿ.ಆರ್. ಅಂಬೇಡ್ಕರ್‌ರವರ ಕೊಟ್ಟಂತಹ ಸಂವಿಧಾನದ ಆಶಯಗಳಿಗನುಗುಣವಾಗಿ ಸಾಮಾಜಿಕ ನ್ಯಾಯದ ಪರವಾಗಿರುವಂತಹ ತೀರ್ಮಾನಗಳನ್ನು ಸರ್ಕಾರಗಳು ಮಾಡಿದಾಗ ಅದಕ್ಕೆ ಬೆಂಬಲಿಸತಕ್ಕಂತಹ ವಿಚಾರದಲ್ಲಿ ಕೈಜೋಡಿಸುವಂತಹ ಕೆಲಸವನ್ನು ಪಕ್ಷದ ಮೂಲಕ ಮಾಡಬೇಕು ಎಂಬ ಮನವಿಯನ್ನು ನಾನು ಮಾಡುತ್ತೇನೆ. ಏಕೆಂದರೆ, ಸಂವಿಧಾನ ಆಶಯಗಳನ್ನು ಈಡೇರಿಸುವುದಕ್ಕಾಗಿ ಇಂತಹ ಮೇಲ್ಮನೆ ರಚನೆಯಾಗಿರುತ್ತದೆ. ಇಂತಹ ಒಂದು ಚಿಂತಕರ ಚಾವಡಿಯಲ್ಲಿರಬೇಕಾದರೆ ನಾವೆಲ್ಲರೂ ಕೂಡ ಹಿರಿಯರ ಮನೆಯಲ್ಲಿರತಕ್ಕಂತಹವರು ಒಂದು ಭಾವನಾತ್ಮಕ ವಿಚಾರಗಳೊಂದಿಗೆ ಸಂವಿಧಾನದ ವಿಚಾರಗಳಿಗೆ ಬೆಲೆ ಕೊಡಬೇಕಾಗುತ್ತದೆ. ಯಾವುದೇ ಕಾರಣಕ್ಕೂ ಕೂಡ ವಿರೋಧ ಮಾಡಬೇಕೆನ್ನುವ ಒಂದೇ ದೃಷ್ಟಿಕೋನದಿಂದ ಎಲ್ಲವನ್ನೂ ವಿರೋಧ ಮಾಡುತ್ತಿರುವುದನ್ನು ಪರಿಪಾಠವನ್ನು ಇತ್ತೀಚಿನ ದಿನಗಳಲ್ಲಿ ನಾವು ಹೆಚ್ಚಾಗಿ ನೋಡುತ್ತಿದ್ದೇವೆ. ಅದಕ್ಕೆ ನಾವು ಬೇರೆ ದಿಕ್ಕಿನ ಆಲೋಚನೆ ಮಾಡಬೇಕಾದ ಕೆಲಸವನ್ನು ಮಾಡಬೇಕಾಗುತ್ತದೆ. ಜೊತೆಗೆ, ವಿಶೇಷವಾಗಿ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರು ಹಲವಾರು ರೀತಿಯ ಹೋರಾಟಗಳನ್ನು ಮಾಡಿಕೊಂಡು ಬಂದಿರುತ್ತಾರೆ. ಕಾಂಗ್ರೆಸ್ ಪಕ್ಷದಲ್ಲಿಯೂ ಕೂಡ ಅವರು ಅಧ್ಯಕ್ಷರಾಗಿ ಕೆಲಸ ಮಾಡಿರುತ್ತಾರೆ. ನಮ್ಮ ಸಂಘಟನೆಗಳಲ್ಲಿ ಕೆಲಸ ಮಾಡಿರುವುದು ಇರಬಹುದು. ಶೋಷಿತ ವರ್ಗಗಳ ಜೊತೆಗೆ ಬೆರೆತು ಬದುಕುವಂತಹ ನಾಯಕರಾಗಿರುವುದರಿಂದ ಅವರಿಗೆ ಎರಡೂ ಪಕ್ಷಗಳ ideology ಗಳು ತಿಳಿದಿರುವ ಸಂದರ್ಭದಲ್ಲಿ ಮೇಲ್ಮನೆಯಲ್ಲಿ ಸಾಮಾಜಿಕ ನ್ಯಾಯದ ಪರಿಪಾಲನೆ ಮಾಡುವಂಥದ್ದು ಮತ್ತು ಸಂವಿಧಾನದ ಆಶಯಗಳನ್ನು ಈಡೇರಿಸುವಂತಹ ರೀತಿಯಲ್ಲಿ ರಚನಾತ್ಮಕವಾಗಿ ಕೆಲಸ ಮಾಡುತ್ತಾರೆ ಎಂಬ ಆಶಯಗಳೊಂದಿಗೆ ನಾನು ತುಂಬು ಹೃದಯದಿಂದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರಿಗೆ ಅಭಿನಂದನೆಯನ್ನು ಸಲ್ಲಿಸುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಎ. ವಸಂತ ಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ ಶ್ರೀ ಛಲವಾದ ಟಿ. ನಾರಾಯಣಸ್ವಾಮಿಯವರಿಗೆ ವೈಯಕ್ತಿಕವಾಗಿ ಮತ್ತು ನಮ್ಮ ಪಕ್ಷದ ಪರವಾಗಿ ಅವರಿಗೆ ಅಭಿನಂದನೆಗಳನ್ನು ಅವರಿಗೆ ಸಲ್ಲಿಸುತ್ತೇನೆ. ಮೊದಲಿಂದಲೂ ಅವರು ನಮ್ಮ ಕಾಂಗ್ರೆಸ್ ಪಕ್ಷದಲ್ಲಿದ್ದು, ತಮ್ಮ ರಾಜಕೀಯ ಜೀವನವನ್ನು ಪ್ರಾರಂಭ ಮಾಡಿದಂತಹವರು ಅವರು. ಅವರು ನನಗೆ ಬಹಳ ಆತ್ಮೀಯರಾಗಿದ್ದಂತಹವರು ಮತ್ತು ಒಂದೇ ಗರಡಿಮನೆಯಲ್ಲಿ ಬೆಳೆದು ಬಂದಂತಹವರು. ಗರಡಿ ಮನೆಯೆಂದರೆ, ರಾಜಕೀಯ ಗರಡಿ ಮನೆ ಎಂದು. ಶ್ರೀ ಮಲ್ಲಿಕಾರ್ಜುನ ಖರ್ಗೆ ಸಾಹೇಬರ ಅನುಯಾಯಿಗಳಾಗಿ ಅವರ ಜೊತೆಯಲ್ಲಿ ರಾಜಕೀಯ ಜೀವನವನ್ನು ಪ್ರಾರಂಭ ಮಾಡಿದಂತಹವರು. ಕೆಲವು ಅನಿವಾರ್ಯ ಕಾರಣಗಳಿಂದ ನಮ್ಮ ಕಾಂಗ್ರೆಸ್ ಪಕ್ಷವನ್ನು ಬಿಟ್ಟು, ಬಿಜೆಪಿ ಪಕ್ಷವನ್ನು ಸೇರಿಕೊಂಡಂತಹವರು. ಬಹಳಷ್ಟು ಸಂದರ್ಭದಲ್ಲಿ ನಾವು ಅವರ ಜೊತೆಗೆ ಒಡನಾಟ ಇಟ್ಟುಕೊಂಡಂತಹ ಸಂದರ್ಭದಲ್ಲಿ ಡಾ: ಬಿ.ಆರ್. ಅಂಬೇಡ್ಕರ್‌ರವರ ವಿಚಾರಧಾರೆಯನ್ನು ಪರಿಶಿಷ್ಟ ಜಾತಿ ಮತ್ತು ದುರ್ಬಲ ವರ್ಗದವರ ಬಗ್ಗೆ ಸಂದರ್ಭ ಸಮಯ ಬಂದಾಗ ಬಹಳ ಪರಿಣಾಮಕಾರಿಯಾಗಿ ಧ್ವನಿಯನ್ನು ಎತ್ತಿ ಅವುಗಳಿಗೆ ಪರಿಹಾರವನ್ನು

ಕಂಡುಕೊಂಡಂತಹ ವ್ಯಕ್ತಿತ್ವ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರದ್ದು. ಈಗ ಒಂದು ಪ್ರಶ್ನೆ ನನಗೆ ವೈಯಕ್ತಿಕವಾಗಿ ಉದ್ಭವಿಸುತ್ತದೆ. ಅದೇನೆಂದರೆ, ಡಾ: ಬಿ.ಆರ್. ಅಂಬೇಡ್ಕರ್‌ರವರ ವಿಚಾರವಾದ ಮತ್ತು ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರು ಸೇರಿಕೊಂಡಿರುವ ಬಿಜೆಪಿ ಪಕ್ಷದ ಮೂಲ ತತ್ವ ಸಿದ್ಧಾಂತಕ್ಕೆ ಬಹಳ ಅಜಗಜಾಂತರ ವ್ಯತ್ಯಾಸವಿದೆ. ಈ ಹಿನ್ನೆಲೆಯಲ್ಲಿ ನಾನು ವಿಚಾರ ಮತ್ತು ತತ್ವ ಸಿದ್ಧಾಂತಗಳ ಬಗ್ಗೆ ಮಾತನಾಡುತ್ತಿದ್ದೇನೆ. ರಾಜಕೀಯದ ಬಗ್ಗೆ ಅಲ್ಲ. ಯಾವ ರೀತಿ ಅವರು ಡಾ: ಬಿ.ಆರ್. ಅಂಬೇಡ್ಕರ್‌ರವರ ವಿಚಾರವಾದವನ್ನು ಮೈಗೂಡಿಸಿಕೊಂಡು ಬಂದಿದ್ದಾರೆ. ಆದರೆ, ಅವರು ಸೇರಿರುವಂತಹ ಪಕ್ಷ ಅದಕ್ಕೆ ತದ್ವಿರುದ್ಧವಾಗಿದೆ. ತಮ್ಮನ್ನು ತಾವು... **(ಗೊಂದಲ)** ದಯವಿಟ್ಟು ಕೇಳಿ.

**ಶ್ರೀಮತಿ ಭಾರತಿಶೆಟ್ಟಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ತದ್ವಿರುದ್ಧ ಎಂದು ಹೇಳಿದರೆ ಹೇಗೆ?

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವಸಂತಕುಮಾರ್‌ರವರೇ,...

**ಶ್ರೀ ಎ. ವಸಂತ ಕುಮಾರ್:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಕೇಳಿ. ನಾನು ಮುಂದೆ ಹೇಳುತ್ತೇನೆ.

**(ಗೊಂದಲ)**

**ಶ್ರೀಮತಿ ಭಾರತಿಶೆಟ್ಟಿ:-** ಮಾನ್ಯ ಸಭಾಪತಿಯವರೇ, ಅವರಿಗೆ ಅವಮಾನ ಮಾಡಿದವರು ಅವರು. ಈಗ ತದ್ವಿರುದ್ಧ ಎಂದು ಹೇಳಿದರೆ ಹೇಗೆ? ಏನು ತದ್ವಿರುದ್ಧ ಎನ್ನುವುದನ್ನು ಅವರು ಹೇಳಬೇಕು.

**(ಗೊಂದಲ)**

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗ ತಾನೇ ಅವರ ಪಕ್ಷದ Headmaster ರವರು ಏನು ಪಾಠ ಮಾಡಿದರು, ಇವರು ಏನು ಮಾತನಾಡುತ್ತಿದ್ದಾರೆ. ಅವರು Headmaster ಹೇಳಿರುವುದನ್ನು follow ಮಾಡಬೇಕು.

**(ಗೊಂದಲ)**

**ಶ್ರೀ ಎ. ವಸಂತ ಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ರಾಜಕೀಯ ಮಾಡುತ್ತಿಲ್ಲ. ನನ್ನ ಪ್ರಶ್ನೆ ಏನೆಂದರೆ, ಅವರು ತಮ್ಮನ್ನು ತಾವು...

**ಸಭಾಪತಿಯವರು:-** ಮಾನ್ಯ ವಸಂತ ಕುಮಾರ್‌ರವರೇ, ಒಂದು ನಿಮಿಷ.

**ಶ್ರೀ ಎ. ವಸಂತ ಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಛಲವಾದಿ ಟಿ. ನಾರಾಯಣಸ್ವಾಮಿಯವರು ಈ ಎರಡು ಸಿದ್ಧಾಂತಗಳನ್ನು ಯಾವ ರೀತಿ ಒಪ್ಪುಕೊಳ್ಳುತ್ತಾರೆ ಎಂಬ ಮೂಲ ಪ್ರಶ್ನೆಯನ್ನು ನಾನು ಕೇಳುವುದಕ್ಕೆ ಬಯಸುತ್ತೇನೆ.

**ಸಭಾಪತಿಯವರು:-** ಮಾನ್ಯ ವಸಂತ ಕುಮಾರ್‌ರವರೇ, ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ತಾವು ಹೊಸದಾಗಿ ಈ ಸದನಕ್ಕೆ ಬಂದಿದ್ದೀರಿ. ಹಾಗಾಗಿ, ತಾವು ಸಭೆಯ ನಡೆವಳಿಕೆಯನ್ನು ನೋಡಿಕೊಳ್ಳಿ. ಇದು ಒಂದು

ಒಳ್ಳೆಯ ಸಂದರ್ಭವಾಗಿದೆ. ಇದು ಯಾವುದೇ ವಿರೋಧ ಮಾಡುವಂತಹ ಸಂದರ್ಭ ಅಲ್ಲ. ಒಳ್ಳೆಯವರ ಬಗ್ಗೆ ನಾಲ್ಕು ಒಳ್ಳೆಯ ಮಾತುಗಳನ್ನು ಹೇಳುವಂತಹ ಸಂದರ್ಭ ಇದು. ಹಾಗಾಗಿ, ತಾವು ಈ ಸಂದರ್ಭದಲ್ಲಿ ಅಡ್ಡಾದಿಡ್ಡಿ ಮಾತನಾಡಬೇಡಿ. ತಾವು ಮಾತನಾಡಿದ್ದು ಸಾಕು. ಈಗ ಕುಳಿತುಕೊಳ್ಳಿ.

**ಶ್ರೀ ಎ. ವಸಂತ ಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ಅದನ್ನೇ ಹೇಳುತ್ತಿದ್ದೇನೆ. ಆ ಕಾರಣದಿಂದ ನಾನು ಮಾನ್ಯ ಛಲವಾದಿ ಟಿ. ನಾರಾಯಣಸ್ವಾಮಿಯವರಿಗೆ ಮತ್ತೊಮ್ಮೆ ಅಭಿನಂದನೆಯನ್ನು ಸಲ್ಲಿಸುವುದಕ್ಕೆ ಇಷ್ಟಪಡುತ್ತೇನೆ.

**(ಗೊಂದಲ)**

**ಶ್ರೀ ಶಾಂತರಾಮ್ ಬುಡ್ನ ಸಿದ್ದಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಆ ಪದವನ್ನು ಕಡತದಿಂದ ತೆಗೆಸಬೇಕು.

**ಸಭಾಪತಿಯವರು:-** ನಾನು ಎಲ್ಲವನ್ನೂ ನೋಡುತ್ತೇನೆ. ಯಾವುದು ಸರಿ ಇಲ್ಲವೋ ಅದನ್ನು ನಾನು ಕಡತದಿಂದ ತೆಗೆಸುತ್ತೇನೆ.

**(ಗೊಂದಲ)**

**ಶ್ರೀ ಕೃಷ್ಣಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಒಳ್ಳೆಯದನ್ನು ಹೇಳುವುದಕ್ಕೆ ಮನಸ್ಸು ಬಾರದಿದ್ದರೆ, ನೆಗೆಟಿವ್ ಅಂತೂ ಹೇಳಬಾರದು. ಹೇಳುವಷ್ಟು ಒಳ್ಳೆಯದನ್ನು ಹೇಳಿ ಮುಗಿಸಬೇಕು.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಹೌದು ಸರಿ. ಡಾ: ಬಿ.ಆರ್. ಅಂಬೇಡ್ಕರ್‌ರವರು ಹೇಳಿದ್ದು ಏನೆಂದರೆ, ನಾನು ರಥವನ್ನು ಮುಂದಕ್ಕೆ ಕೊಂಡೊಯ್ದಿದ್ದೇನೆ. ಅದನ್ನು ಇನ್ನು ಮುಂದೆಕ್ಕೆ ಕೊಂಡೊಯ್ಯುವುದಿದ್ದರೆ ಅಡ್ಡಿ ಇಲ್ಲ. ಆದರೆ, ಅದನ್ನು ಹಿಂದಕ್ಕೆ ಮಾತ್ರ ಕೊಂಡೊಯ್ಯಬೇಡಿ ಎಂದು ಹೇಳಿದ್ದಾರೆ. ಅವರಿಗೆ ಅದು ಕೂಡ ಗೊತ್ತಿಲ್ಲ.

**ಸಭಾಪತಿಯವರು:-** ಮಾನ್ಯ ಭಾರತಿ ಶೆಟ್ಟಿಯವರೇ, ಆಯಿತು ಸಾಕು. ಈಗ ತಾವು ತಮ್ಮ ಮಾತನ್ನು ಪ್ರಾರಂಭ ಮಾಡಿ.

**ಶ್ರೀಮತಿ ಭಾರತಿ ಶೆಟ್ಟಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಪ್ರತಿಪಕ್ಷದ ನಾಯಕರಾಗಿ ಆಯ್ಕೆಯಾದಂತಹ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ನಮ್ಮ ಭಾರತೀಯ ಜನತಾ ಪಕ್ಷದಲ್ಲಿ ಒಂದು ಮಾತನ್ನು ಹೇಳುತ್ತಾರೆ. ಅದೇನೆಂದರೆ, ಮನುಕುಲದ ಏಳಿಗೆ ಸಾಧಿಸ ಹೊರಟೆವು, ಪ್ರಭಾತ ಕಿರಣಗಳರಳಿಸುತ್ತಾ, ಶೋಷಿತ ಪೀಡಿತ ದಲಿತ ಜನಾಂಗದ ಭಾಗ್ಯೋದಯವನ್ನು ನಿರ್ಮಿಸುತಾ" ಎಂದು ಹೇಳುತ್ತಾರೆ. ನನಗೆ ಅವರ ಜನಾಂಗದ ಭಾಗ್ಯೋದಯವನ್ನು ಮಾಡಬೇಕೆನ್ನುವ ಸೂಚನೆಯನ್ನು ತತ್ವ ಸಿದ್ಧಾಂತಗಳೊಂದಿಗೆ ನಮ್ಮನ್ನು ಬೆಳೆಸಿದಂತಹ ಭಾರತೀಯ ಜನತಾ ಪಕ್ಷ ಇವೊತ್ತಿನ ದಿವಸ ಹಿಂದುಳಿದ ವರ್ಗದ ಜನರಿಂದಲೇ ನಮ್ಮೆಲ್ಲರ ಭಾಗ್ಯೋದಯವಾಗಬೇಕು ಎನ್ನುವ ಚಿಂತನೆಯನ್ನು ಮಾಡುವ

ಮುಖಾಂತರ ಪ್ರತಿಪಕ್ಷದ ನಾಯಕನ ಸ್ಥಾನಕ್ಕೆ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರನ್ನು ಕೂರಿಸಿದ್ದಕ್ಕಾಗಿ, ನಮ್ಮ ಪಕ್ಷದ ರಾಜ್ಯ ಮತ್ತು ಕೇಂದ್ರದ ವರಿಷ್ಠರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ನಾನು ಅವರನ್ನು ಪ್ರಾರಂಭದಲ್ಲಿ ಕಂಡಿದ್ದು ಟಿ.ವಿ. ಮಾಧ್ಯಮದಲ್ಲಿ ಚರ್ಚೆ ನಡೆಸುವಂತಹ ಸಂದರ್ಭದಲ್ಲಿ. ಆಗ ನಾನು ಬಿಜೆಪಿ ಪಕ್ಷದಲ್ಲಿದ್ದೆನು ಮತ್ತು ಅವರು ಕಾಂಗ್ರೆಸ್ ಪಕ್ಷದಲ್ಲಿದ್ದರು. ಇವೊತ್ತಿನ ದಿವಸ ನಮ್ಮ ಸಹೋದರರು ಹೇಳಿದ ಹಾಗೆ, ಅಲ್ಪಾವಧಿಯಲ್ಲಿ ಒಂದು ಒಳ್ಳೆಯ ಸ್ಥಾನವನ್ನು ಅವರು ಅಲಂಕರಿಸಿದ್ದಾರೆ. ಪ್ರತಿಪಕ್ಷ ಮತ್ತು ಆಡಳಿತ ಪಕ್ಷ ತಂತ್ರ ಮತ್ತು ಪ್ರತಿತಂತ್ರವನ್ನು ರೂಪಿಸಬೇಕಾಗಿರುವಂಥದ್ದಾಗಿದೆ. ಏನು ತಂತ್ರಗಾರಿಕೆಯನ್ನು ಮಾಡಿದರೆ, ಪ್ರತಿತಂತ್ರದ ಮೂಲಕ ಉತ್ತರ ಕೊಡುವಂತಹ ಸಾಮರ್ಥ್ಯ ಇರುವಂತಹ ಮತ್ತು ಛಲ ಇರುವಂತಹ ನಮ್ಮ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರು ಪ್ರತಿಪಕ್ಷದ ನಾಯಕರ ಪೀಠವನ್ನು ಅಲಂಕರಿಸಿರುವುದು ನಮಗೆಲ್ಲರಿಗೂ ಬಹಳ ಸಂತೋಷವನ್ನು ತಂದಿದೆ. ನಮ್ಮ ಪಕ್ಷದಲ್ಲಿ ನಾವು ಯಾವಾಗಲೂ ಹಿಂದುಳಿದ ವರ್ಗ ಎಂದಾಗ, ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರು ಮಾತನಾಡಲಿ ಎಂದು ಹೇಳುತ್ತಿದ್ದೆವು. ಆದರೆ, ಇವೊತ್ತಿನ ದಿವಸ ಕೇವಲ ಒಂದು ಜನಾಂಗವಲ್ಲ, ಎಲ್ಲಾ ಜನಾಂಗಕ್ಕೂ ಕೂಡ ನಾಯಕತ್ವವನ್ನು ಹೊಂದಿ ಆ ಸ್ಥಾನದಲ್ಲಿ ಅವರು ಕುಳಿತಿದ್ದಾರೆ. ಆ ಪರಮಾತ್ಮ ಈ ರಾಜ್ಯಕ್ಕೆ ಹೇಗೆ ಆಡಳಿತ ಪಕ್ಷ ಸಮಾಜಕ್ಕೆ ಒಳ್ಳೆಯದನ್ನು ಮಾಡಬೇಕೆಂದು ಅವರು ಚಿಂತನೆ ಮಾಡಿದರೆ, ಅವರು ತಪ್ಪು ಮಾಡಿದಾಗ ಅವರನ್ನು ತಿವಿಯುವಂತಹ ಮತ್ತು ಅವರನ್ನು ಸರಿ ದಾರಿಗೆ ತರುವಂತಹ ಕೆಲಸವನ್ನು ತಾವು ಆ ಸ್ಥಾನದಲ್ಲಿದ್ದುಕೊಂಡು ಮಾಡುತ್ತಾರೆಂಬ ವಿಶ್ವಾಸ ಮತ್ತು 4 ದಶಕದ ರಾಜಕೀಯ ಜೀವನದಲ್ಲಿ ನಾವು ಕಂಡಿದ್ದೇವೆ. ಆ ಒಂದು ಸಾಮರ್ಥ್ಯ ಅವರಲ್ಲಿದೆ ಎಂದು ಹೇಳಿ, ನಾವೆಲ್ಲರೂ ಸಹ ಇನ್ನೊಮ್ಮೆ ತಮಗೆ ಹೃತ್ಪೂರ್ವಕವಾದಂತಹ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ.

(ಮುಂದು)

(660) 24-07-2024 (10.50) ವೈಎಲ್-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರು ಪ್ರತಿಪಕ್ಷದ ನಾಯಕರಾಗಿ ಆಯ್ಕೆಯಾಗಿರುವುದಕ್ಕೆ ಈ ಶುಭ ಸಂದರ್ಭದಲ್ಲಿ ಅವರಿಗೆ ನಾನು ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಏಕೆಂದರೆ, ಕಳೆದ ದಶಕಗಳಿಂದ ಅವರನ್ನು ನಾನು ಬಲ್ಲೆ. ಕಾಂಗ್ರೆಸ್ ಪಕ್ಷದಲ್ಲಿದ್ದಾಗ ಅವರು ವಕ್ತಾರರಾಗಿ ಟಿ.ವಿ. ಚಾನಲ್‌ನಲ್ಲಿ ಬರುತ್ತಿದ್ದರು. ಹಾಗೆಯೇ ಜೆ.ಡಿ.(ಎಸ್) ಪಕ್ಷದ ಪರವಾಗಿ ನಾನು ಚಾನೆಲ್‌ಗಳಿಗೆ ಹೋಗುತ್ತಿದ್ದೆನು. ಹಲವಾರು ಸಂದರ್ಶನಗಳಲ್ಲಿ ನಾವೆಲ್ಲರೂ ಭಾಗಿಯಾಗಿ ಮಾತನಾಡಿದ್ದೇವೆ. ಹಾಗೆಯೇ ಅವರು ನಿಜವಾದ ಹೋರಾಟಗಾರರು. ಏನೇ ಒಂದು issue ಬಂದಾಗ ಅದರ ಬಗ್ಗೆ ತುಂಬಾ ಚೆನ್ನಾಗಿ ಅಧ್ಯಯನ ಮಾಡಿ, ಅದರ ಕಡೆಗೆ ಬೆಳಕು ಚೆಲ್ಲುವಂಥ ಕೆಲಸವನ್ನು ಮಾಡುತ್ತಾ ಬಂದಿದ್ದಾರೆ. ಪ್ರತಿ ಪಕ್ಷ ಸ್ಥಾನದಲ್ಲಿ ಹಿಂದೆ ಇದ್ದಂತಹ ಶ್ರೀಮತಿ ಮೋಟಮ್ಮನವರು, ಶ್ರೀ ಉಗ್ರಪ್ಪನವರು, ಶ್ರೀ ಬಿ.ಕೆ.ಹರಿಪ್ರಸಾದ್‌ರವರು, ಶ್ರೀ ಸದಾನಂದ ಗೌಡರವರು, ಶ್ರೀ ಕೆ.ಎಸ್.ಈಶ್ವರಪ್ಪನವರು, ಶ್ರೀ ಕೋಟ ಶ್ರೀನಿವಾಸ ಪೂಜಾರಿರವರು ಮತ್ತು ಶ್ರೀ ಹೆಚ್.

ಕೆ.ಪಾಟೀಲ್‌ರವರು ಇರಬಹುದು. ಇಂತಹ ಹಿರಿಯರು ಈ ಚಿಂತಕರ ಭಾವಣಿಯಲ್ಲಿ ಪ್ರತಿಪಕ್ಷದ ನಾಯಕರಾಗಿದ್ದರು. ಆ ಪೀಠವನ್ನು ಅಲಂಕರಿಸಿದಂಥ ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿಯವರು ಬಹಳಷ್ಟು ಒಳ್ಳೆಯ ಕೆಲಸಗಳಲ್ಲಿ ಹೋರಾಟ ಮಾಡಿದ್ದು, ಅವರ ಬಗ್ಗೆ ನಮಗೆ ಬಹಳ ಹೆಮ್ಮೆ ಇದೆ. ಜೊತೆಗೆ ಅವರು 2023ನೇ ಸಾಲಿನ ಚುನಾವಣೆಯಲ್ಲಿ ಬಿ.ಜೆ.ಪಿ. ಪಕ್ಷದಿಂದ ಸ್ಪರ್ಧೆ ಮಾಡಬೇಕೆಂದು ಬಯಸಿ, ನೆಲಮಂಗಲ ಅಥವಾ ದೇವನಹಳ್ಳಿ ಕಡೆ ಟಿಕೆಟ್ ಕೇಳಿದರು. ಹಾಗೆಯೇ ಎಂ.ಪಿ. ಚುನಾವಣೆ ಸಂದರ್ಭದಲ್ಲಿ ಕೂಡಾ ಕೋಲಾರ ಜಿಲ್ಲೆಗೆ ಎಂ.ಪಿ. ಕ್ಷೇತ್ರವನ್ನು ಕೇಳಿದರು. ಆದರೂ ಕೂಡಾ ಅವರು ವಿಧಾನ ಪರಿಷತ್ತಿಗೆ ಬಂದು ಸುಮಾರು 6 ವರ್ಷಗಳಾಗಿರಬಹುದು. ನಾನು ವಿಧಾನ ಪರಿಷತ್ತಿಗೆ ಆಯ್ಕೆಯಾಗಿ ಬಂದ ದಿನವೇ, ಅವರು ಕೂಡಾ ನನ್ನ ಜೊತೆ ಮೊದಲನೇ ಬಾರಿ ಆಯ್ಕೆಯಾಗಿ ಬಂದು very short-term ನಲ್ಲಿ ಅತ್ಯಂತ ಉನ್ನತ ಸ್ಥಾನಕ್ಕೆ ವಿರೋಧ ಪಕ್ಷದ ನಾಯಕರಾಗಿ ಬೆಳೆದಿದ್ದಾರೆ. ಸಂವಿಧಾನದ ಜೀವಾಳ ಎಂದರೆ, ಅದು ಪ್ರತಿಪಕ್ಷ ಎಂದು ಹೇಳುತ್ತೇವೆ. ಇಂತಹ ಪ್ರತಿಪಕ್ಷದಲ್ಲಿ ಕುಳಿತುಕೊಂಡು, ಆಡಳಿತ ಪಕ್ಷದವರು ಮಾಡುವಂಥ ತಪ್ಪುಗಳನ್ನು ತಿದ್ದಿ ಅವರನ್ನು ಸರಿ ದಾರಿಗೆ ತರುವಂಥ ಉನ್ನತ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದಾರೆ, ಅದನ್ನು ನಿರ್ವಹಿಸಲು ಮಾನ್ಯ ಛಲವಾದಿ ಟಿ. ನಾರಾಯಣಸ್ವಾಮಿಯವರಿಗೆ ಭಗವಂತ ಎಲ್ಲಾ ರೀತಿಯಲ್ಲಿ ಶಕ್ತಿ ಕೊಡಲಿ ಎಂದು ಈ ಸಂದರ್ಭದಲ್ಲಿ ಶುಭವನ್ನು ಕೋರುತ್ತೇನೆ.

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕಲ್ಪಿಸಿದ್ದಕ್ಕಾಗಿ ಧನ್ಯವಾದಗಳು. ನಮ್ಮ ಪ್ರತಿಪಕ್ಷದ ನಾಯಕರಾದ ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರು ಹೋರಾಟ ಮಾಡುವುದನ್ನು ಪತ್ರಿಕೆಗಳಲ್ಲಿ ಮತ್ತು ಮಾಧ್ಯಮಗಳಲ್ಲಿ ನೋಡುತ್ತಿದ್ದೆನು. ನಾನು ಕೂಡಾ ಹೋರಾಟದ ವ್ಯವಸ್ಥೆಯಿಂದ ಬಂದ ವ್ಯಕ್ತಿ. ಕೇವಲ ದಮನಿತರ ಪರವಾಗಿ ಧ್ವನಿ ಎತ್ತದೆ, ಸಮಾಜದ ಎಲ್ಲಾ ಜನರ ಪರವಾಗಿ ಧ್ವನಿ ಎತ್ತುತ್ತಿದ್ದರು. ಸಮಸಮಾಜದ ನಿರ್ಮಾಣಕ್ಕಾಗಿ ಅವರ ಧ್ವನಿ ಸದಾಕಾಲ ಮೊಳಗುತ್ತಿರುವುದನ್ನು ನಾನು ಬಲ್ಲೆ. ಭಾರತೀಯ ಜನತಾ ಪಾರ್ಟಿಯಲ್ಲಿ ಪ್ರತಿಪಕ್ಷದ ನಾಯಕ ಸ್ಥಾನಕ್ಕೆ ಅನೇಕರು ಅಪೇಕ್ಷೆ ಪಡುತ್ತಿದ್ದು, ಅದು ತಪ್ಪಲ್ಲ. ರಾಜಕೀಯ ವ್ಯವಸ್ಥೆಯಲ್ಲಿ ಅದೆಲ್ಲವೂ ಇದ್ದಿದೆ. ಕೊನೆಗೆ ನಮ್ಮ ಪಾರ್ಟಿಯ ವರಿಷ್ಠರು ಸೂಕ್ತವಾದ, ಸಮರ್ಥವಾದ, ಸಮಯಕ್ಕೆ ಸರಿಯಾಗಿ ಕೆಲಸ ಕಾರ್ಯಗಳನ್ನು ಮಾಡುತ್ತಾ, ಸಿದ್ಧಾಂತಗಳನ್ನು ಮುಂದುವರೆಸಿಕೊಂಡು ಹೋಗುವಂಥ ವ್ಯಕ್ತಿಯನ್ನು ಆಯ್ಕೆ ಮಾಡಿದ್ದಾರೆ. ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರು ಒಬ್ಬ ಹೋರಾಟ ಮನೋಭಾವದಿಂದ ಬಂದ ವ್ಯಕ್ತಿ. ಜೊತೆಗೆ ಸದಾಕಾಲ ಇಡೀ ರಾಜ್ಯದ ಜನರ ಪರವಾಗಿ ಚಿಂತನೆ ಮಾಡುವಂಥ ವ್ಯಕ್ತಿಯಾಗಿದ್ದಾರೆ. ಅವರ ಒಂದು ನೇತೃತ್ವದಲ್ಲಿ ಭಾರತೀಯ ಜನತಾ ಪಾರ್ಟಿಯ ತತ್ವ ಸಿದ್ಧಾಂತಗಳು ಈ ಸದನದಲ್ಲಿ ಪ್ರತಿಧ್ವನಿಸಲಿ. ಆಡಳಿತ ಪಕ್ಷದ ವ್ಯವಸ್ಥೆಯಲ್ಲಿ ಕೂಡಾ ಅವರ ವಿಚಾರಧಾರೆಗಳಿಂದ ಪ್ರಭಾವಿತವಾಗಿ ಆಡಳಿತ ಪಕ್ಷವು ಜನಪರವಾದ ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡಲಿಕ್ಕೆ ಮುಂದಾಗಲಿ ಎಂದು ಈ ಸಂದರ್ಭದಲ್ಲಿ ಶುಭ ಹಾರೈಸುತ್ತೇನೆ. ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರು

ನಮ್ಮೆಲ್ಲರನ್ನೂ ಒಟ್ಟುಗೂಡಿಸಿ, ಒಳ್ಳೆಯ ರೀತಿಯಲ್ಲಿ ಪ್ರತಿಪಕ್ಷವನ್ನು ನಡೆಸಿಕೊಂಡು ಹೋಗುತ್ತಾರೆ ಎಂದು ಹೇಳುತ್ತಾ, ಅವರಿಗೆ ಶುಭಾಶಯವನ್ನು ಹೇಳಲಿಕ್ಕೆ ಬಯಸುತ್ತೇನೆ.

**ಸಭಾಪತಿಯವರು:-** ಮಾನ್ಯ ಬಿ.ಕೆ.ಹರಿಪ್ರಸಾದ್ ...

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರ ಅಭಿನಂದನಾ ವಿಚಾರವಾಗಿ ಪ್ರಸ್ತಾಪ ಮಾಡಲು ಎರಡು-ಮೂರು ಮಂದಿ ಕೈಯನ್ನು ಮೇಲೆ ಎತ್ತಿದ್ದಾಗ, ನಾನೂ ಕೂಡಾ ಕೈಯನ್ನು ಎತ್ತಿದೆ. ಆದರೆ, ತಾವು ನನಗೆ ಮಾತನಾಡಲು ಅವಕಾಶ ಕಲ್ಪಿಸಲಿಲ್ಲ.

**ಸಭಾಪತಿಯವರು:-** ತಾವು ಕೈಯನ್ನು ಮೇಲೆ ಎತ್ತಿರುವುದನ್ನು ನಾನು ನೋಡಿಲ್ಲ. ಹಾಗೆಯೇ ಕೈಯನ್ನು ಎತ್ತಿದ ತಕ್ಷಣ ಎಲ್ಲರಿಗೂ ಅವಕಾಶ ಕೊಡಲು ಆಗುವುದಿಲ್ಲ. ಎಲ್ಲರೂ ಮಾತನಾಡಬೇಕಾ? ಪಾರ್ಟಿ ಮುಖ್ಯಸ್ಥರು ಮಾತನಾಡಿದರೆ ಸಾಕಾಗುವುದಿಲ್ಲವೇ?

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನ್ನ ಗೆಳೆಯ ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರನ್ನು ಅವರ ಪಕ್ಷದ ಆದೇಶದ ಮೇರೆಗೆ ವಿರೋಧ ಪಕ್ಷದ ನಾಯಕತ್ವದ ಜವಾಬ್ದಾರಿಯನ್ನು ಕೊಟ್ಟಿದ್ದೀರಿ. ವಿಧಾನ ಪರಿಷತ್ತು ಮತ್ತು ವಿಧಾನ ಸಭೆ ಎಂದರೆ, ವಿಧಾನ ಪರಿಷತ್ತನ್ನು ಮೇಲ್ಮನೆ ಹಾಗೂ ವಿಧಾನ ಸಭೆಯನ್ನು ಕೆಳಮನೆ ಎಂದು ಕರೆಯುತ್ತಾರೆ. ಹಾಗೆಯೇ ಲೋಕಸಭೆ ಮತ್ತು ರಾಜ್ಯಸಭೆ ಎಂದರೆ, Lower House and Upper House ಎಂದು ಪಾರ್ಲಿಮೆಂಟ್‌ನಲ್ಲಿ ಕರೆಯುತ್ತಾರೆ. ವಿಧಾನ ಪರಿಷತ್ತು ಎಂಬ ವಿಚಾರ ಬಂದಾಗ ಕೆಲವರು ಮಾತನಾಡುವ ಸಂದರ್ಭದಲ್ಲಿ 'ಚಿಂತಕರ ಚಾವಡಿ' ಎಂದು ಹೇಳಿದರು. 'ಚಿಂತಕರ ಚಾವಡಿ' ಎಂದು ಕರೆಯುವಂಥ ಈ ವಿಧಾನ ಪರಿಷತ್ತಿನ ಸದಸ್ಯರು ಇಡೀ ರಾಜ್ಯಕ್ಕೆ ಸೀಮಿತವಾದರೆ, ವಿಧಾನಸಭೆ ಸದಸ್ಯರು ಕೇವಲ ಒಂದು ಕ್ಷೇತ್ರಕ್ಕೆ ಮಾತ್ರ ಸೀಮಿತರಾಗಿರುತ್ತಾರೆ. ಅವರ ಚಿಂತನೆಗಳು, ಆಲೋಚನೆಗಳು ರಾಜ್ಯ ಮಟ್ಟದವರೆಗೂ ಯೋಚನೆ ಮಾಡಿ, ಈ ಸದನದ ಮುಂದೆ ಬಂದಾಗ ಈ ಸದನದ ಗೌರವವನ್ನು ಎತ್ತಿಹಿಡಿಯಲು ಆಗುತ್ತದೆ. "ಯಾರೋ ಒಬ್ಬ ಮಂತ್ರಿಗೆ ಟೋಕಿಯೋದಲ್ಲಿ 64 ಕೆ.ಜಿ. ಚಿನ್ನದ ಉಡುಗೊರೆಯನ್ನು ಕೊಟ್ಟಿರುವ ಕುರಿತು" ಪಾರ್ಲಿಮೆಂಟ್‌ನಲ್ಲಿ ಪ್ರಶ್ನೆಯಾಗುತ್ತದೆ. ಆ ಸಂದರ್ಭದಲ್ಲಿ ಮಾಜಿ ಪ್ರಧಾನ ಮಂತ್ರಿಗಳಾದ ದಿವಂಗತ ಪಂಡಿತ್ ಜವಾಹಾರ್‌ಲಾಲ್ ನೆಹರೂರವರು ಆ ಉಡುಗೊರೆ ಪಾರ್ಲಿಮೆಂಟ್ ಆಸ್ತಿಯಾಗುತ್ತದೆ ವಿನಃ ಯಾರದೋ ವೈಯಕ್ತಿಕ ಆಸ್ತಿಯಲ್ಲ" ಎಂದು ಹೇಳುತ್ತಾರೆ. ಜೊತೆಗೆ, "There can be no higher responsibility or greater privilege than to be a member of this sovereign body,..." ಎನ್ನುವಂಥ ಮಾತನ್ನು ಹೇಳುತ್ತಾರೆ. ಅಂದರೆ, ಸಾರ್ವಜನಿಕ ಕ್ಷೇತ್ರದಲ್ಲಿ ಅಥವಾ ಪ್ರಜಾಪ್ರಭುತ್ವದಲ್ಲಿ ಸಂವಿಧಾನದ ಆಶಯಗಳನ್ನು ಪೂರೈಸಬೇಕಾದರೆ, ಈ ಸ್ಥಾನಮಾನಗಳ ಜವಾಬ್ದಾರಿ ಬಹಳ ದೊಡ್ಡ ಜವಾಬ್ದಾರಿಯಾಗಿದೆ ಎಂದು ಮಾಜಿ ಪ್ರಧಾನ ಮಂತ್ರಿಗಳಾದ ದಿವಂಗತ ಪಂಡಿತ್ ಜವಾಹಾರ್‌ಲಾಲ್ ನೆಹರೂರವರು ಹೇಳುತ್ತಾರೆ. ಭಾರತೀಯ ಜನತಾ ಪಾರ್ಟಿಯವರು ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರನ್ನು ಮತ್ತು ಮಾಜಿ ಪ್ರಧಾನ

ಮಂತ್ರಿಗಳಾದ ದಿವಂಗತ ಅಟಲ್ ಬಿಹಾರಿ ವಾಜಪೇಯಿಯವರನ್ನು ಎಷ್ಟು ನಂಬುತ್ತಾರೆಯೋ, ಇಲ್ಲವೋ ಗೊತ್ತಿಲ್ಲ. ಆದರೆ, ಮಾನ್ಯ ಪ್ರತಾಪ್‌ಸಿಂಹ ನಾಯಕ್.ಕೆ ರವರು ಹೇಳಿದ ಹಾಗೆ ಅವರ ಮಾತು ನೋಡಿದರೆ, ಹಿರಿಯರಾದ ಡಾ॥ ಮೋಹನ್ ಭಾಗವತ್‌ರವರ ಬಗ್ಗೆ ಹೇಳಿರಬಹುದೆಂದು ನನಗೆ ಅನಿಸುತ್ತಿದೆ. ಲೋಕಸಭಾ ಚುನಾವಣೆ ಬಳಿಕ ಡಾ॥ ಮೋಹನ್ ಭಾಗವತ್‌ರವರು "ವಿರೋಧ ಪಕ್ಷದವರನ್ನು ವಿರೋಧಿಗಳು ಎಂದು ನೋಡಬೇಡಿ, ಅವರನ್ನು ಪ್ರತಿಪಕ್ಷವಾಗಿ ನೋಡಿ" ಎಂದು ಹೇಳಿದಂಥ ಮಾತನ್ನು ಮಾನ್ಯ ಪ್ರತಾಪ್ ಸಿಂಹ ನಾಯಕ್.ಕೆ ರವರು ಹೇಳಿದರು. ನಾನು ಅದಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದೇನೆಂದರೆ, "ವಿರೋಧ ಪಕ್ಷದವರಾದರೆ ನಾವು ಶತ್ರುಗಳಲ್ಲ, ಮಿತ್ರರೂ ಅಲ್ಲ." ರಾಜ್ಯದ ಹಿತದೃಷ್ಟಿಯಿಂದ ಏನನ್ನು ಜವಾಬ್ದಾರಿಯಿಂದ ಹೇಳಬೇಕೋ ಅದನ್ನು ಹೇಳಬೇಕಾಗುತ್ತದೆ. ಆದ್ದರಿಂದ ಪ್ರತಿಪಕ್ಷದವರನ್ನು ವಿರೋಧ ಪಕ್ಷದವರು ಎಂದು ಕರೆಯಬಾರದು. ಮಾನ್ಯ ಪ್ರತಾಪ್ ಸಿಂಹ ನಾಯಕ್‌ರವರು ಹೇಳಿದ ಮಾತನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಹಾಗೆಯೇ ಪ್ರತಿಪಕ್ಷದಲ್ಲಿದ್ದಾಗ ಆಡಳಿತ ಪಕ್ಷದವರು ನಮ್ಮ ಶತ್ರುಗಳು ಎಂದು ತಿಳಿದುಕೊಳ್ಳದೇ ನಮ್ಮ ಜವಾಬ್ದಾರಿಯನ್ನು ನಿಭಾಯಿಸಬೇಕು. ಮತ್ತೆ ಪ್ರಜಾಪ್ರಭುತ್ವದ ಆಶಯಗಳು, spirit of Constitution of India ಏನೆಂದು ಹೇಳುತ್ತದೆ ಎಂದರೆ, ಸರ್ಕಾರ ಬೇರೆ, ಸದನ ಬೇರೆ. ಸರ್ಕಾರ ನಡೆಸಬೇಕಾದರೆ ಮಂತ್ರಿಗಳು ನಡೆಸುತ್ತಾರೆ. ಸದನ ನಡೆಸಬೇಕಾದರೆ ಅತೀ ಹೆಚ್ಚಿನ ಜವಾಬ್ದಾರಿ ಇರುವುದು ವಿರೋಧ ಪಕ್ಷದವರಿಗೆ ಎಂಬುದನ್ನು ನಾವು ತಿಳಿದುಕೊಳ್ಳಬೇಕು. ಏಕೆಂದರೆ, ಜನರ ಆಶಯಗಳನ್ನು ಸ್ಪಂದಿಸಲು ಆಗದೇ ಇರುವಂಥ ಸಂದರ್ಭದಲ್ಲಿ ವಿರೋಧ ಪಕ್ಷದವರು ಸರ್ಕಾರದ ಕಿವಿಯನ್ನು ಹಿಂಡಬೇಕಾಗುತ್ತದೆ. ಒಂದು ಕಾಲಘಟ್ಟದಲ್ಲಿ ನಮ್ಮ ಮೀಡಿಯಾ ಸ್ನೇಹಿತರನ್ನು fourth pillar of Democracy ಎಂದು ಹೇಳುತ್ತಿದ್ದರು. ಇವತ್ತು ಆ pillar ಏನಾಗಿದೆ ಎಂಬುದನ್ನು ನಾನು ಹೇಳಲಿಕ್ಕೆ ಹೋಗುವುದಿಲ್ಲ. ಆದ್ದರಿಂದ ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳಬೇಕಾದರೆ, ಒಬ್ಬ ಸಾಮಾನ್ಯ ವ್ಯಕ್ತಿಯಾದ ಛಲವಾದಿ ಟಿ.ನಾರಾಯಣಸ್ವಾಮಿಯವರು ವಿರೋಧ ಪಕ್ಷದ ನಾಯಕರಾಗಬೇಕಾದರೆ ಅಥವಾ ವಿಧಾನ ಪರಿಷತ್ತಿನ ಸದಸ್ಯರಾಗಬೇಕಾದರೆ ಪ್ರಜಾಪ್ರಭುತ್ವದ ಸಂವಿಧಾನವೇ ಮೂಲ ಎಂಬುದನ್ನು ನಾವೆಲ್ಲರೂ ತಿಳಿದುಕೊಳ್ಳಬೇಕಾಗುತ್ತದೆ. ಧರ್ಮ ಪ್ರಭುತ್ವ ಇದ್ದಾಗ ಧರ್ಮಾದಾರಿತ ರಾಜಕಾರಣ. ರಾಜ ಪ್ರಭುತ್ವ ಇದ್ದಾಗ ರಾಜ ಹೇಳಿದೆ. ಅದರಂತೆ ಪ್ರಜಾಪ್ರಭುತ್ವ ಬಂದಾಗ ಪ್ರತಿಯೊಬ್ಬ ಪ್ರಜೆಗೂ ಸಹ ಅಧಿಕಾರ, ಹಕ್ಕಿದೆ ಎಂಬುದನ್ನು ಪ್ರಜಾಪ್ರಭುತ್ವ ತೋರಿಸಿಕೊಟ್ಟಿದೆ. ಅದರಂತೆ ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರು ದೊಡ್ಡ ಜವಾಬ್ದಾರಿಯನ್ನು ತೆಗೆದುಕೊಂಡಿದ್ದಾರೆ. ಮುಂದಿನ ದಿನಗಳಲ್ಲಿ ಸರ್ಕಾರ ಸರಿಯಾದ ದಾರಿಯಲ್ಲಿ ಹೋಗುವ ರೀತಿ ಸಲಹೆಗಳನ್ನು ಕೊಟ್ಟು, ಛಾಟಿ ಬೀಸುವಂಥ ಕೆಲಸ ಮಾಡುವುದರ ಮೂಲಕ ಸರ್ಕಾರವನ್ನು ಒಳ್ಳೆಯ ರೀತಿಯಲ್ಲಿ ತೆಗೆದುಕೊಂಡು ಹೋಗಬೇಕು. ಯಾವ ಕಾರಣಕ್ಕಾಗಿ ಜನ ನಮ್ಮನ್ನು ಆಯ್ಕೆ ಮಾಡಿ ಕಳುಹಿಸಿದ್ದಾರೆ, ಆ ಆಶಯಗಳು ಪೂರ್ಣವಾಗಿದೆಯೋ, ಇಲ್ಲವೋ ಎಂಬುದನ್ನು ಮಾಡುವುದರ ಮೂಲಕ ಸ್ವಲ್ಪ ರಾಜಕೀಯವನ್ನು ಈ ಸದನದಿಂದ ಹೊರಗೆ ಇಟ್ಟರೆ ಬಹಳ ಉತ್ತಮ ಎಂದು ಹೇಳುವುದರ ಮೂಲಕ ಮಾನ್ಯ

ಛಲವಾದಿ ಟಿ.ನಾರಾಯಣಸ್ವಾಮಿಯವರಿಗೆ ಶುಭ ಕೋರುತ್ತಾ, ಅಭಿನಂದನೆಯನ್ನು ಸಲ್ಲಿಸುವುದರೊಂದಿಗೆ ಅವರ ಮುಂದಿನ ಭವಿಷ್ಯ ಉಜ್ವಲವಾಗಿರಲಿ ಎಂದು ಹಾರೈಸುತ್ತೇನೆ.

(ಮುಂದು)

(661) 24.07.2024/11.00/ಎಸ್‌ಕೆ-ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಕರ್ನಾಟಕ ವಿಧಾನ ಪರಿಷತ್ತಿನ ಪ್ರತಿಪಕ್ಷದ ನಾಯಕರಾಗಿ ಆಯ್ಕೆಯಾಗಿರುವ ಶ್ರೀ ಛಲವಾದಿ ನಾರಾಯಣಸ್ವಾಮಿಯವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಮಾನ್ಯ ಸಭಾಪತಿಯವರೇ, ಮಾನ್ಯ ಗೋವಿಂದ ರಾಜುರವರು ಮಾತನಾಡುವಾಗ, ಮಾನ್ಯ ಛಲವಾದಿ ನಾರಾಯಣ ಸ್ವಾಮಿಯವರು ನಮ್ಮ ಜಿಲ್ಲೆಯವರು ಎಂದು ಹೇಳಿದರು. ಅವರು ಹೊಸಕೋಟೆ ತಾಲ್ಲೂಕಿನವರಾದರೂ ಕೂಡ ಅವರು ಎಲ್ಲಾ ಕಾರ್ಯಚಟುವಟಿಕೆಗಳನ್ನು ರಾಜಕೀಯವಾಗಿ ಕೋಲಾರ ಜಿಲ್ಲೆಯನ್ನು ಕಾರ್ಯ ಕ್ಷೇತ್ರವನ್ನಾಗಿ ಗುರುತಿಸಿಕೊಂಡಿದ್ದರು. ಅವರೆಲ್ಲಾ ಸಂಬಂಧ ಕೋಲಾರ ಜಿಲ್ಲೆಯಲ್ಲಿ ಇರುವಂತಹದ್ದು. ಅವರು 2009 ಮತ್ತು 2014 ರಲ್ಲಿ ಕೋಲಾರ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ಪಕ್ಷದ ಆಕಾಂಕ್ಷಿಯಾಗಿದ್ದರು. ನಂತರ ಅವರು 2019ರಲ್ಲಿ ಬಿ.ಜೆ.ಪಿ., ಪಕ್ಷಕ್ಕೆ ಸೇರಿದ ನಂತರ ಬಹುತೇಕ ಅವರ ಹೆಸರು ಕೂಡ ಅಂತಿಮವಾಗಿತ್ತು. ಕೊನೆ ಕ್ಷಣದಲ್ಲಿ ಬದಲಾವಣೆಯಾದುದರಿಂದ ಅವರು ಲೋಕಸಭೆಗೆ ಹೋಗುವಂತಹ ಅವಕಾಶ ಕೈತಪ್ಪಿ ಹೋಯಿತು. ಆ ಚುನಾವಣೆಯ ಸಂದರ್ಭದಲ್ಲಿ ಕೋಲಾರ ಜಿಲ್ಲೆಯಲ್ಲಿ ಬಿ.ಜೆ.ಪಿ., ಪಕ್ಷ ಕೂಡ ಗೆದ್ದಿತ್ತು. ಬಹುಶಃ ಅವರು ಲೋಕಸಭೆಗೆ ಹೋಗಿದಿದ್ದರೆ, ವಿಧಾನ ಪರಿಷತ್ತಿನ ಪ್ರತಿಪಕ್ಷದ ನಾಯಕರಾಗಿ ಆಯ್ಕೆಯಾಗುವುದಕ್ಕೆ ಅವಕಾಶ ಇರುತ್ತಿರಲಿಲ್ಲ. ಅವರು ಯಾವುದೇ ಪಕ್ಷದಲ್ಲಿ ಇರಲಿ, ಬಹಳಷ್ಟು ಸಕ್ರಿಯವಾಗಿ ಕೆಲಸ ಮಾಡುತ್ತಾರೆ. ಕಾಂಗ್ರೆಸ್ ಪಕ್ಷ ಅವರ ಚಟುವಟಿಕೆ ಮತ್ತು ಪ್ರಮಾಣಿಕತೆಯನ್ನು ಗುರುತಿಸಿ, ಬಹಳಷ್ಟು ಅವಕಾಶಗಳನ್ನು ಮಾಡಿಕೊಟ್ಟಿದ್ದರು. ಕೆ.ಪಿ.ಸಿ.ಸಿ., ಕಾರ್ಯದರ್ಶಿಯಾಗಿ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ, ಈ ಹಿಂದೆ ಮಾನ್ಯ ಸಿದ್ದರಾಮಯ್ಯನವರು ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ, ಅವರು Karnataka Forest Development Corporation Limited ನ ಅಧ್ಯಕ್ಷರು ಕೂಡ ಆಗಿದ್ದರು. ಈ ಹಿಂದೆ ಯು.ಪಿ.ಎ. ಕೇಂದ್ರ ಸರ್ಕಾರವಿದ್ದಾಗ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ರೈಲ್ವೆ ಇಲಾಖೆಯ ಸಚಿವರಾಗಿ ಜವಾಬ್ದಾರಿಯನ್ನು ತೆಗೆದುಕೊಂಡಾಗ, ಆ ರೈಲ್ವೆ ಇಲಾಖೆಗೆ ಸಂಬಂಧಪಟ್ಟಂತೆ, ಅಖಿಲ ಭಾರತ ಮಟ್ಟದ ಬೋರ್ಡ್‌ನ ಅಧ್ಯಕ್ಷರು ಕೂಡ ಆಗಿದ್ದರು. ಅವರು ಕಾಂಗ್ರೆಸ್ ಪಕ್ಷದಿಂದ ಬಿ.ಜೆ.ಪಿ., ಪಕ್ಷಕ್ಕೆ ಸೇರಿದಾಗ, ಕಾಂಗ್ರೆಸ್ ಪಕ್ಷ ಕೊಟ್ಟಂಥ ಅವಕಾಶಗಳ ಹಿನ್ನೆಲೆಯಲ್ಲಿ ಅವರ ನಾಯಕತ್ವವನ್ನು ಗುರುತಿಸಿ, ಬಿ.ಜೆ.ಪಿ., ಪಕ್ಷದಲ್ಲಿಯೂ ಕೂಡ ಅವಕಾಶಗಳನ್ನು ಮಾಡಿಕೊಂಡರು. ಅವರು ಬಿ.ಜೆ.ಪಿ. ಪಕ್ಷದ ಎಸ್.ಸಿ., ಮೋರ್ಚಾದ ಅಧ್ಯಕ್ಷರಾಗಿ ಮತ್ತು ಬಿ.ಜೆ.ಪಿ., ಪಕ್ಷದ ವಕ್ತರರಾಗಿದ್ದರು. ಅವರನ್ನು ವಿಧಾನಸಭಾ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ

ಸದಸ್ಯರಾಗಿ ಆಯ್ಕೆಯಾಗಿ ಬಂದ ಮೇಲೆ ಇವತ್ತು ಪ್ರತಿ ಪಕ್ಷದ ನಾಯಕರಾಗಿ ಆಯ್ಕೆಯಾಗಿದ್ದಾರೆ. ಪ್ರತಿ ಪಕ್ಷದ ನಾಯಕರು ಎಂದರೆ, ಸಾರ್ವಜನಿಕ ಹಿತದೃಷ್ಟಿಯಿಂದ ರಚನಾತ್ಮಕ ಹಾಗೂ ಪರಿಣಾಮಕಾರಿಯಾಗಿ ಇಲ್ಲಿ ಪ್ರತಿಪಕ್ಷದ ನಾಯಕರಾಗಿ ಯಾರೆಲ್ಲಾ ಕೆಲಸ ಮಾಡಿದ್ದಾರೆ ಮತ್ತು ಈ ಸದನದ ಗೌರವವನ್ನು ಎತ್ತಿ ಹಿಡಿದಿದ್ದಾರೆ ಎಂಬ ಬಗ್ಗೆ ಈಗಾಗಲೇ ಮಾನ್ಯ ಶರವಣನವರು ಹೇಳಿದರು. ಅದೇ ಮಾದರಿಯಲ್ಲಿ ಮಾನ್ಯ ಛಲವಾದಿ ನಾರಾಯಣಸ್ವಾಮಿಯವರು ಕೂಡ ಪ್ರತಿಪಕ್ಷದ ನಾಯಕರಾಗಿ ಕೆಲಸ ಮಾಡಬೇಕೆಂದು ಈ ಸಂದರ್ಭದಲ್ಲಿ ಅವರಿಗೆ ಶುಭವನ್ನು ಹಾರೈಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀಮತಿ ಉಮಾಶ್ರೀ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನರ್ಪಿಸುತ್ತೇನೆ. ನಾನು ಮಾತನಾಡಲು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಮಾನ್ಯ ಛಲವಾದಿ ನಾರಾಯಣಸ್ವಾಮಿಯವರು ಇವತ್ತು ವಿಪಕ್ಷದ ನಾಯಕರಾಗಿ ಆಯ್ಕೆಯಾಗಿರುವುದಕ್ಕೆ ಅವರನ್ನು ಅಭಿನಂದನೆ ಸಲ್ಲಿಸುತ್ತೇನೆ. ಮಾನ್ಯ ಛಲವಾದಿ ನಾರಾಯಣಸ್ವಾಮಿಯವರನ್ನು 1992-93ನೇ ಸಂದರ್ಭದಲ್ಲಿ ನಾನು ಕಂಡಿದ್ದೇನೆ. ಛಲವಾದಿ ನಾರಾಯಣಸ್ವಾಮಿಯವರು, ಮಾಜಿ ಸಭಾಪತಿಯವರಾದ ಶ್ರೀ ವಿ.ಆರ್. ಸುದರ್ಶನ್‌ರವರ ಮತ್ತು ಮಾನ್ಯ ನಸೀರ್ ಅಹಮದ್‌ರವರು, ಶ್ರೀ ಜಾರ್ಜ್ ಸಾಹೇಬರು ಮತ್ತು ನಾವೆಲ್ಲರೂ ಮಾನ್ಯ ಬಂಗಾರಪ್ಪಾಜಿಯವರ ಜೊತೆಯಲ್ಲಿ ರಾಜಕೀಯ ಕೆಲಸ ಮಾಡುತ್ತಾ ಬಂದವರು. ಮಾನ್ಯ ಛಲವಾದಿ ನಾರಾಯಣಸ್ವಾಮಿಯವರು ಆ ಒಂದು ಗಡಿಯಿಂದ ಬಂದಂತಹವರು. ಮಾನ್ಯ ಬಂಗಾರಪ್ಪಾಜಿಯವರು ನಮಗೊಂದು ಹಾದಿಯ ಹಾಕಿಕೊಟ್ಟಿದ್ದರು ಹಾಗೂ commitment ಇರುತ್ತಿತ್ತು. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಪರವಾಗಿ ಧ್ವನಿರಹಿತ ಸಮುದಾಯಗಳಿಗೆ ಧ್ವನಿಯಾಗಿ ದುಡಿಯಬೇಕು ಎನ್ನುವಂತಹ ಹಾದಿಯಲ್ಲಿ ನಮ್ಮನ್ನೆಲ್ಲಾ ಬೆಳೆಸಿದರು. ಅದೇ ಹಾದಿಯಲ್ಲಿ ಮಾನ್ಯ ಛಲವಾದಿ ನಾರಾಯಣಸ್ವಾಮಿಯವರು ಹೊರಟಿರುವಂತಹದ್ದು. ಆನಂತರ ಬದಲಾವಣೆಗಳು ಬಂದವು. ಕೆ.ಸಿ.ಪಿ.,ಬಂದು ಕಾಂಗ್ರೆಸ್ ಜೊತೆ ವಿಲೀನವಾಯಿತು. ಕಾಂಗ್ರೆಸ್ ಪಕ್ಷಕ್ಕೆ ಬಂದ ಮೇಲೂ ಸಹ ಅವರು ಬಹಳಷ್ಟು ಒಳ್ಳೆಯ ಸ್ಥಾನಮಾನಗಳನ್ನು ಹೊಂದಿ ಒಳ್ಳೆಯ ಕೆಲಸವನ್ನು ಮಾಡುತ್ತಾ ಬಂದರು. ಅವರು ಕ್ರಿಯಾಶೀಲರಾಗಿದ್ದಾರೆ ಮತ್ತು ಜನಪರವಾದಂತಹ ಚಿಂತನೆಗಳನ್ನಿಟ್ಟುಕೊಂಡಿದ್ದಾರೆ. ನಮ್ಮ ಸಿದ್ಧಾಂತದ ಅರಿವು ಮತ್ತು ಅಲ್ಲಿರುವಂತಹ ಸಿದ್ಧಾಂತದ ಅರಿವು ಅವರಿಗೆ ಇದೆ. ನನಗೆ ಅವರು ಚೆನ್ನಾಗಿ ಗೊತ್ತು. ಅವರ ಅಂತರಾತ್ಮ ಸರ್ವ ಸಮುದಾಯದ ಏಳಿಗೆಗಾಗಿಯೇ ಶ್ರಮಿಸುವಂತಹ ಮಾನಸಿಕ ಸ್ಥಿತಿಯನ್ನು ಇಟ್ಟುಕೊಂಡಿರುವಂತಹವರು. ಅವರು ಪ್ರತಿಪಕ್ಷದ ನಾಯಕರಾಗಿ ಆಯ್ಕೆಯಾಗಿರುವುದು ನಮಗೆಲ್ಲರಿಗೂ ಸಂತೋಷವಾಗಿದೆ. ಅವರು ಬಹಳಷ್ಟು ಉನ್ನತ ಸ್ಥಾನಮಾನಗಳಿಗೆ ಹೋಗಲಿ, ಮುಂದೆಯೂ ಸಹ ಇನ್ನೂ ಹೆಚ್ಚಿನದಾಗಿ ಕೆಲಸ ಮಾಡುತ್ತಾ, ಜನಪರವಾಗಿ ನಿಲ್ಲಲಿ. ಸಿದ್ಧಾಂತಗಳು ಏನೇ ಇರಬಹುದು. ಕೆಲವೊಮ್ಮೆ ಸಿದ್ಧಾಂತಗಳನ್ನು ಬಿಟ್ಟುಕೊಟ್ಟು ಜನಪರವಾಗಿ ನಿಲ್ಲುವಂತಹ ಉದಾಹರಣೆಗಳು ಇರುತ್ತವೆ. ಆದ್ದರಿಂದ, ತಾವು ಯಾವ ಸಿದ್ಧಾಂತಕ್ಕೆ ಬದ್ಧರಾಗಿದ್ದಿರೋ, ಆ ಎಲ್ಲಾ ಸಮುದಾಯಗಳನ್ನು ತೆಗೆದುಕೊಂಡು ಹೋಗಬೇಕು. ಆ ಸಿದ್ಧಂತಕ್ಕೆ ಬದ್ಧರಾಗಿ ತಾವು

ಇಲ್ಲಿ ಕಾರ್ಯನಿರ್ವಹಿಸುತ್ತೀರಿ. ಸರ್ಕಾರಕ್ಕೆ ಕಾಲ ಕಾಲಕ್ಕೆ ಎಚ್ಚರಿಕೆ ಮತ್ತು ಸಲಹೆಯನ್ನು ಕೊಡುತ್ತಾ, ತಮ್ಮ ವಿಪಕ್ಷ ಸ್ಥಾನವನ್ನು ಸಮರ್ಥವಾಗಿ ನಿಭಾಯಿಸುತ್ತೀರಾ ಎನ್ನುವ ನಂಬಿಕೆ ಇದೆ. ಈ ಸಂದರ್ಭದಲ್ಲಿ ನಾನು ತಮಗೆ ಅಭಿನಂದನೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನರ್ಪಿಸುತ್ತೇನೆ. ಮಾನ್ಯ ಛಲವಾದಿ ನಾರಾಯಣಸ್ವಾಮಿಯವರನ್ನು ವಿರೋಧ ಪಕ್ಷದ ನಾಯಕರಾಗಿ ಆಯ್ಕೆಯಾಗಿದ್ದಕ್ಕಾಗಿ ಈ ಸಂದರ್ಭದಲ್ಲಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಬಯಸುತ್ತೇನೆ. ಭಾರತೀಯ ಜನತಾ ಪಕ್ಷ ಒಂದು ಒಳ್ಳೆಯ ಪರಂಪರೆಯನ್ನು ಹಾಕಿದೆ ಮತ್ತು ಅನೇಕ ಸಂದರ್ಭಗಳಲ್ಲಿ ತೋರಿಸಿಕೊಟ್ಟಿದ್ದಾರೆ. ಮಾನ್ಯ ಮೋದಿಯವರ ಆಯ್ಕೆಯನ್ನೇ ಒಂದು ಎಲ್ಲರೂ ನೋಡಬಹುದು. ಮೊದಲನೇ ಬಾರಿ ಅವರು ಲೋಕಸಭೆಯ ಸದಸ್ಯರಾದರೂ ಕೂಡ ಅನೇಕ ಹಿರಿಯ ನಾಯಕರು ಏಳೆಂಟು ಬಾರಿ ಲೋಕಸಭೆಯ ಸದಸ್ಯರಾದವರೂ ಕೂಡ ಅವರನ್ನು ಆಯ್ಕೆ ಮಾಡಿಕೊಟ್ಟಿದ್ದಾರೆ. ಇಲ್ಲಿ ಏನು ತೋರಿಸಿಕೊಡುತ್ತದೆ ಎಂದರೆ, ನಿಮ್ಮ ವ್ಯಕ್ತಿತ್ವ, ಸಾಮರ್ಥ್ಯ ಹಾಗೂ ರಾಜಕೀಯದಲ್ಲಿ ಬೆಳೆದಂತಹ ಜೀವನ ಕೂಡ ಅಷ್ಟೇ ಮುಖ್ಯ. It's not the number of years you have put in, in the Karnataka Legislative Assembly or Karnataka Legislative Council ಅಂತಾ ಒಳ್ಳೆಯ ಪರಂಪರೆಯನ್ನು ತೋರಿಸಿಕೊಟ್ಟಿದ್ದಾರೆ. ಆ ಕಾರಣಕ್ಕಾಗಿ, ಪಕ್ಷದ ಮುಖಂಡರು ಮತ್ತು ರಾಜ್ಯ ಮತ್ತು ರಾಷ್ಟ್ರದ ಮುಖಂಡರಿಗೆ ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ಹೇಳಬಯಸುತ್ತೇನೆ. ಮಾನ್ಯ ಛಲವಾದಿ ನಾರಾಯಣಸ್ವಾಮಿಯವರ ನಲವತ್ತು ವರ್ಷದ ರಾಜಕೀಯ ಜೀವನದ ಅನೇಕ ಉದಾಹರಣೆಗಳನ್ನು ನಾನು ಕೇಳಿದ್ದೇನೆ. ಅವರು ತುಂಬಾ ಕಷ್ಟದಿಂದ ರಾಜಕೀಯ ಜೀವನಕ್ಕೆ ಬಂದು ಈ ಸ್ಥಾನವನ್ನು ಅಲಂಕರಿಸಿದ್ದಾರೆ ಎಂಬುದು ಬಹಳ ಮುಖ್ಯವಾಗಿದೆ. ಅವರ ಅನುಭವದಿಂದ ನಮ್ಮನ್ನು ಕೂಡ ಒಳ್ಳೆಯ ಮಾರ್ಗದರ್ಶನವನ್ನು ಮಾಡುತ್ತಾರೆ. ಈ ಮೇಲ್ಮನೆಯ ಪರಂಪರೆಯನ್ನು ಎತ್ತಿ ಹಿಡಿಯುತ್ತಾರೆ ಎಂದು ನಾನು ಹೇಳಬಯಸುತ್ತೇನೆ. ರಾಜಕೀಯ ಜೀವನದಲ್ಲಿ ಆ ಒಂದು ಸ್ಥಾನ ಸಿಕ್ಕಿದೆ. ಅದು ಯಾರೇ ಆಗಲೀ, ಸದಸ್ಯರು ಅಥವಾ ವಿರೋಧ ಪಕ್ಷದ ನಾಯಕರು, ಸಭಾನಾಯಕರು, ಅಥವಾ ಸಭಾಪತಿಯವರಾಗಲಿ, ನೀವು ಆ ಸ್ಥಾನದಲ್ಲಿ ಕುಳಿತಾಗ ಏನು ಮಾಡಿದಿರಿ ಎಂಬುದನ್ನು ಜನರು ಯಾವಾಗಲೂ ನೋಡುತ್ತಾರೆ. ಮಾನ್ಯ ಛಲವಾದಿ ನಾರಾಯಣಸ್ವಾಮಿಯವರು ಆ ಪರಂಪರೆಯನ್ನು ಎತ್ತಿ ಹಿಡಿಯುತ್ತಾರೆ ಎಂಬ ಬಗ್ಗೆ ನಮಗೆ ವಿಶ್ವಾಸವಿದೆ. ಭಾರತೀಯ ಜನತಾ ಪಕ್ಷಕ್ಕೆ ಇನ್ನೊಮ್ಮೆ ಧನ್ಯವಾದಗಳನ್ನು ಹೇಳುತ್ತೇನೆ. ಅವರು ಎಲ್ಲಾ ಜಾತಿ ಜನಾಂಗಕ್ಕೆ ಒಳ್ಳೆಯ representation ಅನ್ನು ಯಾವಾಗಲೂ ಕೊಟ್ಟುಕೊಳ್ಳುತ್ತಾ ಬಂದಿದ್ದಾರೆ. ಅವರಿಗೆ ಈ ಒಂದು ಸ್ಥಾನ ಕೊಟ್ಟಿರುವುದು ಒಳ್ಳೆಯ ಉದಾಹರಣೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತಾ, ಅವರು ನಮ್ಮೆಲ್ಲರನ್ನು lead ಮಾಡುವುದಷ್ಟೇ ಅಲ್ಲ. ಈ ಮೇಲ್ಮನೆಯ ಘನತೆ ಪರಂಪರೆಯನ್ನು ಎತ್ತಿ ಹಿಡಿಯುತ್ತಾರೆ. ಅವರಿಗೆ ಮತ್ತೊಮ್ಮೆ ಶುಭ ಕೋರುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಎಂ.ಕೆ. ಪ್ರಾಣೇಶ್ (ಉಪ ಸಭಾಪತಿಯವರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನರ್ಪಿಸುತ್ತೇನೆ. ಇತಿಹಾಸವನ್ನು ನಾವು ನೋಡಿದಾಗ, ಪ್ರಜಾಪ್ರಭುತ್ವದ ವ್ಯವಸ್ಥೆ ಎಷ್ಟೊಂದು ಗಟ್ಟಿಯಾಗಿದೆ ಎನ್ನುವುದಕ್ಕೆ ಇವತ್ತು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಾಗಿ ಆಯ್ಕೆಯಾಗಿರುವ ಮಾನ್ಯ ಛಲವಾದಿ ನಾರಾಯಣಸ್ವಾಮಿಯವರೇ ಸಾಕ್ಷಿ ಎಂದು ನಾನು ಭಾವಿಸಿದ್ದೇನೆ. ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ಗೌರವಯುತವಾಗಿ ಎತ್ತಿ ಹಿಡಿಯುವಂತಹ ಕೆಲಸಗಳನ್ನು ರಾಜಕೀಯ ಪಕ್ಷಗಳು ಮಾಡಬೇಕಾಗುವಂತಹದ್ದು ಇದೆ. ಅದರಲ್ಲಿ ಈ ಬಾರಿ ಭಾರತೀಯ ಜನತಾ ಪಕ್ಷ ಅದನ್ನು ಎತ್ತಿ ತೋರಿಸಿದೆ ಎಂದು ಹೇಳಿದರೆ, ತಪ್ಪಾಗಲಾರದು ಎಂದು ನಾನು ಭಾವಿಸಿದ್ದೇನೆ. ಈ ಒಂದು ವ್ಯವಸ್ಥೆಯ ಬಗ್ಗೆ ಹಲವಾರು ನಾಯಕರುಗಳು ಮಾತನಾಡಿದ್ದಾರೆ. ಈ ಒಂದು ವಿರೋಧ ಪಕ್ಷದ ನಾಯಕ ಎಂದು ಹೇಳಿದರೆ, 'Shadow of the Chief Minister' ಎನ್ನುತ್ತಾರೆ. ಹಾಗಾಗಿ, ಈ ಜವಾಬ್ದಾರಿಯನ್ನು ಯಾವುದೇ ಚ್ಯುತಿ ಬರದ ರೀತಿಯಲ್ಲಿ ನಡೆಸುವಂತಹದ್ದು ಕೂಡ ಮಾನ್ಯ ಛಲವಾದಿ ನಾರಾಯಣಸ್ವಾಮಿಯವರ ಕರ್ತವ್ಯವಾಗಿದೆ ಎಂದು ನಾನು ಭಾವಿಸಿದ್ದೇನೆ. ಸದನದೊಳಗೆ ವಿರೋಧ ಪಕ್ಷದ ನಾಯಕರು ಮತ್ತು ಸಭಾನಾಯಕರು ಇವರೆಡರ ಕೆಲಸಗಳು ತುಂಬಾ ಜವಾಬ್ದಾರಿಯುತವಾಗಿ ಇರುವಂತಹದ್ದು ಎಂದು ನಾನು ಭಾವಿಸಿದ್ದೇನೆ. ಸದನದೊಳಗೆ ಹಲವಾರು ಚರ್ಚೆಯಗುವಂತಹ ಸಂದರ್ಭದಲ್ಲಿ, ಆ ಚರ್ಚೆಯೊಳಗಡೆ ಇಡೀ ಸಭೆಯನ್ನು ಸಭಾಪತಿಯವರು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಅದಕ್ಕೆ ಸಹಕಾರಿಯಾಗಿ ಮಾಡಬೇಕಾದ ಜವಾಬ್ದಾರಿ ಸಭಾನಾಯಕರದ್ದು ಮತ್ತು ವಿರೋಧ ಪಕ್ಷದ ನಾಯಕರಿಗೆ ಇದೆ ಎಂದು ಹೇಳಿ, ಒಂದು ನೆನಪು ಮಾಡುವಂತಹ ಕೆಲಸವನ್ನು ಪ್ರಯತ್ನವನ್ನು ಮಾಡುತ್ತೇನೆ. ತಮ್ಮ ಅವಧಿಯೊಳಗೆ ಇಲ್ಲಿಯವರೆವಿಗೆ ವಿರೋಧ ಪಕ್ಷದ ನಾಯಕರಾಗಿ ಜವಾಬ್ದಾರಿಯಾಗಿ ನಿರ್ವಹಿಸಿದಂತಹವರು, ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಆ ಯಶಸ್ವಿಯಾಗಿ ನಿರ್ವಹಿಸಿದ ಇನ್ನೊಂದು ಗರಿಯನ್ನು ತಾವು ಆ ಸಾಲಿನೊಳಗೆ ಇನ್ನೊಂದು ಗರಿಯನ್ನು ಜೋಡಿಸುವಂತಹ ಕೆಲಸವನ್ನು ಮಾಡಬೇಕು. ಇತಿಹಾಸವಿರುವಂತಹ "ಚಿಂತಕರ ಛಾವಡಿ" ಆದ ಸದನಕ್ಕೆ ಗೌರವ ತರುವ ರೀತಿಯೊಳಗಡೆ ನಮ್ಮೆಲ್ಲರ ನಡವಳಿಕೆಗಳು ಇರಬೇಕು. ಅದಕ್ಕೆ ಪೂರಕವಾದ ಕೆಲಸವನ್ನು ತಾವು ಮಾಡುತ್ತೀರಿ. ತಮಗೆ ಒಳ್ಳೆಯದಾಗಲೀ ಎಂದು ಈ ಸಂದರ್ಭದಲ್ಲಿ ಶುಭ ಹಾರೈಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರಗಳು.

(ಮುಂದು)

(662) 24.07.2024 11.10 ಟಿಸಿಹೆಚ್-ಎಂಡಿ (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:-** ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರೇ, ಒಟ್ಟು 21 ಜನ ಸದಸ್ಯರು ಮಾತನಾಡಿದ್ದಾರೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಸದನದಲ್ಲಿ ಒಟ್ಟು 21 ಜನ ಮಾನ್ಯ ಸದಸ್ಯರುಗಳು ನನ್ನ ಬಗ್ಗೆ ಮಾತನಾಡಿದ್ದಾರೆ. Treasury Bench ನಿಂದ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಈ ಕಡೆ ಎನ್.ಡಿ.ಎ., ಎರಡೂ ಪಕ್ಷಗಳ ಶಾಸಕ ಮಿತ್ರರು ಕೂಡ ಮಾತನಾಡಿದ್ದಾರೆ. ಎಲ್ಲರೂ ಕೂಡ ನನ್ನ ಬಗ್ಗೆ ಒಳ್ಳಯದನ್ನೇ ಮಾತನಾಡಿದ್ದಾರೆ. ನಾನು ಕೆಟ್ಟದ್ದು ಏನೂ ಮಾಡಿಲ್ಲ, ಒಳ್ಳೆಯದನ್ನೇ ಮಾಡಿದ್ದೇನೆ. ಅವರೆಲ್ಲರಿಗೂ ಕೂಡ ನಾನು ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ಸಲ್ಲಿಸುವುದಕ್ಕೆ ಬಯಸುತ್ತೇನೆ.

**(ಈ ಹಂತದಲ್ಲಿ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷದ ಮಾನ್ಯ ಸದಸ್ಯರೆಲ್ಲರೂ ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

ಇನ್ನೂ ಕೆಲವು ಮಾನ್ಯ ಸದಸ್ಯರುಗಳು ಮಾತನಾಡಬಹುದಿತ್ತು ಆದರೆ ಅವರಿಗೆ ಮಾತನಾಡಲು ಅವಕಾಶ ಸಿಕ್ಕಿಲ್ಲ. ಅವರಿಗೂ ಕೂಡ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇವತ್ತಿನ ದಿವಸ ನನ್ನ ಪಕ್ಷವಾದ ಭಾರತೀಯ ಜನತಾ ಪಕ್ಷ ನನ್ನನ್ನು ಪ್ರತಿಪಕ್ಷದ ನಾಯಕನನ್ನಾಗಿ ನೇಮಕ ಮಾಡಿದೆ. ಮಾನ್ಯ ಸಭಾಪತಿಯವರೇ, ತಮ್ಮಂಥವರ ಮುತ್ಸದ್ಧಿಯವರ ಕಾಲದಲ್ಲಿ ನನಗೆ ಈ ಅವಕಾಶ ಸಿಕ್ಕಿದೆ. ಅದಕ್ಕೆ ತಮಗೆ ಮತ್ತು ಮಾನ್ಯ ಉಪ ಸಭಾಪತಿಗಳಿಗೂ ಕೂಡ ಅಭಿನಂದನೆಗಳನ್ನು ಸಲ್ಲಿಸುವುದಕ್ಕೆ ಬಯಸುತ್ತೇನೆ. ನಾನು ಬಹುದೂರ ಕ್ರಮಿಸಿ ಬಂದವನು. ನನ್ನ ದಾರಿ ಸುಲಭ ಇರಲಿಲ್ಲ. ನಾನು ಸರ್ಕಾರಿ ಕೆಲಸಕ್ಕೆ ಹೋಗಬೇಕೆಂದು ನನ್ನ ಜೀವನದಲ್ಲಿ ಎಂದೂ ಕೂಡ ಅರ್ಜಿ ಸಲ್ಲಿಸಿದವನಲ್ಲ. ನಾನು ಡಾ.ಬಿ.ಆರ್.ಅಂಬೇಡ್ಕರ್ ರವರ ಹೆಜ್ಜೆಯಲ್ಲಿ ಹೆಜ್ಜೆ ಹಾಕಿ ಬಂದಿದ್ದೇನೆ. ಸಮಾಜ ಸೇವೆಗೆ ಅಧಿಕಾರಕ್ಕೆ ಹೋದರೆ ಒಂದಷ್ಟು ಜನರಿಗೆ ಸಹಾಯ ಮಾಡಬಹುದು ಎನ್ನತಕ್ಕಂಥ ಅಭಿಲಾಷೆ ನನ್ನಲ್ಲಿತ್ತು. ಆ ಕಾರಣದಿಂದಾಗಿ ನಾನು ರಾಜಕೀಯ ಕ್ಷೇತವನ್ನು ಆಯ್ಕೆ ಮಾಡಿಕೊಂಡೆನು. ನಾನು ರಾಜಕೀಯ ಕ್ಷೇತವನ್ನು ಆಯ್ಕೆ ಮಾಡಿಕೊಂಡ ನಂತರ ನನಗೆ ಹಿಂದೆ-ಮುಂದೆ ಯಾರೂ ಇರಲಿಲ್ಲ. ನನ್ನ ತಂದೆ-ತಾಯಿ ಕೂಲಿ ಕಾರ್ಮಿಕರು. ನಾನು ಕೂಲಿ ಮಾಡತಕ್ಕಂಥ ಒಂದು ಕುಟುಂಬದಿಂದ ಬಂದವನು. I came from the dust. ನಾನು ನಂಬಿದ್ದಂತಹ ತತ್ವ ಸಿದ್ಧಾಂತಗಳು ಡಾ.ಬಿ.ಆರ್.ಅಂಬೇಡ್ಕರ್ ರವರು ನನಗೆ ಹಾಕಿಕೊಟ್ಟಂತಹ ಆ ಮಾರ್ಗದಲ್ಲಿ ಬಂದವನು. ನಾನು ಈ ಸದನಕ್ಕೆ 1983-84ನೇ ಇಸವಿಯಲ್ಲೇ ಶಾಸಕನಾಗಿ ಬರಬೇಕಾಗಿತ್ತು. ಕೊನೆಗೆ ನಾನು ಸುಮಾರು 45 ವರ್ಷಗಳ ನಂತರ ಕರ್ನಾಟಕ ವಿಧಾನ ಪರಿಷತ್ ಸದಸ್ಯನಾಗಿ ಬಂದಿದ್ದೇನೆ. ಬಹುಶಃ ನಾನು ಅಷ್ಟು ಕಾಲ ಶ್ರಮಿಸಿದ್ದೇನಲ್ಲಾ, ಅಷ್ಟುಹೊತ್ತಿಗೆ ಮಾನ್ಯ ಸಭಾಪತಿಯವರೇ ತಾವು ಸುಮಾರು ಐದಾರು ಬಾರಿ ವಿಧಾನ ಪರಿಷತ್ ಸದಸ್ಯರಾಗಿ ಗೆದ್ದು ಬಂದಿದ್ದೀರಿ. ಆದರೆ ನಾನು ಅಂದುಕೊಂಡಿದ್ದೆನು, ಅದು ಆಗಿರಲಿಲ್ಲ. ನಾವು

ಅಂದುಕೊಂಡಿದ್ದೆವು, ಆದರೆ ಅವರು ಬಂದಿದ್ದರು. ಆದರೆ ನನ್ನ ಸ್ನೇಹಿತರುಗಳೆಲ್ಲಾ ಮಾತನಾಡುವಾಗ, ಬಹುದಿಗಳ ಕಾಲ ನಾನು ಕಾಂಗ್ರೆಸ್‌ನಲ್ಲಿ ಇದ್ದೆನೆಂದು ಹೇಳಿದರು. ಮಾನ್ಯ ಸಲೀಂ ಅಹಮದ್ ರವರು ಮತ್ತು ನಾಗರಾಜು ರವರು ಹೇಳಿದ್ದು ಸತ್ಯ. ಆಡಳಿತ ಪಕ್ಷದಲ್ಲಿರತಕ್ಕಂಥವರು ಯಾರೂ ಕೂಡ ನನ್ನ ವಿರೋಧಿಗಳಲ್ಲ, ಶತ್ರುಗಳೂ ಅಲ್ಲ. ನಾನು ಅವರೆಲ್ಲರ ಜೊತೆಗೂ ಕೆಲಸ ಮಾಡಿದ್ದೇನೆ. ನಾನು ಎಲ್ಲರನ್ನೂ ಕೂಡ ಗೌರವದಿಂದ ಅಂದು ಕಂಡಿದ್ದೇನೆ, ಇಂದು ಕೂಡ ಕಾಣುತ್ತೇನೆ. ನಾನು ಯಾರ ಮೇಲೂ ವೈಯಕ್ತಿಕವಾಗಿ ಮಾತನಾಡಿಲ್ಲ. ವೈಯಕ್ತಿಕತೆ ನನ್ನಲ್ಲಿ ಇಲ್ಲವೇ ಇಲ್ಲ. ಸಮಾಜಕ್ಕೆ ಒಳ್ಳೆಯದು ಆಗುವುದಾದರೆ, ಈ ಕಾನೂನಿನ ಇತಿಮಿತಿಗಳಲ್ಲಿ ಪ್ರಜಾಪ್ರಭುತ್ವದ ಅಡಿಯಲ್ಲಿ ಕೆಲಸ ಮಾಡತಕ್ಕಂಥ ಸಂದರ್ಭದಲ್ಲಿ ಈ ಸದನದಲ್ಲಿ ಕುಳಿತು ತಾವು ಮಾಡತಕ್ಕಂಥ ಕೆಲಸದಲ್ಲಿ ನ್ಯೂನತೆಗಳು ಕಂಡಾಗ ನಾವು ಮಾತನಾಡತಕ್ಕಂಥದ್ದು ಸಹಜ. ಅಂತಹ ಸಂದರ್ಭದಲ್ಲಿ ಯಾರ ಹೆಸರಾದರೂ ಬಂದರೆ ತಾವು ದಯವಿಟ್ಟು ವೈಯಕ್ತಿಕವಾಗಿ ಪರಿಗಣಿಸಬಾರದು. ನಾನು ಈಗ ಯಾವುದೇ ಪಕ್ಷದ ಸಿದ್ಧಾಂತಗಳ ಬಗ್ಗೆ ಮಾತನಾಡುವುದಿಲ್ಲ. ನಾನು ಮುಂದೆ ಮಾತನಾಡಲು ಸಾಕಷ್ಟು ಸಮಯ ಇದೆ. ಯಾವ ಯಾವ ಸಿದ್ಧಾಂತಗಳು ಹೇಗೆ ಎನ್ನುವುದು ಈಗ ಅದರ ಅವಶ್ಯಕತೆ ಇಲ್ಲ. ತಾವೆಲ್ಲರು ನನಗೆ ಗೌರವ ಸೂಚಿಸಿದ್ದೀರಿ. ಅನೇಕ ಮುತ್ಸದ್ಧಿಗಳು ಈ ಸ್ಥಾನದಲ್ಲಿ ಕುಳಿತು ಕೆಲಸ ಮಾಡಿ ಜವಾಬ್ದಾರಿಯನ್ನು ನಿರ್ವಹಿಸಿ ಹೋಗಿದ್ದಾರೆ. ಇತ್ತೀಚೆಗಷ್ಟೇ ನನಗೆ ಈ ಸ್ಥಾನಮಾನವನ್ನು ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ಬಿಟ್ಟುಕೊಟ್ಟವರು. ಅದಕ್ಕೂ ಮುಂಚೆ ಗೌರವಾನ್ವಿತ ಶ್ರೀ ಬಿ.ಕೆ.ಹರಿಪ್ರಸಾದ್‌ರವರು ವಿರೋಧ ಪಕ್ಷದ ನಾಯಕರಾಗಿದ್ದರು. ನಾನು ವಿಧಾನ ಪರಿಷತ್‌ಗೆ ಸದಸ್ಯನಾಗಿ ಬಂದಾಗ ಅವರೇ ವಿರೋಧ ಪಕ್ಷದ ನಾಯಕರಾಗಿದ್ದರು. ಏಕೆಂದರೆ ಆಗ ನಾವು Treasury Bench ನಲ್ಲಿ ಇದ್ದೆವು. ನಾನು Treasury Bench ನಲ್ಲಿದ್ದರೂ ಕೂಡ ವಿರೋಧ ಪಕ್ಷದ ಕಡೆಗೆ ನನ್ನನ್ನೂ ಸಹ ಕೂರಿಸಿದ್ದರು. ನಾನು ಅವರ ಜೊತೆಯಲ್ಲೇ ಇದ್ದೆನು. ಆದರೂ ಕೂಡ ನನ್ನ ಪಕ್ಷ ನನ್ನನ್ನು ಈ ಸ್ಥಾನದಲ್ಲಿ ಕೂರಿಸಿದೆ. ನನ್ನ ಬಿ.ಜೆ.ಪಿ.,ಯ ರಾಷ್ಟ್ರೀಯ ಅಧ್ಯಕ್ಷರಾಗಿರತಕ್ಕಂಥ ಮಾನ್ಯ ಜೆ.ಪಿ.ನಡ್ಡಾ ರವರಿಗೆ . . .

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರು ನನ್ನ ಹೆಸರನ್ನು ಹೇಳಿದರು. ಅದಕ್ಕೋಸ್ಕರ ನಾನು ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರೇ, ತಾವು ಪುಣ್ಯವಂತರು. ನಾನು ವಿರೋಧ ಪಕ್ಷದ ನಾಯಕರಾಗಿ ಆಯ್ಕೆಯಾದಾಗ ಇಂತಹ ಅವಕಾಶಗಳನ್ನು ಕೊಟ್ಟಿರಲಿಲ್ಲ. ನಾನು ಒಬ್ಬನೇ ಸದನಕ್ಕೆ ಬಂದೆನು.

ವಿರೋಧ ಪಕ್ಷದ ಸ್ಥಾನದಲ್ಲಿ ನನ್ನನ್ನು ಕೂರಿಸಿದರು, ನಾನು ಮಾತನಾಡಿದೆನು ಅಷ್ಟೇ. ಹಾಗಾಗಿ, ತಾವು ಪುಣ್ಯವಂತರು. ನಿಮಗೆ ಎಲ್ಲರೂ ಕೂಡ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ.ಕೆ.ಹರಿಪ್ರಸಾದ್ ರವರು ಕೂಡ ಪುಣ್ಯವಂತರು.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನನ್ನನ್ನು ಶತ್ರು ರೀತಿ ನೋಡಿದ್ದಾರೆ ಎಂಬ ಭಾವನೆ ನನಗಿದೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಬಹುಶಃ ಶ್ರೀ ಬಿ.ಕೆ.ಹರಿಪ್ರಸಾದ್ ಒಳ್ಳೆಯ ಮಾತನ್ನೇ ಹೇಳಿದ್ದಾರೆ. ನಾನು ಇಲ್ಲಿಗೆ ಬರುವುದಕ್ಕೆ ಬಹುಕಾಲ ತೆಗೆದುಕೊಂಡಿದ್ದೇನೆ. ಈಗ ಆ ಸಂದರ್ಭ ಬಂತು. ಆದರೆ ನನ್ನಂತಹ ತಳ ಸಮುದಾಯದಲ್ಲಿ ಹುಟ್ಟಿದವನಿಗೆ ಈ ಸ್ಥಾನ ಸಿಕ್ಕಿದೆ. ತುಂಬಾ ಶ್ರಮ ಪಟ್ಟಿದ್ದರಿಂದ ಇದು ಸಾಧ್ಯವಾಗಿದೆ. ಆದರೆ ನಾನು ಇಲ್ಲಿಗೆ ಬರಬೇಕಾದರೆ ನಿಜವಾಗಿಯು ಕೂಡ ಪುಣ್ಯ ಮಾಡಿದ್ದೆ. ಮಾನ್ಯ ಬಿ.ಕೆ.ಹರಿಪ್ರಸಾದ್ ರವರ ಮಾತನ್ನು ನಾನು ಒಪ್ಪುತ್ತೇನೆ. ಇವತ್ತು ನಾನು ಈ ಸ್ಥಾನಕ್ಕೆ ಬರುವುದಕ್ಕೆ ನನ್ನ ಪಕ್ಷ ಭಾರತೀಯ ಜನತಾ ಪಕ್ಷ ಕಾರಣ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ರಾಷ್ಟ್ರೀಯ ಅಧ್ಯಕ್ಷರಾದ ಮಾನ್ಯ ಜೆ.ಪಿ.ನಡ್ಡಾ ರವರು, ಸನ್ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು, ಕೇಂದ್ರ ಗೃಹ ಸಚಿವರಾದ ಶ್ರೀ ಅಮಿತ್‌ಶಾ ರವರು, ಶ್ರೀ ಬಿ.ಎಲ್.ಸಂತೋಷ್ ರವರು, ಶ್ರೀಮತಿ ರಾಧ ಮೋಹನ್‌ದಾಸ್, ಸನ್ಮಾನ್ಯ ಬಿ.ಎಸ್.ಯಡಿಯೂರಪ್ಪನವರು ನಮ್ಮ ಬಿ.ಜೆ.ಪಿ.,ಯ ರಾಜ್ಯ ಅಧ್ಯಕ್ಷರಾದ ಶ್ರೀ ಬಿ.ವೈ.ವಿಜಯೇಂದ್ರ ಇವರೆಲ್ಲರೂ ಸೇರಿದಂತೆ ಇಲ್ಲಿರತಕ್ಕಂಥ ಅನೇಕರು ಕಾರಣ ಎಂದು ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ನಾಯಕರು, ಮಾನ್ಯ ಸದಸ್ಯರಾದ ಶ್ರೀ ಸಿ.ಟಿ.ರವಿಯವರ, ಶ್ರೀ ಎನ್.ರವಿಕುಮಾರ್‌ರವರ ಹಾಗೂ ನನ್ನ ಹೆಸರು ಈ ಮೂರು ಜನರ ಹೆಸರನ್ನೂ ತೆಗೆದುಕೊಂಡಿದ್ದರು. ಆದರೆ ಆಯ್ಕೆ ನನ್ನದಾಯಿತು. ಆದರೆ ಇದಕ್ಕೆ ನಾನು ನಿಜವಾಗಿಯೂ ಕೂಡ ಪುಣ್ಯ ಮಾಡಿದ್ದೆ. ಅವರೆಲ್ಲರಿಗೂ ಕೂಡ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ತಾವು ಒಳ್ಳೆಯ ಮಾತುಗಳನ್ನೇ ಆಡಿದ್ದೀರಿ. ಈ ಸದನದ ಸಮಯವನ್ನು ನಾನು ಹೆಚ್ಚು ವ್ಯರ್ಥ ಮಾಡುವುದಕ್ಕೆ ಸಿದ್ಧನಿಲ್ಲ. ನಾನು ಈ ಸ್ಥಾನದ ಗೌರವ ಮತ್ತು ಘನತೆಗಳನ್ನು ಎತ್ತಿಹಿಡಿಯತಕ್ಕಂಥ ಎಲ್ಲಾ ಕೆಲಸವನ್ನು ಮಾಡುತ್ತೇನೆ.

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರೆಲ್ಲರೂ ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

ಬಹುಶಃ ಸಂದರ್ಭ ಬಂದಾಗ Treasury Bench ನನಗೆ support ಮಾಡದೇ ಇರಬಹುದು. ಏಕೆಂದರೆ, ನನ್ನ ಸ್ಥಾನ ಆ ರೀತಿ ಇದೆ. ಅವರು ಮಾಡುವುದಕ್ಕೆ ಆಗುವುದಿಲ್ಲ. ಆದರೆ ಇಲ್ಲಿ ಏನಾದರು ಕುಳಿತು ನಾನು ಸಾಧನೆ ಮಾಡುತ್ತೇನೆ ಎಂದರೆ ಇಲ್ಲಿರತಕ್ಕಂಥ ನನ್ನ ಅಣ್ಣತಮ್ಮಂದಿರು ನನ್ನ ಅಕ್ಕತಂಗಿಯರು ಕಾರಣರಾಗುತ್ತಾರೆ ನಾವು ಈಗ ಒಟ್ಟಾಗಿ ಎರಡೂ ಪಕ್ಷಗಳು ಇದ್ದೇವೆ. ಎರಡೂ ಪಕ್ಷಗಳ ಮಿತ್ರರ ಸಹಕಾರ ಇಲ್ಲದೇ ನಾನು ಇಲ್ಲಿ ಏನೂ achieve ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ನಾನು ಅಂದುಕೊಂಡಿದ್ದೇನೆ. ಯಾರನ್ನೂ ನಾನು ಬದಿಗಿಡತಕ್ಕಂಥದ್ದಾಗಲೀ, ತಿರಸ್ಕಾರ ಮಾಡತಕ್ಕಂಥದ್ದಾಗಲೀ ಯಾವುದನ್ನೂ ಮಾಡುವುದಿಲ್ಲ. ಎಲ್ಲರ ಒಟ್ಟು ಅಭಿಪ್ರಾಯದ ಮೇಲೆ ಈ ಸದನದಲ್ಲಿ ನಡೆಯತಕ್ಕಂಥ ಎಲ್ಲಾ ವಿಚಾರಗಳನ್ನು ಕ್ರೋಢೀಕರಿಸಿ ಮಾತುಕತೆಯ ಮೂಲಕ ಯಾವುದೇ ಸರ್ಕಾರದ ನ್ಯೂನತೆಗಳು ಬಂದಾಗ, ತೊಂದರೆಗಳಾದಾಗ, ವ್ಯತ್ಯಾಸಗಳಾದಾಗ ಎಚ್ಚರಿಸತಕ್ಕಂಥ ಕೆಲಸವನ್ನು ನಾನು ಗಟ್ಟಿ ಧ್ವನಿಯಲ್ಲೇ ಮಾತನಾಡುತ್ತೇನೆ. ನನ್ನ ಸಹೋದರ ಸದಸ್ಯರೆಲ್ಲರೂ ಮಾತನಾಡುತ್ತಾ, 'ನಿನ್ನ ಹೆಸರಿನಲ್ಲೇ ಛಲವಾದಿ ಇದೆ' ಎಂದು ಹೇಳಿದರು. ನನಗೂ ಒಂದು recognition ಎನ್ನುವುದು ಬೇಕಲ್ಲವೇ? ಏಕೆಂದರೆ ನಾನು ತಳ ಸಮುದಾಯದಿಂದ ಬಂದವನು. ನನ್ನ ಸಹೋದರಿಯಾದ ಶ್ರೀಮತಿ ಉಮಾಶ್ರೀಯವರು ಕೂಡ ಹೇಳಿದರು. ನಾವೆಲ್ಲಾ ಶ್ರೀ ಬಂಗಾರಪ್ಪನವರ ಜೊತೆಯಲ್ಲಿದ್ದವರು ಎಂದು ಹೇಳಿದರು. ಇವತ್ತಿನ ದಿವಸ ನಾನು ಈ ಸದನದಿಂದ ಸನ್ಮಾನ್ಯ ಎಸ್.ಬಂಗಾರಪ್ಪನವರಿಗೆ ಗೌರವದ ಮಾತನ್ನು ಆಡುತ್ತೇನೆ. ಶ್ರೀ ಎಸ್.ಬಂಗಾರಪ್ಪನವರು ಮಾನ್ಯ ಬಿ.ಕೆ.ಹರಿಪ್ರಸಾದ್, ಮಾನ್ಯ ನಸೀರ್ ಅಹ್ಮದ್ ರವರಿಗೂ ಗೊತ್ತು, ಮತ್ತು ಜಾರ್ಜ್ ಸಾಹೇಬರಿಗೂ ಗೊತ್ತು. ನಿಜ, ಈ ಮುಂಚೆ ನಾವೆಲ್ಲರೂ ಒಟ್ಟಿಗೆ ಇದ್ದವರು. ನಾನು ಶ್ರೀ ಎಸ್.ಬಂಗಾರಪ್ಪನವರಿಂದ ಬಹಳ ಕಲಿತಿದ್ದೇನೆ. ಅವರಿಗಿದ್ದ ಆ ಕಿಚ್ಚು ಬಹುಶಃ ನನ್ನಲ್ಲೂ ಇದೆ ಎಂದು ನಾನು ಅಂದುಕೊಳ್ಳುತ್ತೇನೆ. ಅದನ್ನು ಹೇಳುವುದು, ಬಿಡುವುದು ಬೇರೆಯವರಿಗೆ ಬಿಟ್ಟಿದ್ದು. ನನಗೂ ಆ ಕಿಚ್ಚು ಇದೆಯೆಂದು ನಾನು ಭಾವಿಸಿದ್ದೇನೆ. ಅವರಿಂದ ನಾನು ಸಾಕಷ್ಟು ಕಲಿತಿದ್ದೇವೆ.

(ಮುಂದು)

(663)24.7.2024/11.20/ಎಂ.ಎಂ-ಎ.ಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ಮುಂದು):**

ರಾಜಕೀಯದಲ್ಲಿ ಇವತ್ತಿಗೂ ಕೂಡ ನಾನು ಯಾರನ್ನಾದರೂ ಗುರು ಎನ್ನುವುದಾದರೆ ಶ್ರೀ ಎಸ್. ಬಂಗಾರಪ್ಪನವರನ್ನೇ ಹೇಳುತ್ತೇನೆ. ಅವರಿಗೆ ಗೌರವ ಕೊಡುತ್ತೇನೆ. ಅವರು ನನಗೆ ಬಹಳ ಸಲ ಹೇಳುತ್ತಿದ್ದರು, ರಾಜಕಾರಣದಲ್ಲಿ ಯಾವುದೇ ಒಂದು ಅಧಿಕಾರ ಸ್ಥಾನಕ್ಕೆ ಆಸೆ ಪಡುವುದು ತಪ್ಪಿಲ್ಲ. ಸಹಜ ಅದು. ನಾವು ರಾಜಕಾರಣ ಮಾಡುವುದಕ್ಕೆ ಬಂದಿರುವುದೇ ಅಧಿಕಾರಕ್ಕೆ ಬರುವುದಕ್ಕೆ. ನನಗೆ ಅಧಿಕಾರವೇ ಬೇಡ ಎನ್ನುವುದಾರೆ ನಾವು ಯಾವುದಾದರೂ ಮಠ-

ಮಾನ್ಯಗಳನ್ನು ನೋಡಿಕೊಳ್ಳುವುದೇ ಒಳ್ಳೆಯದು ಅಥವಾ ಬೇರೆ ರೀತಿ ಸಮಾಜಸೇವೆಯನ್ನು ಮಾಡುವುದು ತಪ್ಪೇನಿಲ್ಲ. ಆದರೆ ಅವರು ನನಗೆ ಹೇಳುತ್ತಿದ್ದರು, 'ನಾವು ಒಂದು ಸ್ಥಾನಕ್ಕೆ ಆಸೆ ಪಡುವುದು ತಪ್ಪಲ್ಲ, ಕೇಳಬೇಕು. ಕೇಳಿದ ನಂತರ ಹಲವು ಸಂದರ್ಭಗಳಲ್ಲಿ ಸಿಗುತ್ತದೆ, ಇಲ್ಲದಿದ್ದರೆ ಸಿಗುವುದಿಲ್ಲ. ತಕ್ಷಣ ಏನು ಮಾಡಬೇಕು ಗೊತ್ತೇ compromise ಮಾಡಿಕೊಂಡು ಪಕ್ಕದ ಸೀಟಿನಲ್ಲಿ ಕುಳಿತುಕೊಳ್ಳುವ ಪ್ರಯತ್ನವನ್ನು ಯಾವತ್ತೂ ಮಾಡಬೇಡ. Compromise ಎನ್ನುವುದನ್ನು ಇಟ್ಟುಕೊಳ್ಳಬಾರದು. ಆಗಲಿಲ್ಲವೆಂದರೆ, ವಿರುದ್ಧವಾದ ಸ್ಥಾನದಲ್ಲಿ ಹೋಗಿ ಕುಳಿತುಕೊಳ್ಳಬೇಕು. ಮಹತ್ವ ಬರುವುದು ಆಗಲೇ' ಎಂಬ ಮಾತನ್ನು ಅಂದು ನನಗೆ ಹೇಳಿದ್ದರು. ಆ ರೀತಿ ನಾವು ಬೆಳೆದು ಬಂದವರು. ನಾನು ಇವತ್ತಿನ ದಿವಸ ಈ ಸ್ಥಾನದಲ್ಲಿ ಕುಳಿತು ಯಾರನ್ನೂ ಕೂಡ ಬೇರ್ಪಡಿಸಿ ನೋಡುವುದಿಲ್ಲ. ತಳ ಸಮುದಾಯದಿಂದ ಬಂದಿದ್ದೇನೆ, ತಳ ಸಮುದಾಯದ ಜನರಿಗೆ ಅನ್ಯಾಯವಾದರೆ, ತೊಂದರೆಯಾದರೆ, ವಂಚನೆಯಾದರೆ, ಮೋಸವಾದರೆ ನನ್ನ ಹೋರಾಟ ಸಹಜವಾಗಿರುತ್ತದೆ. ನಾನು ಮಾಡಲೇ ಬೇಕು ಅದನ್ನು ನಾನು ಮಾಡುತ್ತೇನೆ. ಅಂದರೆ ಬೇರೆಯವರ ವಿರುದ್ಧ ನಾನಿದ್ದೇನೆ ಎನ್ನುವುದಲ್ಲ. ನಾನು ಯಾರನ್ನೂ ವಿರೋಧ ಮಾಡುವುದಿಲ್ಲ. ವೈಯಕ್ತಿಕವಾಗಿ ನಾನು ಯಾರನ್ನೂ ತೆಗೆದುಕೊಳ್ಳುವುದಿಲ್ಲ. ಮಾನ್ಯ ಸಚಿವರಾದ ಕೃಷ್ಣ ಭೈರೇಗೌಡರು ಹೇಳಿದರು, ಸಾಂದರ್ಭಿಕವಾಗಿ ರಾಜಕೀಯ ಮಾಡುವುದು ಬೇರೆ ಇಂತಹ ಸಂದರ್ಭದಲ್ಲಿ ರಾಜಕೀಯವನ್ನು ಬೆರೆಸಬಾರದು. ನಾನು ಯಾವುದರಲ್ಲಿಯೂ ರಾಜಕೀಯವನ್ನು ಬೆರೆಸುವುದಿಲ್ಲ. ಆದರೆ ನಾನು ರಾಜಕೀಯ ಪಕ್ಷದಲ್ಲಿದ್ದೇನೆ. ಪ್ರತಿಪಕ್ಷದಲ್ಲಿ ಕುಳಿತಿರುತ್ತೇನೆ, ಸಾಂದರ್ಭಿಕವಾಗಿ ಯಾರದ್ದಾದರೂ ಹೆಸರು ಬಂದರೆ ಅದನ್ನು ತಪ್ಪು ತಿಳಿಯಬೇಡಿ. ಈ ಸ್ಥಾನಕ್ಕೆ ಗೌರವ, ಘನತೆ ಬರಬೇಕು. ಬಹುಜನ ಮುಖಂಡರುಗಳು, ಮುತ್ಸದ್ಧಿಗಳು ಈ ಸ್ಥಾನದಲ್ಲಿ ಸೇವೆ ಮಾಡಿ ಹೋಗಿದ್ದಾರೆ ಅವರ ಸೇವೆ ನಮಗೆ ಪ್ರೇರಣೆಯಾಗಲಿ. ನನಗೆ ಸಿಕ್ಕಿರುವಂತಹ ಈ ಅವಕಾಶವನ್ನು ನಾನು ಎಷ್ಟು ಉತ್ತಮವಾಗಿ ಬಳಸುವುದಕ್ಕೆ ಸಾಧ್ಯವಿದೆಯೋ ತಮ್ಮೆಲ್ಲರ ಸಹಕಾರದಿಂದ ನಾನು ಆ ರೀತಿ ನಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಎಲ್ಲರೂ ಯೋಗ ಎಂದರು ಮನುಷ್ಯನಿಗೆ ಯೋಗ ಬಂದರೆ ಎಲ್ಲಾ ಅವಕಾಶಗಳೂ ಬರುತ್ತವೆ ಎಂದು ಹೇಳುತ್ತಾರೆ. ನಾನಂತೂ ಡಾ॥ ಬಿ.ಆರ್. ಅಂಬೇಡ್ಕರ್‌ವಾದಿ. ನಾನು ಅವರ ಹೆಸರಿನಲ್ಲೇ ಪ್ರಮಾಣ ಮಾಡಿ ಈ ಸದನಕ್ಕೆ ಬಂದಿರುವವನು.

**ಶ್ರೀ ಟಿ.ಎ. ಶರವಣ:-** ಬರೀ ಯೋಗ ಅಷ್ಟೇ ಅಲ್ಲ, ಯೋಗ್ಯತೆಯೂ ಇರಬೇಕು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ನಾನು ಅದನ್ನೇ ಹೇಳುವುದಕ್ಕೆ ಹೋದೆ. ನಾನು ಯೋಗವನ್ನು ನಂಬಿದವನಲ್ಲ. ಯೋಗವನ್ನು ನಂಬಿದ್ದಿದ್ದರೆ ನಾನಿಲ್ಲಿ ಬರುವುದಕ್ಕೆ 45 ವರ್ಷ ಆಗಬೇಕಿರಲಿಲ್ಲ. ಏಕೆಂದರೆ, ನನಗೆ ಯೋಗ ಇರಲಿಲ್ಲ. ನನಗೆ ಯೋಗ್ಯತೆ ಇದ್ದುದನ್ನು ಗುರುತಿಸುವಂತಹ ಅವಕಾಶ ಬೇರೆಯವರಿಗೆ ಯಾರಿಗೂ ಬರಲಿಲ್ಲ ಅದು ನನ್ನ ಪಕ್ಷವಾದ ಭಾರತೀಯ ಜನತಾ ಪಕ್ಷದ ಮುಖಂಡರಿಗೆ ನನ್ನ ಯೋಗ್ಯತೆಯನ್ನು ಗುರುತಿಸುವಂತಹ ಅವಕಾಶ ಸಿಕ್ಕಿತು. ಅವರು ಮನಸ್ಸು ಮಾಡಿದ್ದರಿಂದ ನಾನಿವತ್ತು ಇಲ್ಲಿ ಬಂದು ಕುಳಿತಿದ್ದೇನೆ. ಆದ್ದರಿಂದ ನನ್ನ ಪಕ್ಷಕ್ಕೇ ಆಗಲಿ, ಸಮಾಜಕ್ಕೇ ಆಗಲಿ, ಬೇರೆಯವರಿಗೇ ಆಗಲಿ ನಾನು ದ್ರೋಹ ಬಗೆಯುವಂತಹ, ದೋಖ ಮಾಡುವಂತಹ

ಕೆಲಸವನ್ನು ನಾನು ಎಂದಿಗೂ ಮಾಡುವುದಿಲ್ಲ. ಇರುಸು ಮುರುಸು ನನ್ನಲ್ಲಿಲ್ಲ. ನಾನು ಏನೇ ಇದ್ದರೂ ನೇರವಾಗಿಯೇ ಮಾತನಾಡುತ್ತೇನೆ.

**ಸಭಾಪತಿಯವರು:-** ಅದನ್ನೆಲ್ಲಾ ತರಿಸುವವರು ಅವರೇ. (ಶ್ರೀ ಎಸ್.ಎಲ್. ಭೋಜೇಗೌಡ)

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಅವರು ನಿಮ್ಮನ್ನು ಮಾತ್ರ ದಾರಿತಪ್ಪಿಸುತ್ತಿದ್ದರು ಈಗ ನನ್ನನ್ನೂ ದಾರಿ ತಪ್ಪಿಸುತ್ತಿದ್ದಾರೆ.

**ಸಭಾಪತಿಯವರು:-** ನೀವು ಬಹಳ careful ಆಗಿ ಇರಬೇಕು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಹೌದು, ಬಹಳ careful ಆಗಿ ಇರಬೇಕು.

**ಶ್ರೀ ಟಿ.ಎ. ಶರವಣ:-** ಮಾನ್ಯ ಛಲವಾದಿ ನಾರಾಯಣಸ್ವಾಮಿಯವರೇ, ತಾವು ದೇವೇಗೌಡರ ಹೆಸರನ್ನೂ ಹೇಳಬೇಕು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಖಂಡಿತವಾಗಿಯೂ. ನಾನು ಮಾಜಿ ಪ್ರಧಾನಿಗಳಾದ ಶ್ರೀ ಹೆಚ್.ಡಿ. ದೇವೇಗೌಡರ ಜೊತೆಯಲ್ಲಿಯೂ ಸ್ವಲ್ಪ ದಿವಸ ಇದ್ದವನು. ನಾನು ಅವರಿಂದಲೂ ಕಲಿತಿದ್ದೇನೆ. ಸುಮಾರು 30-32 ವರ್ಷಗಳಾದ ಮೇಲೆ ಅವರು ನಮ್ಮನ್ನು ಭೇಟಿಯಾಗಿದ್ದರು. ಚುನಾವಣಾ ಸಮಯದಲ್ಲಿ ಹೋಗಿದ್ದೆ. ಅವರು ನನ್ನಿಂದ ಭಾಷಣ ಮಾಡಿಸಿದರು. ಪಾಪ! ಅವರಿಗೆ ಎದ್ದು ನಿಂತು ಕೊಳ್ಳಲು ಕಷ್ಟವಾಗಿತ್ತು. ನಾನು ಭಾಷಣ ಮಾಡಿ ಕುಳಿತುಕೊಂಡ ಮೇಲೆ ಒಂದು ನಿಮಿಷ ತಾಳು ಎಂದು ಎದ್ದು ನಿಂತುಕೊಂಡು ನನ್ನನ್ನು ಅಪ್ಪಿಕೊಂಡು ನೀನು ಈ ಮಟ್ಟಕ್ಕೆ ಮಾತನಾಡುತ್ತೀಯ, ಇಷ್ಟು ಬೆಳೆದಿದ್ದೀಯ ಎಂಬುದು ನನಗೆ ಗೊತ್ತೇ ಇರಲಿಲ್ಲ ಎಂದರು. 30 ವರ್ಷದಿಂದ ತಮ್ಮಿಂದ ದೂರ ಇದ್ದುದರಿಂದ ತಮಗೆ ಗೊತ್ತಾಗಲಿಲ್ಲ ಎಂದೆ. ಅವರು ಬಹಳ ಖುಷಿ ಪಟ್ಟರು. ನಾನು ಅವರನ್ನೂ ನೆನೆಸಿಕೊಳ್ಳುತ್ತೇನೆ. ನಾನು ಅದಕ್ಕೇ ಹೇಳಿದೆ ನಾನು ಯೋಗದಿಂದ ಇಲ್ಲಿ ಬಂದವನಲ್ಲ ಯೋಗ್ಯತೆ ಮೇಲೆ ಬಂದಿದ್ದೇನೆ, ಆ ಯೋಗ್ಯತೆಯನ್ನು ನನ್ನ ಪಕ್ಷದ ಮುಖಂಡರುಗಳು ಗುರುತಿಸಿ ನನ್ನನ್ನು ಇಲ್ಲಿಗೆ ಕರೆ ತಂದಿದ್ದಾರೆ. ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ಬಹಳಷ್ಟು ಮಾತನಾಡುವುದಿದೆ, ಸಮಯವೂ ನನಗಿದೆ. ನಾನು ಒಂದು ವರ್ಷದ ಹಿಂದೆ ಹೇಳಿದೆ, ನನ್ನ ಸ್ನೇಹಿತರುಗಳು ಕೆಲವರು ಹೇಳಿದರು ಗಟ್ಟಿ ಧ್ವನಿಯಲ್ಲಿ ಮಾತನಾಡಿದ್ದಕ್ಕೆ ಗಟ್ಟಿ ಧ್ವನಿಯಲ್ಲಿ ಜಾಸ್ತಿ ಏನು ಮಾತನಾಡುವುದಕ್ಕೆ ಹೋಗಬೇಡ ಅಪ್ಪಿ ತಪ್ಪಿ ಇಲ್ಲಿಗೆ ಕಳುಹಿಸಿದ್ದಾರೆ, ಅಲ್ಲಿ ಗರ್ಭಗುಡಿ ಜಾಗಕ್ಕೆ ನಿನ್ನನ್ನು ಬಿಟ್ಟುಕೊಳ್ಳುವುದಿಲ್ಲ ಎಂದು ಹೇಳಿದರು. ಆಗ ನಾನು ತಮಗೆ ಹೇಳಿದೆ ಸ್ವಾಮಿ 45 ವರ್ಷವಾದ ಮೇಲೆ ಇಲ್ಲಿಗೆ ಬಂದಿದ್ದೇನೆ ಇನ್ನು 45 ತಿಂಗಳುಗಳೂ ಬೇಡ ನಾನು ಮುಂದಿನ ಬೆಂಚ್‌ಗೆ ಬರುತ್ತೇನೆ ಎಂದು ಹೇಳಿದ್ದೆ. ಇವತ್ತು ತಾವು ಅವಕಾಶ ಮಾಡಿ ಕೊಟ್ಟಿದ್ದೀರಿ. ಇದಕ್ಕೆ ಕಾರಣ ನನ್ನ ಪಕ್ಷ. ಆದ್ದರಿಂದ ಯೋಗ್ಯತೆಯನ್ನು ಗುರುತಿಸುವವರು ಯಾರು ಯೋಗವನ್ನೇ ಗುರುತಿಸುವವರು ಯಾರು ಎನ್ನುವುದನ್ನು ಕಾಲ ನಿರ್ಣಯ ಮಾಡುತ್ತದೆ. ಆದ್ದರಿಂದ ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ತಾವು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ

ಧನ್ಯವಾದಗಳನ್ನು ತಿಳಿಸುತ್ತಾ, ನನ್ನ ಮಿತ್ರರೆಲ್ಲರೂ ನನ್ನ ಬಗ್ಗೆ ಒಳ್ಳೆಯದನ್ನು ಮಾತನಾಡಿದ್ದಕ್ಕೆ ಮತ್ತೊಮ್ಮೆ ಅವರೆಲ್ಲರಿಗೆ ಧನ್ಯವಾದಗಳನ್ನು ತಿಳಿಸುತ್ತಾ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ, ನಮಸ್ಕಾರ.

**ಸಭಾಪತಿಯವರು:-** ಇಂದು ಪ್ರತಿಪಕ್ಷ ನಾಯಕರಾಗಿ ಶ್ರೀ ಛಲವಾದಿ ನಾರಾಯಣಸ್ವಾಮಿಯವರನ್ನು ಅವರ ಪಕ್ಷದವರು ತೀರ್ಮಾನ ಮಾಡಿ ವಿರೋಧ ಪಕ್ಷದ ನಾಯಕರನ್ನಾಗಿ ನೇಮಿಸಬೇಕೆಂದು ಪತ್ರವನ್ನು ಕಳುಹಿಸಿದರು. ನನಗೂ ಬಹಳಷ್ಟು ಖುಷಿಯಾಯಿತು. ಅವರು ಹೇಳಿದ ಹಾಗೆ ಸಾಮಾನ್ಯ ಕುಟುಂಬದಿಂದ ಬಂದಂತಹ ವ್ಯಕ್ತಿ ಈ ಮಟ್ಟಕ್ಕೆ ಬಂದು ಪ್ರತಿಪಕ್ಷದ ನಾಯಕರಾಗಿದ್ದಾರೆ ಎಂದರೆ ಅವರ ಹೋರಾಟ, ಸಂಕಲ್ಪ ಎಲ್ಲಾ ಕೂಡಿದೆ ಎಂದು ಬಹಳ ಅಭಿಮಾನದಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಲ್ಲಿ ಕುಳಿತು ಮಾತನಾಡುವುದಕ್ಕೂ ವಿರೋಧ ಪಕ್ಷದ ನಾಯಕರಾಗಿ ಕುಳಿತು ಮಾತನಾಡುವುದಕ್ಕೂ ಬಹಳ ಅಂತರವಿದೆಯೆಂದು ನಿಮಗೆ ಹೇಳಬಯಸುತ್ತೇನೆ. ಏಕೆಂದರೆ ಅಲ್ಲಿ ಏನು ಬೇಕಾದರೂ ಮಾತನಾಡಬಹುದು ಆದರೆ ಇಲ್ಲಿ ಏನು ಬೇಕಾದರೂ ಮಾತನಾಡುವುದಕ್ಕೆ ಆಗುವುದಿಲ್ಲ. ಯಾರು ಜವಾಬ್ದಾರಿ ಸ್ಥಾನದಲ್ಲಿ ಇರುತ್ತಾರೆ ಅವರಿಗೆ ಕಷ್ಟಗಳು ಬಹಳ ಇರುತ್ತವೆ. ನಿಮಗೂ ಅಷ್ಟೇ. ಹಗುರವೆಂದು ತಿಳಿದುಕೊಳ್ಳಬೇಡಿ ಕಷ್ಟಗಳು ಇರುತ್ತವೆ. ಬಹಳ ಕಷ್ಟ ಎನ್ನುವುದನ್ನು ನೆನಪಿಟ್ಟುಕೊಳ್ಳಿ. ಆ ಹಿನ್ನೆಲೆಯಲ್ಲಿ ಇವತ್ತು ನೀವು ಪ್ರತಿಪಕ್ಷದ ನಾಯಕರಾದುದಕ್ಕೆ ನಮಗೆಲ್ಲಾ ಬಹಳಷ್ಟು ಹೆಮ್ಮೆ ಎನಿಸಿದೆ. ನೀವು ಸಹ ಉತ್ತಮವಾದ ರೀತಿಯಿಂದ; ಪ್ರತಿಪಕ್ಷದ ನಾಯಕರಾಗಿ ಇಲ್ಲಿ ಕೆಲಸ ಮಾಡಿದ್ದಾರೆ ಎಂದು ಅನೇಕ ಜನರ ಹೆಸರುಗಳನ್ನು ಹೇಳಿದ್ದೀರಿ. ಆ ಹಿನ್ನೆಲೆಯಲ್ಲಿ ನೀವು ಅವರೆಲ್ಲರಿಗಿಂತ ಇನ್ನಷ್ಟು ಜಾಸ್ತಿ ಒಳ್ಳೆಯ ಕೆಲಸಗಳನ್ನು ಮಾಡಿ ತೋರಿಸುತ್ತೇನೆ ಎನ್ನುವಂತಹ ಛಲ ನಿಮ್ಮಲ್ಲಿ ಮೂಡಲಿ ಎನ್ನುವಂತಹ ಮಾತುಗಳನ್ನು ಹೇಳುತ್ತೇನೆ. ವಿರೋಧಪಕ್ಷದ ನಾಯಕರನ್ನು Shadow Chief Minister ಎನ್ನುತ್ತಾರೆ. ಮುಖ್ಯಮಂತ್ರಿಗಳಿಗಿರುವಷ್ಟು ಜವಾಬ್ದಾರಿ ನಿಮಗೂ ಇರುತ್ತದೆ. ನನ್ನ ಅನುಭವದಿಂದ ಹೇಳುವುದಾದರೆ ಪ್ರತಿಪಕ್ಷದಲ್ಲಿದ್ದಾಗ ಜನಪ್ರಿಯರಾದವರು ಆಳುವ ಪಕ್ಷದಲ್ಲಿದ್ದಾಗ ಜನಪ್ರಿಯರಾಗುವುದು ಬಹಳ ಕಷ್ಟ. ಹಾಗಾಗಿ ಇಲ್ಲಿ ಕುಳಿತಿರುವಾಗ ಹೆಚ್ಚು ಜನಪ್ರಿಯರಾಗಿ, ಜವಾಬ್ದಾರಿ ಸ್ಥಾನದಲ್ಲಿದ್ದೀರಿ ಜವಾಬ್ದಾರಿ ಸ್ಥಾನವನ್ನು ನಿಭಾಯಿಸಿಕೊಂಡು ಹೋಗಬೇಕು. ಇಂದಿನ ದಿನಮಾನಗಳಲ್ಲಿ ಇದನ್ನು ನಾವೆಲ್ಲರೂ ತಿಳಿದುಕೊಳ್ಳಬೇಕಾಗುತ್ತದೆ. ವಿರೋಧಪಕ್ಷವೆಂದರೆ ಬರೀ ವಿರೋಧ ಮಾಡುವುದೇ ಅವರ ಕೆಲಸ, ಆಳುವ ಪಕ್ಷವೆಂದರೆ ಸರ್ಕಾರವನ್ನು ಡಿಫೆಂಡ್ ಮಾಡಿಕೊಳ್ಳುವುದೇ ಅವರ ಕೆಲಸ ಎನ್ನುವುದನ್ನು ಸಮಾಜದಲ್ಲಿ ಮಾತನಾಡುತ್ತಾರೆ. ಇದು ಮಾಧ್ಯಮದಲ್ಲಿಯೂ ಬರುತ್ತಿರುತ್ತದೆ, ಎಲ್ಲಾ ಜನರೂ ಮಾತನಾಡುತ್ತಾರೆ. ಇದೊಂದು ಬಹಳ ಉತ್ತಮವಾದಂತಹ ಸಂಸ್ಥೆಯಾಗಿದೆ. ನಮ್ಮ ವಿಧಾನ ಪರಿಷತ್ತು ಭಾರತ ದೇಶದಲ್ಲಿಯೇ ಅತ್ಯಂತ ಶ್ರೇಷ್ಠವಾದಂತಹ ವಿಧಾನ ಪರಿಷತ್ತು ಯಾವುದಾದರೂ ಇದೆಯೆಂದರೆ ಅದು ಕರ್ನಾಟಕ ವಿಧಾನ ಪರಿಷತ್ತು ಎನ್ನುವುದನ್ನು ನಾವು ಎಲ್ಲಾ ರಾಜ್ಯದಲ್ಲಿಯೂ ನೋಡಿದ್ದೇವೆ.

**(ಈ ಹಂತದಲ್ಲಿ ಎಲ್ಲಾ ಮಾನ್ಯ ಸದಸ್ಯರುಗಳು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

ನಾವು ನೀವೆಲ್ಲಾ ಅದರ ಘನತೆಯನ್ನು ಉಳಿಸಿಕೊಂಡು ಹೋಗೋಣ ಎನ್ನುವಂತಹ ಮಾತನ್ನು ಹೇಳಿ, ಸುಮಾರು 21 ಜನರು ನಿಮಗೆ ಶುಭವನ್ನು ಹಾರೈಸಿದ್ದಾರೆ. ಅದರ ಅರ್ಥ ಇಡೀ ಸದನವೇ ಹಾರೈಸಿದ ಹಾಗೆ. 21 ಜನರು ಶುಭ ಹಾರೈಸಬೇಕಾದರೆ ನೀವು ನಾನು ಒಳ್ಳೆಯದನ್ನೇ ಹೇಳುತ್ತೇನೆ ನಾನು ಒಳ್ಳೆಯವನೇ ಆಗಿರುತ್ತೇನೆ ಎಂದು ಹೇಳಿದಿರಿ. ನೀವು ಒಳ್ಳೆಯವರಾಗಿದ್ದೀರಿ ಎಂದು ಇದನ್ನು ಹೇಳಿದ್ದಾರೆ. ಒಳ್ಳೆಯವರಾಗಿರುವುದರಿಂದ ಇಲ್ಲಿಯವರೆಗೆ ಬಂದಿದ್ದೀರಿ. ಜೊತೆಗೆ ನಮ್ಮ ಹರಿಪ್ರಸಾದ್‌ರವರು ಒಂದು ಮಾತನ್ನು ಹೇಳಿದರು. ನಾನು ಪ್ರತಿಪಕ್ಷದ ನಾಯಕನಾಗಿ ಬಂದಾಗ ಮದುವೆಯಲ್ಲಿ ಗಂಡನ್ನು ತಂದು ಕೂರಿಸಿದ ಹಾಗೆ ನನ್ನನ್ನು ತಂದು ಕೂರಿಸಿದರು ಎಂದು ಹೇಳಿದರು. ಆಗ ನಾನು ಇರಲಿಲ್ಲ ಹಾಗಾಗಿ ನನಗದು ಗೊತ್ತಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಛಲವಾದಿ ನಾರಾಯಣಸ್ವಾಮಿಯವರಿಗೆ ಅವರ ಪಕ್ಷದವರು ಅಭಿನಂದನೆ ಸಲ್ಲಿಸುವಾಗ ನಾನು ಮಾತನಾಡಲು ಎದ್ದೆ. ಆಮೇಲೆ ಮಾನ್ಯ ಸಚಿವರಾದ ಕೃಷ್ಣ ಭೈರೇಗೌಡರು ತಾನು ಮಾತನಾಡುತ್ತೇನೆಂದು ಹೇಳಿದರು. ಏತಕ್ಕೆ ಹೇಳಿದೆ ಎಂದರೆ, ಆಳುವ ಪಕ್ಷದ ಜವಾಬ್ದಾರಿ ಪ್ರಜಾಪ್ರಭುತ್ವದಲ್ಲಿ ವಿರೋಧಪಕ್ಷದಲ್ಲಿದ್ದಾಗ ಅಭಿನಂದನೆ ಸಲ್ಲಿಸುವುದು ಆಳುವ ಪಕ್ಷದ ಜವಾಬ್ದಾರಿ. ಆ ಜವಾಬ್ದಾರಿ ನಾನು ವಿರೋಧ ಪಕ್ಷದ ನಾಯಕನಾದಾಗ ಆಗಲಿಲ್ಲ ಎನ್ನುವ ಮಾತನ್ನು ಹೇಳಿದೆ. ಆಗ ನಾನು ಮಾತನಾಡಿದರೆ ರಾಜಕಾರಣವಾಗುತ್ತಿತ್ತು. ಅದಕ್ಕೋಸ್ಕರ ಹೇಳಲಿಲ್ಲ.

**ಸಭಾಪತಿಯವರು:-** ಈಗ ನಾನು ಹೇಳುತ್ತೇನೆ. ನಾನು ಏತಕ್ಕೆ ಅದನ್ನು ಹೇಳುತ್ತೇನೆಂದರೆ, ಮಾನ್ಯ ಛಲವಾದಿ ನಾರಾಯಣಸ್ವಾಮಿಯವರಿಗೆ ಒಂದು ಮಾತನ್ನು ಹೇಳುತ್ತೇನೆ. ಉಪಕಾರ ಮಾಡಿದವರನ್ನು ಎಂದಿಗೂ ಮರೆಯಬಾರದು ಎನ್ನುವುದು ಸಂಕಲ್ಪ. ಹುಟ್ಟಿದ ಊರು, ಹೆತ್ತ ತಂದೆ-ತಾಯಿ, ಕಷ್ಟಕಾಲದಲ್ಲಿ ಉಪಕಾರ ಮಾಡಿದವರನ್ನು ಮರೆಯಬಾರದು. ನಿಮಗೆ ಯಾರು ಉಪಕಾರ ಮಾಡಿದ್ದಾರೆಂಬುದು ಗೊತ್ತಿದೆ ಅವರನ್ನು ನೀವು ಮರೆಯುವುದಿಲ್ಲ ಎಂದು ನನಗೆ ನಂಬಿಕೆ ಇದೆ. ಜೊತೆಗೆ ಈ ಸದನ ಒಂದು ನಾಣ್ಯದ ಎರಡು ಬದಿ ಇದ್ದ ಹಾಗೆ. ಎರಡೂ ಬದಿಗಳು ಸರಿಯಾದ ರೀತಿ ಇದ್ದರೆ ಈ ರೀತಿ ಇವತ್ತು ಚರ್ಚೆಯಾಯಿತಲ್ಲಾ ಎಲ್ಲ ರೀತಿಯಿಂದಲೂ ಚರ್ಚೆಯಾದರೆ ಇದರ ಘನತೆ ಗೌರವ ಇನ್ನೂ ಹೆಚ್ಚಾಗುತ್ತದೆ ಎನ್ನುವುದನ್ನು ನಾವು ನೋಡಬೇಕಾಗುತ್ತದೆ.

(ಮುಂದು)

(664) 24-07-2024 11-30 KH/AK (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು (ಮುಂದು):**

ನೀವು ಪ್ರತಿಪಕ್ಷದ ಒಂದು ಕುಟುಂಬದ ಯಜಮಾನರು ಇದ್ದಹಾಗೆ. ಯಜಮಾನರು ಇದ್ದವರಿಗೆ ಬಹಳ ಕಷ್ಟವಾಗುತ್ತದೆ. ಮನೆಯಲ್ಲಿ ಮಕ್ಕಳು ಕೇಳುತ್ತಾರೆ. ಒಬ್ಬರು ಚಾಕೊಲೇಟ್ ಕೇಳುತ್ತಾರೆ, ಒಬ್ಬರು ಏನೇನೋ ಕೇಳುತ್ತಾರೆ, ಮತ್ತೊಂದು ಕೇಳುತ್ತಾರೆ; ಯಾರಿಗೆ ಕೊಡುತ್ತೀರಿ, ಯಾರಿಗೆ ಬಿಡುತ್ತೀರಿ? ಈ ರೀತಿ ಇರುತ್ತದೆ, ಆ ರೀತಿಯಂತಾಗುತ್ತದೆ. ಇದನ್ನು

ನಿಭಾಯಿಸಿಕೊಂಡು ಹೋಗುತ್ತೀರಿ ಎನ್ನುವಂತಹ ನಂಬಿಕೆ ನನಗಿದೆ. ಮಾನ್ಯ ಶ್ರೀ ಬಿ.ಕೆ.ಹರಿಪ್ರಸಾದ್‌ರವರು ಹೇಳಿದ ಹಾಗೆ ನಾನು 7 ಬಾರಿ ವಿಧಾನ ಪರಿಷತ್ತಿನ ಸದಸ್ಯನಾಗಿ ಆರಿಸಿ ಬಂದಿದ್ದೆ. ಬಹಳ ಮಂದಿ ಎಲ್ಲಾ ಸ್ನೇಹಿತರು, ಪ್ರತಿಪಕ್ಷದ ನಾಯಕರೆಲ್ಲಾ ಬಂದು ನನ್ನ ಬಗ್ಗೆ ಹೇಳಿ ಅಭಿನಂದನೆಯನ್ನು ಸಲ್ಲಿಸಬೇಕೆಂದುಕೊಂಡಿದ್ದರು. ಅಂದಿನ ಸಭಾಪತಿಯವರು ಅನುಮತಿಯನ್ನು ಕೊಡಲಿಲ್ಲ. ಪ್ರಶ್ನೋತ್ತರ ಅವಧಿ ಎಂದು ಹೇಳಿಬಿಟ್ಟರು. ಬಹಳ ಮಂದಿಯೆಲ್ಲಾ ಜಗಳವಾಡಿದರು. ಏನು ಮಾಡಿದರೂ ಅನುಮತಿ ಕೊಡಲಿಲ್ಲ. ನನಗೆ ಏನೆಂದರೆ, ಇಂತಹವರೆಲ್ಲಾ ಬಂದಾಗ ಇಡೀ ಸದನಕ್ಕೆ ಇವರ ಬಗ್ಗೆ ಗೊತ್ತಾಗಲಿ ಎನ್ನುವ ದೃಷ್ಟಿಯಿಂದ, ಮತ್ತೆ ಒಂದೆರಡು ಒಳ್ಳೆಯ ಮಾತನ್ನು ಮಾತನಾಡಿದರೆ ಅವರಿಗೆ ಬೆನ್ನು ತಟ್ಟಿದರೆ ಇನ್ನು ಉತ್ತಮವಾದಂತಹ ಕೆಲಸ ಮಾಡುತ್ತಾರೆ ಎನ್ನುವುದರಲ್ಲಿ ಸಂಶಯವಿಲ್ಲ. ಸದನ ಒಂದು ಉತ್ತಮವಾದ ರೀತಿ-ನೀತಿಯಿಂದ ನಡೆಯುವಂತೆ ಮಾಡಲಿ ಎನ್ನುವ ದೃಷ್ಟಿಯಿಂದ ಅವರಿಗೆ ಇಷ್ಟು ಸಮಯವನ್ನು ಕೊಟ್ಟಿದ್ದೇನೆ. ನಿಮಗೆ ದೇವರು ಒಳ್ಳೆಯದನ್ನು ಮಾಡಲಿ. ಬರುವಂತಹ ದಿನಮಾನಗಳಲ್ಲಿ ಎಲ್ಲಾ ರೀತಿಯಿಂದ ಈ ಸದನದ ಘನತೆ-ಗೌರವವನ್ನು ಎತ್ತಿ ಹಿಡಿಯುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತೀರಿ ಎನ್ನುವಂತಹ ನಂಬಿಕೆ, ಭರವಸೆಯೊಂದಿಗೆ ಎಲ್ಲರ ಪರವಾಗಿ, ನಾಡಿನ ಪರವಾಗಿ ನಿಮಗೆ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ವಿಚಾರ. ತಾವು ಮಾತನಾಡುವಾಗ ಅವರಿಗೆ ಹೇಳಿದ್ದಿರಿ. ಅವರೊಬ್ಬರನ್ನು ಬಿಟ್ಟು ಅಲ್ಲಿ ಕುಳಿತವರೆಲ್ಲಾ ಬೇಕಾಗಿರುವುದನ್ನು ಮಾತನಾಡಬಹುದು ಎಂದು ಹೇಳಿದ್ದಿರಿ. ಆ ಮಾತಿನಂತೆ ನಡೆದುಕೊಳ್ಳಬೇಕು.

**ಸಭಾಪತಿಯವರು:-** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ಆಯಿತು. ಅದು ನಿಮಗೆ ಅಲ್ಲ. ಮೊದಲ ಸಾಲಿನಲ್ಲಿ ಇರುವವರಿಗೆ ಹೇಳಿದ್ದು.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ ಒಂದು ನಿಲುವಳಿ ಸೂಚನೆಯನ್ನು ಮಂಡಿಸಬೇಕಾಗಿದೆ.

**ಸಭಾಪತಿಯವರು:-** ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರೇ, ಪ್ರಶ್ನೋತ್ತರ ಅವಧಿ ಮುಗಿಯಲಿ. ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರ ಪರವಾಗಿ ಮಾನ್ಯ ಎಸ್.ಕೇಶವಪ್ರಸಾದ್‌ರವರು ಪ್ರಶ್ನೆಯನ್ನು ಕೇಳಬೇಕು.

**4. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಪ್ರಶ್ನೆ ಸಂಖ್ಯೆ: 1006**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭಾ ಕ್ಷೇತ್ರ) (ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿಯವರ ಪರವಾಗಿ):-** ಮಾನ್ಯ ಸಭಾಪತಿಯವರೇ, ರಾಜ್ಯ ಸರ್ಕಾರವು ಕಳೆದ ವರ್ಷದಲ್ಲಿ ತೀವ್ರವಾದಂತಹ ಬರಗಾಲವನ್ನು ಎದುರಿಸಿತ್ತು. ಈ ತೀವ್ರವಾದ ಬರಗಾಲವನ್ನು ಎದುರಿಸಿದಂತಹ ಸಂದರ್ಭದಲ್ಲಿ ರಾಜ್ಯದ 223 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶ ಎಂದು ರಾಜ್ಯ ಸರ್ಕಾರ ಘೋಷಣೆ ಮಾಡಿತ್ತು. ಆದರೆ, ರಾಜ್ಯದ ರೈತರಿಗೆ ಬರ ಪರಿಹಾರವನ್ನು ಕೊಡುವಾಗ ಆದ್ಯತೆಯ ಮೇರೆಗೆ ಬರ ಪರಿಹಾರವನ್ನು ವಿತರಣೆ ಮಾಡಬೇಕು. ಇತರೆ ಎಲ್ಲಾ ಖರ್ಚುಗಳನ್ನು ಬದಿಗಿಟ್ಟು ಇದಕ್ಕೆ ಗಮನವನ್ನು ಕೊಡಬೇಕು ಎನ್ನುವಂತಹದ್ದರಲ್ಲಿ ರಾಜ್ಯ ಸರ್ಕಾರ ಹಿಂದೆ ಬಿದ್ದಿತ್ತು. ಹಾಗೆಯೇ, ಕೇಂದ್ರ ಸರ್ಕಾರದಿಂದ ಬರುವಂತಹ ಅನುದಾನ ಏನಿತ್ತು, ಅದಕ್ಕೆ ಒಂದು ಸಮೀಕ್ಷೆ ನಡೆಯುತ್ತಿತ್ತು. ಆಗ ಫಸಲ್ ಭಿಮಾ ಯೋಜನೆಯಲ್ಲಿ ರೈತರು ತಮ್ಮ ಹೆಸರನ್ನು ನೊಂದಾಯಿಸುವುದಕ್ಕೆ ಬೇಕಾದಂತಹ ಹಣವನ್ನು ತುಂಬಿ ನೊಂದಾಯಿಸಿದ್ದರು. ಕಂದಾಯ ಇಲಾಖೆಯಿಂದ ಆ ಫಸಲ್ ಭಿಮಾ ಯೋಜನೆಯಲ್ಲಿ ಬೆಳೆ ಹಾನಿಯಾಗಿದೆಯೋ, ಇಲ್ಲವೋ ಎನ್ನುವಂತಹದ್ದರ ಪೂರ್ಣ ಸರ್ವೆ ನಡೆಸಿ, ಒಂದು ವರದಿಯನ್ನು ಕೊಡುವಂತಹ ಅವಶ್ಯಕತೆ ಇತ್ತು. ಆದರೆ, ಇದರಲ್ಲಿ ವೈರುಧ್ಯಗಳಿಂದ ಕೂಡಿರುವಂತಹ ವರದಿಗಳನ್ನು ರಾಜ್ಯ ಸರ್ಕಾರ ಕೊಟ್ಟಿದೆ. ಅಂದರೆ, ಬರ ಪರಿಹಾರದಲ್ಲಿ ಕೇಂದ್ರ ಸರ್ಕಾರದ ಯೋಜನೆಯ ಲಾಭವನ್ನು ರೈತರು ಪಡೆದುಕೊಳ್ಳಬೇಕಾಗಿತ್ತು. ರೈತರು ಪಡೆದುಕೊಳ್ಳುವಂತಹದ್ದರಲ್ಲಿ ಇವರು ಕೊಟ್ಟಿರುವಂತಹ ವರದಿಯಿಂದ ರೈತರಿಗೆ ತುಂಬಾ ಅನ್ಯಾಯವಾಗಿದೆ. ಇದರಲ್ಲಿ ಅವರು ಏನು ಕೊಟ್ಟಿದ್ದಾರೆ ಎಂದರೆ, 'Proposal in IU are not eligible for CEC compensation' ಎಂದು ಕೊಟ್ಟುಬಿಟ್ಟಿದ್ದಾರೆ. ಇದರಿಂದ ರೈತರಿಗೆ ತುಂಬಾ ಅನ್ಯಾಯವಾಯಿತು. ಅವರಿಗೆ ಫಸಲ್ ಭಿಮಾ ಯೋಜನೆಯ ಲಾಭ ಸಿಗದೇ ಇದ್ದಹಾಗೆ ಆಯಿತು. ಇದಕ್ಕೆ ಮಾನ್ಯ ಸಚಿವರು ವಿವರಣೆ ಕೊಡಬೇಕೆಂದು ಕೇಳುತ್ತೇನೆ.

**ಶ್ರೀ ಕೃಷ್ಣಭೈರೇಗೌಡ (ಕಂದಾಯ ಸಚಿವರು) (ಮುಜರಾಯಿ ಹೊರತುಪಡಿಸಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೆಲವು ರೈತರಿಗೆ ಬರ ಪರಿಹಾರ ಸಿಕ್ಕಿಲ್ಲ ಎನ್ನುವಂತಹ ವಿಷಯವನ್ನು ಹೇಳಿದ್ದಾರೆ. 38,78,525 ರೈತರಿಗೆ ಬರ ಪರಿಹಾರವನ್ನು ಕೊಟ್ಟಿದ್ದೇವೆ. ಹಿಂದೆ ಅತ್ಯಧಿಕವಾಗಿ ಕರ್ನಾಟಕದಲ್ಲಿ ಕೊಟ್ಟಿದ್ದು. ರೆಕಾರ್ಡ್‌ನಲ್ಲಿ ಇಲ್ಲಿಯವರೆಗೂ 23,42,667 ರೈತರಿಗೆ ಮಾತ್ರ ಬರ ಪರಿಹಾರ ಸಿಕ್ಕಿರುವುದು. ಹಿಂದಿನ ಕಳೆದ 4 ವರ್ಷಗಳನ್ನು ನೋಡಿದಾಗ 14,41,040 ರೈತರಿಗೆ ಅತ್ಯಧಿಕವಾಗಿ ಕೊಟ್ಟಿರುವುದು. ಈ ಹಿಂದೆ 23,42,667 ರೈತರಿಗೆ ಕೊಟ್ಟಿದ್ದು.

ಈ ಬಾರಿ ನಾವು 38,78,525 ರೈತರಿಗೆ ಕೊಟ್ಟಿದ್ದೇವೆ. ಹಿಂದಿನ ಯಾವುದೇ ವರ್ಷಕ್ಕೆ ನೀವು ಹೋಲಿಕೆ ಮಾಡಿದಾಗ ಬಹುತೇಕವಾಗಿ ಸುಮಾರು ಡಬಲ್ ಸಂಖ್ಯೆಯಲ್ಲಿ ರೈತರಿಗೆ ಬರ ಪರಿಹಾರವನ್ನು ತಲುಪಿಸುವಂತಹ ಕೆಲಸವನ್ನು ಮಾಡಿದ್ದೇವೆ. ಯಾವ ಆಧಾರದ ಮೇಲೆ ಕೊಟ್ಟಿದ್ದೇವೆ ಎಂದರೆ, ನಾವು ಬೆಳೆ ಸಮೀಕ್ಷೆ ಎಂದು ಮಾಡುತ್ತೇವೆ. ಅದನ್ನು ಈಗ ಮೊಬೈಲ್ ಆಪ್ ನಲ್ಲಿ ಡಿಜಿಟಲ್‌ನಲ್ಲಿ ಮಾಡುತ್ತೇವೆ. ಅವರ ಜಮೀನಿಗೆ ಹೋಗಿ ಬೆಳೆ ಇಟ್ಟಿದ್ದಾರೆಯೇ, ಇಲ್ಲವೇ ಎಂದು ನೋಡುತ್ತೇವೆ. ಆ ಬೆಳೆಯನ್ನು ಯಾರ್ಯಾರು ಇಟ್ಟಿದ್ದಾರೆ, ಬೆಳೆ ಇಟ್ಟು ಹಾನಿಯಾಗಿದೆ ಎಂದು ಅವರೆಲ್ಲರಿಗೂ ಕೂಡ ಪರಿಹಾರವನ್ನು ಕೊಟ್ಟಿದ್ದೇವೆ. ಶೇಕಡಾ 33 ಕ್ಕಿಂತ ಹೆಚ್ಚು ಬೆಳೆ ಹಾನಿಯಾದಂತವರಿಗೆಲ್ಲರಿಗೂ ಪರಿಹಾರವನ್ನು ಕೊಟ್ಟಿದ್ದೇವೆ. ಎರಡನೆಯದು, ಉಪ ಪ್ರಶ್ನೆಯಲ್ಲಿ ಮಾನ್ಯ ಸದಸ್ಯರು ಕೇಳಿದ ಹಾಗೆ ನೀರಾವರಿ ಇರುವಂತಹ ಕಡೆ irrigated farmers ಎಂದು ಕೆಲವರಿಗೆ ಪರಿಹಾರ ಸಿಕ್ಕಿಲ್ಲ. ಎಲ್ಲಿ ನೀರಾವರಿ ಆಶ್ರಿತ ಜಮೀನು ಇದೆ, ಅಂತಹದ್ದರಲ್ಲೂ ಕೂಡ ಯಾರಿಗೆ ನೀರು ಹರಿಸುವುದಕ್ಕೆ ಆಗಲಿಲ್ಲ, ಅಂತಹ ರೈತರಿಗೂ ಪರಿಹಾರವನ್ನು ಕೊಟ್ಟಿದ್ದೇವೆ. ನಾವು tail end ನಲ್ಲಿ ನೀರು ಹೋಗದೆ ಇರುವಂತಹ ವರದಿಯನ್ನು ತೆಗೆದುಕೊಂಡು ಯಾರಿಗೆ ನಾಲೆಯಲ್ಲಿ ನೀರು ಹರಿದಿಲ್ಲ, ಅಂತಹ ರೈತರಿಗೂ ಪರಿಹಾರವನ್ನು ಕೊಟ್ಟಿದ್ದೇವೆ. ಆದರೆ, ಅದರಲ್ಲಿ ಎಲ್ಲರಿಗೂ ಪರಿಹಾರವನ್ನು ಕೊಟ್ಟಿಲ್ಲ. ಏಕೆಂದರೆ, ನಾವು ಯಾವ ರೈತರ ಜಮೀನಿಗೆ ನೀರು ಹರಿಸಿದ್ದೇವೆ, ಅವರಿಗೆ ಕೊಟ್ಟಿಲ್ಲ. ಯಾರಿಗೆ ನೀರು ಹರಿಸುವುದಕ್ಕೆ ಆಗಲಿಲ್ಲ, ಅಂತಹವರಿಗೂ ಕೂಡ ಕೊಟ್ಟಿದ್ದೇವೆ ಹಾಗೂ ಬಹುವಾರ್ಷಿಕ ತೋಟಗಾರಿಕಾ ಬೆಳೆಗಳಿಗೂ ಕೊಟ್ಟಿದ್ದೇವೆ. ಇದೆಲ್ಲಾ ಹೊರತುಪಡಿಸಿ, ಈಗ 38,78,525 ರೈತರಿಗೆ ಅಲ್ಲದೆ, ಕರ್ನಾಟಕದಲ್ಲಿ ಮೊದಲನೇ ಬಾರಿ ಇಲ್ಲಿಯವರೆಗೂ ಯಾವ ವರ್ಷವೂ ಕೊಟ್ಟಿರಲಿಲ್ಲ. ಜೀವನೋಪಾಯ ನಷ್ಟಕ್ಕೆ ಪರಿಹಾರ, 'gratuitous relief for loss of livelihood' ಎಂದು ಹೇಳಿ, ರೂ.531 ಕೋಟಿಗಳನ್ನು ಸುಮಾರು 17,80,000 ರೈತ ಕುಟುಂಬಗಳಿಗೆ ಪಾವತಿ ಮಾಡುವಂತಹದ್ದು ಕೂಡ ಈಗ ಚಾಲ್ತಿಯಲ್ಲಿ ಇದೆ. ಇದೆಲ್ಲಾ ಸೇರಿಸಿದರೆ ಈ ವರ್ಷ ಒಟ್ಟು 4,047 ಕೋಟಿ ರೈತರಿಗೆ ಪರಿಹಾರವಾಗಿ ಕೊಟ್ಟಿದ್ದೇವೆ ಅಥವಾ ಪೇಮೆಂಟ್ ಚಾಲ್ತಿಯಲ್ಲಿ ಇದೆ. ಇಷ್ಟು ಮಾಹಿತಿ ಇದೆ.

ಇನ್ನು ಮಾನ್ಯ ಸದಸ್ಯರು ಹೇಳುವಂತಹದ್ದೇನೆಂದರೆ, ಬೆಳೆ ವಿಮೆ ಪಡೆದುಕೊಳ್ಳುವುದಕ್ಕೆ ಇನ್‌ಶೂರೆನ್ಸ್‌ಗೆ ತೊಂದರೆಯಾಗಿದೆ ಎಂದು ಹೇಳಿದರು. ಇದರಲ್ಲಿ ಏನಾಗಿತ್ತೆಂದರೆ, ಕೇಂದ್ರ ಸರ್ಕಾರ ಗೊತ್ತಿದ್ದೋ, ಗೊತ್ತಿಲ್ಲದೆಯೋ, ಯಾರು ಬೆಳೆ ಪರಿಹಾರ ಪಡೆದುಕೊಳ್ಳುತ್ತಾರೆ, ಅವರಿಗೆ ಇನ್‌ಶೂರೆನ್ಸ್ ಕೊಡುವ ಹಾಗಿಲ್ಲ ಎಂದು ಕೇಂದ್ರ ಸರ್ಕಾರದ ಮಾನದಂಡದಲ್ಲಿ Drought Manual ನಲ್ಲಿ ಸೇರಿಸಿಬಿಟ್ಟಿದ್ದರು. ಕಳೆದ ವರ್ಷ ಕೇಂದ್ರ ಸರ್ಕಾರದ ಸಭೆಗೆ ಮಾನ್ಯ ಗೃಹ ಮಂತ್ರಿಗಳನ್ನು ಕರೆದಿದ್ದರು. ನಾನು ಆ ಸಭೆಗೆ ಹೋಗಿ, ಈ ರೀತಿ ಇದೆ ನೋಡಿ ಎಂದು ಹೇಳಿದೆ. ಬೆಳೆ ವಿಮೆಗೂ, ನಾವು ಕೊಡುವಂತಹ ಪರಿಹಾರಕ್ಕೂ ಯಾವುದೂ ಸಂಬಂಧ ಇಲ್ಲ. ಯಾರಿಗೆ ಬೆಳೆ ಪರಿಹಾರ ಕೊಡುತ್ತೇವೆ, ಅವರಿಗೆ ವಿಮಾ ಕಡಿತ ಮಾಡುವಂತಹದ್ದು ತಪ್ಪಾಗುತ್ತದೆ. ಇದು ವಿಮಾ ಕಂಪನಿಗೆ ದುರ್ಲಾಭ ಮಾಡಿಕೊಟ್ಟಂತಾಗುತ್ತದೆ ಎಂದು ಹೇಳಿದ ಕೂಡಲೇ ಕೇಂದ್ರ ಸರ್ಕಾರದವರು ಗಾಬರಿಯಾಗಿ ಇದು ಹೇಗಾಯಿತು

ಎಂದು ಹೇಳಿ ನಾವು ಅವರ ಗಮನಕ್ಕೆ ತಂದ ಮೇಲೆ ಕಳೆದ ವರ್ಷ ಅಕ್ಟೋಬರ್ ತಿಂಗಳಿನಲ್ಲಿ ಆ ಒಂದು ಸೆಕ್ಷನ್ ಅನ್ನು ಡಿಲೀಟ್ ಮಾಡಿದ್ದಾರೆ. ಅದನ್ನು ಕೇಂದ್ರ ಸರ್ಕಾರದವರೇ ಸೇರಿಸಿದ್ದು, ನಾವು ಅದನ್ನು ತೋರಿಸಿದ ಮೇಲೆ ಡಿಲೀಟ್ ಮಾಡಿದ್ದಾರೆ. ಆದ್ದರಿಂದ, ಈ ಹೆಸರಿನಲ್ಲಿ ಯಾರಾದರೂ ವಿಮೆ ಸಿಗುವುದನ್ನು ತಿರಸ್ಕಾರ ಮಾಡಿದ್ದರೆ, ಅದು ತಪ್ಪಾಗುತ್ತದೆ. ಅದನ್ನು ನಮ್ಮ ಗಮನಕ್ಕೆ ತೆಗೆದುಕೊಂಡು ಬನ್ನಿ. ಇದನ್ನು ಜಿಲ್ಲಾಧಿಕಾರಿಗಳ ಮುಖಾಂತರ ನಾವು ಸರಿಪಡಿಸುತ್ತೇವೆ. ಹಿಂದಿನ ವರ್ಷವಾಗಿದ್ದರೆ ಕೇಂದ್ರ ಸರ್ಕಾರ ಆ ಗೈಡ್‌ಲೈನ್ಸ್ ಅನ್ನು ಸೇರಿಸಿತ್ತು. ನಾವು ಅಧಿಕಾರಕ್ಕೆ ಬಂದ ಮೇಲೆ ಅವರ ಗಮನಕ್ಕೆ ತೆಗೆದುಕೊಂಡು ಬಂದು ಡಿಲೀಟ್ ಮಾಡಿಸಿದ್ದೇವೆ. ಈ ರೀತಿ ಏನಾದರೂ ಆಗಿದ್ದರೆ, ಅದನ್ನು ಸರಿಪಡಿಸುವಂತಹ ಕೆಲಸವನ್ನು ಈ ಸರ್ಕಾರ ಮಾಡುತ್ತದೆ.

**ಶ್ರೀ ಕೇಶವ ಪ್ರಸಾದ್.ಎಸ್.:-** ಮಾನ್ಯ ಸಭಾಪತಿಯವರೇ, ನನ್ನ ಒಂದು ಪ್ರಶ್ನೆಯೇನೆಂದರೆ, ಇವರು ಕೊಟ್ಟಿರುವಂತಹದ್ದರಲ್ಲಿ ರೂ.4,663 ಕೋಟಿಗಳನ್ನು ಕೇಂದ್ರ ಸರ್ಕಾರದ ಬೆಳೆ ಪರಿಹಾರಕ್ಕೆ ಕೇಳಿದ್ದರು. ಅದರಲ್ಲಿ ಕೇಂದ್ರ ಸರ್ಕಾರದಿಂದ ಬರ ಪರಿಹಾರಕ್ಕೆ ರೂ.3,454 ಕೋಟಿಗಳು ಬಂದಿವೆ. ಶೇಕಡಾ 74 ರಷ್ಟು ದುಡ್ಡು ಬಂದಿದೆ. ಇವರು interim ಆಗಿ ರೂ.2,000 ಹಣವನ್ನು ಕೊಟ್ಟಿದ್ದರು. ಆದರೆ, ಕೇಂದ್ರ ಸರ್ಕಾರದಿಂದ ಹಣ ಬಂದ ತಕ್ಷಣವೇ ರೂ.2,000 ಗಳನ್ನು ಕಡಿತಗೊಳಿಸಿ, ಇವರ ಹಣವನ್ನು ಇವರು ತೆಗೆದುಕೊಂಡು ಉಳಿದ ಹಣವನ್ನು disburse ಮಾಡಿದ್ದಾರೆ. ಇದು ಅನ್ಯಾಯವಾಗುತ್ತದೆ. ಈ ರೀತಿ ತೀವ್ರವಾಗಿ ಬರ ಇರುವಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಕೊಡುವಂತಹ ಅನುದಾನದ ಜೊತೆಗೆ ರಾಜ್ಯ ಸರ್ಕಾರವು ಕೂಡ ಕೈಜೋಡಿಸಬೇಕಾಗುತ್ತದೆ. ಹಾಗಾಗಿ, ತುಂಬಾ ಉದಾರವಾಗಿ ರಾಜ್ಯ ಸರ್ಕಾರ ಯೋಚನೆ ಮಾಡಬೇಕಾಗಿತ್ತು. ದೇಶದ ಬೆನ್ನೆಲುಬು ಎನ್ನುವಂತಹ ರೈತರಿಗೆ ಎಲ್ಲಾ ಸವಲತ್ತುಗಳನ್ನು ಸಿಗುವಂತಹದ್ದಕ್ಕೆ ಇವರು ಶಕ್ತಿ ಮೀರಿ ಹಣ ಕೊಡಬೇಕಾಗಿತ್ತು. ರಾಜ್ಯ ಸರ್ಕಾರ ಅನ್ಯಾಯ ಮಾಡಿದೆ ಎಂದು ನಾನು ಹೇಳುತ್ತೇನೆ.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೇ, ನಾವು ರಾಜ್ಯ ಸರ್ಕಾರದಿಂದ ಕೂಡ ಒಟ್ಟು 1,296 ಕೋಟಿಗಳನ್ನು ಖರ್ಚು ಮಾಡಿದ್ದೇವೆ. ಇದರ ಬಗ್ಗೆ ಉತ್ತರದಲ್ಲಿ ತಿಳಿಸಿದ್ದೇನೆ. ಇದರಲ್ಲಿ ರೈತರಿಗೆ ಕೊಡುವಂತಹ ಬಾಬತ್ತು ಸೇರಿದೆ. ಅದಲ್ಲದೆ, ಮೇವು, ಕುಡಿಯುವ ನೀರು ವ್ಯವಸ್ಥೆಗೆ ಸುಮಾರು ರೂ.85.00 ಕೋಟಿಗಳನ್ನು ಕೂಡ ನಾವು ಖರ್ಚು ಮಾಡಿದ್ದೇವೆ.

(ಮುಂದು)

(665) 24-07-2024 11-40 PK(KH)/VK (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೃಷ್ಣಭೈರೇಗೌಡ (ಮುಂದು):**

ಅದಲ್ಲದೇ ದೀರ್ಘಾವಧಿಯಲ್ಲಿ ಕೆಲವು ಬರ ಪರಿಹಾರ ಕಾಮಗಾರಿಗಳಿಗೂ ಕೂಡ ರೂ.200 ಕೋಟಿಗಳನ್ನು ಕೊಟ್ಟಿದ್ದೇವೆ. ಎಲ್ಲಾ ಸೇರಿದರೆ ರಾಜ್ಯ ಸರ್ಕಾರವು ರೂ.1,296 ಕೋಟಿಗಳನ್ನು ಕೊಟ್ಟಿದೆ. ಮಾನ್ಯ ಸದಸ್ಯರು ರಾಜ್ಯಸರ್ಕಾರದ ಕಡೆಗೆ ಬೆರಳು ಮಾಡಿ ಹೇಳುವಾಗ ನಾನು ಕೂಡ ಹೇಳಬೇಕಾಗುತ್ತದೆ. ತಮಗೆ ಗೊತ್ತಿರುವಂತೆ, ಕಳೆದ ವರ್ಷ ಆಂಧ್ರಪ್ರದೇಶದವರು ಬರ ಪರಿಹಾರ ಕೇಳಿ memorandum ಕೊಟ್ಟಿದ್ದರು. ಮಹಾರಾಷ್ಟ್ರದವರು ಬರ ಪರಿಹಾರ ಕೇಳಿ memorandum ಕೊಟ್ಟಿದ್ದರು. ಯಾರಿಗೂ ಒಂದು ರೂಪಾಯಿ ಸಹ ಸಿಕ್ಕಿಲ್ಲ. ಕರ್ನಾಟಕಕ್ಕೆ ಮಾತ್ರ ರೂ.3,454 ಕೋಟಿಗಳು ಸಿಕ್ಕಿದೆ. ಇದಕ್ಕೆ ಒಂದೇ ಕಾರಣವೇನೆಂದರೆ, ನಾವು ಸುಪ್ರೀಂಕೋರ್ಟ್‌ನ ಕದ ತಟ್ಟಿದ್ದರಿಂದ ನಮಗೆ ಬಂದಿತು. ಇಲ್ಲದಿದ್ದರೆ, ಕಳೆದ ವರ್ಷ ಬರಗಾಲದ ಪರಿಹಾರವು ಕೇಂದ್ರಸರ್ಕಾರದಿಂದ ಯಾವ ರಾಜ್ಯಕ್ಕೂ ಸಿಕ್ಕಿಲ್ಲ. ಆಂಧ್ರಪ್ರದೇಶಕ್ಕೂ zero, ಮಹಾರಾಷ್ಟ್ರಕ್ಕೂ zero. ಅವರಿಗೆ ಕೊಟ್ಟೇ ಇಲ್ಲ. ನಾವು ಏನಾದರೂ ಸುಪ್ರೀಂ ಕೋರ್ಟ್‌ಗೆ ಹೋಗದೆ ಇದ್ದಿದ್ದರೆ ನಮಗೆ ನಯಾ ಪೈಸೆಯೂ ಬರುತ್ತಿರಲಿಲ್ಲ. ನಾವು ಒಬ್ಬರೇ ಸುಪ್ರೀಂ ಕೋರ್ಟ್‌ಗೆ ಹೋಗಿ ಪಡೆದುಕೊಂಡಿದ್ದು. ನಮ್ಮ ಒಂದೇ ರಾಜ್ಯಕ್ಕೆ ಪರಿಹಾರ ಸಿಕ್ಕಿರುವುದು. ಇದರ ಜೊತೆಗೆ ರಾಜ್ಯಸರ್ಕಾರವು ರೂ.1,296 ಕೋಟಿಗಳನ್ನು ಖರ್ಚು ಮಾಡಿದೆ. ಒಟ್ಟು ಎಲ್ಲವನ್ನೂ ಸೇರಿಸಿದರೆ ಬರ ವಿಷಯದಲ್ಲಿ ರೂ.4,132 ಕೋಟಿಗಳು ಖರ್ಚಾಗಿದೆ. ಇನ್ನು ಖರ್ಚಾಗುವಂತಹದ್ದು ಸ್ವಲ್ಪ ಇದೆ. ರಾಜ್ಯ ಮತ್ತು ಕೇಂದ್ರಸರ್ಕಾರ ಎಲ್ಲವೂ ಸೇರಿಸಿ ನಾವು ಮಾಡಿರುವಂತಹ ಕೆಲಸವಾಗಿದೆ. ನಾವು ಈ ಸಂದರ್ಭದಲ್ಲಿ ಏನೆಲ್ಲಾ ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಿದೆಯೋ, ಆ ಎಲ್ಲಾ ಕೆಲಸಗಳನ್ನು ಮಾಡಿದ್ದೇವೆ.

**ಸಭಾಪತಿಯವರು:-** ಮುಂದಿನ ಪ್ರಶ್ನೆಯನ್ನು ಕುಶಾಲಪ್ಪ ಎಂ.ಪಿ (ಸುಜಾ)ರವರು ಕೇಳಬೇಕು.

**ಶ್ರೀ ಕೇಶವ ಪ್ರಸಾದ್ ಎಸ್.:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಎಸ್.ಕೇಶವಪ್ರಸಾದ್‌ರವರೇ, ಇಲ್ಲ.

**ಶ್ರೀ ಕೇಶವ ಪ್ರಸಾದ್ ಎಸ್.:-** ಮಾನ್ಯ ಸಭಾಪತಿಯವರೇ, ತುಂಬಾ ಭೀಕರವಾದ ಬರ ಪರಿಸ್ಥಿತಿಗೆ ರಾಜ್ಯಸರ್ಕಾರ ಮಾಡಿರುವಂತಹದ್ದು ಅತ್ಯಲ್ಪವಾಗಿದೆ.

**ಸಭಾಪತಿಯವರು:-** ಮಾನ್ಯ ಎಸ್.ಕೇಶವಪ್ರಸಾದ್‌ರವರೇ, ನಾನು ಹೇಳುವುದನ್ನು ಕೇಳಿ. ಈಗಾಗಲೇ 11 ನಿಮಿಷಗಳಾಗಿವೆ. ಈಗ ಒಂದು ಪ್ರಶ್ನೆಯಾಯಿತು. ಮುಂದಿನ ಒಂದು ಗಂಟೆಯಲ್ಲಿ ಎಲ್ಲವನ್ನೂ ಕಟ್

ಮಾಡಿಬಿಡುತ್ತೇನೆ. 11 ನಿಮಿಷದಲ್ಲಿ 5-5 ನಿಮಿಷ ಎಂದು ಈಗಾಗಲೇ 11 ನಿಮಿಷವಾಯಿತು. ಇನ್ನು ಎಷ್ಟು ನಿಮಿಷಗಳನ್ನು ಕೊಡುತ್ತಾರೆ?

**ಶ್ರೀ ಕೇಶವ ಪ್ರಸಾದ್.ಎಸ್:-** ಮಾನ್ಯ ಸಭಾಪತಿಯವರೇ, ನಾನು ಕೊನೆಯ ವಾಕ್ಯ ಮಾತ್ರ ಹೇಳುತ್ತೇನೆ.

**ಸಭಾಪತಿಯವರು:-** ಮಾನ್ಯ ಎಸ್.ಕೇಶವಪ್ರಸಾದ್‌ರವರೇ, ಇಲ್ಲ.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸದಸ್ಯರೇ, ನೀವು ಕೊನೆಯ ವಾಕ್ಯ ಹೇಳಿದರೆ ನಾನು ಕೂಡ ಹೇಳಬೇಕಾಗುತ್ತದೆ. ನಮಗೆ ಬರ ಪರಿಹಾರವನ್ನು ಕೊಟ್ಟೇ ಇರಲಿಲ್ಲ ಎನ್ನುವುದನ್ನು ಮರೆಯಬೇಡಿ. ಸುಪ್ರೀಂ ಕೋರ್ಟ್‌ಗೆ ಹೋಗದೆ ಹೋಗಿದ್ದರೆ ಬರೀ ಚೆಂಬು ಸಿಗುತ್ತಿತ್ತು.. . .

**ಸಭಾಪತಿಯವರು:-** ಮಾನ್ಯ ಸಚಿವರೇ, ಬಿಡಿ. ಈಗ ಮಾತನಾಡಿ. ಮಾನ್ಯ ಎಸ್.ಕೇಶವ ಪ್ರಸಾದ್‌ರವರೇ, ಕುಳಿತುಕೊಳ್ಳಿ.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಎಷ್ಟು ಹೇಳಬೇಕೋ ಅಷ್ಟನ್ನು ಹೇಳಿದ್ದೇನೆ. ಅವರು ಕೊನೆಯ ವಾಕ್ಯ ಎಂದು ಹೇಳಿ ರಾಜಕೀಯ ಮಾಡುವುದಕ್ಕೆ ಹೋದರೆ... ಇವರು ಒಂದು ಪೈಸೆಯೂ ಕೊಟ್ಟಿರಲಿಲ್ಲ. ಸುಪ್ರೀಂಕೋರ್ಟ್‌ಗೆ ಹೋಗಿ . . .

**(ಗೊಂದಲ)**

**ಶ್ರೀ ಕೇಶವ ಪ್ರಸಾದ್.ಎಸ್:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ನಾನು allow ಮಾಡಿಲ್ಲ.

**(ಗೊಂದಲ)**

**ಶ್ರೀ ಕೇಶವ ಪ್ರಸಾದ್.ಎಸ್:-** ಮಾನ್ಯ ಸಭಾಪತಿಯವರೇ, ರಾಜ್ಯಸರ್ಕಾರದ ಹೊಣೆ ಇರುತ್ತದೆ. ಅದನ್ನು ತೆಗೆದುಕೊಳ್ಳಬೇಕು. **(ಗೊಂದಲ)** ಎನ್‌ಡಿಆರ್‌ಎಫ್.,ನಲ್ಲಿ ಕೊಟ್ಟಿರುವಂತಹ ಹಣವನ್ನು ನಾವು ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಅದನ್ನು ಕೇಂದ್ರ ಸರ್ಕಾರ ಕೊಟ್ಟಿರುವುದು.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೇ, ಆಂಧ್ರಪ್ರದೇಶಕ್ಕೆ zero, ಮಹಾರಾಷ್ಟ್ರಕ್ಕೆ zero. ನಾವು ಏನಾದರೂ ಸುಪ್ರೀಂಕೋರ್ಟ್‌ಗೆ ಹೋಗಿಲ್ಲ ಎಂದಿದ್ದರೆ, ನಮಗೂ ದೊಡ್ಡ zero ಆಗುತ್ತಿತ್ತು.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾವು ಪ್ರಶ್ನೆಯನ್ನು ಕೇಳಿದ್ದೇವೆ. ಮಾನ್ಯ ಸಚಿವರು ಉತ್ತರ ಕೊಡಲಿ. ಇದರಲ್ಲಿ ರಾಜಕೀಯ ಬೇಡ. ಏಕೆಂದರೆ, ಇದು ಸರ್ವರ ಪ್ರಶ್ನೆ. ಸರ್ವರ ಸಮಸ್ಯೆಗೆ ನಾವು ಪರಿಹಾರ ಕೊಡಬೇಕಾಗಿರುವಂತಹದ್ದು ಸರ್ಕಾರದ ಜವಾಬ್ದಾರಿ. ಪ್ರಶ್ನೆಗೆ ಉತ್ತರ ಕೊಡಿ. ಇದರಲ್ಲಿ ರಾಜಕೀಯ ಬೇಡ.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ವಿರೋಧಪಕ್ಷದ ನಾಯಕರೇ, ಆಯಿತು. ನಾವು ಪ್ರಶ್ನೆಗೆ ಉತ್ತರ ಕೊಟ್ಟಿದ್ದೇವೆ. ಇವರು ರಾಜ್ಯ ಸರ್ಕಾರವನ್ನು ದೂಷಣೆ ಮಾಡುವುದಕ್ಕೆ ಹೋದಾಗ ನಾವು ಹೇಳಬೇಕಾಗುತ್ತದೆ. ನಾವು ಉತ್ತರ ಕೊಟ್ಟಿದ್ದೇವೆ. ಅವರು ಕೊನೆಗೆ ಮತ್ತೆ ರಾಜಕೀಯ ಬೆರೆಸುವುದಕ್ಕೆ ಹೋದಾಗ ನಾವು ರಾಜಕಾರಣೀಗಳೇ. ಸನ್ಯಾಸಿಗಳಲ್ಲ.

**ಶ್ರೀ ಕೇಶವ ಪ್ರಸಾದ್.ಎಸ್:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಇದ್ಯಾವುದೂ ಕಡತಕ್ಕೆ ಹೋಗಬಾರದು. ಮಾನ್ಯ ಎಸ್.ಕೇಶವಪ್ರಸಾದ್‌ರವರೇ, ನೋಡಿ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಆದೇಶದಂತೆ ಮಾನ್ಯ ಸದಸ್ಯರಾದ ಎಸ್.ಕೇಶವಪ್ರಸಾದ್ ರವರು ಮಾತನಾಡಿರುವುದನ್ನು ನಡವಳಿಯಲ್ಲಿ ದಾಖಲಿಸಿರುವುದಿಲ್ಲ)**

**(ಗೊಂದಲ)**

**ಸಭಾಪತಿಯವರು:-** ಇದು ಪ್ರಶ್ನೋತ್ತರ ಅವಧಿ. ಸದನವನ್ನು ಹೇಗೆ ನಡೆಸುವುದು? ಮಾನ್ಯ ಕುಶಾಲಪ್ಪನವರೇ, ಪ್ರಶ್ನೆಯನ್ನು ಕೇಳಿ.

**ಶ್ರೀ ಎಂ.ಎಲ್.ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರಕ್ಕೂ ರೈತರ ಬಗ್ಗೆ ಕಾಳಜಿ ಇರಬೇಕಲ್ಲವೇ?

**ಸಭಾಪತಿಯವರು:-** ಮಾನ್ಯ ಎಂ.ಎಲ್.ಅನಿಲ್ ಕುಮಾರ್‌ರವರೇ, ಕುಳಿತುಕೊಳ್ಳಿ.

**ಪ್ರಶ್ನೆ ಸಂಖ್ಯೆ: ೯೫೦**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು.

**ಸಭಾಪತಿಯವರು:-** ದಯಮಾಡಿ, ಪ್ರಶ್ನೆ ಕೇಳುವವರು, ಉತ್ತರ ಹೇಳುವವರು ಎಲ್ಲರೂ ಸೂಕ್ಷ್ಮವಾಗಿ ಇರಬೇಕು.

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ನನ್ನ ಉಪ ಪ್ರಶ್ನೆಯೇನೆಂದರೆ, ಇವತ್ತು ಕೊಡಗು ಜಿಲ್ಲೆಯಲ್ಲಿ ಭೂ ಮಾಫಿಯಾ . . . ಏಕೆಂದರೆ, ಇವತ್ತು ಕಾಫಿ ತೋಟ, ಗದ್ದೆಗಳನ್ನು conversion ಮಾಡಿ, ಭೂ ಮಾಫಿಯಾದವರು ರಿಯಲ್ ಎಸ್ಟೇಟ್ ದಂಧೆ ಮಾಡುತ್ತಿದ್ದಾರೆ. ಹೊರ ರಾಜ್ಯದವರು ಐಷಾರಾಮಿ ವಿಲ್ಲಾಗಳನ್ನು ಕಟ್ಟಿ ಸೇಲ್ ಮಾಡುತ್ತಿದ್ದಾರೆ. ಅವರಿಗೆ ಒಂದು ಕೊಡಗಿನ ಪರಿಸರದ ಬಗ್ಗೆ ಯಾವುದೇ ಕಾಳಜಿ ಇರುವುದಿಲ್ಲ. ಈ ವರ್ಷ ಎಲ್ಲಾ conversion ಆಗಿ ಹವಾಮಾನ ಏರುಪೇರಾಗಿ ಇವತ್ತು ಮಳೆಯೇ ಸರಿಯಾದ ಕಾಲಮಿತಿಯಲ್ಲಿ ಬರುತ್ತಿಲ್ಲ. ಬೆಂಗಳೂರಿಗೆ ಇರಬಹುದು, ಮೈಸೂರಿಗೆ ಇರಬಹುದು. ಕುಡಿಯುವ ನೀರಿಗೆ ನಾವು ಬಹಳ ತೊಂದರೆಯನ್ನು ಅನುಭವಿಸಿದ್ದೇವೆ. ಕೊಡಗಿನಲ್ಲಿಯೂ ಕೆರೆ, ಬೋರ್‌ವೆಲ್‌ಗಳು ಬತ್ತಿ ಹೋಗಿ ನೀರಿಗಾಗಿ ಬಹಳ ಕಷ್ಟವನ್ನು ಅನುಭವಿಸುತ್ತಿದ್ದಾರೆ. ಆದ್ದರಿಂದ, conversion ಮಾಡುವುದನ್ನು, ಗದ್ದೆಗಳು ಭೂ ಪರಿವರ್ತನೆಗೊಂಡಿರುವುದಕ್ಕೆ ಒಂದು ಸಮರ್ಪಕವಾದ ಕಾನೂನು ತಿದ್ದುಪಡಿ ತರಬೇಕು. ಹಾಗೆಯೇ, ಇವತ್ತು ವಿಲೇಜ್ ಭಾಗದಲ್ಲಿ, ಪಂಚಾಯಿತಿ ಭಾಗದಲ್ಲಿ ಕಾನೂನುಬಾಹಿರವಾಗಿ ಲೇಔಟ್‌ಗಳನ್ನು ಮಾಡುತ್ತಿದ್ದಾರೆ. Agricultural land ಆಗಿ residential sites ಆಗಿ ರಿಜಿಸ್ಟರ್ ಮಾಡುತ್ತಾರೆ. ಅಲ್ಲಿ ಯಾವುದೇ ಮೂಲಸೌಕರ್ಯ ಇರುವುದಿಲ್ಲ. ಹಾಗೆಯೇ, ಕಿರಿದಾದ ರಸ್ತೆಗಳು, 8 ಅಡಿ ರಸ್ತೆ, 10 ಅಡಿ ರಸ್ತೆಗಳನ್ನು ಮಾಡುತ್ತಾರೆ. ಅವರು ಸೈಟ್‌ಗಳನ್ನು ತೆಗೆದುಕೊಂಡ ಮೇಲೆ ಮತ್ತೆ ಚುನಾಯಿತ ಪ್ರತಿನಿಧಿಗಳೇ strike ಅನ್ನು ಮಾಡುತ್ತಾರೆ. ಮಳೆ ಬಂದಾಗ ನೀರೆಲ್ಲಾ ಬ್ಲಾಕ್ ಆಗಿ ತೊಂದರೆಯನ್ನು ಅನುಭವಿಸುವಂತಾಗುತ್ತದೆ. ಆದ್ದರಿಂದ, ದಯವಿಟ್ಟು, ಮಾನ್ಯ ಸರ್ಕಾರದ ಗಮನಕ್ಕೆ ತಂದು ಕೊಡಗು ಜಿಲ್ಲೆಗೆ ಒಂದು ವಿಶೇಷವಾದ ಕಾನೂನು ತಿದ್ದುಪಡಿಯನ್ನು ತರಬೇಕೆಂದು ಒತ್ತಾಯ ಮಾಡುತ್ತೇನೆ.

**ಶ್ರೀ ಕೃಷ್ಣಭೈರೆಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕಳೆದ ವರ್ಷ ಕೂಡ ಇದೇ ಪ್ರಶ್ನೆಯನ್ನು ಇದೇ ಸದನದಲ್ಲಿ ಪ್ರಸ್ತಾಪಿಸಿದ್ದರು. ಅವತ್ತೂ ನಾನೇ ಉತ್ತರ ಕೊಟ್ಟಿದ್ದೇನೆ. ನನಗೆ ಅಂದು

ನಾನು ಕೊಟ್ಟಂತಹ ಉತ್ತರದ ಪ್ರತಿಯೊಂದು ಅಕ್ಷರವೂ ನನಗೆ ಜ್ಞಾಪಕದಲ್ಲಿ ಇದೆ. ಭಾವನೆಗಳಲ್ಲಿ ಹೇಳುವುದಾದರೆ, ಮಾನ್ಯ ಸದಸ್ಯರ ಭಾವನೆ, ನನ್ನ ಭಾವನೆ ಇಬ್ಬರದ್ದು ಒಂದೇ. ಆದರೆ, ನಾವು ಅಧಿಕೃತವಾಗಿ ಕೆಲಸ ಮಾಡುವಾಗ ನಮ್ಮ ಭಾವನೆಗಳನ್ನು ಬದಿಗಿಟ್ಟು ನಿಯಮಾನುಸಾರ ಮಾಡಬೇಕಾಗುತ್ತದೆ. 2018 ರಲ್ಲಿ ಭೂಕುಸಿತವಾದಾಗ ಆವತ್ತಿನ ಸರ್ಕಾರ ಎಲ್ಲಾ ಭೂ ಪರಿವರ್ತನೆಯನ್ನು ನಾವು arbitrary ಆಗಿ ನಿಲ್ಲಿಸಿಬಿಟ್ಟಿದ್ದೀವಿ. ಆಗ ಪೂರ್ತಿಯಾಗಿ conversion ಅನ್ನು ನಿಲ್ಲಿಸಿತ್ತು. 2018 ರಲ್ಲಿ ಕೊಡಗು ಜಿಲ್ಲೆಯಲ್ಲಿ ಬ್ಯಾನ್ ಮಾಡಿದ್ದೆವು. ಆದಾದ ನಂತರ ಅಲ್ಲಿನ ಜನ ಪ್ರತಿನಿಧಿಗಳ ಒತ್ತಡ ಬಂದಿತ್ತು. ಇದೇ ಮಾತನ್ನು ನಾನು ಕಳೆದ ಬಾರಿಯೂ ಹೇಳಿದ್ದೇನೆ. ಇದಾದ ಮೇಲೆ 2019 ರಲ್ಲಿ ಇದಕ್ಕೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಒಂದು ಸಮಿತಿಯನ್ನು ಮಾಡಿ, ಆ ಸಮಿತಿಯಲ್ಲಿ ಕೇಂದ್ರ ಸರ್ಕಾರದ ಭೂವಿಜ್ಞಾನ ವೈಜ್ಞಾನಿಕ ಸರ್ವೇಕ್ಷಣಾ ಇಲಾಖೆಯಲ್ಲಿನ ಒಬ್ಬ ಅಧಿಕಾರಿಯನ್ನು ಮತ್ತು ಉಳಿದ ನಮ್ಮ ಅಧಿಕಾರಿಗಳನ್ನು ಹಾಕಿ ಒಂದು ಸಮಿತಿಯನ್ನು ಮಾಡಿದ್ದೆವು. ಹಿಂದೆ ಕಳೆದ ಸರ್ಕಾರದಲ್ಲಿಯೇ ಈ ರೀತಿಯಾಗಿ ಈ ಕಮಿಟಿಯವರು verify ಮಾಡಿ conversions ಮಾಡಬೇಕೆಂದು ತೀರ್ಮಾನವಾಯಿತು. ತಾವು ಸಹ ಆಗ ಚುನಾಯಿತ ಪ್ರತಿನಿಧಿಗಳೇ ಇದ್ದಿರಿ. ಆಗ ಮಾನ್ಯ ಕುಶಾಲಪ್ಪ ಎಂ.ಪಿ (ಸುಜಾ) ರವರು ಎಂಎಲ್‌ಸಿ., ಆಗಿದ್ದರಲ್ಲವೇ?

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ):-** ಮಾನ್ಯ ಸಚಿವರೇ, ನಮ್ಮ ಬ್ರದರ್.

**ಶ್ರೀ ಕೃಷ್ಣಭೈರೆಗೌಡ:-** ಮಾನ್ಯ ಕುಶಾಲಪ್ಪ ಎಂ.ಪಿ. (ಸುಜಾ)ರವರೇ, ಅವರು ಎಂಎಲ್‌ಎ., ಇದ್ದರಲ್ಲವೇ?

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ):-** ಮಾನ್ಯ ಸಚಿವರೇ, ಇನ್ನೊಬ್ಬರು ಬ್ರದರ್.

**ಶ್ರೀ ಕೃಷ್ಣಭೈರೆಗೌಡ:-** ಮಾನ್ಯ ಸಭಾಪತಿಯವರೇ, ಇವರ ಇನ್ನೊಬ್ಬರು ಬ್ರದರ್. Sorry... ಸರಿ. ಆ ಸಂದರ್ಭದಲ್ಲಿ ಜನಪ್ರತಿನಿಧಿಗಳ ಒತ್ತಡದ ಮೇಲೆಯೇ ಇಂದಿನ ಸರ್ಕಾರ ಇದನ್ನು ಅವಕಾಶ ಮಾಡಿಕೊಟ್ಟಿದೆ. ಇದು ಒಂದು ಭಾಗವಾದರೆ, ಎರಡನೇ ಭಾಗ ನಾವು ಗಮನಿಸಬೇಕಾಗಿರುವುದೇನೆಂದರೆ, ಕಾನೂನಿನಲ್ಲಿ ಭೂ ಪರಿವರ್ತನೆಗೆ ಅವಕಾಶ ಇದೆ. ಅದನ್ನು ನಾನು deny ಮಾಡುವುದಕ್ಕೂ ಆಗುವುದಿಲ್ಲ. ಅದರ ಮೇಲೆ ಸ್ವಲ್ಪ checks and balances ಅನ್ನು ಇಟ್ಟಿದ್ದೇವೆ. ಆದರೆ, ತಾವು ಹೇಳುವಂತಹದ್ದೆಲ್ಲವೂ ಕೂಡ ಒಪ್ಪುವಂತಹ ಕೆಲಸಗಳೇ ಆಗಿದೆ. ವಾಸ್ತವವಾಗಿ, ಅವೈಜ್ಞಾನಿಕವಾಗಿ ಇವತ್ತು ಈ ರೀತಿಯಾಗುತ್ತಿರುವುದರಿಂದ, ಬಹಳ ಅನಾಹುತಗಳು ಎಡೆ ಮಾಡಿಕೊಡುವಂತಹದ್ದು ಆಗಿದೆ. ನೆನ್ನೆಯ ದಿವಸವೂ ಕೂಡ ನಾವು ಇಲ್ಲಿಯೇ ಚರ್ಚೆ ಮಾಡಿದ್ದೇವೆ. ಇದೇ ಸದನದಲ್ಲಿಯೇ ನೆನ್ನೆ ಮಾಡಿದ ಚರ್ಚೆ ಮುಂದುವರೆದಿರುವುದೇ ಇವತ್ತು ಮಾತನಾಡುತ್ತಿದ್ದೇವೆ. ಮಾನ್ಯ ಸದಸ್ಯರು ಇದಕ್ಕೆ ಒಂದು ವಿಶೇಷವಾದ ತಿದ್ದುಪಡಿ ಮಾಡಬೇಕೆಂದು ಹೇಳಿದ್ದಾರೆ. ಇದನ್ನು ಮಾಡಿದರೂ ಕೂಡ ಅಲ್ಲಿ ಬಹಳ

ವಿರೋಧ ಬರುತ್ತದೆ. ಏಕೆಂದರೆ, ಮಲೆನಾಡಿನಲ್ಲಿ ಭೂಮಿ ಇಟ್ಟುಕೊಂಡಿರುವವರು ದೇಶದ ಎಲ್ಲಾ ಕಾನೂನುಗಳನ್ನು ತಂದು ನಮ್ಮ ಮೇಲೆ ಹಾಕುತ್ತೀರಿ ಎಂದು ಮಾತನಾಡುವಂತಹವರು ಕೂಡ ಇದ್ದಾರೆ. ನಾವು ಭೂಮಿಯನ್ನು ಕಳೆದುಕೊಳ್ಳುವಂತಹವರು. ನಮ್ಮ ಮೇಲೆ ಪರಿಸರ ಕಾನೂನು, ನಮ್ಮ ಮೇಲೆ ಅರಣ್ಯ ಕಾನೂನು, ನಮ್ಮ ಮೇಲೆ ನಿರಂತರವಾಗಿ ಎಲ್ಲಾ ರೀತಿಯ special rules, ಕಸ್ತೂರಿರಂಗನ್ ವರದಿ ಇವೆಲ್ಲಾ ನಮ್ಮ ಮೇಲೆಯೇ ಹೊರೆ ಬೀಳುತ್ತಿವೆ ಎಂದು ಒಂದು ವಾದವೂ ಕೂಡ ಇದೆ. ಆ ವಾದವನ್ನು ನಾವು ಮರೆಯುವುದಕ್ಕೆ ಆಗುವುದಿಲ್ಲ. ಹಾಗಂತ ಹೇಳಿ ನೀವು ಭಾವನಾತ್ಮಕವಾಗಿ ಹೇಳಿರುವುದನ್ನು ನಾನು ಒಪ್ಪುತ್ತೇನೆ. ಈ ಎರಡನ್ನು ನಾವು balance ಮಾಡಬೇಕಾಗುತ್ತದೆ. ಖಂಡಿತವಾಗಿಯೂ ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ. ನಮ್ಮ ಇಂಧನ ಸಚಿವರು ಮಲೆನಾಡು ಪ್ರದೇಶದಲ್ಲಿ ಏನಾದರೂ ಮಾಡಬೇಕೆಂದು ಹೇಳುತ್ತಾರೆ. ಅವರ ಒತ್ತಡವೂ ನನ್ನ ಮೇಲೆ ಯಾವಾಗಲೂ ಇದೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಒಂದು ಸಾರಿ ತಿಳಿದುಕೊಳ್ಳಬೇಕು. ಯಾರು ಪ್ರಶ್ನೆ ಕೇಳುತ್ತಾರೋ, ಅವರಿಗೆ ಅವಕಾಶ ಕೊಡುತ್ತೇನೆ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಸಿ.ಟಿ.ರವಿಯವರೇ, ಕುಳಿತುಕೊಳ್ಳಿ.

**ಶ್ರೀ ಕೃಷ್ಣಭೈರೆಗೌಡ:-** ಮಾನ್ಯ ಸದಸ್ಯರೇ, ಖಂಡಿತವಾಗಿಯೂ ವಿಚಾರ ಮಾಡಿ ನೋಡೋಣ. ಎರಡನ್ನು ನಾವು ತೀರಾ restrict ಮಾಡಿದರೆ, ಅದರ ಹೆಸರಿನಲ್ಲಿ ವಸೂಲಿ, ದಂಧೆ, ಶೋಷಣೆಗಳು ಕೂಡ ಆರಂಭವಾಗುತ್ತದೆ. ಈ ಎಲ್ಲಾ ಆಯಾಮಗಳಲ್ಲಿಯೂ ಯೋಚನೆ ಮಾಡೋಣ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಚಿವರೇ, . . .

**ಸಭಾಪತಿಯವರು:-** ಮಾನ್ಯ ಸಿ.ಟಿ.ರವಿಯವರೇ, ಕುಳಿತುಕೊಳ್ಳಿ. ನಡುನಡುವೆ ಎದ್ದು ಮಾತನಾಡಬೇಡಿ.

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ):-** ಮಾನ್ಯ ಸಭಾಪತಿಯವರೇ, ನಾನು ಪೂರ್ತಿಯಾಗಿ ದೊಡ್ಡ ದೊಡ್ಡ ಏರಿಯಾಗಳನ್ನು ನಿಲ್ಲಿಸಿ, ಒಂದು ಎಕರೆ, ಅರ್ಧ ಎಕರೆಯಷ್ಟು conversion ಗೆ ಕೊಡುವಂತಹ ಒಂದು ಕಾನೂನು ತಿದ್ದುಪಡಿಯನ್ನು ತೆಗೆದುಕೊಂಡು ಬರಬೇಕೆಂದು ನನ್ನ ಒತ್ತಾಯ.

**ಶ್ರೀ ಕೃಷ್ಣಭೈರೆಗೌಡ:-** ಮಾನ್ಯ ಸದಸ್ಯರೇ, ಒಂದು ಎಕರೆ, ಅರ್ಧ ಎಕರೆ conversion ಮಾಡಬಾರದು ಎಂದು ಹೇಳುತ್ತಿದ್ದೀರಿಯೇ?

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ):-** ಮಾನ್ಯ ಸಚಿವರೇ, conversion ಮಾಡಿ ಎಂದು ಹೇಳುತ್ತಿದ್ದೇನೆ. 100 ಎಕರೆ, 50 ಎಕರೆ . . .

**ಶ್ರೀ ಕೃಷ್ಣಭೈರೆಗೌಡ:-** ಮಾನ್ಯ ಸಭಾಪತಿಯವರೇ, ಅದು ಇನ್ನೂ ಅನಾಹುತಕ್ಕೆ ದಾರಿ ಮಾಡಿಕೊಡುತ್ತದೆ. ಪೀಸ್ ಪೀಸ್ ಮಾಡುವುದಕ್ಕೆ ಹೋದರೆ ಯಾವ norms maintain ಮಾಡುವುದಿಲ್ಲ. ಒಂದು ಎಕರೆ ಮೇಲೆ ಇದ್ದರೆ ಇಷ್ಟು setback ಬಿಡಬೇಕು, ರಸ್ತೆಗೆ ಬಿಡಬೇಕು, ಪಾರ್ಕ್‌ಗೆ ಬಿಡಬೇಕು, ಅರ್ಧ ಎಕರೆಗೆ ಹೋದರೆ ಯಾವ ರೂಲ್ಸ್ ಫಾಲೋ ಆಗುವುದಿಲ್ಲ. ಆದ್ದರಿಂದ, ಇನ್ನು ತೊಂದರೆ ಆಗಿಬಿಡುತ್ತದೆ. ಸ್ಥಳೀಯರು ಸ್ವಂತ ಮನೆ ಕಟ್ಟುವುದಕ್ಕೆ ಏನು ಬೇಕಾದರೂ relaxation ಕೇಳಿ, ಅದನ್ನು ನಾವು ಮಾಡಲೇ ಬೇಕಾಗುತ್ತದೆ. ಅದನ್ನು ಬಿಟ್ಟು ಅರ್ಧ ಎಕರೆ ತುಂಡು conversion ಮಾಡುವುದಕ್ಕೆ ಹೋದರೆ ಬಹುಶಃ ಇನ್ನು ತೊಂದರೆಯಾಗಬಹುದು. ಇದರ ಬಗ್ಗೆ ವಿಚಾರ ಮಾಡೋಣ.

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ):-** ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರಿಗೆ ಏನು ಹೇಳುತ್ತೇನೆ ಎಂದರೆ, ಈಗ ಒಬ್ಬರ ಹತ್ತಿರ ಹತ್ತು ಎಕರೆ ಜಾಗ ಇರುತ್ತದೆ. ಆ ಹತ್ತು ಎಕರೆ ಜಾಗದಲ್ಲಿ ಒಂದು ಎಕರೆಗೆ ಮಾತ್ರ conversion ಗೆ ಅವಕಾಶ ಕೊಡಿ. ಐವತ್ತು ಎಕರೆ, ನೂರು ಎಕರೆ ಜಾಗವನ್ನು conversion ಗೆ ಕೊಟ್ಟರೆ ಎಲ್ಲಾ ಬರಡು ಭೂಮಿಯಾಗುತ್ತದೆ. ಇದರಿಂದ, ಈಗಾಗಲೇ ಹವಾಮಾನ ಏರುಪೇರಾಗಿದೆ.

(ಮುಂದು)

(666) 24-7-2024 11.50 ಡಿಎಸ್-ವಿಕೆ (ಸಭಾಪತಿಯವರ ಉಪಸ್ಥಿತಿ)

**ಪ್ರಶ್ನೆ ಸಂಖ್ಯೆ: 927**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನಾನು ಇದೇ ಪ್ರಶ್ನೆಯನ್ನು ದಿನಾಂಕ 28-12-2022 ರಂದು ಕೇಳಿದ್ದೆ. ಅವತ್ತು ಶ್ರೀಮತಿ ಶಶಿಕಲಾ ಜೊಲ್ಲೆಯವರು ಸಚಿವರಾಗಿದ್ದರು. ಅವರ ಪರವಾಗಿ ಮಾನ್ಯ ವಿ.ಸೋಮಣ್ಣನವರು ಉತ್ತರ ಕೊಟ್ಟಿದ್ದಾರೆ. ಅವರು ಉತ್ತರ ಕೊಡುತ್ತಾ ಹೇಳಿದರು: 'ಈ ಉತ್ತರ ನನಗೆ ಸಮಾಧಾನವಿಲ್ಲ, ನಾನು ತಕ್ಷಣ ಅಧಿಕಾರಿಗಳನ್ನು ಕರೆದು ಮಾತನಾಡಿ ಸರಿ ಮಾಡುತ್ತೇನೆ' ಎಂದು ಹೇಳಿದರು. ಅದು ಆಗಿ ಎರಡು ವರ್ಷಗಳಾದರೂ ಇವತ್ತಿಗೂ ಕೂಡ ಯಥಾಸ್ಥಿತಿ ಇದೆ. ಒಂದು ದೇವಸ್ಥಾನದಲ್ಲಿ ಆಹಾರ ಖರೀದಿ ಮಾಡಬೇಕಾದೆ ಪ್ರತಿ 6 ತಿಂಗಳಿಗೆ ಒಂದು ಸಲ ಇ-ಟೆಂಡರ್ ಕರೆಯಬೇಕು ಎನ್ನುವಂತಹ ಇವರದ್ದೇ ಆದಂತಹ ಕಾನೂನು ಇದೆ. ಇವರು ಎರಡು ವರ್ಷಗಳಿಂದ ಟೆಂಡರ್ ಕರೆಯುವುದಿಲ್ಲ. ಈಗ ಟೆಂಡರ್ ಕರೆದು 11 ತಿಂಗಳುಗಳು ಆಗಿವೆ. ಈಗ ನಾನು ಪ್ರಶ್ನೆಯನ್ನು ಕೇಳಿದಾಗ ನಿನ್ನೆಯೋ, ಮೊನ್ನೆಯೋ ಓಪನ್ ಮಾಡಿದ್ದಾರೆ. ಇನ್ನು ಆರ್ಡರ್ ಕೊಟ್ಟಿಲ್ಲ. ಇದರ ಬಗ್ಗೆ ಮಾನ್ಯ ಸಚಿವರು ನನಗೆ ಹೇಳಬೇಕು. ಏಕೆಂದರೆ, ನಾನು ಪ್ರತಿ ಸಲ ಇದೇ ಪ್ರಶ್ನೆಯನ್ನೇ ಕೇಳುತ್ತಿರಬೇಕೇ? ಮಂಡಳಿಯವರಿಂದ ದೇವಸ್ಥಾನದಲ್ಲಿ ಈ ರೀತಿ ಮಾಡಬೇಕೆಂದು ಇನ್‌ಸ್ಟ್ರಕ್ಷನ್ ಇದೆಯೇ? ಅದು ನಮಗೆ ಗೊತ್ತಾಗುವುದಿಲ್ಲ. ಅಧಿಕಾರಿಗಳು ಟೆಂಡರ್ ಕರೆದು 6-7 ತಿಂಗಳುಗಳಾಗಿವೆ. ಯಾರೋ ಮಹಾನುಭಾವ ಟೆಂಡರ್ ಕೂಡ ಓಪನ್ ಮಾಡಿಲ್ಲ. ನಾನು ಕಮೀಷನರ್‌ರವರಿಂದ ಜಿಲ್ಲಾಧಿಕಾರಿಗಳಿಗೆ ಫೋನ್ ಮಾಡಿಸಿದ್ದೆ. 'ಮಾಡುತ್ತೇನೆ' ಎಂದು ಹೇಳುತ್ತಾರೆ, ಆದರೆ ಆ ಟೆಂಡರ್ ಓಪನ್ ಮಾಡಿಲ್ಲ. ಸರ್ಕಾರದ ಮುಜರಾಯಿ ದೇವಸ್ಥಾನಗಳಲ್ಲಿ ಇಷ್ಟು ಅನ್ಯಾಯವಾಗಬಾರದು. ಕಳೆದ ಸಲ ಮಾನ್ಯ ವಿ.ಸೋಮಣ್ಣರವರು ಉತ್ತರ ಕೊಟ್ಟಿರುವುದು ನನಗೆ ಸಮಾಧಾನವಿಲ್ಲ, ನಾನು ತಕ್ಷಣ ಸರಿ ಮಾಡುತ್ತೇನೆಂದು ಹೇಳಿದರು. ಇನ್ನು ಎರಡು ವರ್ಷ ಬಿಟ್ಟು ಅದೇ ಪ್ರಶ್ನೆ ಕೇಳುವ ಪರಿಸ್ಥಿತಿ ಬಂದಿರುವುದಕ್ಕೆ ನನಗೆ ಬಹಳ ಸಂಕೋಚವಾಗುತ್ತಿದೆ.

**ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಮತ್ತು ಮುಜರಾಯಿ ಸಚಿವರು):-** ಮಾನ್ಯ ಸಭಾಪತಿಯವರೇ, ದಿನಾಂಕ: 15-11-2023 ರಂದು ಟೆಂಡರ್ ಕರೆದಿದ್ದಾರೆ. 15 ದಿವಸಗಳಲ್ಲಿ ಟೆಂಡರ್ ಓಪನ್ ಮಾಡಿ ವರ್ಕ್ ಆರ್ಡರ್ ಕೊಡಬೇಕಾಗಿತ್ತು. ವರ್ಕ್ ಆರ್ಡರ್ ಕೊಡದಿರುವುದು ತಪ್ಪು. ಯಾವ ಅಧಿಕಾರಿ ವರ್ಕ್ ಆರ್ಡರ್ ಕೊಟ್ಟಿಲ್ಲವೋ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸೂಚಿಸುತ್ತೇನೆ ಎಂದು ನಾನು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಇ-ಟೆಂಡರ್ ಅನ್ನು ಯಾವಾಗ ಪ್ರಾರಂಭ ಮಾಡುತ್ತಾರೆ?

**ಶ್ರೀ ರಾಮಲಿಂಗಾರೆಡ್ಡಿ:-** ಮಾನ್ಯ ಸಭಾಪತಿಯವರೇ, 15-20 ದಿವಸಗಳಲ್ಲಿ ಮಾಡುತ್ತೇವೆ. ಟೆಂಡರ್ ಕರೆದು ಏಕೆ ಟೆಂಡರ್ ಕೊಟ್ಟಿಲ್ಲ ಅವರ ಮೇಲೂ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮಂಜುನಾಥ ಭಂಡಾರಿಯವರು ಕೂಡ ಇದರ ಮೇಲೆ ಪತ್ರವನ್ನು ಬರೆದಿದ್ದಾರೆ.

**ಶ್ರೀ ರಾಮಲಿಂಗಾರೆಡ್ಡಿ:-** ಮಾನ್ಯ ಸಭಾಪತಿಯವರೇ, ಟೆಂಡರ್ ಪ್ರಕ್ರಿಯೆ ಮುಗಿದಿದೆ. ಯಾರು ಕಾನೂನು ಚೌಕಟ್ಟಿನಲ್ಲಿ ಯಾರು ಕಡಿಮೆ ದರ ನಿಗದಿ ಮಾಡಿರುತ್ತಾರೆ ಅವರಿಗೆ ಕೊಡುತ್ತೇವೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಈ ದೇವಸ್ಥಾನದಿಂದ ಕೇವಲ 2-3 ಶಾಲೆಗಳಿಗೆ ಮಾತ್ರ ಕೊಡುತ್ತಾರೆ. ಎಲ್ಲಾ ಶಾಲೆಗಳಿಗೆ ಏಕೆ ಕೊಡುವುದಿಲ್ಲ? ಇದೇ ದೇವಸ್ಥಾನದಿಂದ ಸುತ್ತಮುತ್ತ ನೂರಾರು ಗ್ರಾಮಗಳಿಗೂ ಕೊಡಿ. ದೇವಸ್ಥಾನದ ಹಣವನ್ನು ಬೇರೆ ಕಡೆ ಖರ್ಚು ಮಾಡುವ ಹಾಗಿಲ್ಲ.

**ಶ್ರೀ ರಾಮಲಿಂಗಾರೆಡ್ಡಿ:-** ಮಾನ್ಯ ಸಭಾಪತಿಯವರೇ, ನಾನು ಯು.ಬಿ.ವೆಂಕಟೇಶ್‌ರವರ ಜೊತೆ ಮಾತನಾಡುತ್ತೇನೆ. ಅವರು ಈಗ ಕೇಳುತ್ತಿರುವುದು ಪ್ರಶ್ನೆಯಲ್ಲಿ ಇಲ್ಲ. ನಾನು ಆಮೇಲೆ ಅವರ ಜೊತೆ ಮಾತನಾಡುತ್ತೇನೆ. ಅದರಲ್ಲೇನು ತೊಂದರೆಯಿಲ್ಲ, ಎಲ್ಲರಿಗೂ ಕೊಡಿಸೋಣ.

**ಪ್ರಶ್ನೆ ಸಂಖ್ಯೆ: 910**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಅಂಗಾರರವರು ಮೀನುಗಾರಿಕೆ ಸಚಿವರಾಗಿದ್ದಾಗ ನೀಲಿ ಕ್ರಾಂತಿ ಯೋಜನೆಯನ್ನು ಜಾರಿಗೆ ತಂದಿದ್ದರು. ಗುಲ್ಬರ್ಗಾ ಮೀನುಗಾರಿಕೆ ಇಲಾಖೆಯಲ್ಲಿ ಯಾವ ಫಲಾನುಭವಿಗಳಗೂ ತಲುಪಿಲ್ಲ. ಬೇರೆ ಫಲಾನುಭವಿಗಳಿಗೆ ಬಡವರ ಹೆಸರಿನಲ್ಲಿ ಕೋಟಿಗಟ್ಟಲೆ ಹಣ ದುರುಪಯೋಗವಾಗಿದೆ. ಇದರ ತನಿಖೆಯಾಗಬೇಕು, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಕಳೆದ ಅಧಿವೇಶನದಲ್ಲೂ ನಾನು ಪ್ರಸ್ತಾಪ ಮಾಡಿದ್ದೇನೆ. ಮಾನ್ಯ ಮೀನುಗಾರಿಕೆ ಸಚಿವರು ಒಂದು ಮಾತನ್ನು ಹೇಳಿದರು, ನಾನು ಗುಲ್ಬರ್ಗಾಕ್ಕೆ ಬರುತ್ತೇನೆ, ಅಲ್ಲಿ ಸಭೆ ಮಾಡುತ್ತೇನೆ. ಅಲ್ಲಿ ಏನು ತಪ್ಪು ಕಂಡುಬಂದರೂ ತಕ್ಷಣ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆಂದು ಭರವಸೆ ಕೊಟ್ಟಿದ್ದರು. ಆದರೆ, ಈ ವ್ಯವಸ್ಥೆಯಲ್ಲಿ ಅವರು ಬರುವುದಕ್ಕಾಗಿಲ್ಲ. ಅವರಿಗೂ ಜವಾಬ್ದಾರಿ ಇದೆ. ಅವರು ಬೆಸ್ತ ಸಮುದಾಯದವರು, ನಾನು ಬೆಸ್ತ ಸಮುದಾಯಕ್ಕೆ ಸೇರಿದವನು; ಅವರು ಕೆಳಮನೆಯಲ್ಲಿದ್ದಾರೆ, ನಾನು ಮೇಲ್ಮನೆಯಲ್ಲಿದ್ದೇನೆ. ನನಗಿಂತ ಹೆಚ್ಚು ಅಭಿಮಾನ ಅವರಿಗೆ ಇರಬೇಕು. ಸರ್ಕಾರದ ಎಲ್ಲಾ ಸೌಲಭ್ಯಗಳಲ್ಲಿ ಶೇಕಡ 90ರಷ್ಟು ನಮ್ಮ ಸಮುದಾಯದವರಿಗೆ ಕೊಡಬೇಕೆಂದು ಕಾಯ್ದೆಯಲ್ಲಿದೆ. ಅದನ್ನು ಕೂಡ ಕೋರ್ಟ್‌ನಲ್ಲಿ ತಕ್ಷಣ ಇತ್ಯರ್ಥಪಡಿಸಬೇಕು. ಬಡವರಿಗೆ ಎಲ್ಲಾ ರೀತಿಯ ಫಲಾನುಭವಿಗಳಿಗೆ ಈ ಸೌಲಭ್ಯವನ್ನು ಅವರ ಮನೆಗೆ ತಲುಪಿಸುವಂತಹ ಕೆಲಸ ಮಾಡಬೇಕು. ಮಾನ್ಯ ಸಚಿವರು ಯಾರು ಹಣ ದುರಪಯೋಗ ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಗುಲ್ಬರ್ಗಾದಲ್ಲಿದ್ದಂತಹ ಜಿಲ್ಲಾಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ಸಚಿವರಿಗೆ ಒತ್ತಾಯ ಮಾಡುತ್ತಿದ್ದೇನೆ.

**ಶ್ರೀ ಮಂಕಾಳ ಎಸ್.ವೈದ್ಯ (ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಅದನ್ನು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

**ಪ್ರಶ್ನೆ ಸಂಖ್ಯೆ: 882**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶೇಕಡ 40 ರಿಂದ 75 ರಷ್ಟು ಅಂಗವಿಕಲತೆಯುಳ್ಳ ಫಲಾನುಭವಿಗಳಿಗೆ ಈ ಹಿಂದೆ ನೀಡುತ್ತಿದ್ದ ಮಾಸಿಕ ಪಿಂಚಣಿ ರೂ.600 ಗಳಿಂದ ರೂ.800 ಗಳಿಗೆ ಹೆಚ್ಚಿಸಿ ದಿನಾಂಕ: 31-07-2021 ರಂದು ಆದೇಶ ಹೊರಡಿಸಲಾಗಿದೆ. ಶೇಕಡ 75ಕ್ಕಿಂತ ಹೆಚ್ಚು ಅಂಗವಿಕಲತೆಯುಳ್ಳ ಫಲಾನುಭವಿಗಳಿಗೆ ಈ ಹಿಂದೆ ನೀಡುತ್ತಿದ್ದ ಮಾಸಿಕ ಪಿಂಚಣಿ ರೂ.1200 ಗಳನ್ನು ರೂ.1400 ಗಳಿಗೆ ಹೆಚ್ಚಿಸಿ ದಿನಾಂಕ:18-03-2018ರಂದು ಆದೇಶ ಹೊರಡಿಸಲಾಗಿದೆ. ಶೇಕಡ 75ಕ್ಕಿಂತ ಹೆಚ್ಚು ಮನೋವೈಕಲ್ಯತೆ ಹೊಂದಿರುವ ಫಲಾನುಭವಿಗಳಿಗೆ ಈ ಹಿಂದೆ ನೀಡುತ್ತಿದ್ದ ಮಾಸಿಕ ಪಿಂಚಣಿ ರೂ.1400 ಗಳಿಂದ ರೂ.2000 ಗಳಿಗೆ ಹೆಚ್ಚಿಸಿ ದಿನಾಂಕ:07-12-2021 ರಂದು ಆದೇಶ ಹೊರಡಿಸಲಾಗಿದೆ. ಇದಕ್ಕೆ ಆಗುತ್ತಿರುವ ಒಟ್ಟು ವೆಚ್ಚ approximately Rs. 1,477 crores per year ಪಿಂಚಣಿಗಾಗಿ ಕೊಡುತ್ತಿದ್ದಾರೆ. ಈ ವೆಚ್ಚ ಪ್ರತಿ ತಿಂಗಳು ಅವರ ಪಿಂಚಣಿಗಾಗಿ ಕೊಡುತ್ತಿರುವಂಥದ್ದು. ತಮ್ಮ ಮುಖಾಂತರ ನಾವು ಮನವಿ ಮಾಡುವುದೇನೆಂದರೆ, ನಮ್ಮ ಬಜೆಟ್ ಈಗ ಮೂರು ಲಕ್ಷ ದಾಟಿದೆ. Rs. 3.27 lakh crore ಎಂದು ಇದೆ. ಪ್ರತಿ ಆರು ತಿಂಗಳಿಗೊಮ್ಮೆ ತುಟ್ಟಿಭತ್ಯೆಯನ್ನು ಕೊಡುತ್ತಿದ್ದಾರೆ. ಈಗ 7th Pay Commission benefits ಕೊಡುತ್ತಿದ್ದಾರೆ. ಇದು ಈ vulnerable sections ಗೆ ನಾವು ಮಾಡುತ್ತಿರುವುದು ನ್ಯಾಯವೇ ಎಂಬುದನ್ನು ನಾವೆಲ್ಲಾ introspection ಮಾಡಬೇಕು. 2018 ರಿಂದ ಅವರೇನು ಆದೇಶ ಹೊರಡಿಸಿದ್ದಾರೆ, ನಂತರ 2021 ರಂದು ಆದೇಶವನ್ನು ಹೊರಡಿಸಿರುವುದು ಬಹಳ ಕಡಿಮೆ ಇದೆ. ಇದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕು.

**ಶ್ರೀ ಕೃಷ್ಣ ಬೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಇದು ಕಾಲದಿಂದ ಕಾಲಕ್ಕೆ ಪರಿಷ್ಕರಣೆಯಾಗಬೇಕೆನ್ನುವ ವಿಷಯವನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಅದು ನಿಜ, ಕಾಲದಿಂದ ಕಾಲಕ್ಕೆ ಆಗಬೇಕು. ಅದರಲ್ಲಿ ಮತ್ತೊಂದು ಅಭಿಪ್ರಾಯವಿಲ್ಲ. ಈಗ ರಾಜ್ಯದಲ್ಲಿ ಅಂಗವಿಕಲತೆ, ಮನೋವೈಕಲ್ಯತೆ ಹೊಂದಿರುವ ಮಕ್ಕಳು ಸೇರಿ ಒಟ್ಟು ಸುಮಾರು 78,14,513 ವ್ಯಕ್ತಿಗಳಿಗೆ ನಾನಾ ರೀತಿಯ ಸಾಮಾಜಿಕ ಭದ್ರತಾ ಪಿಂಚಣಿಗಳನ್ನು ಕೊಡುತ್ತಿದ್ದೇವೆ. ಇದರಲ್ಲಿ ನಮಗೆ ಒಟ್ಟು ಒಂದು ವರ್ಷಕ್ಕೆ ರೂ.10,500 ಕೋಟಿ ಕೊಡುತ್ತಿದ್ದಾರೆ. ಬಹುಶಃ ನನಗಿರುವ ಮಾಹಿತಿ ಪ್ರಕಾರ highest social security pension ಕೊಡುತ್ತಿರುವಂಥದ್ದು ಕರ್ನಾಟಕ ರಾಜ್ಯ. ನಾವು ಪಕ್ಕದ ತಮಿಳುನಾಡಿಗೆ ಹೋಲಿಕೆ ಮಾಡಿದಾಗ, ಅವರು ಸ್ವಲ್ಪ ನಮ್ಮ ರೀತಿಯೇ ಸಾಮಾಜಿಕ

ಭದ್ರತೆಯಲ್ಲಿ ನಂಬಿಕೆ ಇಟ್ಟಿರುವಂಥವರು. ನಮಗಿಂತ ಜನಸಂಖ್ಯೆ ಜಾಸ್ತಿ ಇರುವಂಥವರು. ನಾವು 78,14,513 ವ್ಯಕ್ತಿಗಳಿಗೆ ಕೊಡುತ್ತಿದ್ದೇವೆ. ನನಗಿರುವ ಮಾಹಿತಿ ಪ್ರಕಾರ ಅವರು ಐವತ್ತೆಂಟು ಲಕ್ಷ ಜನರಿಗೆ ಮಾತ್ರ ಕೊಡುತ್ತಿದ್ದಾರೆ. ಹಾಗಾಗಿ ಸಾಮಾಜಿಕ ಭದ್ರತಾ ಪಿಂಚಣಿಗಳು ಕೊಡುವುದರಲ್ಲಿ ಬೇರೆ ರಾಜ್ಯಕ್ಕಿಂತ ಕರ್ನಾಟಕ ಸ್ವಲ್ಪ ಉದಾರವಾದಂತಹ ನೀತಿಯನ್ನು ನಾವು ಅನುಸರಣೆ ಮಾಡಿಕೊಂಡು ಬಂದಿದ್ದೇವೆ. ಕಾಲದಿಂದ ಕಾಲಕ್ಕೆ ಪರಿಷ್ಕರಣೆಯನ್ನು ಮಾಡುತ್ತಾ ಬಂದಿದ್ದೇವೆ. 2018 ರಲ್ಲಿ ದರಗಳು ಪರಿಷ್ಕರಣೆಯಾಗಿದೆ, 2021 ರಲ್ಲಿ ಪರಿಷ್ಕರಣೆಯಾಗಿದೆ. ಮತ್ತೊಮ್ಮೆ ಪರಿಷ್ಕರಣೆ ಮಾಡಬೇಕೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಅದರ ಬಗ್ಗೆ ವಿಚಾರ ಮಾಡೋಣ. ಇದು ಮೊನ್ನೆ ರಾಜ್ಯ ಸರ್ಕಾರದ ಪರವಾಗಿ ಕೇಂದ್ರ ಸರ್ಕಾರದ ಆಯವ್ಯಯ ಪೂರ್ವ ಚರ್ಚೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ನಾನೇ ಹೋಗಿದ್ದೆ. ಅವತ್ತು ನಾವು ಒಂದು memorandum ಅನ್ನು ಅವರಿಗೆ ಕೊಟ್ಟಿದ್ದೇವೆ. ಅದರಲ್ಲಿ ಏನು ಕೊಟ್ಟಿದ್ದೇವೆಂದರೆ, ಕೇಂದ್ರ ಸರ್ಕಾರದಲ್ಲಿ ಅವರ ಷೇರು ಬರುತ್ತದೆ. ಒಟ್ಟು ಎಪ್ಪತ್ತೆಂಟು ಲಕ್ಷ ಜನಗಳಿಗೆ ನಾವು ಕೊಡುತ್ತಿದ್ದೇವೆ. ಅದರಲ್ಲಿ ಕೇಂದ್ರ ಸರ್ಕಾರದಿಂದ ನಮಗೆ 13,96,000 ಜನರಿಗೆ ಮಾತ್ರ ಅವರ ಪಾಲು ಬರುತ್ತಿದೆ. ನಾವು ರೂ.1400, ರೂ.2000 ಗಳಾದರೆ, ಅವರ ಪಾಲು ಕೇವಲ ರೂ.200, ರೂ.300 ಮಾತ್ರ ಕೊಡುತ್ತಿದ್ದಾರೆ. ಏಕೆಂದರೆ, last Central Government revise ಮಾಡಿದ್ದು ದಿನಾಂಕ 8-11-2012 ರಲ್ಲಿ. ಅವರದ್ದು 14 ವರ್ಷಗಳಿಂದ ಒಂದು ಪೈಸೆಯೂ revise ಆಗಿಲ್ಲ. ಅದಕ್ಕೆ ರಾಜ್ಯದ ಪರವಾಗಿ Official Memorandum ಅನ್ನು ನಾನೇ ಹಣಕಾಸು ಸಚಿವರಿಗೆ submit ಮಾಡಿದ್ದೇನೆ. ದಯವಿಟ್ಟು ತಾವು ಕೊಡತಕ್ಕಂಥ ದರವನ್ನು ಪರಿಷ್ಕರಣೆ ಮಾಡಬೇಕು. ನಮ್ಮ ರಾಜ್ಯದಲ್ಲಿ ಎಪ್ಪತ್ತೆಂಟು ಲಕ್ಷ ಜನರಿಗೆ ಕೊಡುತ್ತಿದ್ದೇವೆ, ತಾವು cover ಮಾಡುತ್ತಿರುವುದು ಕೇವಲ 13,96,000 ಜನರಿಗೆ ಮಾತ್ರ ಕೊಡುತ್ತಿದ್ದೀರಿ, ನಿಮ್ಮ ratio sharing ನಲ್ಲಿ ಈ ನಂಬರ್‌ನ್ನು enhance ಮಾಡಿಕೊಡಬೇಕೆಂದು ನಾವು ಅವರಿಗೆ ಮನವಿ ಮಾಡಿದ್ದೇನೆ. ಅವರು ನಾನು ಹೇಳಿದಾಗ ಸಕಾರಾತ್ಮಕವಾಗಿ ಸ್ವೀಕರಿಸಿದರು.

(ಮುಂದು)

(667) 24/07/2024 12:00/ಎಸ್‌ಪಿಆರ್/ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೃಷ್ಣ ಬೈರೇಗೌಡ (ಮುಂದು):**

2012ನೇ ಇಸವಿಯಿಂದ ಇದು ಪರಿಷ್ಕೃತಗೊಂಡಿಲ್ಲವೇ; ಇದು ಸರಿಯಲ್ಲ ಎನ್ನುವ ರೀತಿಯಲ್ಲಿ ಅವರು ತಮ್ಮ ಭಾವನೆಯನ್ನು ಅಭಿವ್ಯಕ್ತಪಡಿಸಿದರು. ಆದರೆ, ಇವತ್ತಿನ ದಿನಪತ್ರಿಕೆಯನ್ನು ನೋಡಿದಾಗ, ಇದರ ಬಗ್ಗೆ ಯಾವುದೇ ಉಲ್ಲೇಖವಿಲ್ಲ. ಪ್ರಾಯಶಃ ಪೂರಕ ಆಯವ್ಯಯದಲ್ಲಿ ಇದು ಬರಬಹುದು ಎಂಬ ನಿರೀಕ್ಷೆಯನ್ನು

ನಾನಿಟ್ಟುಕೊಂಡಿದ್ದೇನೆ. ಏಕೆಂದರೆ ಕೇಂದ್ರ ಸಚಿವರು ಮನವರಿಕೆಯಾದಂತೆ ಕಂಡಿದ್ದರು ಎಂಬ ಕಾರಣಕ್ಕಾಗಿ 10-12 ವರ್ಷಗಳ ನಂತರ ಕೇಂದ್ರ ಸರ್ಕಾರದ್ದು ಪರಿಷ್ಕೃತಗೊಳ್ಳುತ್ತದೆ ಎಂಬ ನಿರೀಕ್ಷೆಯನ್ನು ನಾನಿಟ್ಟುಕೊಂಡಿದ್ದೇನೆ. ಕಾಲ ಕಾಲಕ್ಕೆ ಸರ್ಕಾರದಿಂದ ನೀಡಲಾಗುವ ಪಿಂಚಣಿ ಪರಿಷ್ಕರಣೆಯಾಗಬೇಕೆಂಬ ಸದಸ್ಯರ ಭಾವನೆಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಕೇಂದ್ರ ಸರ್ಕಾರದಿಂದ ನೀಡಲಾಗುವ ಪಿಂಚಣಿಯ ಮೊತ್ತವು ಪರಿಷ್ಕರಣೆಯಾಗುತ್ತದೆ ಎಂಬ ನಿರೀಕ್ಷೆಯನ್ನು ನಾನಿಟ್ಟುಕೊಂಡಿದ್ದೇನೆ. ಇದರ ಆಧಾರದ ಮೇಲೆ ನಾವು ಮುಂದಿನ ತೀರ್ಮಾನಗಳನ್ನು ತೆಗೆದುಕೊಳ್ಳುತ್ತೇವೆ.

**ಶ್ರೀ ವೈ.ಎಂ.ಸತೀಶ್:-** ಮಾನ್ಯ ಸಭಾಪತಿಯವರೆ, ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುವುದೇನೆಂದರೆ, ಎಪ್ಪತ್ತೆರೆಡು-ಎಪ್ಪತ್ತೆಂಟು ಲಕ್ಷ ರೂಪಾಯಿಗಳ ಬಗ್ಗೆ ನಾನು ಮಾತನಾಡುತ್ತಿಲ್ಲ; ಕೇವಲ ಒಂಭತ್ತು ಲಕ್ಷ ರೂಪಾಯಿಗಳ ಬಗ್ಗೆ ನಾನು ಮಾತನಾಡುತ್ತಿದ್ದೇನೆ.

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸಭಾಪತಿಯವರೆ, ಸದಸ್ಯರು ಹೇಳುವುದು ಸರಿಯಾಗಿದೆ.

**ಶ್ರೀ ವೈ.ಎಂ.ಸತೀಶ್:-** ಮಾನ್ಯ ಸಭಾಪತಿಯವರೆ, ನಾನು ಕೇವಲ ವಿಕಲಚೇತನರಿಗೆ ನೀಡಲಾಗುತ್ತಿರುವ ಪಿಂಚಣಿಯ ಬಗ್ಗೆ ಮಾತ್ರವೇ ಮಾತನಾಡುತ್ತಿದ್ದೇನೆ. ಇವರು ಅತ್ಯಂತ ದುರ್ಬಲ ವರ್ಗದವರಾಗಿದ್ದಾರೆ. ಹಾಲಿ ನೀಡುತ್ತಿರುವ ಪಿಂಚಣಿಯನ್ನು ದ್ವಿಗುಣ ಅಥವಾ ಮೂರು ಪಟ್ಟು ಹೆಚ್ಚು ಮಾಡಿ ಎಂದು ಈ ವರ್ಗದ ಪರವಾಗಿ ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತಿದ್ದೇನೆ. ಕಡೆಯ ಪಕ್ಷ ಪ್ರತಿವರ್ಷವಾದರೂ ಈ ಮೊತ್ತವನ್ನು ಪರಿಷ್ಕರಣೆ ಮಾಡುವ ವಿಚಾರದಲ್ಲಿ ಕಾನೂನಿನಲ್ಲಿ ತಿದ್ದುಪಡಿಯನ್ನು ತರಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ನಾನು ಕೇವಲ ವಿಕಲಚೇತನರ ಬಗ್ಗೆ ಮಾತ್ರವೇ ಕೇಳಿದ್ದೇನೆ.

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸಭಾಪತಿಯವರೆ, ಸದಸ್ಯರ ಭಾವನೆಗಳನ್ನು ನಾನು ತಿಳಿದುಕೊಂಡಿದ್ದೇನೆ. ಈ ಬಗ್ಗೆ ವಿಚಾರ ಮಾಡೋಣ. ಏಕೆಂದರೆ, ಈ ಬಗ್ಗೆ ನಾನು ಎಲ್ಲವನ್ನೂ ಸದನದಲ್ಲಿ ಹೇಳುವುದಕ್ಕಾಗುವುದಿಲ್ಲ. ನನ್ನ ಇಲಾಖೆಯ ವೆಚ್ಚವು ಈಗಾಗಲೇ 10,500 ಕೋಟಿ ರೂಪಾಯಿಗಳಷ್ಟು ಇದೆ. ಆದರೆ ಕೇಂದ್ರ ಸರ್ಕಾರದಿಂದ ಕೇವಲ 535 ಕೋಟಿ ರೂಪಾಯಿಗಳಷ್ಟು ಮಾತ್ರವೇ ಇದೆ. ಸದಸ್ಯರು ಹೇಳಿರುವ ಅಂಶದ ಬಗ್ಗೆ ನಾನು ಪ್ರಯತ್ನ ಮಾಡುತ್ತೇನೆ. I cannot assure but subject to availability ನಾನು ಪ್ರಯತ್ನಿಸುತ್ತೇನೆ.

**ಪ್ರಶ್ನೆ ಸಂಖ್ಯೆ: 919**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಗೋವಿಂದ ರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಾನು ಹೊಸಕೋಟೆ ಮತ್ತು ದೇವನಹಳ್ಳಿ ಭಾಗದಲ್ಲಿ ಟೌನ್‌ಶಿಪ್ ನಿರ್ಮಿಸುವ ಉದ್ದೇಶದಿಂದ, ಸುಮಾರು ಒಂದು ವರ್ಷದ ಹಿಂದೆಯೇ ಎಲ್ಲಾ ಔಪಚಾರಿಕತೆಗಳನ್ನು ಪೂರ್ಣಗೊಳಿಸಲಾಗಿತ್ತು. ಸುಮಾರು 71 ಎಕರೆ 29 ಗುಂಟೆ ಜಮೀನು ಪ್ರದೇಶದಲ್ಲಿ ಟೌನ್‌ಶಿಪ್ ಅನ್ನು ಮಾಡಿ, ಅಲ್ಲಿ ಎಲ್ಲರಿಗೂ ನಿವೇಶನಗಳನ್ನು ಹಂಚಿಕೆ ಮಾಡಬೇಕೆಂದು ಸರ್ಕಾರವು ಯೋಜನೆಯನ್ನು ಮಾಡಿದೆ. ನಿವೇಶನ ಕೋರಿ ಸುಮಾರು 9,440 ಜನರು ಅರ್ಜಿಯನ್ನು ಸಲ್ಲಿಸಿದ್ದಾರೆ. ಈ ಬಗ್ಗೆ ಸಂದಾಯವಾದ ಠೇವಣಿ ಹಣದ ಬಗ್ಗೆ ನಾನು ಲೆಕ್ಕ ಹಾಕಿದಾಗ ಅದು 27,56,70,200/- ರೂಪಾಯಿಗಳಾಗಿದೆ. ಅರ್ಜಿದಾರರು ಅರ್ಜಿ ಶುಲ್ಕದೊಂದಿಗೆ ಇಷ್ಟು ಹಣ ಈಗಾಗಲೇ ಸಂದಾಯ ಮಾಡಿದ್ದಾರೆ. ಈ ಬಗ್ಗೆ ಸುಮಾರು ಒಂದು ವರ್ಷವಾದರೂ ಸಹ ಸರ್ಕಾರವು ಇನ್ನೂ ಮುಂದಿನ ಕ್ರಮಗಳನ್ನು ತೆಗೆದುಕೊಂಡಿರುವುದಿಲ್ಲ. ಅವು ಯಾವುವೆಂದರೆ, ಬಡಾವಣೆ ಮಾಡುವುದು, ಅದನ್ನು ಅಭಿವೃದ್ಧಿ ಪಡಿಸುವುದು ಇಂತಹ ಕೆಲಸಗಳನ್ನು ಇನ್ನೂ ಮಾಡಿಲ್ಲ.

ಇದುವರೆಗೂ ಎಷ್ಟು ಹಣ ಸಂದಾಯವಾಗಿದೆ ಹಾಗೂ ಸಂದಾಯವಾಗಿರುವ ಹಣವನ್ನು ಯಾವ ಬ್ಯಾಂಕಿನಲ್ಲಿ ಠೇವಣಿ ಇಡಲಾಗಿದೆ; ಠೇವಣಿ ರೂಪದಲ್ಲಿ ಎಷ್ಟು ಬಡ್ಡಿ ಸಂದಾಯವಾಗಿದೆ ಎನ್ನುವ ಪ್ರಶ್ನೆಯನ್ನು ಕೇಳಿದ್ದೇನು. ಇದಕ್ಕೆ ಸರ್ಕಾರವು ಲಿಖಿತ ಉತ್ತರದಲ್ಲಿ "ಇದುವರೆಗೂ ಎರಡು ಯೋಜನೆಗಳಿಂದ ಒಟ್ಟು 26.68 ಕೋಟಿ ರೂಪಾಯಿಗಳು ಸಂದಾಯವಾಗಿರುತ್ತದೆ. ಅರ್ಜಿದಾರರಿಂದ ಪಡೆಯಲಾದ ಅರ್ಜಿ ಶುಲ್ಕ ಮತ್ತು ಆರಂಭಿಕ ಠೇವಣಿಯನ್ನು ಕರ್ನಾಟಹ ಗೃಹ ಮಂಡಳಿಯ ಯೂನಿಯನ್ ಬ್ಯಾಂಕ್ ಖಾತೆ, ಎಸ್.ಸಿ. ರೋಡ್ ಬ್ರಾಂಚ್, ಮೂಲಕ ಸ್ವೀಕೃತವಾಗಿದ್ದು, ಪ್ರತ್ಯೇಕ ಖಾತೆಗಳಲ್ಲಿ ಈ ಮೊತ್ತವನ್ನು ಸ್ವೀಕರಿಸದೇ ಇರುವ ಕಾರಣ, ಕರ್ನಾಟಕ ಗೃಹ ಮಂಡಳಿಯ ಬೇರೆ ಬೇರೆ ಯೋಜನೆಗಳ ಮೊತ್ತದಲ್ಲಿ ಇದು ಸೇರಿರುವ ಕಾರಣ, ನಿರ್ದಿಷ್ಟವಾಗಿ ಈ ಯೋಜನೆಯಡಿಯಲ್ಲಿ ಒಟ್ಟು ಎಷ್ಟು ಬಡ್ಡಿ ಸಂದಾಯವಾಗಿದೆ ಎಂಬುದನ್ನು ಈ ಹಂತದಲ್ಲಿ ತಿಳಿಸಲು ಸಾಧ್ಯವಾಗುತ್ತಿಲ್ಲ" ಎಂಬುದಾಗಿ ತಿಳಿಸಿರುತ್ತದೆ. ಇದು ಸಾರ್ವಜನಿಕರ ಹಣವಾಗಿದೆ. ಪ್ರಸ್ತುತ ನಡೆಯುತ್ತಿರುವ ಹಗರಣಗಳನ್ನು ನೋಡಿದಾಗ, ಹೊಸಕೋಟೆ ಮತ್ತು ದೇವನಹಳ್ಳಿ ಇಲ್ಲಿ ಟೌನ್‌ಶಿಪ್ ನಿರ್ಮಿಸುವ ಸಂಬಂಧ ಸ್ವೀಕರಿಸುವ ಅರ್ಜಿ ಶುಲ್ಕ ಮತ್ತು ಆರಂಭಿಕ ಠೇವಣಿ ಮೊತ್ತಗಳನ್ನು ಪ್ರತ್ಯೇಕವಾದ ಖಾತೆಯನ್ನು ತೆರೆದು ಅದರಲ್ಲಿ ಏಕೆ ಇಡಬಾರದು ಎಂದು ನಾನು ಪ್ರಶ್ನಿಸುತ್ತೇನೆ. ಇವತ್ತಿನ ದಿವಸ 26.68 ಕೋಟಿ ರೂಪಾಯಿಗಳು ಸಣ್ಣ ಮೊತ್ತವಲ್ಲ. ಹೀಗೆ ಸ್ವೀಕೃತಗೊಂಡ ಮೊತ್ತವನ್ನು ಪ್ರತ್ಯೇಕ ಖಾತೆಯಲ್ಲಿ ಇಟ್ಟಾಗ, ಇದಕ್ಕೆ ಬಡ್ಡಿಯೂ ಸಹ ಬರುತ್ತಿತ್ತು; ಅದೇ ರೀತಿಯಾಗಿ ನಿರ್ದಿಷ್ಟವಾದ ಲೆಕ್ಕವೂ ಸಹ ದೊರೆಯುತ್ತಿತ್ತು. ವಸತಿ ಇಲಾಖೆ, ಗೃಹ ಮಂಡಳಿಯ ಬೇರೆ ಬೇರೆ ಯೋಜನೆಗಳು ಇರುವುದರಿಂದ ಸಾಕಷ್ಟು ವ್ಯವಹಾರಗಳಿರುತ್ತವೆ. ಬೇರೆ ಯೋಜನೆಗಳೊಂದಿಗೆ ಈ ಯೋಜನೆಯ ಮೊತ್ತವು ಕಲೆತು ಹೋದರೆ...., ಇವತ್ತಿನ

ದಿವಸ ಹಲವಾರು ರೀತಿಯ ಹಗರಣಗಳಾಗುತ್ತಿವೆ. ಇಂತಹ ಸಂದರ್ಭದಲ್ಲಿ ಒಟ್ಟಿಗೆ ಇಟ್ಟಿರುವ ಹಣದಿಂದ ಸಮಸ್ಯೆಯಾಗುವುದಿಲ್ಲವೇ ಎಂದು ನಾನು ಪ್ರಶ್ನಿಸಬಯಸುತ್ತೇನೆ. ಇದಕ್ಕೆ ಸಚಿವರು ಉತ್ತರಿಸಬೇಕು.

**ಶ್ರೀ ಬಿ.ಝಡ್.ಜಮೀರ್ ಅಹ್ಮದ್ ಖಾನ್ (ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೆ, ಸದಸ್ಯರು ಮೊದಲನೆಯದಾಗಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ಪ್ರಸ್ತುತ ಎಷ್ಟು ಟೌನ್‌ಶಿಪ್‌ಗಳ ನಿರ್ಮಾಣ ಮಾಡಲಾಗುತ್ತಿದೆ ಎಂಬ ಪ್ರಶ್ನೆಯನ್ನು ಕೇಳಿದ್ದಾರೆ. ನಾವು ಕೇವಲ ಒಂದು ಟೌನ್‌ಶಿಪ್‌ನ್ನು ಮಾತ್ರವೇ ಮಾಡಿದ್ದೇವೆ. ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕಿನಲ್ಲಿ ಒಟ್ಟು 1,938 ಎಕರೆ 13 ಗುಂಟೆ ಜಮೀನಿನಲ್ಲಿ ಟೌನ್‌ಶಿಪ್ ಮಾಡಿದ್ದೇವೆ. ಈಗ್ಗೆ ಒಂದು ವರ್ಷದ ಹಿಂದೆ ಅಂದರೆ, ನಾನು ಇಲಾಖೆಯ ಪ್ರಭಾರವನ್ನು ವಹಿಸಿಕೊಳ್ಳುವ ಮುನ್ನ ಹೊಸಕೋಟೆ ತಾಲ್ಲೂಕಿನಲ್ಲಿ ಟೌನ್‌ಶಿಪ್ ಮಾಡುವ ಸಂಬಂಧ 71 ಎಕರೆ 29 ಗುಂಟೆ ಜಮೀನನ್ನು ಗುರ್ತಿಸಲಾಗಿತ್ತು. ಈ ಬಗ್ಗೆ ಕರಪತ್ರಗಳನ್ನೂ ಸಹ ಮಾಡಲಾಗಿತ್ತು. ಯಾವುದೇ ಒಂದು ಟೌನ್‌ಶಿಪ್ ಅನ್ನು ಮಾಡಬೇಕಾದರೆ, ಕನಿಷ್ಠ ಒಂದು ಸಾವಿರ ಎಕರೆಗೂ ಅಧಿಕ ಸ್ಥಳದ ಅವಶ್ಯಕತೆ ಇರುತ್ತದೆ; ಕಡಿಮೆ ಎಕರೆ ಪ್ರದೇಶದಲ್ಲಿ ಟೌನ್‌ಶಿಪ್ ಅನ್ನು ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ಅಲ್ಲಿ ಉದ್ಯಾನವನ, ಕ್ರೀಡಾಂಗಣ ಇತ್ಯಾದಿಗಳನ್ನು ನಿರ್ಮಿಸಬೇಕಾಗುತ್ತದೆ. ಹೀಗಾಗಿ ಕನಿಷ್ಠ ಒಂದು ಸಾವಿರ ಎಕರೆ ಜಮೀನು ಬೇಕಾಗುತ್ತದೆ. ಈ ಹಿಂದಿನ ಸರ್ಕಾರದ ಅವಧಿಯಲ್ಲಿ ಈ ಸಂಬಂಧಿತ ಕರಪತ್ರವನ್ನೂ ಸಹ ಹಂಚಿದ್ದರು. ಆದರೆ ಅಲ್ಲಿ ಟೌನ್‌ಶಿಪ್ ಅನ್ನು ಮಾಡುವುದಕ್ಕೆ ಸಾಧ್ಯವಿಲ್ಲ; ಏಕೆಂದರೆ ಅಲ್ಲಿ ಕೇವಲ 71 ಎಕರೆಗಳಷ್ಟು ಮಾತ್ರವೇ ಜಮೀನು ಇತ್ತು. ಕರ್ನಾಟಕ ಗೃಹ ಮಂಡಳಿಯ ಜಮೀನು ಬೇರೆ ಕಡೆಗೆ ಇತ್ತು. ಇದರ ಜೊತೆಗೆ ರೈತರಿಂದಲೂ ಸಹ ಜಮೀನನ್ನು ಖರೀದಿಸಲಾಗಿತ್ತು. 50:50 ರ ಅನುಪಾತದಲ್ಲಿ ಪಾಲುದಾರಿಕೆಯಡಿ ಬಡಾವಣೆಯನ್ನು ನಿರ್ಮಿಸಲಾಗಿದೆ. ಹೊಸಕೋಟೆ ಯೋಜನೆಗಾಗಿ ಒಟ್ಟು 3,643 ಅರ್ಜಿಗಳು ಸ್ವೀಕೃತಗೊಂಡಿದ್ದು, ದೇವನಹಳ್ಳಿ ಯೋಜನೆಗಾಗಿ ಒಟ್ಟು 5,807 ಅರ್ಜಿಗಳು ಸ್ವೀಕೃತಗೊಂಡಿವೆ. ಒಟ್ಟಾರೆಯಾಗಿ ಎರಡೂ ಯೋಜನೆಗಳಿಗೆ ಸಂಬಂಧಪಟ್ಟಂತೆ, 9,450 ಅರ್ಜಿಗಳು ಸ್ವೀಕೃತಗೊಂಡಿವೆ. ಇದುವರೆಗೂ ಎರಡು ಯೋಜನೆಗಳಿಂದ ಒಟ್ಟು ರೂಪಾಯಿ 26.68 ಕೋಟಿಗಳು ಸಂದಾಯವಾಗಿರುತ್ತವೆ. ಒಂದೊಂದು ವರ್ಗಕ್ಕೆ ಇಂತಿಷ್ಟು ಹಣ ನಿಗದಿ ಮಾಡಲಾಗಿದ್ದು, ಅದರನ್ವಯ ಹಣ ಸ್ವೀಕರಿಸಲಾಗಿದೆ. ಈ ಮೊತ್ತವನ್ನು ಮಂಡಳಿಯ ಯೂನಿಯನ್ ಬ್ಯಾಂಕ್ ಖಾತೆ, ಎಸ್.ಸಿ.ರೋಡ್ ಶಾಖೆಯಲ್ಲಿ ಇಡಲಾಗಿದೆ. ಇಂತಹ ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ, ಅರ್ಜಿದಾರರಿಂದ ಸ್ವೀಕೃತಗೊಂಡ ಹಣವನ್ನು ಪ್ರತ್ಯೇಕ ಖಾತೆಯಲ್ಲಿ ಇಡುವುದು ಸೂಕ್ತವೆಂಬ ಒಳ್ಳೆಯ ಸಲಹೆಯನ್ನು ಸದಸ್ಯರು ನೀಡಿದ್ದಾರೆ. ಇದನ್ನು ಗಮನಿಸಲಾಗುವುದು.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೆ, ಉಪ ಪ್ರಶ್ನೆಯನ್ನು ಕೇಳಬಯಸುತ್ತೇನೆ. ಸ್ವಾತಂತ್ರ್ಯ ನಂತರ ಸ್ಥಾಪನೆಗೊಂಡ ಗೃಹ ಮಂಡಳಿಯು ಬಹಳ ಒಳ್ಳೆಯ ಸಂಸ್ಥೆಯಾಗಿದೆ. ಇದು ಬಡವರಿಗೆ, ವಸತಿ ರಹಿತರಿಗೆ ಮನೆಯನ್ನು ನಿರ್ಮಿಸಿಕೊಡಲು ಗೃಹ ಮಂಡಳಿಯು ಬಹಳ ದೊಡ್ಡ ಮಟ್ಟದಲ್ಲಿ ಕೆಲಸವನ್ನು ಮಾಡಿಕೊಂಡು ಬಂದಿದೆ.

ನಾನು ಜನಿಸುವ ಮುನ್ನವೇ ಮಂಡಳಿಯಿಂದ ಮಾಡಲಾದ ಬಡಾವಣೆಗಳು ನಮ್ಮ ಭಾಗದಲ್ಲಿವೆ. ಆದರೆ, ಇತ್ತೀಚಿನ ದಿನಗಳಲ್ಲಿ ಗೃಹ ಮಂಡಳಿಯು ಬೇರೆ ಬೇರೆ ಚಟುವಟಿಕೆಗಳಲ್ಲಿ ಭಾಗಿಯಾಗಿ; ನಿರ್ಮಾಣ ವಿಚಾರದಲ್ಲಿ ತನ್ನ ಗಮನವನ್ನು ಕಡಿಮೆ ಮಾಡಿದೆ. ಹಾಲಿ ಸಚಿವರು ಅಧಿಕಾರ ಸ್ವೀಕರಿಸಿದ ನಂತರ ರಾಜ್ಯದಲ್ಲೆಲ್ಲಾ ಸಭೆಗಳನ್ನೂ ಸಹ ಮಾಡಿದ್ದರು. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಒಂದು-ಎರಡು ಸಾವಿರ ಎಕರೆಗಳಷ್ಟು ಜಮೀನು ..., ಇವತ್ತಿನ ದಿವಸ ರಿಯಲ್ ಎಸ್ಟೇಟ್‌ನವರು ಜನರನ್ನು ಶೋಷಿಸಿ, ಅವರಿಂದ ಹಣ ವಸೂಲಿ ಮಾಡುತ್ತಿದ್ದಾರೆ. ಇದನ್ನು ತಾವೂ ಸಹ ನೋಡಿರಬಹುದು. ಹೀಗಾಗಿ ಇದಕ್ಕಾಗಿಯೇ ಸರ್ಕಾರದಲ್ಲಿ ಒಂದು ಅಧಿಕೃತವಾದ ಸಂಸ್ಥೆ ಇದ್ದು, ಹಾಲಿ ಇರುವ ಸಚಿವರಂತಹ ಯೋಗ್ಯವಾದ ವ್ಯಕ್ತಿಗಳು ಇರುವಾಗಲೂ ಸಹ ..., ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿತ್ತೋ, ಅದು ನಿಧಾನಗತಿಯಲ್ಲಿ ಸಾಗುತ್ತಿದೆ. ಒಳ್ಳೊಳ್ಳೆಯ ಬಡಾವಣೆಗಳನ್ನು ನಿರ್ಮಿಸಿದಾಗ, ಸರ್ಕಾರಕ್ಕೆ ಆದಾಯ ಬರುತ್ತದೆ. ಅಲ್ಲಿ ಸಣ್ಣ ಮನೆ, HIG (High-income Group), MIG (Middle-income Group) ಮತ್ತು ವಿಲ್ಲಾ ಪ್ಲಾಟ್ ಇತ್ಯಾದಿಗಳನ್ನು ನಿರ್ಮಿಸುವುದಾಗಿ ತಿಳಿಸಲಾಗಿತ್ತು. ಆದರೆ, ಇಲ್ಲಿಯವರೆವಿಗೂ ಸಹ ಸರ್ಕಾರವು ಇದರಲ್ಲಿ ಕಾರ್ಯೋನ್ಮುಖವಾಗಿಲ್ಲ. ಈ ಸಂದರ್ಭದಲ್ಲಿ ನಾನೊಂದು ಸಣ್ಣ ಸಲಹೆಯನ್ನು ನೀಡಬಯಸುತ್ತೇನೆ. ಗೃಹ ಮಂಡಳಿಯು ಗುತ್ತಿಗೆಯ ಕ್ಷೇತ್ರಕ್ಕೂ ಕಾಲಿಟ್ಟಿದೆ. ಗೃಹ ಮಂಡಳಿಯು ಬೇರೆ ಬೇರೆ ಇಲಾಖೆಗಳಲ್ಲಿನ ಕಟ್ಟಡ ನಿರ್ಮಾಣ ಕೆಲಸಗಳನ್ನು ತೆಗೆದುಕೊಳ್ಳುತ್ತಿದೆ. ಉದಾಹರಣೆಗೆ ಹೇಳುವುದಾದರೆ, ಶಿಕ್ಷಣ ಇಲಾಖೆಯಲ್ಲಿಯೂ ಸಹ... ನಾನು ಧಾರವಾಡ ಕೃಷಿ ವಿಶ್ವವಿದ್ಯಾಲಯ ಆಡಳಿತ ಮಂಡಳಿಯ ಸದಸ್ಯನಾಗಿದ್ದೆನು. ಅಲ್ಲಿನ ನಿರ್ಮಾಣ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯಲ್ಲಿ ಗೃಹ ಮಂಡಳಿಯು ಭಾಗವಹಿಸಿ, ಕೆಲಸಗಳನ್ನು ನಿರ್ವಹಿಸುತ್ತಿದೆ. ಕೆಲಸದ ಒತ್ತಡದಿಂದಾಗಿ ಮಂಡಳಿಯು ಇಲ್ಲಿಯೂ ಸಹ ಸರಿಯಾಗಿ ಕೆಲಸವನ್ನು ನಿರ್ವಹಿಸುವುದಕ್ಕಾಗುತ್ತಿಲ್ಲ. ಅದೇ ರೀತಿಯಾಗಿ ಅಲ್ಲಿಯೂ ಸಹ ಕೆಲಸ ಕೈಗೆತ್ತಿಕೊಂಡು ಮೂರು ವರ್ಷಗಳಾಗಿದ್ದು, ಇಲ್ಲಿಯವರೆಗೆ ಕೆಲಸವು ಪೂರ್ಣಗೊಂಡಿರುವುದಿಲ್ಲ. ಹಾಲಿ ಸಚಿವರು ಸಮರ್ಥರಿದ್ದಾರೆ; ಹೀಗಾಗಿ ಇವರಲ್ಲಿ ನಾನು ಮನವಿ ಮಾಡಿಕೊಳ್ಳುವುದೇನೆಂದರೆ, ಇಲಾಖೆಗೆ ಎಷ್ಟು ಕೆಲಸಗಳನ್ನು ನಿರ್ವಹಿಸುವುದಕ್ಕಾಗುತ್ತದೆಯೋ, ಅಷ್ಟನ್ನು ಮಾತ್ರವೇ ವಹಿಸಿಕೊಳ್ಳಬೇಕು. ಹಾಗೆಯೇ ವಹಿಸಿಕೊಂಡ ಕೆಲಸವನ್ನು ನಿಗದಿತ ಕಾಲಮಿತಿಯಲ್ಲಿಯೇ ಪೂರ್ಣಗೊಳಿಸಬೇಕೆಂದು ನಾನು ತಮ್ಮ ಮೂಲಕ ಸಚಿವರಲ್ಲಿ ವಿನಂತಿಸುತ್ತೇನೆ.

**ಶ್ರೀ ಬಿ.ಝೆಡ್.ಜಮೀರ್ ಅಹ್ಮದ್ ಖಾನ್:-** ಮಾನ್ಯ ಸಭಾಪತಿಯವರೆ, ಈಗಾಗಲೇ ತಿಳಿಸಿದಂತೆ, ಕರ್ನಾಟಕ ಗೃಹ ಮಂಡಳಿ ವತಿಯಿಂದ ಆನೇಕಲ್ ತಾಲ್ಲೂಕಿನಲ್ಲಿ ವಸತಿ ಬಡಾವಣೆ ನಿರ್ಮಾಣ ಯೋಜನೆಯನ್ನು ಹಮ್ಮಿಕೊಂಡಿದೆ. ಇದಕ್ಕೆ ಕನಿಷ್ಠ ಒಂದು ಸಾವಿರ ಎಕರೆಗಳಷ್ಟು ಜಮೀನು ಅವಶ್ಯಕವಾಗಿದೆ. ನಮ್ಮ ಪಕ್ಷದ ಸರ್ಕಾರವು ಅಸ್ತಿತ್ವಕ್ಕೆ ಬಂದ ಮೇಲೆ, ನಾನು ಇಲಾಖೆಯ ಪ್ರಭಾರವನ್ನು ವಹಿಸಿಕೊಂಡ ಮೇಲೆ, ಮಾಡಿರುವ ಟೌನ್‌ಶಿಪ್ ಬಹಳ ಯಶಸ್ವಿಯಾಗಿದೆ. ಇದು ಎಲ್ಲರಿಗೂ ತಿಳಿದ ವಿಚಾರವಾಗಿದೆ. ನಾನು ಈಗಾಗಲೇ ತಿಳಿಸಿದಂತೆ, ಇಲಾಖೆಯ ವತಿಯಿಂದ ಐದು ಟೌನ್‌ಶಿಪ್ ಅನ್ನು ನಿರ್ಮಿಸಲಾಗುವುದು. ಆದರೆ, ಇದನ್ನು ಎಲ್ಲಿ ಮಾಡುತ್ತೇವೆ

ಎನ್ನುವುದನ್ನು ನಾನು ಹೇಳುವುದಕ್ಕಾಗುವುದಿಲ್ಲ. ಈ ಬಗ್ಗೆ ಯೋಜನೆಯನ್ನು ರೂಪಿಸಲಾಗಿದೆ. ಅದನ್ನು ಎಲ್ಲೆಲ್ಲಿ ಮಾಡುತ್ತೇವೆ ಎಂದು ಈಗಲೇ ಹೇಳಿದರೆ, ರೈತರು ಜಮೀನನ್ನು ನೀಡುವುದಿಲ್ಲ. ಈಗಾಗಲೇ ಯೋಜನೆಯನ್ನು ರೂಪಿಸಿದರನ್ವಯ, ಐದು ಟೌನ್‌ಶಿಪ್‌ನ್ನು ಮಾಡುತ್ತೇವೆ. ಹೊಸಕೋಟೆ ಯೋಜನೆಯ ಬಗ್ಗೆ ಈಗಾಗಲೇ ಮಾಹಿತಿಯನ್ನು ನೀಡಲಾಗಿದೆ. ಹಿಂದಿನ ಸರ್ಕಾರದ ಅವಧಿಯಲ್ಲಿ ವಸತಿ ಯೋಜನೆಗಾಗಿ ಅಲ್ಲಿ ಕೇವಲ 71 ಎಕರೆ 29 ಗುಂಟೆ ಜಮೀನನ್ನು ಗುರ್ತಿಸಲಾಗಿತ್ತು. ಆಗ ಟೌನ್‌ಶಿಪ್ ಎಂಬ ಕರಪತ್ರಗಳನ್ನೂ ಸಹ ಹಂಚಲಾಗಿತ್ತು. ಇಷ್ಟು ಕಡಿಮೆ ವಿಸ್ತೀರ್ಣದ ಜಮೀನಿನಲ್ಲಿ ಟೌನ್‌ಶಿಪ್ ಅನ್ನು ನಿರ್ಮಿಸಲು ಸಾಧ್ಯವಾಗುವುದಿಲ್ಲ. ಟೌನ್‌ಶಿಪ್ ಅನ್ನು ಮಾಡಲು ಕನಿಷ್ಠ ಒಂದು ಸಾವಿರ ಎಕರೆಗಳಷ್ಟು ಜಮೀನಿನ ಅವಶ್ಯಕತೆ ಇದೆ. ವಸತಿ ಇಲಾಖೆಯಿಂದ ಬೇರೆ ಬೇರೆ ಇಲಾಖೆಗಳ ನಿರ್ಮಾಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದು ಬೇಡ ಎಂಬುದಾಗಿ ಸದಸ್ಯರು ಸಲಹೆಯನ್ನು ನೀಡದ್ದಾರೆ. ಈ ವಿಚಾರದಲ್ಲಿ ನಮಗೆ ಯಾವುದೇ ರೀತಿಯ ಸಮಸ್ಯೆಗಳಾಗುತ್ತಿಲ್ಲ. ಮುಂದುವರೆದು, ಇದುವರೆವಿಗೂ ಈ ರೀತಿಯ ಯಾವುದೇ ಸಮಸ್ಯೆಗಳು ಉದ್ಭವಿಸಿರುವುದಿಲ್ಲ. ಆಯಾ ಕೆಲಸಗಳು ನಡೆಯುತ್ತಲೇ ಇವೆ.

(ಮುಂದು)

(668)24-07-2024/12-10/bkp-bns (ಸಭಾಪತಿಯವರ ಉಪಸ್ಥಿತಿ)

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಕೋಲಾರದ ಕಡೆ ಹೋದಾಗ **(ಗೊಂದಲ)** ಅಲ್ಲಿ ಕಟ್ಟಿರುವ ಕಾಲೇಜು ಕಟ್ಟಡವನ್ನು ನೋಡಬೇಕು. ಅಲ್ಲಿ ಕಳಪೆ ಕೆಲಸವನ್ನು ಮಾಡಿದ್ದಾರೆ. ಆದ್ದರಿಂದ, ಮಾನ್ಯ ಸಚಿವರು ಒಂದು ಬಾರಿ ಗಮನಿಸಬೇಕು.

**ಶ್ರೀ ಬಿ.ಝಡ್.ಜಮೀರ್ ಅಹ್ಮದ್ ಖಾನ್:-** ನಾನು ನೋಡುತ್ತೇನೆ.

**ಪ್ರಶ್ನೆ ಸಂಖ್ಯೆ 858**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನನ್ನ ಪ್ರಶ್ನೆ ಏನೆಂದರೆ, ಸಬ್ ರಿಜಿಸ್ಟ್ರಾರ್ ಕಚೇರಿಗಳಲ್ಲಿ ಈ ಕಾವೇರಿ 2.0 ತಂತ್ರಾಂಶವನ್ನು ಅಳವಡಿಸಿದ ಮೇಲೆ ಸಾರ್ವಜನಿಕರಿಗೆ ಏನೇನು ತೊಂದರೆಗಳು ಆಗುತ್ತಿತ್ತು, ಅಲ್ಲಿ ಸರ್ಕಾರದ ಯಾವುದೇ ಕೆಲಸಗಳಿಗೆ ಬೇಕಾದಂತಹ ಮತ್ತು E.C. (Encumbrance Certificate) ಪಡೆಯುವುದು ಇರಬಹುದು ಅಥವಾ ಏನು time slot ಕೊಟ್ಟಿರುತ್ತಾರೆ, ಅಷ್ಟರೊಳಗಡೆ ಹೋಗದಿದ್ದರೆ, ರೈತರಿಗೆ ಮತ್ತೆ, 24 ಗಂಟೆಗಳ ಕಾಲ ಕಾಯಬೇಕಾಗುತ್ತದೆ ಎನ್ನುವ ವಿಚಾರದ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೆ. ಇದಕ್ಕೆ ಸಂಬಂಧಪಟ್ಟಂತೆ "ವಿಜಯವಾಣಿ" ಪತ್ರಿಕೆಯಲ್ಲಿ ಮೇ 24 ಮತ್ತು ಮೇ 31 ರಂದು ಸ್ಪಷ್ಟವಾದ ಒಂದು ವರದಿ ಬಂದಿದೆ. ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ passport ಮಾಡಲು ಜಾರಿ, ನಿಗದಿತ ಸಮಯಕ್ಕೆ ಬರದಿದ್ದರೆ ಮತ್ತೆ 24 ಗಂಟೆ ಕಾಯಲೇಬೇಕು, 'ಕಾವೇರಿ ಈಗ ಟೈಮ್‌ಗೆ ವರಿ' ಎನ್ನುವುದು ಒಂದು ವಿಚಾರ. ಹಾಗೆಯೇ "3 ದಿನಗಳಂದ ಸಿಗುತ್ತಿಲ್ಲ ಋಣಬಾರ ಪತ್ರ" "ಕಾವೇರಿ 2.0 ಗೆ ಮತ್ತೆ ಗ್ರಹಣ" ಆಸ್ತಿ ವ್ಯವಹಾರ ನಡೆದರೂ ನಮೂದು ಆಗುತ್ತಿಲ್ಲ. ಇಲ್ಲಿ ಬಹಳ ಮುಖ್ಯವಾಗಿ ಕಾವೇರಿ 2.0 ನಲ್ಲಿ ಗೊಂದಲಗಳು ಏನಿವೆ ಎಂದರೆ, "ದಾಸ್ತವೇಜು ನೋಂದಣಿಗೆ ಜನರ ಪರದಾಟ" ನಿಗದಿತ ಸಮಯ ಪ್ರಯೋಗ, ಪಾಸ್‌ಪೋರ್ಟ್ ಕಚೇರಿ ಮಾದರಿ ಸೇವೆ, ಸಮಯ ಮೀರಿ ಹೋದರೆ ಅವಕಾಶವಿಲ್ಲ, ಮತ್ತೆ ಸಮಯಕ್ಕೆ 24 ಗಂಟೆ ಕಾಯಬೇಕು, **(ಗೊಂದಲ)**ವಿಳಂಬವಾಗಿ ಬಂದವರಿಗೆ ಸಮಸ್ಯೆ....

**ಸಭಾಪತಿಯವರು:-** ಪ್ರಶ್ನೆಯನ್ನು ಕೇಳಿ.

**ಶ್ರೀ ಚಿದಾನಂದ್ ಎಂ.ಗೌಡ:-** ಮಾನ್ಯ ಸಭಾಪತಿಯವರೆ, ಈ ರೀತಿಯಾಗಿ ಹಲವಾರು ಸಮಸ್ಯೆಗಳಿವೆ. ಆದರೆ, ಇಲ್ಲಿ ಸಚಿವರು ಕೊಟ್ಟಿರುವಂತಹ ಉತ್ತರದಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಯಾವ ಸಮಸ್ಯೆಯೂ ಇಲ್ಲ ಎನ್ನುವ ರೀತಿಯಲ್ಲಿ ತಮ್ಮ ಉತ್ತರ ಇದೆ. ಹಾಗಾಗಿ, ಈ ವಿಚಾರದಲ್ಲಿ ಒಂದು ದೊಡ್ಡ ಸಮಸ್ಯೆ ಎಂದರೆ ಸರ್ವರ್ ಪದೇ ಪದೇ ಡೌನ್ ಆಗಿದೆ ಎನ್ನುವಂತಹ ದೂರುಗಳನ್ನು ಸಾರ್ವಜನಿಕರು ಹೇಳುತ್ತಿದ್ದಾರೆ. ಅದರ ಜೊತೆಗೆ ಕಾವೇರಿ 2.0 ತಂತ್ರಾಂಶದಿಂದ ಏನು ಪ್ರಯೋಜನ ಎಂದರೆ ಅಲ್ಲಿ ಸಬ್ ರಿಜಿಸ್ಟ್ರಾರ್‌ಗಳು ಸ್ವಲ್ಪ ಹೆಚ್ಚು ಕಡಿಮೆ, personally ಮಾತನಾಡುವಾಗ ಹೇಳುವುದು, ನಮಗೆ ಪಕ್ಕ ಲೆಕ್ಕ ಸಿಗುತ್ತದೆ, ನಮಗೆ ಎಷ್ಟು ಹಣ ಬರಬೇಕೆನ್ನುವುದು ಸರಿಯಾಗಿ ಲೆಕ್ಕ ಸಿಗುತ್ತದೆನ್ನುವ ವಿಚಾರವನ್ನು ಅವರು ಹೇಳುತ್ತಿದ್ದಾರೆ. ಅಂದರೆ, ಸರ್ಕಾರಕ್ಕೆ ಬರಬೇಕಾದ ಹಣದ ಬಗ್ಗೆ ಅವರು ಮಾತನಾಡುತ್ತಿಲ್ಲ. ನಮಗೆ ಎಷ್ಟು ಬರಬೇಕು ಎನ್ನುವುದು ಪಕ್ಕಾ ಬರುತ್ತಿದೆ, ಲೆಕ್ಕ ಸರಿಯಾಗಿ ಸಿಗುತ್ತಿದೆ ಎನ್ನುವ ಮಾತನ್ನು ಕೂಡ

ಅವರು ಖಾಸಗಿಯಾಗಿ ಹೇಳುವಂತಹದ್ದು ಇದೆ. ದಯಮಾಡಿ ಮಾನ್ಯ ಸಚಿವರು ಈ ಬಗ್ಗೆ ಗಮನಹರಿಸಿ, ಉತ್ತರವನ್ನು ಹೇಳಬೇಕೆಂದು ನಾನು ವಿನಂತಿ ಮಾಡುತ್ತೇನೆ.

**ಶ್ರೀ ಕೃಷ್ಣಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೆ, ಕಾವೇರಿ 2.0 ತಂತ್ರಾಂಶ ಆರಂಭವಾದ ಮೇಲೆ ಕೆಲವೊಂದು ಸಮಸ್ಯೆಗಳಿವೆ, ನಾನು ಇಲ್ಲವೆಂದು ಹೇಳುತ್ತಿಲ್ಲ. ಆದರೆ, ಬಂದಂತಹ ಸಮಸ್ಯೆಗಳನ್ನು ನಾವು ಕಾಲದಿಂದ ಕಾಲಕ್ಕೆ ಪರಿಹಾರ ಮಾಡುವಂತಹ ಕೆಲಸವನ್ನು ಮಾಡುತ್ತಲೇ ಇದ್ದೇವೆ. ಕಳೆದ ವರ್ಷ ಜೂನ್‌ನಿಂದ ನಾವು ಇದನ್ನು ಕಡ್ಡಾಯವಾಗಿ, ಅನುಷ್ಠಾನ ಮಾಡಿದ್ದೇವೆ. ನಾನು ಉತ್ತರದಲ್ಲೂ ಸಹ ಹೇಳಿದ್ದೇನೆ, ಕಾವೇರಿ 2.0 ತಂತ್ರಾಂಶವನ್ನು ಉಪಯೋಗಿಸುವುದರಲ್ಲಿ ಸಾರ್ವಜನಿಕರಿಗೆ ಕೆಲವು ಸಮಸ್ಯೆಗಳು ಕಂಡು ಬಂದಿದ್ದು, ಅವುಗಳನ್ನು ಕಾಲಕ್ರಮೇಣ ಪರಿಹರಿಸಲಾಗುತ್ತಿದೆ ಹಾಗೂ ಅವುಗಳಿಗೆ ಏನೆಲ್ಲಾ ಕ್ರಮ ಕೈಗೊಂಡಿದ್ದೇವೆಂದು ನಾನು ಪೂರ್ಣವಾಗಿ ಲಿಸ್ಟನ್ನೂ ಸಹ ಕೊಟ್ಟಿದ್ದೇನೆ. ಸಮಸ್ಯೆ ಇಲ್ಲವೆಂದು ಹೇಳುತ್ತಿಲ್ಲ. ಈಗ ನಾವು ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇವೆ. Specifically 3 ವಿಷಯಗಳ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ನಾವು time slot ಅನ್ನು ನಿಗದಿ ಮಾಡಿದ್ದೇವೆ. ಉದಾಹರಣೆಗೆ, ಅವರು ಅಪಾಯಿಂಟ್‌ಮೆಂಟ್ ಅನ್ನು ಬೆಳಗ್ಗೆ 11-00 ಗಂಟೆಗೆ ತೆಗೆದುಕೊಳ್ಳುತ್ತಾರೆ. ಬೆಳಗ್ಗೆ 11-30 ಗಂಟೆಯವರೆಗೂ ನಾವು ಕಾಯುತ್ತೇವೆ. ಬೆಳಗ್ಗೆ 11-30 ಗಂಟೆಗೂ ಅವರು ಬರಲಿಲ್ಲವೆಂದರೆ ಅವರು ಮುಂದೆ ಅಪಾಯಿಂಟ್‌ಮೆಂಟ್ ತೆಗೆದುಕೊಂಡು ಬರಬೇಕೆಂದು ಹೇಳಿ ನಾವು ಕಂಪಲ್ಸರಿ ಮಾಡಿದ್ದೇವೆ, ನಿಜ. ಏತಕ್ಕೆ ಮಾಡಿದ್ದೇವೆಂದು ಸಂಕ್ಷಿಪ್ತವಾಗಿ ಹೇಳುತ್ತೇನೆ. ಯಾವ ನೋಂದಣಿ ಕಛೇರಿಗೆ ಹೋದರೂ ಕೂಡ ಜನಜಂಗುಳಿ ಇರುತ್ತದೆ. ಎಲ್ಲಾ ಜನ ಪ್ರತಿನಿಧಿಗಳದ್ದು ದೂರು ಇದೇ ಆಗಿರುತ್ತದೆ. ಜನಗಳದ್ದು ಸಹ ದೂರು ಇದೇ ಆಗಿರುತ್ತದೆ. ಏತಕ್ಕೆ ಈ ರೀತಿಯಲ್ಲಿ ಜನಜಂಗುಳಿಯಾಗುತ್ತಿದೆ ಎಂದು ಹೋಗಿ ನೋಡಿದರೆ ಅಲ್ಲಿ ಏನು ಮಾಡುತ್ತಿದ್ದಾರೆಂದರೆ ಕೆಲವರು ಅಪಾಯಿಂಟ್‌ಮೆಂಟ್ ತೆಗೆದುಕೊಳ್ಳದೆ ನೇರವಾಗಿ ಅಲ್ಲಿಗೆ ಬಂದು ಸಬ್ ರಿಜಿಸ್ಟ್ರಾರ್‌ಗೆ ದಾಖಲೆಗಳನ್ನು ಸಬ್‌ಮಿಟ್ ಮಾಡುತ್ತಾರೆ. ಅಲ್ಲಿ ಅವರಿಗೆ ವಿಶೇಷ ಆದ್ಯತೆಗಳಡಿಯಲ್ಲಿ ಅವರದ್ದನ್ನೂ ಸಹ ಇವರು ತೆಗೆದುಕೊಳ್ಳುತ್ತಾರೆ. ಅಪಾಯಿಂಟ್‌ಮೆಂಟ್ ತೆಗೆದುಕೊಂಡು ಬರುವುದು ಬೇರೆ. ಅಪಾಯಿಂಟ್‌ಮೆಂಟ್ ತೆಗೆದುಕೊಳ್ಳದೇ ಬರುವವರಿಗೆ ಅಲ್ಲಿ ಆದ್ಯತೆ, special consideration. ಅವರುಗಳೆಲ್ಲರೂ without appointment ಬರುವುದರಿಂದ ಏನಾಗುತ್ತದೆ ಎಂದರೆ ಯಾರು ಅಪಾಯಿಂಟ್‌ಮೆಂಟ್ ತೆಗೆದುಕೊಂಡು ಬಂದಿದ್ದಾರೆ, ಅವರು ಕೂಡ ಕಾಯಬೇಕು. ಈಗ ನೀವು ಹೇಳಿದಂತೆ ಬೆಳಗ್ಗೆ 11-00 ರಿಂದ 11-30 ಗಂಟೆಯವರೆಗೂ ಕಾಯುತ್ತೀರಿ, ಅಷ್ಟು ಹೊತ್ತಿಗೆ ಅವರು ಬರಲಿಲ್ಲವೆಂದರೆ ಅವರು ಮುಂದಿನ ದಿನ ಬರಬೇಕಾಗುತ್ತದೆ. ಇದು ತೊಂದರೆಯಲ್ಲವೇ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಈಗ ನಾವು ಅವರಿಗೆ ಬೆಳಗ್ಗೆ 11-00 ಗಂಟೆಗೆ ಅಪಾಯಿಂಟ್‌ಮೆಂಟ್ ಕೊಡುತ್ತೇವೆ. ಅವರು ಏನು ಮಾಡುತ್ತಾರೆಂದರೆ ಮಧ್ಯಾಹ್ನ 12-30 ಗಂಟೆಗೆ ಬರುತ್ತಾರೆ. ನೀವು ಯಾವುದೇ ಸಬ್ ರಿಜಿಸ್ಟ್ರಾರ್ ಕಛೇರಿಗೆ ಹೋದರೂ

ಮಧ್ಯಾಹ್ನ 12-00 ಗಂಟೆಯಿಂದ 3-00 ಗಂಟೆಯವರೆಗೂ ಜನ ಜಾತ್ರೆ ಇರುತ್ತದೆ. ಏಕೆಂದರೆ, ಒಂದು timing discipline ಇರುವುದಿಲ್ಲ. ಆದ್ದರಿಂದ, ಅವರು ಅಪಾಯಿಂಟ್‌ಮೆಂಟ್ ತೆಗೆದುಕೊಂಡ ಸಮಯಕ್ಕೆ ಬರಬೇಕು. ಬಂದವರು ಮುಗಿಸಿಕೊಂಡು ಹೋಗುತ್ತಿರುತ್ತಾರೆ. ಒಂದು registration ಗೆ maximum 20 ರಿಂದ 30 ನಿಮಿಷಕ್ಕೆ ಮುಗಿದು ಹೋಗುತ್ತದೆ. ನಾವು time slot ನೋಡುತ್ತೇವೆ. 20 ಜನರು ಇದ್ದರೆ ಅರ್ಧ ಗಂಟೆ ಸಮಯ ಕೊಡುತ್ತೇವೆ. ಬರಿ 5 ಜನರು ಇದ್ದರೆ 15 ನಿಮಿಷ ಅಷ್ಟೆ ಕೊಟ್ಟಿರುತ್ತೇವೆ. ಹೀಗಾಗಿ, ಅಲ್ಲಿಗೆ ಬಂದವರು ಅವರುಗಳ ಕೆಲಸ ಮುಗಿಸಿಕೊಂಡು ಹೋಗಬೇಕು. ನಾವು ಟೈಮ್ ಲಿಮಿಟ್ ಅನ್ನು enforce ಮಾಡಲಿಲ್ಲವೆಂದರೆ ಬೆಳಗ್ಗೆ 10-30 ಗಂಟೆಗೆ ಅಪಾಯಿಂಟ್‌ಮೆಂಟ್ ತೆಗೆದುಕೊಂಡವರು ಮಧ್ಯಾಹ್ನ 3-00 ಗಂಟೆಗೆ ಬರುತ್ತಾರೆ. ಶಿಸ್ತು ಇರುವುದಿಲ್ಲ. ಜನ-ಜಂಗುಳಿಯಾಗುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ. ಒಂದು ಶಿಸ್ತು ಇರಬೇಕೆಂದು ಹೇಳಿ ಅದನ್ನು ಮಾಡಿದ್ದೇವೆ.

ಮೂರನೆಯದಾಗಿ ಇ.ಸಿ. ವಿಷಯವನ್ನು ಹೇಳಿದರು, ಇಲ್ಲಿಯವರೆಗೆ ಒಟ್ಟು 35,64,863 ಇ.ಸಿ.ಗಳನ್ನು ನಾವು ಒದಗಿಸಿಕೊಟ್ಟಿದ್ದೇವೆ. ಪೆಂಡಿಂಗ್ ಇರುವುದು ಕೇವಲ 4296 ಇ.ಸಿ.ಗಳು ಮಾತ್ರ. ಇದು ಓವರ್ ಡ್ಯೂ ಇರುವಂತಹದ್ದು. ಹಾಗಾಗಿ, ಸ್ವಲ್ಪ ಸಮಸ್ಯೆ ಇರಬಹುದು. 2004ಕ್ಕಿಂತ ಹಿಂದಿನದ್ದು, ಮ್ಯಾನುಯಲ್ ಆಗಿದೆ. ಈಗ ಸದ್ಯದಲ್ಲಿಯೇ ಅದನ್ನೂ ಕೂಡ digitalise ಮಾಡಿ, ಆನ್‌ಲೈನ್‌ನಲ್ಲಿ ಮಾಡುವಂತಹದ್ದನ್ನು ಮಾಡುತ್ತೇವೆ. ಇ.ಸಿ. ಸ್ವಲ್ಪ ವಿಳಂಬವಾಗಲಿಕ್ಕೆ ಕಾರಣ ಅವರು enter ಮಾಡುವಾಗ ನಿಖರವಾಗಿ data ವನ್ನು enter ಮಾಡಿರುವುದಿಲ್ಲ, ಅದು ಒಂದು ಕಾರಣ ಇದೆ. ಬೇರೆ ಕಾರಣಗಳು ಸಹ ಇವೆ. ಇದನ್ನೆಲ್ಲಾ ಒಟ್ಟಿನಲ್ಲಿ ಬಂದಂತಹ ಸಮಸ್ಯೆಗಳನ್ನು ನಾವು ಗಮನಕ್ಕೆ ತೆಗೆದುಕೊಂಡು ಪರಿಹಾರ ಮಾಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಇದು ನಮ್ಮ ನೋಂದಣಿ ಪ್ರಕ್ರಿಯೆ ಬಗ್ಗೆ ಬಹಳ ದೂರುಗಳಿವೆ, ಅದನ್ನು ಪರಿಹಾರ ಮಾಡಲಿಕ್ಕೆ ನಾನಾ ಬದಲಾವಣೆಗಳನ್ನು ತರುತ್ತಿದ್ದೇವೆ. ಬದಲಾವಣೆ ತಂದಾಗ ಸ್ವಾಭಾವಿಕವಾಗಿ ಅದಕ್ಕೆ ನಾನಾ ರೀತಿಯ ವ್ಯಾಖ್ಯಾನಗಳನ್ನು ಮಾಡುವುದು ಇರುತ್ತದೆ. ಆದರೆ, ನಮ್ಮ ಮೂಲ ಉದ್ದೇಶ, ಸುಧಾರಣೆಯಾಗಬೇಕು, ನಿಜ. ಈ ವಿಚಾರವಾಗಿ ನನಗೆ ಎಲ್ಲರೂ ಬಂದು ಕೇಳುತ್ತಾರೆ. ಈ ಸದನದಲ್ಲೂ ಕೇಳಿದರು. ಏನ್ರೀ ಪಾಸ್‌ಪೋರ್ಟ್ ಅಂತಹದ್ದನ್ನೇ ಎಷ್ಟೊಂದು ಸರಳೀಕರಣ ಮಾಡಿದ್ದಾರೆ, ನೀವು ಏತಕ್ಕೆ ಪಾಸ್‌ಪೋರ್ಟ್ ಕಚೇರಿ ಮಾದರಿಯಲ್ಲಿ ಅನುಸರಣೆ ಮಾಡಲಿಕ್ಕೆ ಆಗುತ್ತಿಲ್ಲವೆಂದು ಇದೇ ಸದನದಲ್ಲಿ ಮಾತನಾಡಿದ್ದಾರೆ. ಇವುಗಳೆಲ್ಲವನ್ನು ಗಮನದಲ್ಲಿಟ್ಟುಕೊಂಡು ಸುಧಾರಣೆಗಳನ್ನು ತರುತ್ತಿದ್ದೇವೆ.

**ಪ್ರಶ್ನೆ ಸಂಖ್ಯೆ: 958**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ಎಲ್.ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಲೋಕೋಪಯೋಗಿ ಸಚಿವರು ಉತ್ತರವನ್ನು ಒದಗಿಸಿದ್ದಾರೆ. 2023-24ನೇ ಸಾಲಿನ ಆಯವ್ಯಯದಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಕೈಗಾರಿಕಾ ಕಾರಿಡಾರ್ ರಸ್ತೆಯನ್ನು ಘೋಷಣೆ ಮಾಡಿದ್ದರು. ಅದು ದೇವನಹಳ್ಳಿ, ವಿಜಯಪುರ, ಹೆಚ್ ಕ್ರಾಸ್, ವೇಮಗಲ್, ನರಸಾಪುರ, ಮಾಲೂರು ನಿಂದ ತಮಿಳುನಾಡು ಗಡಿಯವರೆಗೆ ರೂ. 1,826 ಕೋಟಿ ವೆಚ್ಚದಲ್ಲಿ ಈ ಯೋಜನೆಯನ್ನು ಮಾಡುತ್ತೇವೆಂದು ಬಜೆಟ್‌ನಲ್ಲಿ ಘೋಷಣೆ ಮಾಡಿದ್ದರು. ಈಗ ಒಂದು ವರ್ಷ ಕಳೆದಿದೆ. ಇದು ಯಾವ ಹಂತದಲ್ಲಿ ಇದೆ ಎಂದು ಹೇಳಿ ನಾನು ಕೇಳಿದ್ದೆ. ಅದಕ್ಕೆ ಇವರು ಈಗ DPR (Detailed Project Report) ಮಾಡುವುದಕ್ಕೆ ದಿನಾಂಕ:6-9-2023 ರಂದು ಯಾವುದೋ ಒಂದು ಏಜೆನ್ಸಿಗೆ ಕೊಟ್ಟಿದ್ದೇವೆಂದು ಹೇಳಿದರು, ಡಿಪಿಆರ್ ಮಾಡುವುದಕ್ಕೆ ಈಗಾಗಲೇ ಕೊಟ್ಟು 11 ತಿಂಗಳಾಗಿದೆ. ಡಿಪಿಆರ್ ಬಂದ ಮೇಲೆ ಮತ್ತೆ ಸರ್ಕಾರದ ಏನು ಏಕ ಗವಾಕ್ಷಿ ಸಮಿತಿಯಲ್ಲಿ ಒಪ್ಪಿಗೆ ತೆಗೆದುಕೊಂಡು ಟೆಂಡರ್ ಕೂಡ ಮಾಡಬೇಕಾಗುತ್ತದೆ. ಇದು ಏನಾಗುತ್ತದೆ ಎಂದರೆ ಈ ಇಂಡಸ್ಟ್ರಿಯಲ್ ಕಾರಿಡಾರ್ ರಸ್ತೆ ಏನಿದೆ, ದೇವನಹಳ್ಳಿ, ವಿಜಯಪುರ, ಹೆಚ್ ಕ್ರಾಸ್, ವೇಮಗಲ್ ನರಸಾಪುರ, ಮಾಲೂರು ನಿಂದ ತಮಿಳುನಾಡು ಗಡಿಯವರೆಗೆ ಕೆಲಸ ಅದರೆ, ಪುಣೆ-ಬಾಂಬೆ ಮಂಗಳೂರು ಮತ್ತು ಹೈದ್ರಾಬಾದ್‌ನಿಂದ ಏನು ಚೆನ್ನೈಗೆ ಹೋಗುತ್ತಾರೆ, ಅವರು ಬೆಂಗಳೂರು ಮಾರ್ಗವಾಗಿ ಬರುವುದು ತಪ್ಪುತ್ತದೆ. ಇದು ಬೆಂಗಳೂರಿನ ಮೇಲೆ ಇರುವಂತಹ ಒತ್ತಡ ತಪ್ಪುವುದರಿಂದ, ಇದು ಬಹಳಷ್ಟು ಉಪಯೋಗ ಆಗುವಂತಹ ರಸ್ತೆಯಾಗುತ್ತದೆ.

ಆದ್ದರಿಂದ, ಆದಷ್ಟು ಬೇಗ ತ್ವರಿತಗತಿಯಲ್ಲಿ fast track ನಲ್ಲಿ ಮಾನ್ಯ ಸಚಿವರು ತೆಗೆದುಕೊಂಡು ಇದನ್ನು ಮಾಡಿಕೊಡಬೇಕು. ಜೊತೆಗೆ ಈ ರಸ್ತೆಗೆ ಕೋಲಾರದಿಂದ ವೇಮಗಲ್‌ಗೆ ಒಂದು ಸಂಪರ್ಕ ರಸ್ತೆ, ಮತ್ತೆ ಮಾಲೂರಿನಿಂದ ಹೊಸಕೋಟೆಗೆ ಒಂದು ಸಂಪರ್ಕ ರಸ್ತೆಯನ್ನು ಮಾನ್ಯ ಸಚಿವರು ಮಾಡಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ನಾನು ಮನವಿ ಮಾಡುತ್ತೇನೆ.

**ಶ್ರೀ ಸತೀಶ್ ಜಾರಕಿಹೊಳಿ (ಲೋಕೋಪಯೋಗಿ ಸಚಿವರು):-** ಮಾನ್ಯ ಸಭಾಪತಿಯವರೆ, ಈ ಕೆಲಸ ಸ್ವಲ್ಪ ವಿಳಂಬವಾಗಿದೆ. ಈಗ KRDCL (Karnataka Road Development Corporation Limited) ನವರು ಅಂತಿಮವಾಗಿ ಡಿಪಿಆರ್ ಅನ್ನು ಒಂದು ವಾರದಲ್ಲಿ ಸಲ್ಲಿಸುತ್ತಾರೆ. ನಂತರ ಇದನ್ನು ಕ್ಯಾಬಿನೆಟ್‌ಗೆ ಕಳುಹಿಸಿ, ಸುಮಾರು 3 ತಿಂಗಳಲ್ಲಿ ಈ ಕಾಮಗಾರಿಗೆ ಟೆಂಡರ್ ಮಾಡುವಂತಹ ಭರವಸೆಯನ್ನು ನಾನು ಕೊಡುತ್ತೇನೆ.

(ಮುಂದು)

(669) 24.07.2024 12.20 ಎಸ್‌ವಿ-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಪ್ರಶ್ನೆ ಸಂಖ್ಯೆ ೮೮೦**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಉತ್ತರದಲ್ಲಿ ಬಾಕಿ ಮೊತ್ತ ಮತ್ತು ಶಕ್ತಿ ಯೋಜನೆಯ ಕಾರಣಗಳನ್ನು ಕೊಟ್ಟಿದ್ದಾರೆ. ಇನ್ನೊಂದು ಕಡೆ ಬಾಕಿ ಇರುವ ಮೊತ್ತವನ್ನು ಎಷ್ಟು ಸಮಯದಲ್ಲಿ ಕೊಡುತ್ತೀರಾ ಎಂದರೆ ಆಯವ್ಯಯದಲ್ಲಿ ಅಗತ್ಯ ಅನುದಾನ ದೊರಕಿದ ನಂತರ ಪಾವತಿಸುತ್ತೇವೆಂದು ಹೇಳಿದ್ದಾರೆ. ಹಾಗಾದರೆ ಆಯವ್ಯಯದಲ್ಲಿ ಈ ಒಂದು ಯೋಜನೆಗೆ provision ಇಟ್ಟಿಲ್ಲವೆ? ಏಕೆಂದರೆ ಅಂಕಿ-ಅಂಶಗಳಲ್ಲಿ ತೋರಿಸಿದ್ದಾರೆ. ರೂ.1,413 ಕೋಟಿಗಳ ಸಾರಿಗೆ ಸಂಸ್ಥೆಗಳಿಗೆ ಬಾಕಿ ಇದೆ. ಒಟ್ಟು ಬೇಕಾಗಿರುವುದು ರೂ.5,866 ಕೋಟಿ. ರೂ.4,453 ಕೋಟಿಗಳನ್ನು ಸಂದಾಯ ಮಾಡಿದರೂ ಕೂಡ ಬಾಕಿ ರೂ.1,413.47 ಕೋಟಿ ಇದೆ.

ಮಾನ್ಯ ಸಚಿವರೆ, ನಾನು ತಮ್ಮಲ್ಲಿ ಕೇಳುವುದೇನೆಂದರೆ ರೂ.55,000 ಕೋಟಿಗಳ ಹಣವನ್ನು ಗ್ಯಾರಂಟಿಗಳಿಗಾಗಿ ಇಟ್ಟಿದ್ದೀರಿ. ಆದರೆ ಶಕ್ತಿ ಯೋಜನೆಗೆ ತಾವು ಇಟ್ಟಿಲ್ಲವೇ? ಒಂದು ಕಡೆ ಸಾರಿಗೆ ಸಂಸ್ಥೆ ಲಾಭವಾಗಿ ನಡೆಯುತ್ತಿದೆ ಎಂದು ಹೇಳುತ್ತಾರೆ. ಇನ್ನೊಂದು ಕಡೆ ಹಣವನ್ನು ಬಾಕಿ ಇಟ್ಟು ಸಾರಿಗೆ ಸಂಸ್ಥೆ ನಷ್ಟದಲ್ಲಿರುವಂತೆ ಮಾಡಿದ್ದೀರಿ. ಈ ಸಂಕಷ್ಟದಿಂದ ಸಾರಿಗೆ ಸಂಸ್ಥೆಗಳು ಪಾರಾಗುವುದು ಯಾವಾಗ? ಅಥವಾ ಪೂರಕ ಬಜೆಟ್‌ವರೆಗೆ ಕಾಯಬೇಕೇ? ಬೇಡಿಕೆ ಎಷ್ಟು ಎಂಬುದನ್ನು ತಾವು ತಿಳಿಸಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಮತ್ತು ಮುಜರಾಯಿ ಸಚಿವರು):-** ಮಾನ್ಯ ಸಭಾಪತಿಯವರೆ, ಶಕ್ತಿ ಯೋಜನೆ ಪ್ರಾರಂಭವಾದ ಸಂದರ್ಭದಲ್ಲಿ ಪ್ರತಿದಿನ ನಾಲ್ಕು ಕಾರ್ಪೊರೇಷನ್‌ಗಳಿಂದ 80 ಲಕ್ಷ ಜನ ಓಡಾಡುತ್ತಿದ್ದರು. ಆ ಸಂದರ್ಭದಲ್ಲಿ almost ಶೇ.50 ಮಹಿಳೆಯರು ಓಡಾಡುತ್ತಾರೆ ಎಂದು ಅಂದಾಜು ಮಾಡಿ ಹಣಕಾಸು ಇಲಾಖೆಯವರು ರೂ.3,200 ಕೋಟಿ ಇಟ್ಟುಕೊಂಡರು. ನಾವು ಕಳೆದ ಜೂನ್ 11 ಕ್ಕೆ ಈ ಯೋಜನೆ ಪ್ರಾರಂಭ ಮಾಡಿದ್ದು, 8-10 ತಿಂಗಳ ನಂತರ 1 ಕೋಟಿ ತಲುಪಿದೆ. 20 ಲಕ್ಷ ಜನರ ಓಡಾಟ ಹೆಚ್ಚಾಯಿತು. ಅದಕ್ಕೆ ನಮಗೆ ಹಣ shortage ಬಂದಿತು. ಆ ಹಣ shortage ಬಂದಿದ್ದರಿಂದ ಇದು ಸ್ವಲ್ಪ ಉಳಿದುಕೊಂಡಿದೆ. ಈ ವರ್ಷ ರೂ.5,015 ಕೋಟಿ ಬಜೆಟ್‌ನಲ್ಲಿ ಇಟ್ಟುಕೊಂಡಿದ್ದೇವೆ. ಕಳೆದ ವರ್ಷ ಸ್ವಲ್ಪ shortage ಆಯಿತು. ಮಾನ್ಯ ಮುಖ್ಯಮಂತ್ರಿಯವರು ಬಸ್ ತೆಗೆದುಕೊಳ್ಳುವುದಕ್ಕೆ ಸುಮಾರು 600 ಕೋಟಿ working capital ಕೊಟ್ಟಿದ್ದಾರೆ. ರೂ.580 ಕೋಟಿ motor vehicle tax exemption ಅನ್ನು ಕೊಟ್ಟರು. ರೂ.600 ಕೋಟಿಗಳನ್ನು ಬಸ್

ಖರೀದಿಗಾಗಿ Capital ಗೆ ಎಂದು ಕೊಟ್ಟರು. ಉಳಿದಿರತಕ್ಕಂತಹ ರೂ.1,400 ಕೋಟಿಗಳಿಗೆ ಮಾನ್ಯ ಮುಖ್ಯಮಂತ್ರಿಯವರಿಗೆ ಮನವಿ ಕೊಟ್ಟಿದ್ದೇವೆ. ಅದಕ್ಕೆ ಆಯವ್ಯಯ ಎಂದೇನೂ ಕಾಯಬೇಕಾಗಿಲ್ಲ. ಪೂರಕ ಬಜೆಟ್‌ನಲ್ಲಿ ಮಾಡಿಕೊಡುತ್ತೇನೆಂದು ಹೇಳಿದ್ದಾರೆ.

ಲಾಭದ ಬಗ್ಗೆ ಕೇಳಿದ್ದೀರಿ. ಲಾಭ ಬರುತ್ತಿದೆ. ಏಕೆ ನಷ್ಟವಾಗುತ್ತಿದೆ ಎಂದರೆ ಬಿಎಂಟಿಸಿಯಲ್ಲಿ 10 ವರ್ಷದಿಂದ ನಾವು ಟಿಕೆಟ್ ದರವನ್ನು ಏರಿಸಲು ಅವಕಾಶ ಕೊಟ್ಟಿರುವುದಿಲ್ಲ. 10 ವರ್ಷಕ್ಕೆ ಮುಂಚೆ salaries ಎಷ್ಟಿತ್ತು? ಡೀಸೆಲ್ ಬೆಲೆ ಎಷ್ಟಿತ್ತು? ಆಮೇಲೆ wear and tear ಹಾಗೂ spare parts ಬೆಲೆ ಎಷ್ಟಿತ್ತು? KSRTC (Karnataka State Road Transport Corporation), NWRTC (North Western Karnataka Road Transport Corporation) ಹಾಗೂ KKRTC (Kalyana Karnataka Road Transport Corporation) ಈ ಮೂರು ಕಾರ್ಪೊರೇಷನ್‌ಗಳಲ್ಲಿ 2020ರಲ್ಲಿ ಟಿಕೆಟ್ ದರ ಏರಿಕೆ ಮಾಡಲಾಗಿತ್ತು. ನಾಲ್ಕು ವರ್ಷದಿಂದ ಮಾಡಿರಲಿಲ್ಲ. ಅದರಿಂದ ಏನಾಗುತ್ತದೆಯೆಂದರೆ ನಮಗೆ ಲಾಭ ಬಂದರೂ ಕೂಡ ಈ ನಾಲ್ಕು ನಿಗಮಗಳ fuel charges, day-to-day expenses, salaries ಹಾಗೂ wear and tear ಇವುಗಳ ಖರ್ಚು ಜಾಸ್ತಿಯಾಗಿದೆ. ನಮಗೆ ಬರುತ್ತಿರುವ ಲಾಭ ಅದಕ್ಕೆ ಹೋಗುತ್ತಿದೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಚಿವರೆ, ನಿಮಗೆ ಹೆಚ್ಚಿನ ಲಾಭ ಬರುವುದು ಹೆಣ್ಣುಮಕ್ಕಳಿಂದ. ಉಚಿತ ಎಂದು ಹೇಳಿದ ಕೂಡಲೇ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಓಡಾಡುತ್ತಾರೆ. ಅದರಿಂದ ಸಾರಿಗೆ ಸಂಸ್ಥೆ ಲಾಭದಲ್ಲಿದೆ. ನೀವು ಬಸ್ ಖರೀದಿ ಮಾಡಿದ್ದೇವೆ ಎನ್ನುವ ಕಾರಣವನ್ನೇನೂ ನನಗೆ ಕೊಟ್ಟಿಲ್ಲ. ಶಕ್ತಿ ಯೋಜನೆಯೇ ಒಂದು ಕಾರಣ ಎಂದು ಕೊಟ್ಟಿದ್ದೀರಿ. ಸರ್ಕಾರ ದುಡ್ಡು ಕೊಡುವುದರಿಂದ ಲಾಭದಾಯಕವಾಗಿರುತ್ತದೆ. ಹೆಣ್ಣುಮಕ್ಕಳು ಫ್ರೀ ಎನ್ನುವ ಕಾರಣಕ್ಕೆ ಖುಷಿಯಿಂದ ಹೋಗುತ್ತಾರೆ. ಆ ದುಡ್ಡನ್ನು ಸರ್ಕಾರವೇ ಕೊಡುವುದರಿಂದ ಅದು ಅಲ್ಲಿಗೆ ಲಾಭವಾಗಿದೆ. ಆದರೆ ಸರ್ಕಾರಕ್ಕೆ ಖೋತಾ ಆಗಿಯೇ ಆಗುತ್ತದೆ.

ಇನ್ನೊಂದು ಅಂಶವೆಂದರೆ ಈ ಬಜೆಟ್‌ನಲ್ಲಿ ಪ್ರಾವಿಷನ್ ಇಡುತ್ತೀರಾ? ರೂ.5866 ಕೋಟಿ...

**ಶ್ರೀ ರಾಮಲಿಂಗಾರೆಡ್ಡಿ:-** ಮಾನ್ಯ ಸಭಾಪತಿಯವರೆ, ಹೋದ ಸಲ ಇದ್ದದ್ದು ರೂ.1,300 ಕೋಟಿ. ಈ ಸಲ ರೂ.5,015 ಕೋಟಿಗಳನ್ನು provision ಮಾಡಿದ್ದೇವೆ.

**ಶ್ರೀಮತಿ ಭಾರತಿ ಶೆಟ್ಟಿ:-** ನಾನು ಮುಂದಿನ ಪ್ರಶ್ನೆಯನ್ನು ಕೇಳುವಾಗ ಇನ್ನೂ ಖೋತ ಬರುತ್ತದೆ. ಏಕೆಂದರೆ, ಇದು carry over ಆಗುತ್ತದೆ.

**ಶ್ರೀ ರಾಮಲಿಂಗಾರೆಡ್ಡಿ:-** ಮಾನ್ಯ ಸಭಾಪತಿಯವರೆ, 2024-25ಕ್ಕೆ ಹೆಚ್ಚು ಕಡಿಮೆ ಸರಿ ಹೋಗಬಹುದು ಅಥವಾ ಸ್ವಲ್ಪ shortage ಬರಬಹುದು. **(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:-** ಸ್ವಲ್ಪ ಅಲ್ಲ. ಈ ಅಂಕಿ ಅಂಶದ ಪ್ರಕಾರ ತುಂಬಾ shortage ಬರುತ್ತದೆ.

**ಶ್ರೀ ರಾಮಲಿಂಗಾರೆಡ್ಡಿ:-** ನಾನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದಿದ್ದೇನೆ. ಅನೇಕ ಬಾರಿ ಹಣಕಾಸು ಇಲಾಖೆಯ ಕಾರ್ಯದರ್ಶಿಗಳ ಗಮನಕ್ಕೂ ತಂದಿದ್ದೇನೆ. ಪೂರಕ ಆಯವ್ಯಯದಲ್ಲಿ ಇದೆಲ್ಲವನ್ನೂ ಸರಿಪಡಿಸಿಕೊಳ್ಳಲಾಗುವುದು.

**ಶ್ರೀಮತಿ ಭಾರತಿ ಶೆಟ್ಟಿ:-** ಇದೇ ಅಂಕಿ-ಅಂಶಗಳಾದರೆ ತುಂಬಾ shortage ಬರುತ್ತದೆ. ಈ ಹಣ carry over ಆಗುತ್ತದೆ.

**ಶ್ರೀ ರಾಮಲಿಂಗಾರೆಡ್ಡಿ:-** Carry over ಆಗುವುದಿಲ್ಲ. ಮುಖ್ಯಮಂತ್ರಿಗಳು ಹಣ ಬಿಡುಗಡೆ ಮಾಡಿದರೆ automatic solve ಆಗುತ್ತದೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾಡಿದರೆ... ಮಾಡದಿದ್ದರೆ carry over ಆಗುತ್ತದೆ.

**ಶ್ರೀ ರಾಮಲಿಂಗಾರೆಡ್ಡಿ:-** ಮಾಡಲೇಬೇಕು. ಮಾಡುತ್ತಾರೆ. ಬಜೆಟ್‌ನಲ್ಲಿದೆ.

**ಶ್ರೀಮತಿ ಭಾರತಿ ಶೆಟ್ಟಿ:-** ಹಿಂದಿನದು ಬಾಕಿ ಇದೆ. ಈಗ ರೂ.5,000 ಕೋಟಿ ಬೇಕಿದೆ. ಹೌದಾ?

**ಶ್ರೀ ರಾಮಲಿಂಗಾರೆಡ್ಡಿ:-** ಹೌದಮ್ಮ, ಈಗ ರೂ.5,015 ಕೋಟಿಗಳು ಈ ವರ್ಷಕ್ಕಿದೆ. ಅದರಲ್ಲಿಯೂ ಸ್ವಲ್ಪ shortage ಬರಬಹುದು. ಇದು ಹಳೆಯದು.

**ಶ್ರೀಮತಿ ಭಾರತಿ ಶೆಟ್ಟಿ:-** ಹೆಣ್ಣುಮಕ್ಕಳು ಇದೇ ಪ್ರಮಾಣದಲ್ಲಿ ಓಡಾಟ ಮಾಡಿದರೆ ಜಾಸ್ತಿಯಾಗುತ್ತದೆ.

**ಪ್ರಶ್ನೆ ಸಂಖ್ಯೆ: 862**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಸವಿಸ್ತಾರವಾಗಿ ಉತ್ತರವನ್ನು ನೀಡಿದ್ದಾರೆ. ಆದರೆ ಲೋಕೋಪಯೋಗಿ ಇಲಾಖೆಯಿಂದ NHAI (National Highway Authority of India) ನಿಂದ ಬೆಳಗಾವಿ ರಿಂಗ್ ರಸ್ತೆಗೆ ಸಂಬಂಧಿಸಿದ ಒಂದು ಯೋಜನೆಯಾಗಿದೆ. ಇದನ್ನು 3 phase ಗಳಲ್ಲಿ ತೆಗೆದುಕೊಳ್ಳಲಾಗಿದ್ದು, ಇದಕ್ಕೆ ಸುಮಾರು ರೂ.3,372 ಕೋಟಿಗಳ ಯೋಜನೆಗೆ 2017ರಲ್ಲಿ ನೋಟಿಫಿಕೇಷನ್ ಮಾಡಲಾಗಿದೆ. ಕಳೆದ 7 ವರ್ಷಗಳಿಂದ ಈ ಯೋಜನೆಯು ಮಂದಗತಿಯಲ್ಲಿ ಸಾಗುತ್ತಿದ್ದು, ಭೂಸ್ವಾಧೀನವಾಗದೆ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇದೆ. NHAI ಯವರು announce ಮಾಡಿರುವ ಪ್ಯಾಕೇಜ್ ಗಳಲ್ಲಿ 1st phase, 2nd phase ಹಾಗೂ 3rd phase ನಲ್ಲಿ ಆಗತಕ್ಕಂತಹ ಕಾರ್ಯಕ್ರಮದಲ್ಲಿ ಈಗಲೂ ಕೂಡ ಬಾಕಿ ಇಡಲಾಗಿದೆ. ಇದನ್ನು ನೋಡಿದರೆ ಬೆಳಗಾವಿ ನಗರಕ್ಕೆ ಈ ಯೋಜನೆಯು ಬೇಗ ಆಗಬೇಕೆನ್ನುವ ಉದ್ದೇಶದಿಂದ ಈ ಪ್ರಶ್ನೆಯನ್ನು ಕೇಳಿದ್ದೇನೆ. 2017ರಲ್ಲಿ land acquisition ಆದ ಮೇಲೆ, 3(D) notification ಅನ್ನು ಮಾಡಿರುವುದಿಲ್ಲ. 2022ರಲ್ಲಿ primary notification ಅನ್ನು ಮಾಡಿ ನಂತರ 3(D) notification ಮಾಡಿರುತ್ತಾರೆ. ರಾಜ್ಯ ಸರ್ಕಾರ 50% land acquisition cost ಕೊಡುತ್ತಿದ್ದು, ಕೇಂದ್ರ ಸರ್ಕಾರ 50% ಕೊಡುತ್ತಿರುವ ಸಂದರ್ಭದಲ್ಲಿ ಇಂತಹ ಯೋಜನೆಗಳ project cost ಹೆಚ್ಚಾಗಿದೆ. ಮಾನ್ಯ ಸಚಿವರು ಬಹಳ ಪ್ರಬಲವಾಗಿ ಅಲ್ಲಿನ ರಸ್ತೆಗಳನ್ನು ಅಭಿವೃದ್ಧಿ ಮಾಡಿರುತ್ತಾರೆ ಎನ್ನುವುದು ನನಗೆ ತಿಳಿದಿದೆ. ಹಾಗಾಗಿ ಇದನ್ನು ಕೂಡ priority sector ನಲ್ಲಿ ತೆಗೆದುಕೊಂಡು ರಿಂಗ್‌ರೋಡ್ ಮಾಡಿದ್ದೇ ಆದರೆ ಬೆಳಗಾವಿ ನಗರವನ್ನು ಅಭಿವೃದ್ಧಿ ಪಡಿಸಲು... The Ring Road project will be a very economical project.

**ಸಭಾಪತಿಯವರು:-** ಭಾಷಣ ಮಾಡಬೇಡಿ. ನೇರವಾಗಿ ಪ್ರಶ್ನೆಯನ್ನು ಕೇಳಿ.

**ಶ್ರೀ ಎಂ.ನಾಗರಾಜು:-** ಯಾವಾಗ ಪ್ರಾರಂಭ ಮಾಡಿ, ಯಾವಾಗ ಮುಕ್ತಾಯ ಮಾಡುತ್ತಾರೆ ಎನ್ನುವ ಪ್ರಶ್ನೆಯನ್ನು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

**ಶ್ರೀ ಸತೀಶ್ ಜಾರಕಿಹೊಳಿ (ಲೋಕೋಪಯೋಗಿ ಸಚಿವರು):-** ಮಾನ್ಯ ಸಚಿವರೆ, ಈಗಾಗಲೇ ಇದರಲ್ಲಿ ಮೂರು ಪ್ಯಾಕೇಜ್ ಇದೆ. ಈಗ ಒಂದನೆ ಹಂತ ನಡೆಯುತ್ತಿದ್ದು, ಇನ್ನು 2-3 ತಿಂಗಳಲ್ಲಿ ಇದನ್ನು ಕ್ಲಿಯರ್ ಮಾಡುತ್ತೇವೆ. 2ನೇ ಹಂತ ಬಹುಶಃ ಡಿಸೆಂಬರ್ ಆಗಬಹುದು. 3ನೇ ಹಂತ Forest Department ನಿಂದಾಗಿ delay ಆಗಬಹುದು. ಮೊದಲನೆಯ ಹಂತವನ್ನು ಇನ್ನೆರಡು ತಿಂಗಳು ಹಾಗೂ 2ನೇ ಹಂತವನ್ನು

ಖಂಡಿತವಾಗಿಯೂ ಡಿಸೆಂಬರ್‌ನಲ್ಲಿ ಮುಗಿಸುತ್ತೇವೆ. ಅವರು ಹೆಚ್ಚಿಗೆ ಕೇಳುತ್ತಾರೆ ಎಂದು ಈಗಾಗಲೇ ನಾನು ಹೊರಗೆ ಅವರಿಗೆ brief ಮಾಡಿದ್ದೇನೆ. ಸಂಪೂರ್ಣವಾದ ಮಾಹಿತಿಯನ್ನು ಅವರಿಗೆ ಕೊಟ್ಟಿದ್ದೇನೆ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೆ, ಸಂಪೂರ್ಣವಾದ ಮಾಹಿತಿಯನ್ನು ಕೊಟ್ಟಿದ್ದಾರೆ. ಧನ್ಯವಾದಗಳು.

**ಪ್ರಶ್ನೆ ಸಂಖ್ಯೆ 959**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ:ತಳವಾರ್ ಸಾಬಣ್ಣ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಉತ್ತರವನ್ನು ಕೊಟ್ಟಿದ್ದಾರೆ. ನಾನು ಎಲ್ಲಾ ಪ್ರಶ್ನೆಗಳಿಗೆ ಹೋಗುವುದಿಲ್ಲ. ಕೇವಲ ಒಂದು ಪ್ರಶ್ನೆಗೆ ಮಾತ್ರ ಸೀಮಿತ ಆಗುತ್ತೇನೆ. ಬೆಳಗಾವಿ ನಗರದ ವಂಟಮೂರಿ ಕಾಲೋನಿಯಲ್ಲಿ 292 ತೀರಾ ಬಡ ಕುಟುಂಬಗಳು ಆಶ್ರಯ ಕಾಲೋನಿಯಲ್ಲಿ 32 ವರ್ಷಗಳಿಂದ ಇರುತ್ತಿದ್ದಾರೆ. ಅದು ಸ್ಥಳೀಯ ಕಾರಣಗಳಿಂದ ಇಲ್ಲಿಯವರೆಗೆ ಕೊಳಗೇರಿ ಪ್ರದೇಶವೆಂದು ಘೋಷಣೆಯಾಗಿಲ್ಲ. ಅದು ಯಾವಾಗ ಮಾಡುತ್ತೀರೆಂದು ಹೇಳಿದರೆ ನಾನು ತಮಗೆ ಇನ್ನೊಂದು ಉಪಪ್ರಶ್ನೆಯನ್ನು ಕೇಳುತ್ತೇನೆ.

(ಮುಂದು)

(670) 24.07.2024 (12.30) ಕೆಜಿ-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ.ಝೆಡ್.ಜಮೀರ್ ಅಹ್ಮದ್ ಖಾನ್ (ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹದ್ದನ್ನು ನಾವು ಮಾಡುವುದಕ್ಕೆ ಆಗುವುದಿಲ್ಲ. Declared slum ಬಗ್ಗೆ ಅಲ್ಲಿಂದ ಅವರು proposal ಅನ್ನು ಕಳುಹಿಸಬೇಕು. ಅದು Karnataka Slum Development Board ನಲ್ಲಿ ಇಲ್ಲ. ನಮಗೆ Janata Plot ಬರುವುದಿಲ್ಲ. ಮಾನ್ಯ ಸದಸ್ಯರು ಮಾನ್ಯ ಬೆಳಗಾವಿ ನಗರ ಪಾಲಿಕೆಯಲ್ಲಿ ಒಟ್ಟು ಎಷ್ಟು undeclared slum ಗಳು ಇವೆ ಎಂಬ ಪ್ರಶ್ನೆಯನ್ನು ಕೇಳಿದ್ದಾರೆ. ಒಟ್ಟು 103 slum ಗಳು ಇವೆ. Declared slums 49 ಇವೆ. ಉಳಿದ 54 ಕೊಳಗೇರಿ ಪ್ರದೇಶಗಳ proposal ಅನ್ನು ಕಳುಹಿಸಿದ್ದೇವೆ. ಮಾನ್ಯ ಸದಸ್ಯರು Janata Plot ಬಗ್ಗೆ ಕೇಳಿದ್ದಾರೆ. ನಾವು ಅದನ್ನು ಮಾಡುವುದಕ್ಕೆ ಆಗುವುದಿಲ್ಲ. ಅಲ್ಲಿನ ಡಿ.ಸಿ.ಯವರಿಂದ proposal ಕಳುಹಿಸಿದರೆ, ನಾವು acquire ಮಾಡುವುದಕ್ಕೆ consider ಮಾಡುತ್ತೇವೆ.

**ಡಾ॥ ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳುವುದು ಸರಿ ಇದೆ. ಆದರೆ, ದಿನಾಂಕ 16-08-2023 ರಂದು ಬೆಳಗಾವಿ ಮಹಾ ನಗರ ಪಾಲಿಕೆ ಪರಿಷತ್ ಸಭೆಯಲ್ಲಿ ಈಗಾಗಲೇ ಒಂದು resolution ಅನ್ನು ಪಾಸು ಮಾಡಿದ್ದಾರೆ. ಬೆಳಗಾವಿಯ ಉತ್ತರ ಮತ್ತು ದಕ್ಷಿಣ ವ್ಯಾಪ್ತಿಯಲ್ಲಿ ಬರುವ ಅಘೋಷಿತ ಕೊಳಚೆ ಪ್ರದೇಶಗಳಲ್ಲಿ ವಂಟಮುರಿ ಕಾಲೋನಿ ಇದೆ. ಹಾಗೆಯೇ, ದಿನಾಂಕ 19-06-2024 ರಂದು ಈ ಮಹಾನಗರ ಪಾಲಿಕೆ ಆಯುಕ್ತರು ಪತ್ರ ಬರೆದಿದ್ದಾರೆ. ಕಳೆದ ತಿಂಗಳು ಪತ್ರ ಬಂದಿದೆ. ಅದಕ್ಕೆ ಬೇಕಾದಂತಹ ಎಲ್ಲಾ ದಾಖಲೆಗಳನ್ನು ಮತ್ತು enclosures ಗಳನ್ನು ತಮಗೆ ಕೊಟ್ಟು ಕಳುಹಿಸಿದ್ದಾರೆ. ಸುಮಾರು 31 ವರ್ಷಗಳಿಂದ ಅಲ್ಲಿ ತೀರ ಬಡವರು ಮತ್ತು ಶೋಷಿತ ಜನರು ಇದ್ದಾರೆ. ಕೊಳಗೇರಿ ಪ್ರದೇಶವೆಂದು ಘೋಷಣೆಯಾದರೆ, ಅವರಿಗೆ ಸವಲತ್ತುಗಳು ಸಿಗುತ್ತವೆ ಮತ್ತು ಬೆಳಗಾವಿಯು Smart City project ಅಡಿ ಇರುವುದರಿಂದ ಅವರಿಗೆ ಈ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗುತ್ತದೆ ಆದ್ದರಿಂದ, ತಕ್ಷಣವೇ ಇದನ್ನು ಘೋಷಣೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೋರುತ್ತೇನೆ.

**ಶ್ರೀ ಬಿ.ಝಡ್. ಜಮೀರ್ ಅಹ್ಮದ್ ಖಾನ್:-** ಮಾನ್ಯ ಸಭಾಪತಿಯವರೇ, ಖಂಡಿತವಾಗಿ ನಾನೇ personal ಆಗಿ ನೋಡಿ ಆ proposal ಅನ್ನು ತರಿಸಿಕೊಂಡು ಮಾಡುತ್ತೇನೆ.

**ಪ್ರಶ್ನೆ ಸಂಖ್ಯೆ: 908**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ನೀಡಿದ್ದಾರೆ. ಇದು ಬಹಳ ದೀರ್ಘ ಕಾಲದ ಸಮಸ್ಯೆಯಾಗಿರುವುದರಿಂದ, ಪರಿಹಾರವನ್ನು ಯಶ್ವಸಿಯಾಗಿ ನಿಭಾಯಿಸುವಂತಹ ಕೆಲಸದಲ್ಲಿ ಅಧಿಕಾರಿಗಳು ವಿಫಲಾಗಿರುವಂತಹ ವಿಷಯ ಇದು. ಬೆಂಗಳೂರು ನಗರದ ನೀಲಸಂದ್ರ ಆಗ ಗ್ರಾಮ, ಈಗ ಇದು ಬೆಂಗಳೂರು ಮಹಾನಗರ ವ್ಯಾಪ್ತಿಗೆ ಒಳಪಟ್ಟಿದೆ. ಅಲ್ಲಿ ಶ್ರೀ ಧರ್ಮರಾಯಸ್ವಾಮಿ ದೇವಸ್ಥಾನಕ್ಕೆ ಸಂಬಂಧಪಟ್ಟಂತಹ ಸುಮಾರು 15 ಎಕರೆ 12 ಗುಂಟೆ ಜಮೀನನ್ನು ಒತ್ತುವರಿ ಮಾಡಿರುವ ಬಗ್ಗೆ ನನ್ನ ಪ್ರಶ್ನೆ ಇದೆ. ಅದರಲ್ಲಿ ದಿನಾಂಕ 12-10-1990 ರಂದು ನೀಲಸಂದ್ರ ಗ್ರಾಮ ತಹಶೀಲ್ದಾರ್‌ರವರ ವ್ಯಾಪ್ತಿಗೆ ಒಳಪಟ್ಟಿರುತ್ತದೆ, ಬೆಂಗಳೂರು ಮಹಾನಗರ ಪಾಲಿಕೆಗೆ 1992 ರಲ್ಲಿ ಸೇರಿರುತ್ತದೆ. ಈ 15 ಎಕರೆ ಜಮೀನಿನಲ್ಲಿ 6 ಎಕರೆ ಜಮೀನನ್ನು 211 ಜನರು ಒತ್ತುವರಿ ಮಾಡಿದ್ದಾರೆ. ಈ 6 ಎಕರೆ ಜಮೀನನ್ನು ವಾಪಸ್ಸು ಪಡೆಯುವುದಕ್ಕೆ ಅಧಿಕಾರಿಗಳು ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಈ ವಿಷಯ ನ್ಯಾಯಾಲಯದಲ್ಲಿದೆ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಇದು ಒಂದು. ಎರಡನೆಯದಾಗಿ, ಅದು 9 ಎಕರೆ ಜಮೀನಿಗೆ ಸಂಬಂಧಪಟ್ಟಿರುವ ಜಾಗ. ಆ 9 ಎಕರೆ ಜಮೀನಿಗೆ compound ಹಾಕಿ ಎಂದು ಮಾನ್ಯ ಸಿದ್ದರಾಮಯ್ಯನವರು ಇದ್ದಂತಹ ಸಂದರ್ಭದಲ್ಲಿ ಸುಮಾರು 80 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಆದರೂ ಸಹ compound ಹಾಕಿಲ್ಲ. Compound ಅನ್ನು ಏಕೆ ಹಾಕಿಲ್ಲವೆಂದು ಮಾನ್ಯ ಮುಜರಾಯಿ ಸಚಿವರಲ್ಲಿ ವಿನಂತಿಯನ್ನು ಮಾಡುತ್ತೇನೆ. ನಾನು ಮುಂದುವರೆದು ಮತ್ತೆ ಪ್ರಶ್ನೆಯನ್ನು ಕೇಳುತ್ತೇನೆ.

**ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಮತ್ತು ಮುಜರಾಯಿ ಸಚಿವರು):-** ಮಾನ್ಯ ಸಭಾಪತಿಯವರೇ, ಈ ಜಾಗ ಶ್ರೀ ಧರ್ಮರಾಯ ಸ್ವಾಮಿ ದೇವಾಲಯಕ್ಕೆ ಸಂಬಂಧಪಟ್ಟಿರುವಂತಹ ಜಾಗ. ಬೆಂಗಳೂರು ನಗರ ನೀಲಸಂದ್ರ ಗ್ರಾಮದ ಸರ್ವೆ ನಂ.79 ರಲ್ಲಿ 15 ಎಕರೆ 12 ಗುಂಟೆ ಜಾಗ ಬೆಂಗಳೂರು ನಗರ ತಿಗಳರ ಪೇಟೆಯ ಶ್ರೀ ಧರ್ಮರಾಯ ಸ್ವಾಮಿ ದೇವಾಲಯಕ್ಕೆ ದಿನಾಂಕ 12-09-1990 ರಂದು ಹಸ್ತಾಂತರವಾಗಿರುತ್ತದೆ. ದಿನಾಂಕ 12-09-1990 ಕ್ಕೆ ಹಸ್ತಾಂತರವಾದರೂ ಸಹ, 2015 ರಲ್ಲಿ ಸರ್ವೆ ಮಾಡಿದ್ದಾರೆ. ಸರ್ವೆ ಮಾಡಿದ ಸಂದರ್ಭದಲ್ಲಿ 6 ಎಕರೆ ಜಮೀನನು 211 ಜನರು ಒತ್ತುವರಿ ಮಾಡಿರುವಂತಹದ್ದು ಕಂಡುಬಂದಿದೆ. ಇದರ ಬಗ್ಗೆ ಭೂ-ಕಬಳಿಕೆ ನ್ಯಾಯಾಲಯಕ್ಕೆ ದೂರನ್ನು ಸಹ ಸಲ್ಲಿಸಿದ್ದಾರೆ. ಅದರ ತೀರ್ಪು ಸಹ ಬಂದಿಲ್ಲ. ಪ್ರಶ್ನಿತ ಪ್ರಕರಣಕ್ಕೆ ಸಂಬಂಧಿಸಿದಂತೆ, 2011-12ನೇ ಸಾಲಿನಿಂದ 2022-23 ನೇ ಸಾಲಿನವರೆಗೆ 6 ಜನ ಅಧಿಕಾರಿಗಳು ಅಲ್ಲಿ ಇದ್ದರು. ಈ ಅಧಿಕಾರಿಗಳು ಇದ್ದರೂ ಸಹ, ಅವರು ಆ ಜಾಗವನ್ನು ತೆರವುಗೊಳಸುವುದಕ್ಕೆ ಪ್ರಯತ್ನ ಮಾಡಿಲ್ಲ. ನಾನು ನಮ್ಮ ಅಧಿಕಾರಿಗಳ ಬಳಿ ಚರ್ಚೆ ಮಾಡಿದಂತಹ ಸಂದರ್ಭದಲ್ಲಿ ಇದು ಗೊತ್ತಾಯಿತು. ಅಲ್ಲದೇ, ಅವರ ವಿರುದ್ಧ action ಸಹ ಆಗಿಲ್ಲ. ಯಾರು ಯಾರು ಒತ್ತುವರಿ ಮಾಡಿದ ಸಂದರ್ಭದಲ್ಲಿ ನೋಡಿಕೊಂಡು ಇದ್ದರೋ, ಅವರು ಅದನ್ನು ಬಂದೋಬಸ್ತು

ಮಾಡಬೇಕಾಗಿತ್ತು. ಇವರ ವಿರುದ್ಧ action ಅನ್ನು ಸಹ ತೆಗೆದುಕೊಳ್ಳಬೇಕಾಗಿತ್ತು. **(ಗೊಂದಲ)** ಈಗ ಎಲ್ಲಕ್ಕಿಂತ important ಆಗಿ Court ನಲ್ಲಿ stay vacate ಆಗಬೇಕು. Court ನಲ್ಲಿ stay vacate ಆದರೆ, ಎಲ್ಲಾ problems solve ಆಗುತ್ತವೆ. ಅದಕ್ಕೆ ನಮ್ಮ ಇಲಾಖೆಯ Principal Secretary ರವರಿಗೆ ಹೇಳಿದ್ದೇನೆ. Advocate General ರವರ ಹತ್ತಿರ ಮಾತನಾಡಿ Senior Counsel ರವರನ್ನು ಇಟ್ಟು stay vacate ಮಾಡಿಸಿದರೆ, ನಾವು ಖಾಲಿ ಇರುವಂತಹ 8 ಎಕರೆಗೂ compound ಹಾಕಿಕೊಳ್ಳಬಹುದು. ಇದಕ್ಕೆ ಹಣ ಬಿಡುಗಡೆಯಾಗಿದೆ. ಅದರಲ್ಲಿ ಹೋಗಿ ನ್ಯಾಯಾಲಯಕ್ಕೆ stay ತರುತ್ತಾರೆ, ನಾವು stay vacate ಮಾಡಿಸಬೇಕು. ಇದು ಹಾಗೆ ಮುಂದುವರಿದುಕೊಂಡು ಹೋಗುತ್ತಿದೆ. ಅದಕ್ಕೆ ಮತ್ತೆ ಒಬ್ಬ Senior Counsel ರವರನ್ನು ಇಟ್ಟು, stay vacate ಮಾಡಿಸಿ ಖಾಲಿ ಇರುವಂತಹ ಜಾಗಕ್ಕೆ compound ಹಾಕುವಂತಹ ಕೆಲಸವನ್ನು ಮಾಡಬೇಕಾಗಿದೆ. ಭೂ-ಕಬಳಿಕೆ ನ್ಯಾಯಾಲಯದಲ್ಲಿರುವ ಪ್ರಕರಣ ತೀರ್ಮಾನವಾದ ಮೇಲೆ ಬಂದೋಬಸ್ತ್ ಮಾಡಬೇಕು. ಒಟ್ಟಿನಲ್ಲಿ ಈ ಜಾಗ ದೇವಸ್ಥಾನಕ್ಕೆ ಉಳಿಯಬೇಕು.

**ಶ್ರೀ ಎನ್ ರವಿಕುಮಾರ್:-** ಮಾನ್ಯ ಸಭಾಪತಿಯವರೇ, 2017 ರಲ್ಲಿಯೇ ಈ 9 ಎಕರೆ ಜಾಗಕ್ಕೆ compound ಹಾಕಿ ಎಂದು 80 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಅದಕ್ಕೆ ಒಬ್ಬ ಅಭಿಯಂತರರಿಗೆ compound ಕಟ್ಟಿ ಎಂದು ಅವರಿಗೆ 26 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಆದರೂ ಸಹ, ಅವರು compound ಕಟ್ಟುವುದಿಲ್ಲ. ಅವರು ಏಕೆ compound ಕಟ್ಟುವುದಿಲ್ಲ? Compound ಕಟ್ಟದಿರುವುದಕ್ಕೆ ಕಾರಣ ಏನು? ಏನು hand in glove ಇತ್ತೇ? ಒತ್ತುವರಿ ಮಾಡಿರುವಂತಹವರ ಹಾಗೂ compound ಕಟ್ಟುವವರ ಮಧ್ಯೆ ಏನಾದರೂ ಒಳ ಒಪ್ಪಂದ ಇತ್ತೇ? ಇದೊಂದು ಆಸ್ತಿ ಕಬಳಿಕೆಯ ವಿಷಯ. ಇದಕ್ಕೆ ಅವಕಾಶ ಕೊಟ್ಟರೆ, ಬೆಂಗಳೂರನ್ನು ಸಹ ಒಬ್ಬ ವ್ಯಕ್ತಿಯೇ ಕಬಳಿಕೆ ಮಾಡಿಕೊಂಡು ಅವರ ಹೆಸರಿಗೆ ಮಾಡಿಕೊಳ್ಳುವಂತಹ ಪರಿಸ್ಥಿತಿ ಇದೆ. ಆ ರೀತಿ ನೂರಾರು, ಸಾವಿರಾರು ದೇವಸ್ಥಾನಗಳ ಆಸ್ತಿಗಳನ್ನು ಆಕ್ರಮಿಸಿಕೊಂಡಿದ್ದಾರೆ, ಒತ್ತುವರಿ ಮಾಡಿಕೊಂಡಿದ್ದಾರೆ. ನಾನು ಈ ವಿಷಯವನ್ನು ಕೇಳಿದ್ದೆ. ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. 268 ಜನ ತಹಶೀಲ್ದಾರರುಗಳು ಸೇರಿ ಅದರ ವರದಿಯನ್ನು ನನಗೆ ಕೊಟ್ಟಿದ್ದಾರೆ. ಕೇವಲ 5-6 ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಚಿತ್ರದುರ್ಗ ಜಿಲ್ಲೆ, ಕೊಡಗು ಜಿಲ್ಲೆ, ಉಡುಪಿ ಜಿಲ್ಲೆ ಮತ್ತು ಧಾರವಾಡ ಜಿಲ್ಲೆಯವರು ಮಾತ್ರ ವರದಿಯನ್ನು ಕೊಟ್ಟಿದ್ದಾರೆ. ಎಷ್ಟು ಎಕರೆ ಜಮೀನು ಪರಭಾರೆಯಾಗಿದೆ ಹಾಗೂ ಎಷ್ಟು ಎಕರೆ ಜಮೀನು ಒತ್ತುವರಿಯಾಗಿದೆ ಎನ್ನುವುದರ ಸಂಪೂರ್ಣವಾದ ವಿವರ ಮಾನ್ಯ ಸಚಿವರಿಂದ ಬೇಕಾಗಿದೆ. ನಮ್ಮ ರಾಜ್ಯದಲ್ಲಿ ದೇವಸ್ಥಾನಗಳ ಜಮೀನನ್ನು ಉಳಿಸುವಂತಹ ಅತ್ಯಂತ ತುರ್ತು ಪರಿಸ್ಥಿತಿ ಇದೆ. ಇಲ್ಲವೆಂದರೆ, ಒತ್ತುವರಿ ಮಾಡಿಕೊಂಡು ತಮ್ಮ ಹೆಸರಿಗೆ ಮಾಡಿಕೊಳ್ಳುವಂತಹ ಅಧಿಕಾರಿಗಳು ಇದ್ದಾರೆ, ಜನರು ಇದ್ದಾರೆ. ಹಾಗಾಗಿ, ಇದರ ಬಗ್ಗೆ ಮಾನ್ಯ ಸಚಿವರು ಏನು ಕ್ರಮ ತೆಗೆದುಕೊಳ್ಳುತ್ತಾರೆ? ಇದಕ್ಕೆ ಮಾನ್ಯ ಸಚಿವರು ಉತ್ತರ ಕೊಡಲಿ, ನಂತರ ನಾನು ಎರಡನೆ ಪ್ರಶ್ನೆಯನ್ನು ಕೇಳುತ್ತೇನೆ.

**ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೇ, ಬೇಡ. ಎಲ್ಲವನ್ನು ಒಟ್ಟಿಗೆ ಬೇಗ ಕೇಳಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಎರಡನೆಯದಾಗಿ, 9 ಎಕರೆ ಜಾಗಕ್ಕೆ compound ಹಾಕಿಲ್ಲ. ನಮ್ಮ ತಿಗಳ ಸಮುದಾಯದ ಅತ್ಯಂತ ಹಳೆಯ ದೇವಸ್ಥಾನ, ಶ್ರೀ ಧರ್ಮರಾಯಸ್ವಾಮಿ ದೇವಸ್ಥಾನ. ಈ ದೇವಸ್ಥಾನವನ್ನು ಉಳಿಸುವುದಕ್ಕೆ ಏಕೆ compound ಹಾಕಿಲ್ಲ? ಆ ಸಂದರ್ಭದಲ್ಲಿ ಯಾರೂ ನ್ಯಾಯಾಲಯಕ್ಕೆ ಹೋಗಿರಲಿಲ್ಲ. ಆಗ ಏಕೆ compound ಹಾಕಿಲ್ಲ? ಈಗ ನ್ಯಾಯಾಲಯಕ್ಕೆ ಹೋಗಿದ್ದಾರೆ. ಹಾಗಾಗಿ, stay vacate ಆಗಬೇಕು. ಆಗ ಮಾತ್ರ compound ಕಟ್ಟುವುದಕ್ಕೆ ಸಾಧ್ಯ. Stay vacate ಅನ್ನು ಮಾಡಿಸುವುದಕ್ಕೆ ಆಗದಿರುವಂತಹ ಅಸಮರ್ಥ ವಕೀಲರನ್ನು ಏಕೆ ನೇಮಕ ಮಾಡುತ್ತಾರೆ? ಇದಕ್ಕೆ ಸಮರ್ಥರಾಗಿರುವಂತಹ ವಕೀಲರನ್ನು ನೇಮಕ ಮಾಡಿ. ಇದಕ್ಕೆ ಒಪ್ಪಂದ ಏನಾದರೂ ಇದೆಯೇ? ಒಟ್ಟಿನಲ್ಲಿ ಯಾರೋ ಒಬ್ಬ ವಕೀಲನ್ನು ನೇಮಿಸಿದರೆ ಸಾಕು, ಅದನ್ನು ಒತ್ತುವರಿ ಮಾಡಿಕೊಳ್ಳಬಹುದು. ಒಂದಷ್ಟು ವರ್ಷಗಳನ್ನು ಮುಂದಕ್ಕೆ ತಳ್ಳಬಹುದು. ಈ ತರಹದ ಒಂದು ಒಳ ಒಪ್ಪಂದ ಇರುವಂತೆ ಕಾಣಿಸುತ್ತಿದೆ. ನನಗೆ ಇದಕ್ಕೆ ಸಮರ್ಥವಾಗಿರುವಂತಹ ಉತ್ತರವನ್ನು ಕೊಡುವುದಕ್ಕೆ ಎಷ್ಟು ದಿವಸಗಳಲ್ಲಿ ಆ ಜಾಗಕ್ಕೆ compound ಕಟ್ಟುತ್ತಾರೆ?

**ಶ್ರೀ ರಾಮಲಿಂಗಾರೆಡ್ಡಿ:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಲೋಪವಾಗಿರುವಂತಹದ್ದು ನಿಜ. ಸುಮಾರು 30-35 ವರ್ಷಗಳಿಂದ ಆಗಿದೆ. 1990 ರಲ್ಲಿ fencing ಹಾಕಿಕೊಂಡಿದ್ದರೆ, ಈ ಸಮಸ್ಯೆ ಇರುತ್ತಿರಲಿಲ್ಲ. ಇವರು 2015 ರಲ್ಲಿ ಸರ್ವೆ ಮಾಡುವುದಕ್ಕೆ ಹೋಗಿದ್ದಾರೆ. ಅಂದರೆ, ಸುಮಾರು 25 ವರ್ಷಗಳು ಬಿಟ್ಟು fencing ಹಾಕುವುದಕ್ಕೆ ಹೋಗಿದ್ದಾರೆ. ಈಗ ಒಬ್ಬ Senior Counsel ರವರನ್ನು ನೇಮಕ ಮಾಡಬೇಕು. 2020 ರಲ್ಲಿ stay ತಂದಿದ್ದಾರೆ. ನಮ್ಮಲ್ಲಿಯೂ 2021 ರಲ್ಲಿ written objections ಹಾಕಿದ್ದಾರೆ. ಅದಕ್ಕೆ Senior Counsel ಅನ್ನು ನೇಮಕ ಮಾಡಿ ಅದಷ್ಟು ಬೇಗ, ಕೊನೆಯ ಪಕ್ಷ ಮುಂದಿನ ಅಧಿವೇಶನ ಬರುವ ವೇಳೆಗಾದರೂ ಸಹ, stay vacate ಮಾಡಿಸಿ ಅದಕ್ಕೆ compound ಹಾಕುವುದಕ್ಕೆ ಪ್ರಯತ್ನ ಮಾಡುತ್ತೇವೆಂಬ ಮಾತನ್ನು ಹೇಳುತ್ತೇನೆ. ನಮ್ಮಲ್ಲಿ 35 ಸಾವಿರ ದೇವಸ್ಥಾನಗಳು ಇವೆ.

(ಮುಂದು)

(671) 24-07-2024 (12.40) ಎಂವಿ-ಎಂಡಿ (ವಿಕೆ) (ಸಭಾಪತಿಯವರ ಉಪಸ್ಥಿತಿ)

**ಶ್ರೀ ರಾಮಲಿಂಗಾರೆಡ್ಡಿ (ಮುಂದು):**

ಅದಕ್ಕೆ ಕಾಂಪೌಂಡ್ ಹಾಕುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಹೇಳುತ್ತೇನೆ. ನಮ್ಮ ಬಳಿ ಸುಮಾರು 35,000 ದೇವಸ್ಥಾನಗಳಿವೆ. ಆ ಮಾಹಿತಿಗಳನ್ನು ನೀಡುವುದಕ್ಕೆ ಒಂದೂವರೆ-ಎರಡು ತಿಂಗಳು ಬೇಕಾಗುತ್ತದೆ. ಅಷ್ಟರಲ್ಲಿ ಎಲ್ಲಾ 35,000 ಸಾವಿರ ದೇವಸ್ಥಾನಗಳ ಮಾಹಿತಿಯನ್ನು ಒದಗಿಸುವಂತಹ ವ್ಯವಸ್ಥೆ ಮಾಡುತ್ತೇನೆ.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ...

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೆ, ಈಗ ಆಗುವುದಿಲ್ಲ ತಾವು ಕುಳಿತುಕೊಳ್ಳಿ. ಈಗ ಮಾನ್ಯ ಸದಸ್ಯರಾದ ಶ್ರೀ ಪಿ.ಹೆಚ್.ಪೂಜಾರ್‌ರವರು ಪ್ರಶ್ನೆ ಕೇಳಿ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು 35 ವರ್ಷ ಎಂದು ಹೇಳಿದ ಮೇಲೆ, ಹೈಕೋರ್ಟ್‌ಗೆ ಅದೇ ರೆಕಾರ್ಡ್ಸ್ ಸಾಕಾಗುತ್ತದೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೆ, ಒಬ್ಬೊಬ್ಬರು ಹತ್ತತ್ತು ನಿಮಿಷ ತೆಗೆದುಕೊಂಡರೆ, ನಾನು ಸದನವನ್ನು ಹೇಗೆ ನಡೆಸಬೇಕು?

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರಾದ ಶ್ರೀ ರಾಮಲಿಂಗಾರೆಡ್ಡಿಯವರು ಈಗ ಏನು ಉತ್ತರವನ್ನು ನೀಡಿದ್ದಾರೆ, ಅದೇ same ಉತ್ತರವನ್ನು ಕಳೆದ ಬಾರಿಯೂ ಸಹ ನೀಡಿದ್ದರು. ಈ ದೇವಸ್ಥಾನಕ್ಕೆ ಒಂದು ಕಾಂಪೌಂಡ್ ಬೇಕು. **(ಗೊಂದಲ)** ಯಾವುದು ಇರುತ್ತದೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೆ, ತಮಗೆ ಏನೂ ತಿಳಿಯುತ್ತಿಲ್ಲವೇ?

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ನಾನು ಸದನದ ಬಾವಿಗೆ ಹೋಗಬೇಕಾಗುತ್ತದೆ. ಎಲ್ಲರೂ ಸಹ ಇದೇ ರೀತಿ ಮಾಡಿಕೊಂಡು ಬರುತ್ತಿದ್ದಾರೆ. ಆದುದರಿಂದ ನನಗೆ ನ್ಯಾಯ ಬೇಕು.

**(ಈ ಹಂತದಲ್ಲಿ ಬಿ.ಜೆ.ಪಿ.ಪಕ್ಷದ ಮಾನ್ಯ ಸದಸ್ಯರಾದ ಶ್ರೀ ಎನ್.ರವಿಕುಮಾರ್ ರವರು ಸದನದ ಬಾವಿಗೆ ಆಗಮಿಸಿ ಧರಣಿ ನಿರತರಾದರು)**

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ, ದಯವಿಟ್ಟು ಆ ಮಾತನ್ನು ಕಡತದಿಂದ ತೆಗೆಯಲಿ. ದಯವಿಟ್ಟು 35 ವರ್ಷದಿಂದ ಇದ್ದಾರೆ ಎಂಬುದನ್ನು ಕಡತದಿಂದ ತೆಗೆಯಬೇಕು. ಆ 35 ವರ್ಷವೆಂದು ಬಂದರೆ it will be very dangerous to the Government in the High Court. ಅದನ್ನು ಯಾರೋ ತೆಗೆದುಕೊಂಡು ಹೋಗುತ್ತಾರೆ. ಈಗ ಸರ್ಕಾರವೇ 35 ವರ್ಷವೆಂದು ಹೇಳಿದ ಮೇಲೆ ನಮ್ಮದು ಏನು ಇದೆ? ಯಾರಾದರೂ ಆ document ಅನ್ನು ತೆಗೆದುಕೊಂಡು ಹೋಗಿ ಕೊಟ್ಟರೆ, what will be our position in the High Court?

**(ಗೊಂದಲ)**

**ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಮತ್ತು ಮುಜರಾಯಿ ಸಚಿವರು):-** ಮಾನ್ಯ ಸಭಾಪತಿಯವರೆ, ಲೋಪವಾಗಿರತಕ್ಕಂಥದ್ದು ನಿಜ. ನಾನು ಇಲ್ಲವೆಂದು ಹೇಳುತ್ತಿಲ್ಲ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ, ಇದು ಕೋರ್ಟ್‌ನಲ್ಲಿ ಏನು ಆಗುತ್ತದೆ? ಅವರು ಏನು ಬೇಕಾದರೂ ಮಾಡಲಿ, ಅದು ಬೇರೆ ಪ್ರಶ್ನೆ. ಆದರೆ, 35 ವರ್ಷದಿಂದ ಈ ವಿಷಯ ಮತ್ತು ಅಲ್ಲಿ ಕಾಂಪೌಂಡ್ ಇದೆ ಎಂದು ಹೇಳಿ, ಅಲ್ಲಿ ಅವರು position ನಲ್ಲಿ ಇದ್ದಾರೆಂದರೆ, it is very dangerous and ನಮ್ಮ ಸರ್ಕಾರದ ಆಸ್ತಿಯನ್ನು ರಕ್ಷಣೆ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ.

**(ಗೊಂದಲ)**

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ದೇವರ ಆಸ್ತಿಯನ್ನು ಕಿತ್ತುಕೊಳ್ಳುವುದಕ್ಕೆ ಆಗುವುದಿಲ್ಲ. ಸ್ವಾತಂತ್ರ್ಯ ಬಂದ ಮೇಲೆ ದೇವರ ಆಸ್ತಿಯನ್ನು ....

**(ಗೊಂದಲ)**

**ಸಭಾಪತಿಯವರು:-** ಈ ಸದನದಲ್ಲಿ ಒಂದು ಪದ್ಧತಿ ಇದೆ. ಏನೆಂದರೆ, ಯಾರು ಪ್ರಶ್ನೆ ಕೇಳುತ್ತಾರೆ. ಅವರೇ ಉಪ ಪ್ರಶ್ನೆ ಕೇಳಬಹುದು ಎಂದು. ಎಲ್ಲರೂ ಹೀಗೆ ಮಾತನಾಡಿದರೆ ಹೇಗೆ? ತಾವು ಸಹ ತಿಳಿದುಕೊಳ್ಳಬೇಕು.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ, very rarest case ನಲ್ಲಿ ಇಂತಹ ಒಂದು ಮಾತು ಬಂದಿದೆ. ಅದಕ್ಕೋಸ್ಕರ ನಾನು interfere ಆಗಿದ್ದು. Otherwise, I have no business here.

**(ಗೊಂದಲ)**

**ಶ್ರೀ ಎಸ್.ಎನ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರೇ ಲೋಪವಾಗಿದೆ ಎಂದು ಹೇಳಿದ್ದಾರೆ. ಅನೇಕ ವರ್ಷಗಳಿಂದ ಎಂದು ಅದರ ಬಗ್ಗೆಯೇ ಮಾತನಾಡಿದ್ದಾರೆ.

**(ಗೊಂದಲ)**

**ಶ್ರೀ ರಾಮಲಿಂಗಾರೆಡ್ಡಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ಎನ್.ರವಿಕುಮಾರ್‌ರವರಿಗೆ ಬಹಳ ಸ್ಪಷ್ಟವಾಗಿ ಉತ್ತರ ನೀಡಿದ್ದೇನೆ. ಅಂದರೆ, ಒಬ್ಬ Senior Counsel appoint ಮಾಡಿ, stay vacate ಮಾಡಿಸಿ. ಆದಷ್ಟು ಬೇಗ ಅಲ್ಲಿಗೆ ಕಾಂಪೌಂಡ್ ಹಾಕಿಸುತ್ತೇನೆಂದು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ಎನ್. ರವಿಕುಮಾರ್‌ರವರನ್ನು ತಮ್ಮ ಸ್ಥಾನಕ್ಕೆ ಬರುವಂತೆ ತಿಳಿಸಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಎಲ್ಲಾ ದೇವಸ್ಥಾನಗಳು ಉಳಿಯಬೇಕು ನಿಜ. ಈಗ ಕಾಂಪೌಂಡ್ ಹಾಕುವಂಥದ್ದಕ್ಕೆ ಲೋಪವಾಗಿದೆ ಎನ್ನುವಂಥದ್ದನ್ನು ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ. ಎರಡನೆಯದು, ಮಾನ್ಯ ಸದಸ್ಯರು 35 ವರ್ಷವಾಗಿದೆ ಎಂದು ಹೇಳಿದರು. ಆದುದರಿಂದ, ಅದು adverse possession ಆಗುತ್ತದೆ ಎನ್ನುವಂಥದ್ದನ್ನು ಹೇಳಿದ್ದಾರೆ. ಅವರು ಈ ರೀತಿಯ ಉತ್ತರ ಕೊಟ್ಟುಬಿಟ್ಟರೆ, ಈಗ ಯಾರು ದಾವೆ ಹೂಡುತ್ತಾರೆ. ಅದು ಅವರಿಗೆ ಅನುಕೂಲವಾಗುತ್ತದೆ. ದಯವಿಟ್ಟು ಅದನ್ನು ತೆಗೆಯಬೇಕು. ಮಾನ್ಯ ಸದಸ್ಯರು ಏನು ಪ್ರಶ್ನೆ ಮಾಡಿದ್ದಾರೆ. ಅವರು ಈಗಾಗಲೇ ಸದನದ ಬಾವಿಗೆ ಇಳಿದಿದ್ದಾರೆ. ಆದುದರಿಂದ, ಮಾನ್ಯ ಸದಸ್ಯರಿಗೆ ಮಾನ್ಯ ಸಚಿವರು ಸೂಕ್ತ ಉತರವನ್ನು ಒದಗಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ರಾಮಲಿಂಗಾರೆಡ್ಡಿ:-** ಮಾನ್ಯ ಸಭಾಪತಿಯವರೆ, ಜಾಗವನ್ನು 1990ರಲ್ಲಿ ಹಸ್ತಾಂತರ ಮಾಡಿಕೊಂಡಿರುವುದು. ಆದರೆ, 2015ರಲ್ಲಿ ಸರ್ವೆ ಮಾಡಿರುವುದು. ಅಂದರೆ, ಸುಮಾರು 25 ವರ್ಷವಾದ ಮೇಲೆ. ಅಷ್ಟು ಹೊತ್ತಿಗೆ ಸುಮಾರು 211 ಜನರು ಒತ್ತುವರಿದಾರರು ಇದ್ದರು ಎಂದು ಹೇಳಿದ್ದು. ಆ 211 ಜನ ಒತ್ತುವರಿದಾರರ ಮೇಲೆ ಈಗಾಗಲೇ ಭೂಕಬಳಿಕೆ ನ್ಯಾಯಾಲಯದ ಮುಂದೆ ಮುಜರಾಯಿ ಇಲಾಖೆಯವರು ದೂರನ್ನು ನೀಡಿದ್ದಾರೆ. ಈಗ ಅದು ತೀರ್ಮಾನವಾಗಬೇಕೆಂದು ಹೇಳುತ್ತಿರುವುದು. ಅದನ್ನು ಮಾನ್ಯ ಸದಸ್ಯರಾದ ಶ್ರೀ ಎನ್.ರವಿಕುಮಾರ್‌ರವರಿಗೆ ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಈಗ 2020ರಲ್ಲಿ ತಡೆಯಾಜ್ಞೆ ತಂದಿದ್ದಾರೆ. ಈಗ ಅದಕ್ಕೆ ನಾಲ್ಕು ವರ್ಷವಾಗಿದೆ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** (ಸದನದ ಬಾವಿಯಿಂದ ಮಾತನಾಡಿದರು) ಮಾನ್ಯ ಸಭಾಪತಿಯವರೆ, ಅಲ್ಲಿಯವರೆಗೆ ಸರ್ಕಾರ ಏನು ಮಾಡುತ್ತಿತ್ತು?

**(ಗೊಂದಲ)**

**ಶ್ರೀ ರಾಮಲಿಂಗಾರೆಡ್ಡಿ:-** ಮಾನ್ಯ ಸಭಾಪತಿಯವರೆ, ನಾವು stay ಯನ್ನು vacate ಮಾಡಿಸುತ್ತೇವೆ ಎಂದು ಹೇಳುತ್ತಿದ್ದೇನೆ.

**(ಗೊಂದಲ)**

**ಸಭಾಪತಿಯವರು:-** ಇದು ಯಾವುದೂ ಸಹ ರೆಕಾರ್ಡ್‌ಗೆ ಹೋಗುವುದಿಲ್ಲ.

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಈ ಹಂತದಲ್ಲಿನ ಸದನದ ನಡಾವಳಿಯನ್ನು ದಾಖಲಿಸಿರುವುದಿಲ್ಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಈಗ ಸದ್ಯಕ್ಕೆ ಯಾವ ಆಸ್ತಿ ಉಳಿದಿದೆ, ದಯಮಾಡಿ ಅದನ್ನು ಉಳಿಸುವಂತಹ ಕೆಲಸವನ್ನು ಮಾನ್ಯ ಸಚಿವರು ಮಾಡಲಿ. ಅದು ಸಂಪೂರ್ಣವಾಗಿ ಬೇರೆಯವರ ಕೈ ವಶವಾಗುವುದು ಬೇಡ. ಅದನ್ನು ಉಳಿಸುವಂತಹ ಕೆಲಸವನ್ನು ಮಾಡಲಿ. ಈಗ ಅದಕ್ಕೆ ಕಾಂಪೌಂಡ್ ಹಾಕುವುದಕ್ಕೆ ಅವಕಾಶ ಕೊಟ್ಟರೆ... ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಿದ್ದಾರೆ. ಉತ್ತರ ಕೊಡುವಂಥದ್ದು ಮಾನ್ಯ ಸದಸ್ಯರಲ್ಲ. ಮಾನ್ಯ ಸದಸ್ಯರು ಉತ್ತರ ಕೊಡುವುದು ಬೇಡ. ಮಾನ್ಯ ಸಚಿವರು ಉತ್ತರ ಕೊಡುತ್ತಿದ್ದಾರೆ.

**(ಗೊಂದಲ)**

**ಡಾ: ಯತೀಂದ್ರ. ಎಸ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಖಂಡಿತವಾಗಿ ಮಾಡುತ್ತೇವೆಂದು ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ಎನ್.ರವಿಕುಮಾರ್ ರವರು ಏನನ್ನು ಕೇಳಿದ್ದಾರೆಂದರೆ, ಕನಿಷ್ಠಪಕ್ಷ ಈಗ ಉಳಿದಿರತಕ್ಕಂತಹ ಆಸ್ತಿಯನ್ನಾದರೂ ಉಳಿಸಿ ಎಂದು. ಅದಕ್ಕೆ ಮಾನ್ಯ ಸಚಿವರು ಗಮನ ಕೊಡಬೇಕೆಂದು ತಮ್ಮ ಮೂಲಕ ಸಚಿವರಿಗೆ ಮನವಿ ಮಾಡಿಕೊಳ್ಳುತ್ತೇನೆ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಈಗಾಗಲೇ ಮಾನ್ಯ ಸಚಿವರು ಸ್ಪಷ್ಟವಾದ ಉತ್ತರವನ್ನು ನೀಡಿದ್ದಾರೆ. ಆದಷ್ಟು ಬೇಗ ಅದನ್ನೆಲ್ಲಾ ಸರಿಪಡಿಸುತ್ತೇವೆಂದು ಹೇಳಿದ್ದಾರೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಈಗ ಇರತಕ್ಕಂಥದ್ದನ್ನು ಸರಿಪಡಿಸುತ್ತೇವೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಆದುದರಿಂದ, ಮಾನ್ಯ ಎನ್.ರವಿಕುಮಾರ್‌ರವರೆ ತಾವು ದಯವಿಟ್ಟು ತಮ್ಮ ಸ್ಥಾನಕ್ಕೆ ಬನ್ನಿ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಈಗಾಗಲೇ ಮಾನ್ಯ ಸಚಿವರು ಸ್ಪಷ್ಟವಾಗಿ ಹೇಳಿದ್ದಾರೆ.

**(ಈ ಹಂತದಲ್ಲಿ ಬಾವಿಯಲ್ಲಿ ಧರಣಿ ನಿರತರಾಗಿದ್ದ ಮಾನ್ಯ ಸದಸ್ಯರಾದ ಶ್ರೀ ಎನ್.ರವಿಕುಮಾರ್‌ರವರು ವಿರೋಧ ಪಕ್ಷದ ನಾಯಕರ ಸೂಚನೆಯ ಮೇರೆಗೆ ತಮ್ಮ ಸ್ಥಾನಕ್ಕೆ ತೆರಳಿದರು)**

**ಸಭಾಪತಿಯವರು:-** ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ 24ನೇ ಜುಲೈ, 2024, ಸಮೂಹ-3ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 139 ಪ್ರಶ್ನೆಗಳ ಪೈಕಿ 39 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**(ಉತ್ತರಗಳನ್ನು ಲಗತ್ತಿಸಲಾಗಿದೆ)**

**5. ಕಾಲಾವಕಾಶದ ಕೊರತೆಯಿಂದ ಹಾಗೂ ಸದನದಲ್ಲಿ ಉದ್ಭವಿಸಿದ ಗೊಂದಲದ ವಾತಾವರಣದಿಂದ ಮೊಟಕುಗೊಂಡ ಪ್ರಶ್ನೋತ್ತರವನ್ನು ಕೈಗೆತ್ತಿಕೊಳ್ಳುವಂತೆ ಮಾನ್ಯ ಸದಸ್ಯರಿಂದ ಒತ್ತಾಯ.**

\- - - -

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನನ್ನದೊಂದು ಪ್ರಶ್ನೆ ಇದೆ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಸಂಬಂಧಪಟ್ಟಂತಹ ಅಧಿಕಾರಿಗಳ ಜೊತೆ ಸಭೆ ಕರೆಯಲಿ.

**(ಗೊಂದಲ)**

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೆ, ತಾವು ನನಗೆ ಅವಕಾಶ ಕೊಡಬೇಕು.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಭಾಪತಿಯವರೆ, ಈಗ ನಾನು ಯಾರಿಗೂ ಅವಕಾಶ ಕೊಡುವುದಿಲ್ಲ. ಈಗ ಯಾರೂ ಮಾತನಾಡಬೇಡಿ. ಅದಕ್ಕೂ ಒಂದು limit ಇರುತ್ತದೆ. ನಾನು ಹೇಗೆ ಸದನ ನಡೆಸುವುದು? ಸದನ ನಡೆಸುವುದಕ್ಕೆ ಒಂದು ರೀತಿ ಇರುತ್ತದೆ. ಇದಕ್ಕೆ ಸುಮಾರು 75 ನಿಮಿಷವಾಗಿದೆ. ಇನ್ನೂ ಎಷ್ಟು ಅವಕಾಶ ನೀಡುವುದು? ತಾವುಗಳು ನನ್ನ ಅನುಮತಿ ಇಲ್ಲದೆ ಹಾಗೆಯೇ ಎದ್ದು ಎದ್ದು ಮಾತನಾಡುವುದೇ? ಇದಕ್ಕೆ ಏನಾದರೂ ಪದ್ಧತಿ ಇದೆಯೇ? ಎಲ್ಲರೂ ಎದ್ದು ನಿಂತು ಹೇಳುತ್ತಾರೆ. ಉತ್ತರ ಕೊಡುವುದಕ್ಕೆ ಅವರೆಲ್ಲರೂ ಮಂತ್ರಿಗಳೆ? ನೋಡಿ ಈಗ unnecessarily time waste ಮಾಡುವುದಲ್ಲ. Question hour ನಂತರ ಲಿಖಿತ ಮೂಲಕ ಉತ್ತರಗಳನ್ನು ಸಹ ಮಂಡಿಸಲಾಗಿದೆ. ನಾನು ಒಂದು ಬಾರಿ ಹೇಳಿದರೆ ಮುಗಿಯಿತು. ಈಗ ಶೂನ್ಯವೇಳೆ. ಮಾನ್ಯ ಸದಸ್ಯರಾದ ಶ್ರೀ ಕೇಶವ ಪ್ರಸಾದ್.ಎಸ್ ತಾವು ಮಾತನಾಡಿ.

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ತಾವು ನನ್ನ ಕಡೆ ಗಮನಹರಿಸಬೇಕು. ಯಾವುದೋ ಒಂದು ಪ್ರಶ್ನೆಯ ಸಲುವಾಗಿ, ಇಡೀ ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಯ ಜನರಿಗೆ ಅನ್ಯಾಯವಾಗುತ್ತದೆ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಪಿ.ಹೆಚ್.ಪೂಜಾರ್‌ರವರು ಧರಣಿ ನಿರತರಾಗಲು ಸದನದ ಬಾವಿಯ ಕಡೆ ಹೊರಟರಾದರೂ ವಿರೋಧ ಪಕ್ಷದ ನಾಯಕರ ಸೂಚನೆಯ ಮೇರೆಗೆ ತಮ್ಮ ಸ್ಥಾನಕ್ಕೆ ಹಿಂತಿರುಗಿದರು)**

**6. <u>ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು</u>**

**ಅ) ವಿಷಯ:- ಗುಮ್ಮಟ ನಗರಿಯಲ್ಲಿ ಮಾದಕ ವ್ಯಸನವು ಯುವಕರ ಆರೋಗ್ಯ, ಶಿಕ್ಷಣ ಹಾಗೂ ವೈಯಕ್ತಿಕ ಸಂಬಂಧಗಳ ಜೊತೆ ಜೀವನವನ್ನು ಹಾನಿ ಮಾಡುತ್ತಿದ್ದು, ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವ ಕುರಿತು.**

--------

**ಶ್ರೀ ಕೇಶವ ಪ್ರಸಾದ್.ಎಸ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 'ಹೊಸದಿಗಂತ' ದಿನಪತ್ರಿಕೆಯಲ್ಲಿ 'ಗುಮ್ಮಟ ನಗರಿಯಲ್ಲಿ ಬಲಗೊಳ್ಳುತ್ತಿದೆ ಮಾದಕ ಜಾಲ' ಪ್ರಕಟವಾಗಿರುವ ವರದಿಯನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ಕೋರುತ್ತೇನೆ.

"ರಿಮ್ಜಿಮ್" ಎನ್ನುವ ಮಾದಕ ಪಾನ್ ಹಾವಳಿ ಗುಮ್ಮಟ ನಗರಿ ವಿಜಯಪುರದಲ್ಲಿ ಸದ್ಯ ಜೋರಾಗಿ ಕೇಳಿ ಬರುತ್ತಿದ್ದು, ಈ ಚಟದ ಸುಳಿಗೆ ಸಿಕ್ಕ ಯುವಕರ ತಲೆ ಮಾತ್ರ ಧಿಮಿಮ್ ಧಿಮ್ಮಿಮ್ ಎಂದು ನಲುಗುವಂತಾಗಿದೆ. ನಗರದಲ್ಲಿ ರಿಮ್ಜಿಮ್, ಫುಲ್ ಚಂದ್ ಸೇರಿದಂತೆ 25 ನಮೂನೆಗಳಲ್ಲಿ ಮಾರಾಟಗೊಳ್ಳುತ್ತಿರುವ ಮಾದಕ ಪಾನ್ ತಿನ್ನುವ ಚಟಕ್ಕೆ ಅಂಟಿಕೊಂಡ ಯುವಕರು, ತಮ್ಮ ಬದುಕು ಮೂರಾಬಟ್ಟೆ ಮಾಡಿಕೊಳ್ಳುತ್ತಿರುವುದು ದುರಂತ, ಬಿಸಿಲೂರಿನಲ್ಲಿ ಮಾದಕ ಪಾನ್ ಸೇವನೆ ಹಾಗೂ ಮಾರಾಟ ಜಾಲ ಬಲಗೊಳ್ಳುತ್ತಿದ್ದು, ಅದರಲ್ಲೂ ಎಂ.ಬಿ.ಬಿ.ಎಸ್, ಇಂಜಿನಿಯರಿಂಗ್, ಪದವಿ ಹಂತದ ಯುವಕರು ಈ ಪಾನ್ ತಿನ್ನುವ ಶೋಕಿಯಿಂದ ಪಕ್ಕಾ ವ್ಯಸನಿಗಳಾಗಿದ್ದು, ಓದು, ಬರಹ, ಕಾಲೇಜ್, ಕೆರಿಯರ್ ಯಾವುದನ್ನು ಲೆಕ್ಕಿಸದೆ ನಶೆಯಲ್ಲಿಯೇ ತೇಲುತ್ತಿರುವ ತಮ್ಮ ಮಕ್ಕಳನ್ನು ಕಂಡು ಪಾಲಕರು ಆತಂಕಗೊಳ್ಳುವಂತಾಗಿದೆ.

ಈ ಮಾದಕ ಪಾನ್ ವ್ಯಸನಕ್ಕೆ ಕೇವಲ ಜನಸಾಮಾನ್ಯರ ಮಕ್ಕಳಲ್ಲ ಪ್ರತಿಷ್ಠಿತ ರಾಜಕಾರಣಿಗಳ ಹಾಗೂ ಪೋಲೀಸ್ ಅಧಿಕಾರಿಗಳ ಮಕ್ಕಳೂ ಸಿಲುಕಿಕೊಂಡಿದ್ದಾರೆ. ಇಂತಹ ವ್ಯಸನಕ್ಕೆ ಸಿಲುಕಿದ ಅದೆಷ್ಟೋ ಯುವಕರು ತಮ್ಮ ಜೀವನವನ್ನು ನರಕ ಮಾಡಿಕೊಂಡಿದ್ದಾರೆ. ನಗರದ ಪಾನ್ ಅಂಗಡಿಗಳಲ್ಲಿನ ಪಾನ್‌ಗಳಲ್ಲಿ ಮಾದಕ ವಸ್ತುಗಳನ್ನು ಹಾಕಿ ಮಾರಾಟ ಮಾಡುವ ಅಕ್ರಮ ದಂಧೆ ಎಗ್ಗಿಲ್ಲದೆ ನಡೆಯುತ್ತಿದ್ದು, ಯುವಕರು ಈ ಅಕ್ರಮ ದಂಧೆಕೋರರ ಬಂಡವಾಳವಾಗಿದ್ದಾರೆ.

ಮಾದಕ ವ್ಯಸನವು ಯುವಕರ ಆರೋಗ್ಯ, ಶಿಕ್ಷಣ ಹಾಗೂ ವೈಯಕ್ತಿಕ ಸಂಬಂಧಗಳನ್ನು ಹಾಗೂ ಜೀವನವನ್ನು ಹಾನಿ ಮಾಡುತ್ತಿದೆ. ಆದ್ದರಿಂದ ರಾಜ್ಯ ಸರ್ಕಾರ ಕೂಡಲೇ ಎಚ್ಚೆತ್ತುಕೊಂಡು ದಂಧೆಕೋರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಗೃಹ ಸಚಿವರನ್ನು ಶೂನ್ಯವೇಳೆಯಲ್ಲಿ ಆಗ್ರಹಿಸುತ್ತೇನೆ.

**ಡಾ: ಜಿ.ಪರಮೇಶ್ವರ್ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೆ, ಉತ್ತರವನ್ನು ತರಿಸಿಕೊಡುತ್ತೇನೆ.

**ಆ) ವಿಷಯ:- ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಕಲಶೇಶ್ವರ ಸ್ವಾಮಿ ದೇವಸ್ಥಾನಕ್ಕೆ ಸೇರಿದ ಸಾವಿರಾರು ಎಕರೆ ಜಮೀನನ್ನು ನ್ಯಾಯಾಲಯವು ಅರಣ್ಯ ಭೂಮಿ ಎಂದು ತೀರ್ಪು ನೀಡಿರುವ ಹಿನ್ನೆಲೆಯಲ್ಲಿ ಸಾಗುವಳಿದಾರರಿಗೆ ಪರ್ಯಾಯ ಜಮೀನು ನೀಡುವ ಕುರಿತು.**

- - - - -

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಕಳಸ ಹೋಬಳಿಯಲ್ಲಿರುವ, ಈಗ ಅದು ಕಳಸ ತಾಲ್ಲೂಕು ಪುರಾತನ ಶ್ರೀ ಕಲಶೇಶ್ವರ ಸ್ವಾಮಿ ದೇವಸ್ಥಾನಕ್ಕೆ 1,512ರಲ್ಲಿ ಕಾರ್ಕಳ ಭೈರವರಸ ರಾಜರು ಮಾವಿನಕೆರೆ, ತಲಗೋಡು, ತೋಟದೂರು ಗ್ರಾಮಗಳಲ್ಲಿನ ಪೂರ್ಣ ಜಮೀನುಗಳನ್ನು ದಾನ ನೀಡಿದ್ದು, ದಾನ ನೀಡುವಾಗ ವಿಧಿಸಿದ್ದ ಷರತ್ತುಗಳಂತೆ ಈ ಜಮೀನುಗಳಿಂದ ಬರುವ ಆದಾಯದಿಂದ ಶ್ರೀ ದೇವರ ಪೂಜೆ, ಉತ್ಸವ, ಹೋಮ, ಹವನ, ರಥೋತ್ಸವ, ಗಿರಿಜಾ ಕಲ್ಯಾಣ ಮುಂತಾದ ಸೇವೆಗಳನ್ನು ನಡೆಸಿಕೊಂಡು ಬರಲಾಗಿದೆ. ಆದರೆ, ನಂತರದ ದಿನಗಳಲ್ಲಿ ಅರಣ್ಯ ಇಲಾಖೆಯವರು ದೇವಸ್ಥಾನಕ್ಕೆ ಸೇರಿದ 6,777 ಎಕರೆ ಪ್ರದೇಶ ಅರಣ್ಯ ಇಲಾಖೆಗೆ ಸೇರಿದ್ದೆಂದು ಮೈಸೂರಿನ ಮಹಾರಾಜರು ಘೋಷಿಸಿದ್ದಾರೆಂದು ಹೇಳಲಾದ ಗೆಜೆಟ್ ಅನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು, ನ್ಯಾಯಾಲಯ ಗೆಜೆಟ್ ಅನುಸಾರ ಅರಣ್ಯ ಭೂಮಿ ಎಂದು 2012ರಲ್ಲಿ ತೀರ್ಪು ನೀಡಿರುತ್ತದೆ. ನಂತರ ಉಚ್ಚ ನ್ಯಾಯಾಲಯ ಸಹ 2014ರಲ್ಲಿ ಈ ಆದೇಶವನ್ನು ಎತ್ತಿ ಹಿಡಿದಿದೆ. ಉಚ್ಚ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲಾಗಿದೆ. (ಎನ್.ಪಿ.ಸುಂಗಧಿನಿ ಮತ್ತು ಇತರರು ಹೆಸರಿನಲ್ಲಿರುವ ಪ್ರಕರಣ ಸಂಖ್ಯೆ:ಎಸ್.ಎಲ್.ಪಿ. (ಸಿವಿಲ್):28571 – 28595/2014). ಶ್ರೀ ಕಲಶೇಶ್ವರ ದೇವಸ್ಥಾನಕ್ಕೆ ಸೇರಿದ ಈ ಭೂಮಿಯಲ್ಲಿ ಹಲವಾರು ವರ್ಷಗಳ ಹಿಂದೆಯೇ 330 ಕುಟುಂಬಗಳಿಗೆ ಅಂದಾಜು 750 ಎಕರೆ ಜಮೀನು ಮಂಜೂರು ಮಾಡಲಾಗಿದ್ದು, ಅಂದಾಜು 650 ಕುಟುಂಬಗಳು 1,900 ಎಕರೆ ಸಾಗುವಳಿ ಮಾಡಿ ಮನೆ-ಮಠ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಅಲ್ಲದೇ, ಈ ಜಮೀನಿನಲ್ಲಿ ಕುದುರೆಮುಖ ಸಂಸ್ಥೆಗೆ 300 ಎಕರೆ ಹಂಚಿಕೆ ಮಾಡಲಾಗಿದೆ. ಇವರೆಲ್ಲರ ಹಿತದೃಷ್ಟಿಯಿಂದ ಹಾಗೂ ಇವರನ್ನು ಒಕ್ಕಲೆಬ್ಬಿಸುವುದನ್ನು ತಡೆಯಲು ಹಿಂದಿನ ಸರ್ಕಾರದಲ್ಲಿ ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಹಾಗೂ ಅರಣ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಆದ ತೀರ್ಮಾನದಂತೆ ಅರಣ್ಯ ಮತ್ತು ಕಂದಾಯ ಇಲಾಖೆಯ ಜಂಟಿ ಸರ್ವೇ ನಡೆಸಿ, ಸದರಿ ಅರಣ್ಯ ಜಮೀನಿಗೆ ಬದಲಾಗಿ ಪರ್ಯಾಯ ಜಮೀನು ನೀಡಲು ತೀರ್ಮಾನವಾಗಿದ್ದು, ಅದರಂತೆ ಜಮೀನನ್ನು ಗುರುತಿಸಲಾಗಿರುತ್ತದೆ. ಬದಲಿ ಜಮೀನು ನೀಡಲು ಒಪ್ಪಿರುವುದಾಗಿ ಸರ್ವೋಚ್ಚ ನ್ಯಾಯಾಲಯಕ್ಕೆ ತುರ್ತಾಗಿ ಸರ್ಕಾರವು ಪ್ರಮಾಣಪತ್ರ ಸಲ್ಲಿಸಬೇಕು, ಈ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳು.

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಈ ವಿಷಯಕ್ಕೆ ಸಂಬಂಧಿಸಿದಂತೆ, ಬದಲಿ ಜಮೀನು ನೀಡುವ ಬಗ್ಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಸರ್ಕಾರದ ವತಿಯಿಂದ ಪ್ರಮಾಣ ಪತ್ರ ಸಲ್ಲಿಸುವುದಕ್ಕೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆ.

(ಮುಂದು)

(672) 24.07.2024 12.50 LL-MD(VK) (ಸಭಾಪತಿಯವರ ಉಪಸ್ಥಿತಿ)

**ಇ) ವಿಷಯ:- ಬೆಳೆ ವಿಮೆ ನೋಂದಣಿ ಸಮಸ್ಯೆಗಳನ್ನು ತ್ವರಿತಗತಿಯಲ್ಲಿ ಸರಿಪಡಿಸಿ, ರೈತರ ಬೆಳೆ ವಿಮೆ ನೋಂದಣಿಗೆ ಅನುಕೂಲ ಮಾಡಿಕೊಡುವ ಕುರಿತು.**

- - - - - -

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ, ಶೃಂಗೇರಿ, ಎನ್.ಆರ್.ಪುರ, ತೀರ್ಥಹಳ್ಳಿ, ಮೂಡಿಗೆರೆ, ಚಿಕ್ಕಮಗಳೂರು ಹಾಗೂ ರಾಜ್ಯದ ಇತರೆ ಕಡೆ ಬೆಳೆ ವಿಮೆ ನೋಂದಣಿ ಮಾಡಿಸುವಾಗ ಹಲವು ರೀತಿಯ ಸಮಸ್ಯೆಗಳು ಕಾಣಸಿಗುತ್ತಿದ್ದು, ಈ ನಿಮಿತ್ತದಿಂದ ಕೆಲವು ರೈತರ ಬೆಳೆ ವಿಮೆ ಕಟ್ಟುವಾಗ ಬೆಳೆ ವಿಸ್ತೀರ್ಣವೇ ವ್ಯತ್ಯಾಸ ಆಗಿವೆ ಹಾಗೂ ಅಡಿಕೆ, ಕಾಫಿ, ಕಾಳು ಮೆಣಸು ಬೆಳೆಗಳಿಗೆ ಇನ್‌ಶೂರೆನ್ಸ್ ಮಾಡೋಕೆ ಆಗದೇ, ರೈತರಿಗೆ ತೀರಾ ಸಮಸ್ಯೆ ಎದುರಾಗಿದೆ. 17 ಗುಂಟೆ ಪಹಣಿ ಇದ್ದು, ಸಿಸ್ಟಮ್‌ನಲ್ಲಿ ಎಂಟು ಗುಂಟೆಗೆ ಬೆಳೆ ವಿಮೆ ನೋಂದಣಿ ಮಾಡಬಹುದು ಎಂದು ತೋರಿಸುವುದರಿಂದ ರೈತರಲ್ಲಿ ಗೊಂದಲ ಸೃಷ್ಟಿಯಾಗಿದೆ. ಕಳೆದ ಬಾರಿ ಬೆಳೆ ಸರ್ವೆಯನ್ನು ಸರಿಯಾಗಿ ಮಾಡಿದ್ದರೂ, ಪ್ರಸ್ತುತ ಬೆಳೆ ವಿಮೆ ಮಾಡಿಸುವಾಗ ಅಡಿಕೆ, ಕಾಫಿ ಇದ್ದ ಸರ್ವೆ ನಂಬರ್‌ಗಳ ವಿಷಯವಾಗಿ ಸಿಸ್ಟಮ್‌ನಲ್ಲಿ ಅದಲು ಬದಲಾಗಿವೆ. ಕಳೆದ ವರ್ಷ ಜಮೀನು ಜಂಟಿ ಖಾತೆಯಲ್ಲಿದ್ದರೂ ಬೆಳೆ ವಿಮೆ ಮಾಡಿಸಬಹುದಾಗಿತ್ತು. ಆದರೆ, ಈ ವರ್ಷ ಅದಕ್ಕೆ ಎಲ್ಲಾ ಸದಸ್ಯರ ಐ.ಡಿ. ಇಲ್ಲ ಹಾಗಾಗಿ, ನೋಂದಣಿ ಆಗ್ತಾ ಇಲ್ಲ ಅನ್ನುವ ಕಂಪ್ಲೇಂಟ್ ಎದುರಾಗಿದೆ. ಅದರಂತೆ, ಕಳೆದ ವರ್ಷ ಬೆಳೆ ಸರ್ವೆಯಲ್ಲಾದ ಲೋಪಗಳನ್ನು (PR & VA) ಗಳು ಸರಿಪಡಿಸಲಾಗಿಲ್ಲ. ಇದರಿಂದಾಗಿ, ಬೆಳೆ ವಿಮೆ ನೋಂದಣಿ ಆಗುತ್ತಾ ಇಲ್ಲ. ಅದರಂತೆ, ಕಳೆದ ಬಾರಿ ಬೆಳೆ ಸರ್ವೆ ಆದ ಮೇಲೆ ಬದಲಾದ ಹಕ್ಕುದಾರಿಕೆಯಲ್ಲಿ (ಖರೀದಿಯಿಂದ ಪೌತಿದಾರರಿಂದ ಬಾಧ್ಯಸ್ಥರಿಗೆ ಬಂದಾಗ ಇತ್ಯಾದಿ) ಹೊಸ ಹಕ್ಕುದಾರರು FRUIT ID, ಆಧಾರ್-ಪಹಣಿ ಸೀಡಿಂಗ್, NPCI ಎಲ್ಲ ಆಗಿದ್ದರೂ, ಬೆಳೆ ವಿಮೆ ನೋಂದಣಿಗೆ ಸಂರಕ್ಷಣ ವೆಬ್‌ಸೈಟ್ ಸಪೋರ್ಟ್ ಮಾಡುತ್ತಾ ಇರುವುದಿಲ್ಲ. ತಾಂತ್ರಿಕವಾಗಿ 'Aadhar not valid. You cannot generate this application' ಅಂತ ಕೆಲವು ರೈತರಿಗೆ ಸಿಸ್ಟಮ್‌ನಲ್ಲಿ ನೋಂದಣಿ ಆಗುತ್ತಿರುವುದಿಲ್ಲ. ಅದರಂತೆ, 'No FRUIT details available for this District, Taluk and Gram Panchayat ULB combination' ಅಂತ ಕೆಲವು ಸರ್ವೆ ನಂಬರ್‌ಗಳು ಬೆಳೆ ವಿಮೆಯಿಂದ

ತಿರಸ್ಕೃತ ಆಗುತ್ತಿರುತ್ತವೆ. 'Error Connecting to FRUIT server' ಎಂದು ಕೆಲವು ರೈತರು ನೋಂದಣಿಗೆ ಸಮಸ್ಯೆ ಆಗುತ್ತಿರುವುದು ಕಂಡು ಬರುತ್ತಿದೆ. ಬೆಳೆ ವಿಮೆ ನೋಂದಣಿಗೆ ಇನ್ನೂ ಕೇವಲ 9 ದಿನಗಳ ಸಮಯಾವಕಾಶ ಮಾತ್ರ ಇರುವುದರಿಂದ, ತುರ್ತಾಗಿ ಸದರಿ ಸಮಸ್ಯೆಗಳನ್ನು ತ್ವರಿತಗತಿಯಲ್ಲಿ ಸರಿಪಡಿಸಿ, ರೈತರ ಬೆಳೆ ವಿಮೆ ನೋಂದಣಿಗೆ ಅನುಕೂಲ ಮಾಡಿಕೊಡುವ ಸಂಬಂಧ ಮಾನ್ಯ ಕಂದಾಯ ಸಚಿವರ ಬಳಿ ಪ್ರಸ್ತಾಪಿಸಬಯಸುತ್ತೇನೆ.

**ಶ್ರೀ ಕೃಷ್ಣಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಇದರಲ್ಲಿ ಸುಮಾರು ವಿಷಯಗಳು ಕೃಷಿ ಇಲಾಖೆ ವ್ಯಾಪ್ತಿಗೆ ಬರುತ್ತದೆ. ಆದರೂ ಸಹ, ಕಂದಾಯ ಇಲಾಖೆಯದ್ದು ಮತ್ತು ಕೃಷಿ ಇಲಾಖೆಯದ್ದು ಏನು ಸಮಸ್ಯೆಗಳಿವೆ ಆ ಬಗ್ಗೆ ಸರ್ಕಾರದ ಕಡೆಯಿಂದ ಏನಾದರೂ ನ್ಯೂನತೆಗಳಿದ್ದರೆ ಅದನ್ನು ತಕ್ಷಣ ಸರಿಪಡಿಸುವುದಕ್ಕೆ ಸಂಬಂಧಪಟ್ಟವರಿಗೆ ಸೂಚನೆ ನೀಡುತ್ತೇನೆ. ಆದರೆ, ರೈತರ ಕಡೆಗಳಿಂದಲೂ ಕೆಲವು ಸಮಸ್ಯೆಗಳು ಇರುವುದು ಸಾಧ್ಯವಿದೆ. 'Aadhar not valid' ಎಂದರೆ, ರೈತರು ತಪ್ಪು ಆಧಾರ್ ನೀಡಿದ್ದು ಇರಬಹುದು. ಅವರು ಕೊಟ್ಟಿದ್ದಾರೆಂದು ನಾನು ಹೇಳುತ್ತಿಲ್ಲ. ಹಾಗೆಯೇ, ಬೆಳೆ ಸಮೀಕ್ಷೆಯಲ್ಲಿ ಎಷ್ಟು ಏರಿಯಾಗೆ crop ಆಗಿರುತ್ತಾರೆ, ಅದು ಮುಖ್ಯವಾಗುತ್ತದೆ. ಆದರೆ, ರೈತರು ಏನು ಮಾಡುತ್ತಾರೆಂದರೆ, ಆ ಬೆಳೆ ಅಷ್ಟು ಇರುವುದಿಲ್ಲ ಅಥವಾ ಬೆಳೆಯೇ ಹಾಕಿರುವುದಿಲ್ಲ. ಇನ್‌ಶೂರೆನ್ಸ್ ಪಡೆಯುವುದಕ್ಕಾಗಿ, ಅದಕ್ಕೆ ಇನ್‌ಶೂರೆನ್ಸ್ ಮಾಡಿಸುತ್ತಾರೆ. ಈ ರೀತಿಯ ಕೆಲವು ಪ್ರಕರಣಗಳು ಇರುತ್ತವೆ. ಆದರೆ, ಈ ರೈತರು ಮಾಡಿದ್ದಾರೆಂದು ನಾನು ಹೇಳುತ್ತಿಲ್ಲ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಈ ವಿಷಯದಲ್ಲಿ ಸರ್ಕಾರದ ಏನೇ ನ್ಯೂನತೆ ಇದ್ದರೂ, ತಕ್ಷಣ ಅದನ್ನು ಸರಿಪಡಿಸಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡುತ್ತೇನೆ.

**ಈ) ವಿಷಯ:- ಕುಂದಾಪುರ, ಕಾರ್ಕಳ ಮತ್ತು ಪಶ್ಚಿಮಘಟ್ಟದ ತಪ್ಪಲಿನ ಜನರ ಹಿತದೃಷ್ಟಿಯಿಂದ ಸರ್ವೆ ನಡೆಸಿ, ಅಗತ್ಯವಾಗಿ ಸಂಪರ್ಕ ಸೇತುವೆಯನ್ನು ನಿರ್ಮಿಸುವ ಬಗ್ಗೆ.**

\- - -

**ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, "ಬೇರೆ ದಾರಿಯೇ ಇಲ್ಲ, ಒಂದು ಕಾಲುಸಂಕ ಕೊಡಿ!" ಎಂಬ ಶೀರ್ಷಿಕೆಯಡಿ ದಿನಾಂಕ:22.07.2024ರ ಉದಯವಾಣಿ ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ಇವರು ಕೇಳುವುದು ದೊಡ್ಡ ದೊಡ್ಡ ರಸ್ತೆಗಳನ್ನಲ್ಲ, ಸೇತುವೆಗಳನ್ನೂ ಅಲ್ಲ. ಈ ಭಯಂಕರ ಕಾಡಿನ ಅಬ್ಬರದ ಹೊಳೆಗಳನ್ನು ದಾಟುವ ಅನಿವಾರ್ಯತೆಯ ನಡುವೆ ಪ್ರಾಣ ಉಳಿಸಿಕೊಳ್ಳಲು ಒಂದು ಕಾಲುಸಂಕವನ್ನು ಇಂಥ ಅಸಹಾಯಕ ಬೇಡಿಕೆಗಳಿಗೆ ಧ್ವನಿಯಾಗಬೇಕಾದ ಆಡಳಿತ ವ್ಯವಸ್ಥೆ, ಜನಪ್ರತಿನಿಧಿಗಳು, ಸ್ವಯಂಸೇವಾ ಸಂಘಟನೆಗಳು, ದಾನಿಗಳು, ಇನ್ನೊಬ್ಬ ಮನುಷ್ಯನ ಕಷ್ಟಕ್ಕೆ ಮರುಗುವ ಮನಸ್ಸಿರುವ ಯಾರಾದರೂ ಅವರ ಬೆಂಬಲಕ್ಕೆ ನಿಲ್ಲಬೇಕಾಗಿದೆ.

ಇಲ್ಲಿಯ ದೃಶ್ಯವನ್ನು ಕಲ್ಪಿಸಿಕೊಂಡರೇ ಎದೆ ಝುಲ್ಲೆನ್ನುತ್ತದೆ. ಎದುರು ಭೋರ್ಗರೆಯುವ ಹೊಳೆ, ಕಾಲಿಟ್ಟರೆ ಎಳೆದುಕೊಂಡು ಹೋಗುವಷ್ಟು ಶಕ್ತಿಶಾಲಿ ನೀರಿನ ಸೆಳೆತ, ಹಾಗಂತ, ಸುಮ್ಮನೆ ಉಳಿಯುವಂತಿಲ್ಲ. ಹೇಗಾದರೂ ಮಾಡಿ ಆಚೆ ದಡ ತಲುಪಲೇಬೇಕು. ಉದ್ಯೋಗಕ್ಕೋ, ಕೂಲಿಗೋ, ಶಾಲೆಗೋ ಹೋಗಲೇಬೇಕು. ಇನ್ನು ಕೆಲವು ಕಡೆ ಕೇವಲ ಒಂದೆರಡು ಮರದ ತುಂಡುಗಳನ್ನು ಜತೆಯಾಗಿಸಿ ಎಳೆದು ಕಟ್ಟಿದ ಮರದ ಕಾಲುಸಂಕ. ಅದಕ್ಕೊಂದು ಕೈ ಸಾಂಗು ಇದ್ದರೆ ಉಂಟು, ಇಲ್ಲದಿದ್ದರೆ ಇಲ್ಲ. ಉಕ್ಕಿ ಹರಿವ ಹಳ್ಳದ ಮೇಲೆ ಕಿರಿದಾದ ಮರದ ತುಂಡುಗಳ ಮೇಲೆ ಹೆಜ್ಜೆ ಇಡುತ್ತಾ ನಡೆದು ಆಚೆ ದಡ ಸೇರಬೇಕು. ಕಾಲು ಜಾರಿದರೆ, ಮರ ಮುರಿದರೆ, ನೀರು ಅಬ್ಬರಿಸಿ ಸೆಳೆದೊಯ್ದರೆ ಕಥೆ ಮುಗಿದೇ ಹೋಯಿತು. ಹೆಣವೂ ಸಿಗುವುದಿಲ್ಲ.

ಇದು ಕುಂದಾಪುರ, ಬೈಂದೂರು ಮತ್ತು ಕಾರ್ಕಳ ತಾಲ್ಲೂಕಿನ ಪಶ್ಚಿಮ ಘಟ್ಟದ ತಪ್ಪಲಿನ ನೂರಾರು ಹಳ್ಳಿಗಳ ಭಯಾನಕ ಕಥೆ. ಇಲ್ಲಿನ ಸಾವಿರಾರು ಕುಟುಂಬಗಳಿಗೆ ಮಳೆಗಾಲದ ಮೂರ್ನಾಲ್ಕು ತಿಂಗಳು ಎನ್ನುವುದು ಯಮಯಾತನೆ. ಕೆಲವು ಕುಟುಂಬಗಳು ಜೂನ್ ಆರಂಭದಲ್ಲಿ ಊರು ಸೇರಿಕೊಂಡವೆಂದರೆ, ಮತ್ತೆ ನಾಲ್ಕು ತಿಂಗಳು ದಿಗ್ಬಂಧನವೇ. ಹೀಗಾಗಿ, ಅದೆಷ್ಟೋ ಕುಟುಂಬಗಳು ಮಳೆಗಾಲಕ್ಕೆ ಬೇಕಾಗುವ ಧಾನ್ಯಗಳನ್ನು ಮೊದಲೇ ಸಂಗ್ರಹಿಸಿಟ್ಟುಕೊಳ್ಳುತ್ತವೆ.

ಮನೆಯ ಮಕ್ಕಳಿಗೆ ಶಾಲೆ ಎಂಬುದು ಮರೀಚಿಕೆಯಾಗಿದೆ. ಕೆಲವರು ಮಕ್ಕಳನ್ನು ದೂರದ ಹಾಸ್ಟೆಲ್‌ನಲ್ಲಿಟ್ಟರೆ, ಕೆಲವು ಮಕ್ಕಳು ಅಪಾಯಕಾರಿ ಮರದ ಕಾಲುಸಂಕವನ್ನು ದಾಟಿಕೊಂಡು ಶಾಲೆಗೆ ಹೋಗುತ್ತಾರೆ. 2 ವರ್ಷಗಳ ಹಿಂದೆ ಬೈಂದೂರಿನ ಕಾಲ್ತೋಡು ಎಂಬಲ್ಲಿ ಅವಘಡವೊಂದು ಸಂಭವಿಸಿತ್ತು. ಶಾಲೆಯಿಂದ ಮರಳುತ್ತಿದ್ದ ಸನ್ನಿಧಿ ಎಂಬ ಬಾಲಕಿ ಕಿರಿದಾದ ಮರದ ಕಾಲು ಸಂಕದ ಮೂಲಕ ಸಾಗುವ ಹೊತ್ತಿಗೆ ನೀರಿನ ರಭಸಕ್ಕೆ ಸಿಲುಕಿ ಕೊಚ್ಚಿಕೊಂಡು ಹೋಗಿ ನೀರು ಪಾಲಾಗಿದ್ದಳು. ಆದ್ದರಿಂದ, ಇಲ್ಲಿಯ ಜನರ ಹಿತದೃಷ್ಟಿಯಿಂದ ಈ ಭಾಗದಲ್ಲಿ ಸರ್ವೆ ನಡೆಸಿ, ಅಗತ್ಯವಿರುವ ಕಡೆ ಕಾಲು ಸಂಕಗಳನ್ನು ನಿರ್ಮಿಸಿಕೊಡಬೇಕಾಗಿ ಮಾನ್ಯ ಲೋಕೋಪಯೋಗಿ ಇಲಾಖೆ ಮಂತ್ರಿಗಳನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಸತೀಶ್ ಜಾರಕಿಹೊಳಿ (ಲೋಕೋಪಯೋಗಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ್ ಭಂಡಾರಿಯವರು ಒಳ್ಳೆಯ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ, ಕಳೆದ ಸಾಲಿನಲ್ಲಿ 100 ಕಾಲು ಸಂಕಗಳನ್ನು 12 ಜಿಲ್ಲೆಗಳಲ್ಲಿ ಮಂಜೂರು ಮಾಡಿದ್ದು, ಅದರಲ್ಲಿ ಕೆಲವು ಈಗಾಗಲೇ ನಿರ್ಮಾಣಗೊಂಡಿದ್ದು, ಇನ್ನು ಕೆಲವು ನಿರ್ಮಾಣ ಮಾಡಬೇಕಾಗಿದೆ. ಜೊತೆಗೆ, ಈ ಸಾಲಿನಲ್ಲಿ 12 ಜಿಲ್ಲೆಯಲ್ಲಿ ಸುಮಾರು 200 ಕಾಲುಸಂಕಗಳನ್ನು ಮಂಜೂರು ಮಾಡುವುದಕ್ಕೆ ಆದೇಶವನ್ನು ಮಾಡಿದ್ದೇವೆ. ಅಲ್ಲದೇ, ಇದು ನನ್ನ ಕನಸಿನ ಯೋಜನೆಯಾಗಿದೆ. ಇದು ಬಹಳ ಅವಶ್ಯಕತೆಯಾಗಿದೆ ಹಾಗೂ ಇದು ಬಹಳ ಕಡಿಮೆ ಖರ್ಚಿನಲ್ಲಿ ಅಂದರೆ, 10, 15, 20 ಅಥವಾ 25 ಲಕ್ಷ ರೂಪಾಯಿಯಲ್ಲಿ ಆಗುತ್ತದೆ. ನಮ್ಮ ಸರ್ಕಾರ ಇದನ್ನು ಬಹಳ ಆದ್ಯತೆ ಮೇಲೆ ತೆಗೆದುಕೊಳ್ಳುತ್ತಿದೆ. ಅದರಂತೆ, ಕಳೆದ ಸಾಲಿನಲ್ಲಿ 100 ಕಾಲುಸಂಕಗಳಿಗೆ

ಮಂಜೂರಾತಿ ನೀಡಿದ್ದು, ಈ ಸಾಲಿನಲ್ಲಿ 200 ಕಾಲುಸಂಕಗಳಿಗೆ ಮಂಜೂರಾತಿ ಮಾಡುವುದಕ್ಕೆ ಅವಕಾಶ ನೀಡಿದ್ದು, ಇನ್ನು ಮುಂದಿನ ವರ್ಷ ಇನ್ನು ಹೆಚ್ಚಿನ ಕಾಲುಸಂಕಗಳನ್ನು ನಿರ್ಮಾಣ ಮಾಡುವುದಕ್ಕೆ ಪ್ರಯತ್ನ ಮಾಡಿ, ಆದಷ್ಟು ಬೇಗ ಎಲ್ಲಾ ಕಾಲುಸಂಕಗಳನ್ನು ನಿರ್ಮಾಣ ಮಾಡುವುದಕ್ಕೆ ನಮ್ಮ ಇಲಾಖೆ ಮಾಡುತ್ತದೆ ಎನ್ನುವ ಭರವಸೆಯನ್ನು ಮಾನ್ಯ ಸದಸ್ಯರಿಗೆ ನೀಡುವುದಕ್ಕೆ ಬಯಸುತ್ತೇನೆ.

**ಉ) ವಿಷಯ:- 2024-25 ನೇ ಸಾಲಿನ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ವಿಷಯಗಳ ಉಪನ್ಯಾಸಕರನ್ನು ಹೆಚ್ಚುವರಿ ಎಂದು ಗುರ್ತಿಸಿ ತಾತ್ಕಾಲಿಕ ಪಟ್ಟಿ ಮಾಡಿರುವುದನ್ನು ರದ್ದುಪಡಿಸುವ ಕುರಿತು**

- - - - -

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 2024-25 ನೇ ಸಾಲಿನ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ವಿಷಯಗಳ ಉಪನ್ಯಾಸಕರನ್ನು ಹೆಚ್ಚುವರಿ ಎಂದು ಗುರ್ತಿಸಿ ತಾತ್ಕಾಲಿಕ ಪಟ್ಟಿ ಮಾಡಿರುವುದನ್ನು ರದ್ದುಪಡಿಸುವ ವಿಷಯವನ್ನು ಸದನದ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುತ್ತೇನೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2024-25ನೇ ಸಾಲಿನ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ವಿಷಯಗಳ ಉಪನ್ಯಾಸಕರನ್ನು ಹೆಚ್ಚುವರಿ ಎಂದು ಗುರ್ತಿಸಿ ತಾತ್ಕಾಲಿಕ ಪಟ್ಟಿ ಮಾಡಿ ಪ್ರಕಟಿಸಿ ದಿನಾಂಕ:19.07.2024ರಂದು ಆದೇಶ ಹೊರಡಿಸಿ ಪಟ್ಟಿ ಬಿಡುಗಡೆ ಮಾಡಲಾಗಿದೆ. ಸರ್ಕಾರಿ ಪದವಿ ಪೂರ್ವ ಕಾಲೇಜು ಉಪನ್ಯಾಸಕರನ್ನು 2023-24ನೇ ಸಾಲಿನ ವಿದ್ಯಾರ್ಥಿಗಳ ದಾಖಲಾತಿ ಆಧಾರದ ಮೇಲೆ ಪ್ರಕಟ ಮಾಡಿದ್ದು, ಇದು ಸಂಪೂರ್ಣ ಅವೈಜ್ಞಾನಿಕವಾಗಿದೆ. 2024-25ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಇನ್ನು ಒಂದು ವಾರ್ಷಿಕ ಪರೀಕ್ಷೆ ಬಾಕಿ ಇದ್ದು, ಇನ್ನು ಪದವಿ ಪೂರ್ವ ತರಗತಿಗಳಿಗೆ ವಿದ್ಯಾರ್ಥಿಗಳು ದಾಖಲಾತಿ ಆಗುತ್ತಿದ್ದಾರೆ. ಆದರೆ, ಪ್ರಸ್ತುತ ವರ್ಷದ ವಿದ್ಯಾರ್ಥಿಗಳ ದಾಖಲಾತಿಯನ್ನು ಪರಿಗಣಿಸದೇ 2023-24ನೇ ಸಾಲಿನ ವಿದ್ಯಾರ್ಥಿಗಳ ದಾಖಲಾತಿಯನ್ನು ಪರಿಗಣಿಸಿ ಹೆಚ್ಚುವರಿ ಪಟ್ಟಿ ಮಾಡಿರುವುದರಿಂದ 50 ವರ್ಷಕ್ಕಿಂತ ಹೆಚ್ಚು ವಯಸ್ಸಾಗಿರುವ ಅನಾರೋಗ್ಯದ ಸಮಸ್ಯೆಯಿರುವ ಉಪನ್ಯಾಸಕರಿಗೆ ತುಂಬಾ ತೊಂದರೆಯಾಗಿದೆ. ಈಗಾಗಲೇ ಹೈಕೋರ್ಟ್‌ನಲ್ಲಿಯು ಸಹ 50 ವರ್ಷಕ್ಕಿಂತ ಹೆಚ್ಚು ವಯಸ್ಸಾಗಿರುವ ಶಿಕ್ಷಕರು/ಉಪನ್ಯಾಸಕರುಗಳನ್ನು ಹೆಚ್ಚುವರಿ ಎಂದು ಪರಿಗಣಿಸಿ ವರ್ಗಾವಣೆ ಮಾಡಿರುವುದನ್ನು ಸರಿಯಾದ ಕ್ರಮವಲ್ಲವೆಂದು ರದ್ದುಗೊಳಿಸಿದೆ. ಆದ್ದರಿಂದ, 55 ವರ್ಷ ಮೇಲ್ಪಟ್ಟ ಶಿಕ್ಷಕರು/ಉಪನ್ಯಾಸಕರಿಗೆ ವರ್ಗಾವಣೆ ನಿಯಮಗಳಲ್ಲಿ ವಿನಾಯಿತಿ ಇದ್ದರೂ ಸಹ ಹೆಚ್ಚುವರಿ ಎಂದು ಪರಿಗಣಿಸಿ ಪಟ್ಟಿ ಬಿಡುಗಡೆ ಮಾಡಲಾಗಿದೆ. ಎಸ್.ಎಸ್.ಎಲ್.ಸಿ. 3ನೇ ಪರೀಕ್ಷೆ ನಡೆದು ವಿದ್ಯಾರ್ಥಿಗಳು ಪದವಿ ಪೂರ್ವ ತರಗತಿಗಳಿಗೆ ದಾಖಲಾಗುತ್ತಾರೆ. ಆದರೆ, ಪದವಿ ಪೂರ್ವ ಶಿಕ್ಷಣ ಇಲಾಖೆಯು 2023-24ನೇ ಸಾಲಿನ

ವಿದ್ಯಾರ್ಥಿಗಳ ದಾಖಲಾತಿಯನ್ನು ಪರಿಗಣಿಸಿ ಹೆಚ್ಚುವರಿ ಉಪನ್ಯಾಸಕರ ತಾತ್ಕಾಲಿಕ ಪಟ್ಟಿ ಪ್ರಕಟಿಸಿರುವುದು ಅವೈಜ್ಞಾನಿಕವಾಗಿರುವುದರಿಂದ ನೂರಾರು ಉಪನ್ಯಾಸಕರಿಗೆ ತೊಂದರೆಯಾಗಿರುವುದರಿಂದ ಈ ಪ್ರಕ್ರಿಯೆಯನ್ನು ಕೈಬಿಡಬೇಕೆಂಬ ವಿಷಯವನ್ನು ಸದನದ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುತ್ತೇನೆ.

(ಮುಂದು)

(673) 24-07-2024 (1.00) ವೈಎಲ್-ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಶೂನ್ಯ ವೇಳೆ ಪ್ರಸ್ತಾವಕ್ಕೆ ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಇವತ್ತೇ ಉತ್ತರ ಕೊಡಲು ಹೇಳಿ. ಏಕೆಂದರೆ, ಇವತ್ತು ಕೌನ್ಸೆಲಿಂಗ್ ಇದೆ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಚಾರದ ಕುರಿತು ನ್ಯಾಯಾಲಯದಲ್ಲಿ ಇದೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಹೌದು. ನ್ಯಾಯಾಲಯದಲ್ಲಿ ಇದೆ.

**ಸಭಾಪತಿಯವರು:-** ಈಗಾಗಲೇ ನಾನು ಮಾನ್ಯ ಸಭಾನಾಯಕರಿಗೆ ಉತ್ತರ ಕೊಡಲು ಹೇಳಿದ್ದೇನೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಕಾನೂನಿನಲ್ಲಿದ್ದು, ಕಾನೂನಿಗೆ ವಿರುದ್ಧವಾಗಿದೆ. ಅಲ್ಲಿರುವ ಅಧಿಕಾರಿಗಳು ವಿಕೃತ ಮನಸ್ಸಿನವರು. ಅಲ್ಲಿರುವ ಅಧಿಕಾರಿಗಳಿಗೆ common sense ಇಲ್ಲ.

**ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೇ, ಈಗಾಗಲೇ ಉತ್ತರ ಕೊಡಿಸಲು ಮಾನ್ಯ ಸಭಾನಾಯಕರಿಗೆ ಹೇಳಿದ್ದೇನೆ. ಆದಾಗ್ಯೂ ತಾವು ಮಾತನಾಡುತ್ತಿದ್ದಿರಲ್ಲಾ?

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಈಗಲೇ ನಾನು ಹೇಳುತ್ತಿದ್ದೇನೆ. ಪಿ.ಯು.ಬೋರ್ಡ್‌ಗೆ ಬೀಗ ಹಾಕಿಸುತ್ತೇನೆ. ಪಿ.ಯು. ಬೋರ್ಡ್‌ನಲ್ಲಿ ಅಧಿಕಾರಿಗಳು ಕುಳಿತುಕೊಳ್ಳಲು ಬಿಡುವುದಿಲ್ಲ. ಈ ರೀತಿ ತೊಂದರೆ ಮಾಡಿದರೆ.

**ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೇ, ತಾವು ಏತಕ್ಕೆ ಈ ರೀತಿ ಮಾತನಾಡುತ್ತೀರಿ? ಈಗಾಗಲೇ ನಾನು ಉತ್ತರ ಕೊಡಲು ಹೇಳಿದ್ದೇನೆ ಅಲ್ಲವೇ?

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ತುಂಬಾ ತೊಂದರೆ ಇದೆ.

**ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೇ, ಈಗಾಗಲೇ ಉತ್ತರ ಕೊಡಲು ಹೇಳಿದ್ದೇನೆ ಅಲ್ಲವೇ?

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಇನ್ನು 6 ತಿಂಗಳು ಸೇವೆ ಇರುವವರನ್ನು ಕೂಡಾ ಹೆಚ್ಚುವರಿ ಉಪನ್ಯಾಸಕರು ಎಂದು ಗುರುತಿಸಿದ್ದಾರೆ. ಅಲ್ಲಿನ ಅಧಿಕಾರಿಗಳಿಗೆ ಮನುಷ್ಯತ್ವ ಇಲ್ಲವೇ? ಕಾನೂನು ಗೊತ್ತಿಲ್ಲವೇ? ಕಾನೂನಿನ ಅರಿವು ಇಲ್ಲವೇ? ನಾನು ಸತ್ಯಕ್ಕೆ ದೂರವಾದುದನ್ನು ಹೇಳುತ್ತಿಲ್ಲ. ಏನಿದು?

## 7. ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳು ಹಾಗೂ ಇನ್ನಿತರ ಸೂಚನೆಗಳಿಗೆ ಸರ್ಕಾರ ಉತ್ತರಗಳನ್ನು ಒದಗಿಸದಿರುವ ಕುರಿತು.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಎಲ್ಲಾ ಸದಸ್ಯರು ಒಳಗೊಂಡಂತೆ 07 ದಿನಗಳಲ್ಲಿ 890 ಪ್ರಶ್ನೆಗಳನ್ನು ನಾವು ಕೇಳಿದ್ದೇವೆ. ಉತ್ತರ ಕೊಟ್ಟಿರುವುದು 283ಕ್ಕೆ ಮಾತ್ರ. ಇನ್ನು 607 ಪ್ರಶ್ನೆಗಳಿಗೆ ಉತ್ತರ ಕೊಟ್ಟಿಲ್ಲ. ತಾವು ಕೂಡಾ ಮಂಡನೆ ಮಾಡಿದ್ದೀರಿ. ಈ ರೀತಿಯಾದರೆ ಹೇಗೆ? ಅದಕ್ಕಾಗಿಯೇ ನಾವು ಸದನದಲ್ಲಿ ಸಂಬಂಧಪಟ್ಟ ಸಚಿವರು ಹಾಗೂ ಅಧಿಕಾರಿಗಳು ಇರಬೇಕೆಂದು ಹೇಳುವುದು. ಅಧಿಕಾರಿಗಳು ಇರಬೇಕೆಂದು ಏತಕ್ಕೆ ನಾವು ಕೂಗಾಡುವುದು? 890 ಪ್ರಶ್ನೆಗಳ ಪೈಕಿ ಉಳಿದ 607 ಪ್ರಶ್ನೆಗಳಿಗೆ ಯಾವಾಗ ಉತ್ತರ ತರಿಸಿಕೊಡುತ್ತೀರಿ?

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಆ ಪ್ರಶ್ನೆಗಳಿಗೆ ಉತ್ತರವೇ ಬರುವುದಿಲ್ಲ. ಅಷ್ಟೇ ಅದು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇಂತಹ ಪ್ರಶ್ನೆಗಳಿಗೆ ಉತ್ತರವೇ ಬರುವುದಿಲ್ಲ. ನ್ಯಾಯಾಲಯದಲ್ಲಿ ಆದೇಶ ಕೂಡಾ ಆಗಿದೆ.

**(ಗೊಂದಲ)**

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರು ಉತ್ತರ ಕೊಡಬೇಕು. ಏತಕ್ಕೆ ಸದನ ಕರೆಯುವುದು. **(ಗೊಂದಲ)** ಜನರ ಸಮಸ್ಯೆ ಬಗ್ಗೆ ಚರ್ಚೆ ಮಾಡಬೇಕು. **(ಗೊಂದಲ)** ಸರ್ಕಾರಕ್ಕೆ ಜವಾಬ್ದಾರಿ ಇಲ್ಲವೇ?

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಅಲ್ಲಿನ ಅಧಿಕಾರಿಗಳಿಗೆ ಮನುಷ್ಯತ್ವ ಇಲ್ಲವೇ? (ಗೊಂದಲ) ಅವರಿಗೆ ಕಾನೂನಿನ ಅರಿವು ಇಲ್ಲವೇ?

**(ಗೊಂದಲ)**

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ಅಷ್ಟು ಮಾತ್ರ ಜವಾಬ್ದಾರಿ ಇಲ್ಲವೇ?

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಈ ರೀತಿ ಮಾಡಿದರೆ ಸದನ ನಡೆಸುವುದು ಹೇಗೆ? ಆಡಳಿತ ಪಕ್ಷ ಇರಬಹುದು ಅಥವಾ ವಿರೋಧ ಪಕ್ಷದವರು ಇರಬಹುದು. ಒಟ್ಟು ೮೯೦ ಪ್ರಶ್ನೆಗಳನ್ನು ಕೇಳಲಾಗಿದೆ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಸಂಬಂಧಪಟ್ಟ ಸಚಿವರು ದಯವಿಟ್ಟು ಇವತ್ತೇ ಇತ್ಯರ್ಥಪಡಿಸಬೇಕು.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಸಭಾಪತಿಯವರೇ, ಈಗಾಗಲೇ ಆ ವಿಚಾರ ನನ್ನ ಗಮನಕ್ಕೆ ಬಂದಿದೆ. ನಿನ್ನೆಯೇ,...

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಎಷ್ಟು ಪ್ರಶ್ನೆಗಳನ್ನು ಕೇಳಲಾಗಿದೆ ಎಂಬುದನ್ನು ಲೆಕ್ಕ ತೆಗೆದು ನೋಡಲಿ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇಲ್ಲವೇ? ಅಧಿಕಾರಿಗಳು ಇಲ್ಲವೇ? ಒಂದು fingertip ನಲ್ಲಿ ಉತ್ತರ ಕೊಡುವಂಥ ಅವಕಾಶ ಎಲ್ಲಾ ಅಧಿಕಾರಿಗಳಿಗೆ ಇದೆ. ಏತಕ್ಕೆ ನಾನು ಕೇಳಿರುವ ಪ್ರಶ್ನೆಗಳಿಗೆ ಉತ್ತರ ಬರುತ್ತಿಲ್ಲ? ಹಾಗಾದರೆ, ಅವರ ಹತ್ತಿರ ಮಾಹಿತಿ ಇಲ್ಲವೇ? ಇದು ನಿನ್ನೆ, ಮೊನ್ನೆ ಹುಟ್ಟಿರುವಂಥ ಸಮಸ್ಯೆಯೇ?

**ಸಭಾಪತಿಯವರು:–** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ಒಂದು ನಿಮಿಷ. ಮಾನ್ಯ ಸಭಾನಾಯಕರೇ, ಪ್ರತಿ ದಿನ ಉತ್ತರ ಕೊಡಿಸುತ್ತೇನೆ ಎಂದು ಹೇಳುತ್ತೀರಿ. ಹಾಗಾದರೆ, ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಪ್ರತಿ ದಿನ ಪ್ರಶ್ನೆ ಉದ್ಭವಿಸಿದಾಗ ಉತ್ತರ ಕೊಡಬೇಕೆಂದು ನಿಯಮಾವಳಿ ಇದೆ. ಏತಕ್ಕೆ ಶೂನ್ಯ ವೇಳೆ ಅಡಿ ಆ ಪ್ರಶ್ನೆಗಳನ್ನು ತರಬೇಕು? ತಾವು ಉತ್ತರ ಕೊಡಿಸುತ್ತೇನೆ ಎಂದು ಮಾತ್ರ ಹೇಳುತ್ತೀರಿ. ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಿ. ಯಾವ ಅಧಿಕಾರಿ ಉತ್ತರ ಕೊಡುವುದಿಲ್ಲ ಅವರ ಮೇಲೆ ಕ್ರಮ ತೆಗೆದುಕೊಳ್ಳಿ.

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಸಭಾಪತಿಯವರೇ, ಆ ರೀತಿಯೇ ಮಾಡುತ್ತೇವೆ.

**ಸಭಾಪತಿಯವರು:–** ಈ ರೀತಿ ಮಾಡಿದರೆ ಸದನ ನಡೆಯುವುದು ಹೇಗೆ? ಏತಕ್ಕೆ ಉತ್ತರ ಕೊಟ್ಟಿಲ್ಲ ಅವರ ಮೇಲೆ ಕ್ರಮ ಕೈಗೊಳ್ಳಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಇನ್ನು ಎರಡು ದಿನ ಕಳೆದರೆ ಅಧಿವೇಶನ ಮುಗಿದು ಹೋಗುತ್ತದೆ.

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಸಭಾಪತಿಯವರೇ, ಈಗಾಗಲೇ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಯಾವ್ಯಾವ ಇಲಾಖೆಗೆ ಎಷ್ಟೆಷ್ಟು ಪ್ರಶ್ನೆಗಳಿಗೆ, ಉತ್ತರ ಬಂದಿದೆ ಎಂಬುದರ ಕುರಿತು ನಿನ್ನೆಯೇ ಬರೆದುಕೊಂಡಿದ್ದಾರೆ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಮತ್ತೊಂದು ಸಲ ನಾನು ಹೇಳುತ್ತಿದ್ದೇನೆ. ಅಧಿವೇಶನ ನಡೆದಾಗ ಮಹತ್ವವಾದ ವಿಷಯವನ್ನು ತಂದಿರುತ್ತಾರೆ. ಉತ್ತರವೇ ಕೊಡಲಿಲ್ಲವೆಂದರೆ, ಏತಕ್ಕೆ ಸದನ ನಡೆಸಬೇಕು? ಹಾಗಾಗಿ, ನಾನು ಹೇಳುವುದೇನೆಂದರೆ, ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಿ.

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಸಭಾಪತಿಯವರೇ, ತಾವು ಹೇಳಿದಂತೆ ಮಾಡುತ್ತೇನೆ.

**ಸಭಾಪತಿಯವರು:–** ಎಷ್ಟು ಪ್ರಶ್ನೆಗಳು ಉಳಿದಿವೆ, ಏತಕ್ಕೆ ಉತ್ತರ ಕೊಟ್ಟಿಲ್ಲ, ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಈ ಸದನದಲ್ಲಿಯೇ ಹೇಳುತ್ತಿದ್ದೇನೆ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸರ್ಕಾರ ಉತ್ತರ ಕೊಡುವ ವಿಚಾರದಲ್ಲಿಯೂ fail ಆಗಿದೆ.

**ಸಭಾಪತಿಯವರು:–** ನನಗೆ ಮಾತನಾಡಲು ಬಿಡಿ. ತಾವು ರೀತಿ ಮಾಡಿದರೆ ನಾನು ಪೀಠದಿಂದ ಎದ್ದು ಹೋಗುತ್ತೇನೆ. ಈ ರೀತಿ ತಾವುಗಳು ಗಲಾಟೆ ಮಾಡಿದರೆ ಹೇಗೆ? ಸ್ವಲ್ಪವಾದರೂ ಏನು ಅನಿಸುವುದಿಲ್ಲವೇ? ನಾನು ಏನು ಹೇಳುತ್ತೇನೆ, ಅದನ್ನು ಕೇಳುವುದಿಲ್ಲವೇ? ಮಾನ್ಯ ಸಭಾನಾಯಕರೇ, ನನಗೂ ಬೇಸರವಾಗುತ್ತಿದೆ, ಏನು ಮಾಡಲು ಆಗುತ್ತದೆ? ನಾನು ಈ ಪೀಠದಲ್ಲಿ ಕುಳಿತುಕೊಂಡು ಹೇಳುವುದೇನೆಂದರೆ, ಎಷ್ಟು ಪ್ರಶ್ನೆಗಳು ಉಳಿದಿವೆ, ಅವೆಲ್ಲದಕ್ಕೂ ಏತಕ್ಕೆ ಉತ್ತರ ಕೊಟ್ಟಿಲ್ಲ? ಅವರೆಲ್ಲರ ಮೇಲೆಯೂ ಕ್ರಮ ತೆಗೆದುಕೊಂಡು ಈ ಸದನಕ್ಕೆ ತಿಳಿಸಬೇಕು.

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಸಭಾಪತಿಯವರೇ, ತಾವು ಹೇಳಿದಂತೆ ತಕ್ಷಣ ಉತ್ತರ ತರಿಸಿಕೊಡುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, starred ಪ್ರಶ್ನೆ ಆಗಿಲ್ಲವೆಂಬುದು ಒಂದು ಕಡೆ ದು:ಖವಾದರೆ, starred ಆಗಿರುವ ಪ್ರಶ್ನೆಗೆ ಉತ್ತರ ಕೊಡಲಿಲ್ಲವೆಂದರೆ ಹೇಗೆ?

**(ಗೊಂದಲ)**

**ಸಭಾಪತಿಯವರು:–** ಆಯಿತು ಬಿಡಿ. ಎಷ್ಟು ಸಲ ಹೇಳುತ್ತೀರಿ?

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ತಮ್ಮ ಆದೇಶವನ್ನು ನಾನು ಪರಿ ಪಾಲಿಸುತ್ತೇನೆ. ಅವರು ಪರಿಪಾಲಿಸುತ್ತಾರೆಯೇ ಕೇಳಿ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ನಾನು ಕೇಳಿರುವಂಥ ಶೂನ್ಯ ವೇಳೆ ಪ್ರಸ್ತಾವಕ್ಕೆ ಇವತ್ತು ಉತ್ತರ ಕೊಡಲು ಹೇಳಿ. ಇವತ್ತು ಕೌನ್ಸೆಲಿಂಗ್ ಮಾಡುತ್ತಿದ್ದಾರೆ. ನಿನ್ನೆ ದಿವಸ ಸಂಬಂಧಪಟ್ಟ ಸಚಿವರ ಗಮನಕ್ಕೂ ತಂದಿದ್ದೇವೆ.

**ಸಭಾಪತಿಯವರು:-** ಮಾನ್ಯ ಎನ್.ಎಸ್.ಬೋಸರಾಜುರವರೇ, ಮಧ್ಯಾಹ್ನ ಮಾನ್ಯ ಪುಟ್ಟಣ್ಣನವರ ಶೂನ್ಯ ವೇಳೆ ಪ್ರಸ್ತಾವಕ್ಕೆ ಉತ್ತರ ಕೊಡಿಸಿ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಮಧ್ಯಾಹ್ನ ಉತ್ತರ ಕೊಡಿಸುತ್ತೇನೆ.

**೮. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಊ) ವಿಷಯ:- "ಗೃಹಲಕ್ಷ್ಮೀ ಯೋಜನೆ" ಅಡಿಯಲ್ಲಿ ಫಲಾನುಭವಿಗಳ ಖಾತೆಗೆ ಹಣ ಜಮೆಯಾಗದಿರುವ ಬಗ್ಗೆ.**

- - - - -

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, 1.29 ಲಕ್ಷ ಅರ್ಹರಿಗಿಲ್ಲ ಗೃಹಲಕ್ಷ್ಮೀ. ಕಾದು ಸುಸ್ತಾದ ನಾರಿಯರು "ಸಿಗದ ಲಕ್ಷ್ಮಿ ಭಾಗ್ಯ" ಎಂಬ ವಿಶೇಷ ಶೀರ್ಷಿಕೆಯಡಿಯು ದಿನಾಂಕ: 23.07.2024 ರ ಕನ್ನಡ ದಿನಪತ್ರಿಕೆಯಲ್ಲಿ ಪ್ರಕಟವಾಗಿದ್ದು, ಕಾಂಗ್ರೆಸ್ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಗ್ಯಾರಂಟಿಗಳ ಪೈಕಿ "ಗೃಹಲಕ್ಷ್ಮಿ ಯೋಜನೆ" ಯು ಒಂದಾಗಿದೆ. ಆದರೆ, ಸದರಿ ಯೋಜನೆಯ ಫಲಾನುಭವಿಗಳಿಗೆ ಪ್ರತಿ ತಿಂಗಳು ಹಣ ಜಮಾ ಆಗದೇ 2, 3, 4 ತಿಂಗಳಿಗೊಮ್ಮೆ ಜಮಾ ಆಗುತ್ತಿರುವುದು ದುರ್ದೈವದ ಸಂಗತಿ. ರಾಜ್ಯದ ಸುಮಾರು 1.29 ಲಕ್ಷ ಮಹಿಳೆಯರಿಗೆ ಗೃಹಲಕ್ಷ್ಮಿ ಯೋಜನೆಯ ಹಣವೇ ಜಮೆಯಾಗಿಲ್ಲ ಎಂದು ವರದಿಯಾಗಿದೆ.

ರಾಜ್ಯದಲ್ಲಿ ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆಯ ವೇಳೆಯಲ್ಲಿ ರಾಜ್ಯ ಸರ್ಕಾರ ಗೃಹಲಕ್ಷ್ಮಿ ಯೋಜನೆಯ ಹಣ ಜಮೆ ಮಾಡಿತ್ತು. ಒಂದು ಕಡೆಗೆ ಅಭಿವೃದ್ಧಿ ಕಾಮಗಾರಿಗಳು ಸ್ಥಗಿತಗೊಂಡಿವೆ. ಮತ್ತೊಂದು ಕಡೆ ಲೋಕಸಭಾ ಚುನಾವಣೆ ನಂತರ ಇದುವರೆಗೂ ಹಣ ರಾಜ್ಯದ ಗೃಹಲಕ್ಷ್ಮಿ ಫಲಾನುಭವಿಗಳಿಗೆ ಜಮೆಯಾಗದಿರುವುದು ಆತಂಕ ಮೂಡಿಸಿದೆ.

ಗೃಹಲಕ್ಷ್ಮೀ ಯೋಜನೆಯ ಹಣ ಜಮೆಯಾಗದೇ ಇರುವುದನ್ನು ಗಮನಿಸಿದಾಗ ರಾಜ್ಯ ಸರ್ಕಾರದ ಬೊಕ್ಕಸ ಬರಿದಾಗಿದೆ ಎಂದು ಮೇಲ್ನೋಟಕ್ಕೆ ಎದ್ದು ಕಾಣುತ್ತಿದೆ. ಚುನಾವಣೆ ವೇಲೆ ಜನರಿಗೆ ಆಶ್ವಾಸನೆ ನೀಡಿದ ಗ್ಯಾರಂಟಿ ಯೋಜನೆಗಳ ಹಣೆಬರಹ ಇಷ್ಟೇ ಎಂದು ತಿಳಿಯುತ್ತದೆ. ಒಟ್ಟಾರೆ ಹೇಳುವುದಾದರೆ ರಾಜ್ಯದಲ್ಲಿ ಗೃಹಲಕ್ಷ್ಮೀ ಹಣಕ್ಕಾಗಿ ಕಾತುರದಿಂದ ಕಾಯುತ್ತಿರುವ ಮಹಿಳೆಯರಿಗೆ ಆದಷ್ಟು ಬೇಗ ಹಣ ಜಮೆ ಮಾಡಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರಿಗೆ ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಶೂನ್ಯ ವೇಳೆ ಪ್ರಸ್ತಾವಕ್ಕೆ ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು.

**ಋ) ವಿಷಯ:- ತುಮಕೂರು ಜಿಲ್ಲೆಯಲ್ಲಿ ವಸತಿ ಮತ್ತು ನಿವೇಶನರಹಿತರಾದವರು ಸರ್ಕಾರಿ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದು ಅವರುಗಳಿಗೆ ಆದಷ್ಟುಶೀಘ್ರ ವಸತಿ ಸೌಲಭ್ಯ ಒದಗಿಸುವ ಕುರಿತು.**

\- - - -

**ಶ್ರೀ ಚಿದಾನಂದ್ ಎಂ ಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳು ಕಳೆದಿದೆ. ದೇಶ ಸ್ವಾತಂತ್ರ್ಯದ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿದೆ, ಬೆಂಗಳೂರಿಗೆ ಪರ್ಯಾಯವಾಗಿ ತುಮಕೂರು ಅಭಿವೃದ್ಧಿಯಾಗುತ್ತಿದೆ, ತುಮಕೂರಿಗೆ ಮೆಟ್ರೋ ಸಂಪರ್ಕ ಕಲ್ಪಿಸಲಾಗುತ್ತಿದೆ. ತುಮಕೂರು ಜಿಲ್ಲೆಯನ್ನು ಸಹ ಗ್ರೇಟರ್ ಬೆಂಗಳೂರಿಗೆ ಸೇರಿಸಬೇಕು ಎಂದು ಸರ್ಕಾರ ಪ್ರಯತ್ನಿಸುತ್ತಿದೆ. ಸರ್ಕಾರ ದೊಡ್ಡ-ದೊಡ್ಡ ಗುರಿಗಳನ್ನು ತಲುಪಲು ಹೊರಡುತ್ತಿದೆ. ಆದರೆ, ನಮ್ಮ ಜಿಲ್ಲೆಯಲ್ಲಿ ಜನತೆಗೆ ಅಗತ್ಯವಾಗಿ ಬೇಕಾದ ವಸತಿ ಸೌಲಭ್ಯವನ್ನು ಕಲ್ಪಿಸುವಲ್ಲಿ ವಿಫಲವಾಗಿದೆ. ಈ ವಿಷಯದ ಕುರಿತು 'ವಿಜಯ ಕರ್ನಾಟಕ' ದಿನ ಪತ್ರಿಕೆಯಲ್ಲಿ ವರದಿಯು ಪ್ರಕಟವಾಗಿದೆ.

ತುಮಕೂರು ಜಿಲ್ಲೆಯಲ್ಲಿ ನಿವೇಶನವಿದ್ದು ಮನೆಯಿಲ್ಲದವರು 78,388 ಕುಟುಂಬ, ನಿವೇಶನ ಮತ್ತು ಮನೆ ಎರಡೂ ಇಲ್ಲದವರು 29,744 ಕುಟುಂಬಗಳಿವೆ. ತಾಲ್ಲೂಕುವಾರು ನೋಡುವುದಾದರೆ, ನಮ್ಮ ಶಿರಾ ತಾಲ್ಲೂಕಿನಲ್ಲಿ ಅತಿ ಹೆಚ್ಚು 19,590 ಮನೆ ಮತ್ತು ನಿವೇಶನ ರಹಿತರು ಇದ್ದಾರೆ. ಜಿಲ್ಲಾ ಕೇಂದ್ರ ತುಮಕೂರು ತಾಲ್ಲೂಕಿನಲ್ಲಿ 15,143 ಕುಣಿಗಲ್ ನಲ್ಲಿ 12,217 ಮಧುಗಿರಿಯಲ್ಲಿ 10,778 ಪಾವಗಡದಲ್ಲಿ 11,137 ಚಿಕ್ಕನಾಯಕನಹಳ್ಳಿ 10,863, ಗುಬ್ಬಿ 9,997, ಕೊರಟಗೆರೆ 6,747, ತಿಪಟೂರು 5,351 ಕುಟುಂಬಗಳು ಹೀಗೆ ಒಟ್ಟು 1,08,132 (ಒಂದು ಲಕ್ಷದ ಎಂಟು ಸಾವಿರದ ನೂರ ಮೂವತ್ತೆರಡು) ಕುಟುಂಬಗಳು ಮನೆ ಮತ್ತು ನಿವೇಶನ ರಹಿತರು ಇದ್ದಾರೆ. ಪ್ರತಿ ಕುಟುಂಬಕ್ಕೆ ಮನೆ ಸಿಗಬೇಕೆಂಬ ಸಂಕಲ್ಪ ಕೇಂದ್ರ ಮತ್ತು ರಾಜ್ಯ ಸರ್ಕಾರದ್ದು. ಈ ಸಂಕಲ್ಪ ಸಾಕಾರಗೊಳ್ಳುವುದು ವಿಳಂಬವಾಗುತ್ತಿದೆ ಎನ್ನುವುದು ಪತ್ರಿಕೆಯ ಅಂಕಿ ಅಂಶಗಳಿಂದ ಸ್ಪಷ್ಟವಾಗುತ್ತಿದೆ. ಎಷ್ಟೋ ಕುಟುಂಬಗಳಿಗೆ ಮನೆ ಇಲ್ಲದೇ ವಿಳಾಸವೂ ಇಲ್ಲದೆ ಸರ್ಕಾರಿ ಸೌಲಭ್ಯಗಳಿಂದ ಕೂಡ ವಂಚಿತರಾಗುತ್ತಿದ್ದಾರೆ. ನಮ್ಮ ಜಿಲ್ಲೆಯ ಎಲ್ಲಾ ವಸತಿ ರಹಿತರಿಗೆ ಶೀಘ್ರವಾಗಿ ವಸತಿ ಸೌಕರ್ಯ ಕಲ್ಪಿಸಬೇಕೆಂದು ತಮ್ಮ ಮೂಲಕ ಮಾನ್ಯ ವಸತಿ ಸಚಿವರಿಗೆ ಒತ್ತಾಯಿಸುತ್ತೇನೆ.

(ಮುಂದು)

(674) 24.07.2024/1.10/ಎಸ್‌ಕೆ-ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ.ಝಡ್. ಜಮೀರ್ ಅಹ್ಮದ್ ಖಾನ್ (ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ತುಮಕೂರು ಜಿಲ್ಲೆಯಲ್ಲಿ ಒಟ್ಟಾಗಿ ಎಲ್ಲವನ್ನು ಸರ್ವೆ ಮಾಡಿದ್ದೇವೆ. ಸರ್ವೆ ಪ್ರಕಾರ 1,50,880 ಜನರಿದ್ದು, ಅವರಲ್ಲಿ Houseless 78,202 ಜನರಿದ್ದರೆ Siteless 29,320 ಜನರಿದ್ದಾರೆ. ನಗರದಲ್ಲಿ 4,693 ವಸತಿರಹಿತರು ಮತ್ತು 38,460 siteless ಇರುತ್ತಾರೆ ಎಂಬ ಬಗ್ಗೆ ಮಾಹಿತಿ ಇರುತ್ತದೆ.

ತಮಗೆಲ್ಲರಿಗೂ ಗೊತ್ತಿರುವ ಹಾಗೆ target ಪ್ರಕಾರ ಪ್ರತಿ ವರ್ಷ ಬಜೆಟ್‌ನಲ್ಲಿ ಎಷ್ಟು ಮನೆಗಳು ಬರುತ್ತದೆಯೋ, ಆ ಪ್ರಕಾರವಾಗಿ ಕೊಟ್ಟುಕೊಂಡು ಬರುತ್ತಿದ್ದೇವೆ. 2013 ರಿಂದ 2018 ರವರೆಗೂ ಅಂದರೆ ಹಿಂದಿನ ಸರ್ಕಾರದಲ್ಲಿ ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಾಗ, 14,54,000 ಮನೆಗಳನ್ನು ಕೊಟ್ಟಿದ್ದರು. ಅನಂತರ ಸಮ್ಮಿಶ್ರ ಸರ್ಕಾರ ಬಂತು. ನಂತರ ಬಿ.ಜೆ.ಪಿ. ಸರ್ಕಾರ ಬಂದ ಮೇಲೆ 5,40,000 ಮನೆಗಳ target ಕಡಿಮೆ ಮಾಡಿದರು. ಹಿಂದಿನ ಸರ್ಕಾರ 14,50,000 target ಇತ್ತು. ಈ ಸರ್ಕಾರದ ಹಿಂದಿನ ಸರ್ಕಾರದಲ್ಲಿ ಟಾರ್ಗೆಟ್ 5,40,000 ಕಡಿಮೆ ಮಾಡಿದ್ದಾರೆ. ಆ ಹಿನ್ನೆಲೆಯಲ್ಲಿ ಈಗಾಗಲೇ ನಾನು proposal ತಂದು ಸರ್ವೆ ಮಾಡಿಸಿದ್ದೇನೆ. ಸರ್ವೆ ಪ್ರಕಾರ siteless ಎಲ್ಲಿದ್ದಾರೆ ಮತ್ತು homeless ಎಲ್ಲಿದ್ದಾರೆ ಹಾಗೂ ಮನೆಗಳನ್ನು ಎಲ್ಲಿ ಕಟ್ಟಬೇಕು ಎಂಬ ಬಗ್ಗೆ ಸರ್ವೆ ಮಾಡಿದ್ದೇವೆ. ಆ ಸರ್ವೆ ಪ್ರಕಾರ; ಈ ಸಾಲಿನ ಬಜೆಟ್‌ನಲ್ಲಿನ ಸಂಬಂಧಪಟ್ಟ ಪ್ಯಾರಾವನ್ನು ನೋಡಿ, ಅದರಲ್ಲಿ ಬರೆದಿದ್ದಾರೆ. 12,00,000 ongoing ಕೆಲಸ ನಡೆಯುತ್ತಿದೆ. 3,00,000 ಪೂರ್ತಿ ಮಾಡಿ ಎಂದು ಕೊಟ್ಟಿದ್ದಾರೆ. 12,00,000 ongoing ಇದೆ. ಮುಂಬರುವ ವರ್ಷದಲ್ಲಿ ನಾವು ಹೆಚ್ಚು ಮನೆಗಳನ್ನು ಕೊಟ್ಟು, ಸರ್ವೆ ಮಾಡಿಸಿ ಎಲ್ಲೆಲ್ಲಿ ಲಗತ್ತಿದೆ ಎಂಬ ಬಗ್ಗೆ ನನ್ನ ಬಳಿ data ಇದೆ. ಆ data ಪ್ರಕಾರ ಎಲ್ಲಾ ಕಡೆಗಳಲ್ಲಿ ಮನೆಗಳನ್ನು ಕೊಡುತ್ತೇವೆಂದು ಹೇಳಬಯಸುತ್ತೇನೆ.

**ಶ್ರೀ ಚಿದಾನಂದ ಎಂ. ಗೌಡ (ಪದವೀಧರರ ಕ್ಷೇತ್ರ):–** ತುಮಕೂರು ಜಿಲ್ಲೆಗೆ ಎಷ್ಟು ಕೊಟ್ಟಿರಿ?

**ಶ್ರೀ ಬಿ.ಝೆಡ್. ಜಮೀರ್ ಅಹ್ಮದ್ ಖಾನ್:–** ಅದು ನೋಡಬೇಕಲ್ಲ. ಟಾರ್ಗೆಟ್ ಮೇಲೆ depend ಆಗುತ್ತದೆ. ನಿಮಗಿಂತ ಹೆಚ್ಚಾಗಿ ತುಮಕೂರು concern ಇದೆ. ನಾನು ಕೂಡ ಆ ಜಿಲ್ಲೆಯವನು. ನನಗೆ concern ಇದೆ. ಟಾರ್ಗೆಟ್ ಪ್ರಕಾರ ಮಾಡುತ್ತೇನೆ.

**ಎ) ವಿಷಯ:– ವರುಣಾರ್ಭಟಕ್ಕೆ ಕೊಡಗು ಜಿಲ್ಲೆಯಲ್ಲಿ ಅತಿವೃಷ್ಟಿ ಉಂಟಾಗಿದ್ದು, ಬೆಳೆ ನಾಶ, ಕೊಳೆರೋಗ ಕುರಿತು ಸಮೀಕ್ಷೆ ನಡೆಸಿ ಬೆಳೆಗಾರರಿಗೆ ಪರಿಹಾರ ನೀಡುವ ಕುರಿತು**

**ಶ್ರೀ ಕುಶಾಲಪ್ಪ ಎಂ.ಪಿ (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಕೊಡಗು ಜಿಲ್ಲೆಯ ಸ್ಥಳೀಯ ದಿನಪತ್ರಿಕೆಯಲ್ಲಿ "ವರುಣಾರ್ಭಟಕ್ಕೆ ನಲುಗಿದ ಜಿಲ್ಲೆ–ರೂ. 35 ಕೋಟಿಗೂ ಅಧಿಕ ನಷ್ಟ" ಎಂಬ ಶೀರ್ಷಿಕೆಯಡಿಯಲ್ಲಿ" ವರದಿ ಪ್ರಕಟವಾಗಿತ್ತು. ಜಿಲ್ಲೆಯಲ್ಲಿ ಮಳೆಗಾಲ ಬಂತೆಂದರೆ, ಆತಂಕ ಮನೆ ಮಾಡುತ್ತದೆ. ಅನಾಹುತಗಳ ಕರಿ ನೆರಳಿನಲ್ಲಿ ದಿನದೂಡುವ ಸ್ಥಿತಿ ಎದುರಾಗುತ್ತದೆ. ಈ ಬಾರಿಯೂ ಮಳೆ ಜಿಲ್ಲೆಯಲ್ಲಿ ಬಿರುಸು ಪಡೆದುಕೊಂಡಿದ್ದು, ವರುಣಾರ್ಭಟ ಜೋರಾಗಿದೆ. ನದಿ, ಹೊಳೆ, ಹಳ್ಳ–ಕೊಳ್ಳ, ಜಲಪಾತ, ಜಲಾಶಯಗಳು ಮೈದುಂಬಿ ಹರಿಯುತ್ತಿದ್ದು, ಪ್ರವಾಹದ ಭಯವೂ ಸೃಷ್ಟಿಯಾಗುತ್ತಿದೆ. ಮಳೆಯೊಂದಿಗೆ ಗಾಳಿಯ ರಭಸವೂ

ಹೆಚ್ಚಾಗುತ್ತಿದ್ದು, ಮರಗಳು, ವಿದ್ಯುತ್ ಕಂಬಗಳು ಧರಾಶಾಹಿಯಾಗುವ ಘಟನೆಗಳು ವರದಿಯಾಗುತ್ತಿವೆ. ಅನೇಕ ಕಡೆಗಳಲ್ಲಿ ಬೆಳೆ ನಾಶ, ಕೊಳೆ ರೋಗ, ಕಾಫಿ ಹಣ್ಣುಗಳ ಉದುರುವಿಕೆ ಉಂಟಾಗಿರುತ್ತದೆ. ನದಿ ಅಂಚಿನ ಗ್ರಾಮಗಳಲ್ಲಿ ಪ್ರವಾಹದ ಭಯ ಆವರಿಸಿದ್ದರೆ, ಬರೆ ಪ್ರದೇಶದಲ್ಲಿರುವ ನಿವಾಸಿಗಳಿಗೆ ಗುಡ್ಡ ಕುಸಿತದ ಆತಂಕ ಉಂಟಾಗಿದೆ. ಭಾರಿ ಮಳೆಯಿಂದ ಜಿಲ್ಲೆಯ ಜನಜೀವನ ಅಸ್ತವ್ಯಸ್ತಗೊಂಡಿದ್ದು, ಪ್ರತಿಕೂಲ ಹವಾಮಾನದಿಂದ ವ್ಯತಿರಿಕ್ತ ಪರಿಸ್ಥಿತಿಯಲ್ಲಿ ಜೀವನ ದೂಡಬೇಕಾಗಿದೆ. ಜೂನ್ 1 ರಿಂದ ಜುಲೈ 18ರ ತನಕ ಜಿಲ್ಲೆಯಲ್ಲಿ ರೂ.35 ಕೋಟಿಗೂ ಅಧಿಕ ಆಸ್ತಿ-ಪಾಸ್ತಿ ನಷ್ಟವಾಗಿರುವ ಬಗ್ಗೆ ಜಿಲ್ಲಾಡಳಿತ ತಿಳಿಸಿದೆ. ಒಂದು ಕಡೆ ಭೂ ಕುಸಿತ, 5 ಕಡೆ ಅಲ್ಪಪ್ರಮಾಣದ ಬರೆ ಜರಿತ ಘಟನೆಗಳು ವರದಿಯಾಗಿರುತ್ತದೆ. ಮೈಸೂರು-ಮಾಣಿ ರಾಷ್ಟ್ರೀಯ ಹೆದ್ದಾರಿ 275 ನಡುವಿನ ಕರ್ತೋಜಿ ಬಳಿ ಬರೆ ಜರಿದು ರಸ್ತೆ ಹಾನಿಗೀಡಾಗಿದೆ. ಹಲವು ಗ್ರಾಮೀಣ ಭಾಗದ ರಸ್ತೆಗಳು ಮಳೆಯಿಂದ ಹಾಳಾಗಿದ್ದು, ಸಂಚಾರ ದುಸ್ತರ ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ. ಲೋಕೋಪಯೋಗಿ ಇಲಾಖೆ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಮತ್ತು ಚೆಸ್ಕಾಂ ಇಲಾಖೆಗೆ ಕೋಟ್ಯಂತರ ರೂಪಾಯಿಗಳ ನಷ್ಟವಾಗಿರುತ್ತದೆ. ಕಳೆದ ವರ್ಷಕ್ಕೆ ಹೋಲಿಸಿದರೆ, ಜಿಲ್ಲೆಗೆ ಈ ಬಾರಿ 28.49 ಇಂಚು ಮಳೆಯಾಗಿದೆ. ಪ್ರಸಕ್ತ ವರ್ಷ ಜನವರಿಯಿಂದ ಈ ತನಕ 53.97 ಇಂಚು ಸರಾಸರಿ ಮಳೆಯಾಗಿದೆ. ಕಳೆದ ವರ್ಷ ಈ ಪ್ರಮಾಣ 25.48 ಇಂಚುಗಳಾಗಿತ್ತು.

ಪ್ರತಿ ಬಾರಿಯೂ ಕೊಡಗು ಜಿಲ್ಲೆಯಲ್ಲಿ ಅತಿವೃಷ್ಟಿ ಉಂಟಾಗುತ್ತಿದ್ದು, ಆಗಿರುವ ನಷ್ಟಗಳನ್ನು ಭರಿಸಲು ಕೂಡಲೇ ಇಲಾಖೆಯು ಕ್ರಮ ಕೈಗೊಳ್ಳದೆ ವಿಳಂಬ ಮಾಡುತ್ತಿರುತ್ತದೆ. ಈ ಬಾರಿ ಮಳೆಯು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಆಗುವ ನಿರೀಕ್ಷೆಗಳಿದ್ದು, ಈಗಾಗಲೇ ಆಗಿರುವ ನಷ್ಟವನ್ನು ಭರಿಸಲು, ಬೆಳೆ ನಾಶ ಮತ್ತು ಕೊಳೆರೋಗದ ಕುರಿತು ಸಮೀಕ್ಷೆ ನಡೆಸಿ ಬೆಳೆಗಾರರಿಗೆ ಮತ್ತು ಪರಿಹಾರ ನೀಡುವ ನಿಟ್ಟಿನಲ್ಲಿ ಸರ್ಕಾರ ಅನುದಾನವನ್ನು ಬಿಡುಗಡೆ ಮಾಡಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಕೊಡಗಿನಲ್ಲಿ ವಾಡಿಕೆಗಿಂತ ಶೇ. 5 ರಷ್ಟು ಹೆಚ್ಚು ಮಳೆಯಾಗಿದೆ. ವಾಡಿಕೆಯ ಪ್ರಕಾರ 1,181 ಮಿಲಿ ಮೀಟರ್ ಮಳೆ ಆಗಬೇಕಾಗಿತ್ತು. ವಾಸ್ತವವಾಗಿ ನಿನ್ನೆಯವರೆಗೆ 1,238 ಮಿಲಿ ಮೀಟರ್ ಮಳೆ ಆಗಿದೆ. ಅಂದರೆ, ವಾಡಿಕೆಗಿಂತ ಶೇ. 5 ರಷ್ಟು ಹೆಚ್ಚು ಮಳೆಯಾಗಿದೆ. ಈಗಾಗಲೇ, ನಾನು ಜಿಲ್ಲಾಧಿಕಾರಿಗಳಿಗೆ ಸ್ಪಷ್ಟವಾಗಿ ಹೇಳಿದ್ದೇನೆ. ಏನೇನು ನಷ್ಟವಾಗಿದೆ ಅದು ಬೆಳೆ ಪರಿಹಾರ ಆಗಬಹುದು ಮತ್ತು ರಸ್ತೆಗಳು ಸಹ ಹಾಳಾಗಿರುವುದರಿಂದ ಈ ವಾರದಿಂದಲೇ ರಸ್ತೆಗಳ ದುರಸ್ತಿ ಕೆಲಸವಾಗಬೇಕು. ಆ ಕೆಲಸ ಬಿಟ್ಟು ಬೇರೆ ಕೆಲಸ ಮಾಡುವ ಹಾಗಿಲ್ಲ ಎಂದು ಹೇಳಿದ್ದೇನೆ. ವಿದ್ಯುತ್ ಸಂಪರ್ಕ ಕಡಿತ ಆಗಿರುವಂತಹದ್ದರ ಕಡೆಗೆ ವಿಶೇಷ ಗಮನಕೊಡಬೇಕೆಂದು ನಾನು ಕೂಡ ಹೇಳಿದ್ದೇನೆ ಮತ್ತು ಮಾನ್ಯ ಮುಖ್ಯಮಂತ್ರಿಗಳ ಕಡೆಯಿಂದಲೂ ಹೇಳಿಸಿದ್ದೇನೆ. ಜನರಿಗೆ ನಷ್ಟವಾಗಿರುವುದಕ್ಕೆ ಪರಿಹಾರ ಕೊಡುವಂತಹದ್ದು ಅಥವಾ ರಸ್ತೆಗಳು, ವಿದ್ಯುತ್ ಸಂಪರ್ಕ ಕಡಿತ ಈ ಮೂರು ಕಡೆಗೂ ಸರ್ಕಾರ ಗಮನ ಕೊಡುತ್ತಿದೆ. ನಾನು ಈ ವಿಷಯದ ಕುರಿತಾಗಿ ಕಳೆದ ವಾರ

ಜಿಲ್ಲಾಧಿಕಾರಿಗಳ ಹತ್ತಿರ ಮಾತನಾಡಿ, ಏನು ಕ್ರಮ ತೆಗೆದುಕೊಂಡಿದ್ದಾರೆ ಎನ್ನುವುದರ ಕಡೆ ನಾನು follow up ಮಾಡುತ್ತೇನೆ.

**ಏ) ವಿಷಯ:- ತಳವಾರ ಜಾತಿಯವರಿಗೆ ಪರಿಶಿಷ್ಟ ಪಂಗಡದ ಜಾತಿ ಪ್ರಮಾಣ ಪತ್ರ ಮತ್ತು ಸಿಂಧುತ್ವ ಪ್ರಮಾಣ ಪತ್ರ ಪಡೆಯಲು ಆಗುತ್ತಿರುವ ತೊಂದರೆಯ ಕುರಿತು.**

– – – – –

**ಡಾ॥ ತಳವಾರ್ ಸಾಬಣ್ಣ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಸನ್ಮಾನ್ಯ ಸಭಾಪತಿಗಳೇ, ಭಾರತ ಸರ್ಕಾರ "ತಳವಾರ/ಪರಿವಾರ" ಪರ್ಯಾಯ ಪದಗಳನ್ನು ಎಸ್‌ಟಿ ಪಟ್ಟಿಯಲ್ಲಿ ಸೇರಿಸಿ 20 ಮಾರ್ಚ್ 2020 ರಲ್ಲಿ ಗೆಜೆಟ್ ಅಧಿಸೂಚನೆ ತಂದಿದೆ. ಆದರೆ, ಕೇಂದ್ರ ಸರ್ಕಾರದ ಗೆಜೆಟ್ ಆಧಾರದ ಮೇಲೆ ಅಟಲ್ ಜೀ ಜನಸ್ನೇಹಿ ಕೇಂದ್ರಗಳಲ್ಲಿನ ತಂತ್ರಾಂಶದಲ್ಲಿ ಪರಿಶಿಷ್ಟ ಪಂಗಡ ಪಟ್ಟಿ ಕ್ರಮ ಸಂಖ್ಯೆ 38 ರಲ್ಲಿ ಸೇರಿಸಬೇಕಾದ ಒಂದೇ ತಳವಾರ ಜಾತಿಯನ್ನು 3 ತಳವಾರ 3 ಪರಿವಾರ ಅಂದರೆ, ಕ್ರಮ ಸಂಖ್ಯೆ 451 ರಲ್ಲಿ ನಾಯ್ಕಡ ತಳವಾರ ಮತ್ತು ಪರಿವಾರ ಕ್ರಮ ಸಂಖ್ಯೆ 456 ರಲ್ಲಿ ನಾಯಕ ಪರಿವಾರ ಮತ್ತು ತಳವಾರ, ಕ್ರಮಸಂಖ್ಯೆ 458 ರಲ್ಲಿ ನಾಯಕ ತಳವಾರ ಎಂದು ಸೇರಿಸಲಾಗಿದೆ. ಈ ರೀತಿಯಾಗಿ ಸಂವಿಧಾನ ವಿರುದ್ಧವಾಗಿ ಮೂರು-ಮೂರು ತಳವಾರ/ಪರಿವಾರ ಸೇರಿಸಲಾಗಿದೆ. 2002ರ ಮಾರ್ಚ್ 30 ರಂದು ಹಿಂದುಳಿದ ವರ್ಗಗಳ ಮೀಸಲಾತಿ ಪಟ್ಟಿಯಲ್ಲಿನ ಕ್ರಮ ಸಂಖ್ಯೆ 334 ರಲ್ಲಿರುವ ತಳವಾರ-ಬೋಯಾ ಎಂಬ ಜಾತಿ ಯಾವುದೇ ಗೆಜೆಟ್, ಆದೇಶದಲ್ಲಿ ಇಲ್ಲದೇ ಇದ್ದರೂ ಅದನ್ನು ಮುಂದುವರೆಸಿಕೊಂಡು ಬರುವ ಮೂಲಕ ತಳವಾರ ಸಮಾಜಕ್ಕೆ ಅನ್ಯಾಯ ಮಾಡಲಾಗುತ್ತಿದೆ. ಈ ಹಿಂದೆ ತಳವಾರ ಜಾತಿ ಪ್ರಮಾಣ ಪತ್ರ ಪಡೆದು ರಾಜ್ಯ ಸರ್ಕಾರದ ಅಧೀನದಲ್ಲಿ ಸೇವೆ ಸಲ್ಲಿಸುತ್ತಿರುವ ಸರ್ಕಾರಿ ನೌಕರರನ್ನು ಹಿಂದಿನ ಸಿಂಧುತ್ವದ ಆಧಾರದ ಮೇಲೆ ಇತ್ತೀಚಿನ ತಳವಾರ ಎಸ್.ಟಿ. ಜಾತಿ ಪ್ರಮಾಣ ಪತ್ರ ತರಿಸಿಕೊಂಡು ಆಯಾ ಇಲಾಖೆಯ ಮುಖ್ಯಸ್ಥರು, ನೌಕರರ ಸೇವಾ ಪುಸ್ತಕದಲ್ಲಿ ಎಸ್.ಟಿ. ಎಂದು ನಮೂದಿಸಬೇಕು ಎಂಬುದು ನನ್ನ ಆಗ್ರಹವಾಗಿದೆ. ಭಾರತ ಸರ್ಕಾರ ನಾಯಕ, ನಾಯ್ಕಡ ಪರ್ಯಾಯ ಪದಗಳಾದ ಪರಿವಾರ ಮತ್ತು ತಳವಾರ ಜಾತಿಗಳನ್ನು ಪರಿಶಿಷ್ಟ ಪಂಗಡ ಪಟ್ಟಿಯಲ್ಲಿ ಸೇರಿಸಿ ಆದೇಶ ಹೊರಡಿಸಿದ್ದರು ಕೂಡ, ಕರ್ನಾಟಕ ಸರ್ಕಾರ ಗೊಂದಲದ ಆದೇಶಗಳನ್ನು ಹೊರಡಿಸುವ ಮೂಲಕ ಜನಸಾಮಾನ್ಯರು ಮತ್ತು ಅಧಿಕಾರಿಗಳ ನಡುವೆ ಕಲಹ ಉಂಟಾಗುತ್ತಿರುವುದಕ್ಕೆ ತಕ್ಷಣ ಪರಿಹಾರ ಒದಗಿಸಬೇಕಾಗಿದೆ. ಹೀಗಾಗಿ ಕಲಬುರಗಿ, ಯಾದಗಿರಿ ಮುಂತಾದ ಜಿಲ್ಲೆಗಳಲ್ಲಿ ತಹಶೀಲ್ದಾರರು ತಳವಾರ ಜಾತಿವರಿಗೆ ಎಸ್.ಟಿ. ಪ್ರಮಾಣಪತ್ರ ಕೊಡಲು ನಿರಾಕರಿಸುತ್ತಿದ್ದಾರೆ. ಆದ್ದರಿಂದ, ಇತ್ತೀಚೆಗೆ ತಳವಾರ ಪರಿಶಿಷ್ಟ ಪಂಗಡದ ಪ್ರಮಾಣ ಪತ್ರ ತೆಗೆದುಕೊಂಡು ಸರ್ಕಾರಿ ನೌಕರಿ ಪಡೆದುಕೊಂಡಿರುವವರಿಗೆ ತಕ್ಷಣವೇ ಅವರಿಗೆ ಸಿಂಧುತ್ವ ಪ್ರಮಾಣಪತ್ರ ಒದಗಿಸಬೇಕು. ಹಾಗೂ ವಿಜಯಪುರ, ಬಾಗಲಕೋಟೆ, ಕಲಬುರಗಿ, ಯಾದಗಿರಿ ಮುಂತಾದ ಜಿಲ್ಲೆಗಳಲ್ಲಿ ತಳವಾರ

ಪರಿಶಿಷ್ಟ ಪಂಗಡದ ಪ್ರಮಾಣಪತ್ರ ತೆಗೆದುಕೊಂಡು ಸರ್ಕಾರಿ ನೌಕರರಿಗೆ ಅಧಿಕಾರಿಗಳು ಕಿರುಕುಳ ಕೊಡುವುದನ್ನು ನಿಲ್ಲಿಸಲು ಆದೇಶ ನೀಡಿ ಮತ್ತು ಎಸ್.ಟಿ. ಪ್ರಮಾಣ ಪತ್ರ ಕೊಡಲು ನಿರಾಕರಿಸುತ್ತಿರುವ ಅಧಿಕಾರಿಗಳ ಮೇಲೆ ಕ್ರಮ ಕೈಗೊಂಡು ಈ ಸಮುದಾಯದ ಜನರಿಗೆ ಸಂವಿಧಾನದತ್ತವಾಗಿ ಸಾಮಾಜಿಕ ನ್ಯಾಯ ಒದಗಿಸಬೇಕೆಂದು ಈ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಐ) ವಿಷಯ:- ಹಿಂಬಡ್ತಿಗೊಳಗಾದ ಶಿಕ್ಷಕರನ್ನು ಆಯಾ ಪದವಿಯನ್ನು ಪರಿಗಣಿಸಿ GPT ಶಿಕ್ಷಕರೆಂದು ಸೇವಾ ಜೇಷ್ಠತೆಯೊಂದಿಗೆ ಪದನಾಮೀಕರಣಗೊಳಿಸಿ ಅನುಕೂಲ ಕಲ್ಪಿಸುವ ಕುರಿತು.**

------

**ಶ್ರೀ ರಾಮೋಜಿ ಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಪ್ರಾಥಮಿಕ ಶಿಕ್ಷಣದಲ್ಲಿ ಮಕ್ಕಳ ಹಕ್ಕು ಕಾಯ್ದೆ 2009 ಹಾಗೂ NCTE ಅಧಿಸೂಚನೆ ಅನ್ವಯ 2017 ರಲ್ಲಿ ಹೊಸ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸಿದ್ದು, ಅದರ ಪ್ರಕಾರ ಮೊದಲಿದ್ದ 1-8ರ ವೃಂದವನ್ನು 1-5 ಮತ್ತು 6-8 ಎಂಬ 2 ವೃಂದಗಳನ್ನಾಗಿ ವಿಭಾಗಿಸಿ ವಿವಿಧ ವಿದ್ಯಾರ್ಥಿಗಳನ್ನು ನಿಗದಿಪಡಿಸಲಾಗಿದೆ. ಹೊಸ ವೃಂದ ಮತ್ತು ನೇಮಕಾತಿ ನಿಯಮಗಳನ್ನು (ಸಿ ಅಂಡ್ ಆರ್) ಈ ಹಿಂದೆ 1 ರಿಂದ 7ಕ್ಕೆ ನೇಮಕಾತಿಯಾದ ಶಿಕ್ಷಕರಿಗೆ ಪೂರ್ವಾನ್ವಯವಾಗುವಂತೆ ಜಾರಿಗೊಳಿಸಿದ್ದರಿಂದ ರಾಜ್ಯದ ಲಕ್ಷಾಂತರ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಬಹುದೊಡ್ಡ ಅನ್ಯಾಯವಾಗುವುದರ ಜೊತೆಗೆ ಹಲವು ಸಮಸ್ಯೆಗಳು ಉದ್ಭವವಾಗಿದೆ. ಮುಖ್ಯವಾಗಿ 2016ಕ್ಕಿಂತ ಮುಂಚೆ 1 ರಿಂದ 7 ಮತ್ತು 8ನೇ ತರಗತಿಗೆ ಸಹ ಶಿಕ್ಷಕರೆಂದು ನೇಮಕಾತಿ ಹೊಂದಿದ ಶಿಕ್ಷಕರಿಗೆ ಪಿಎಸ್‌ಟಿ ಎಂದು ಪದನಾಮೀಕರಣ ಮಾಡಿ 1-5 ಕ್ಕೆ ಹಿಂಬಡ್ತಿ ನೀಡಲಾಗಿದೆ. ಅಲ್ಲದೇ ಸದರಿ ವೃಂದ ಮತ್ತು ನೇಮಕಾತಿ ನಿಯಮಗಳ ಜಾರಿಯಿಂದಾಗಿ ಶಿಕ್ಷಕರಿಗೆ ಸೇವಾ ಜೇಷ್ಠತೆ, ಕಾಲಮಿತಿ ಬಡ್ತಿ, ಸ್ವಯಂ ಚಾಲಿತ ಬಡ್ತಿ, ಮುಖ್ಯ ಶಿಕ್ಷಕರ ಬಡ್ತಿ, ಪ್ರೌಢಶಾಲಾ ಶಿಕ್ಷಕರ ಬಡ್ತಿ ಹಾಗೂ ವರ್ಗಾವಣೆಗಳಲ್ಲಿ ಅನ್ಯಾಯವಾಗುವುದರ ಜೊತೆಗೆ ನಿಯಮಗಳ ಉಲ್ಲಂಘನೆಯಾದಂತೆ ಆಗುತ್ತದೆ. ಆದ್ದರಿಂದ ಸರ್ಕಾರ ಕೊಡಲೇ ಪ್ರಾಥಮಿಕ ಶಾಲಾ ಶಿಕ್ಷಕರಿಗಾದ ಅನ್ಯಾಯವನ್ನು ಗಂಭೀರವಾಗಿ ಪರಿಗಣಿಸಿ, ತುರ್ತಾಗಿ ಆದೇಶ ಹೊರಡಿಸಿ ಉಲ್ಲಂಘನೆಯಾಗಿರುವ ನಿಯಮಗಳನ್ನು ಸರಿಪಡಿಸಲು ಕ್ರಮಕೈಗೊಂಡು, ಸದರಿ ವೃಂದದ ನೇಮಕಾತಿ ನಿಯಮಗಳನ್ನು ಮತ್ತೊಮ್ಮೆ ಪರಿಶೀಲಿಸಿ, ನಿರಂತರ ಸೇವಾನುಭವ ಹೊಂದಿರುವವರಿಗೆ

ಅನ್ಯಾಯವಾಗದಂತೆ ಹಿಂದಿನ ಸೇವೆಯನ್ನು ಪರಿಗಣಿಸಿ ನಿಯಮ ರೂಪಿಸಿ ಅನುಷ್ಠಾನಗೊಳಿಸಲು ಕ್ರಮಕೈಗೊಂಡು ಹಿಂಬಡ್ತಿಗೊಳಗಾಗ ಶಿಕ್ಷಕರನ್ನು ಆಯಾ ಪದವಿಯನ್ನು ಪರಿಗಣಿಸಿ GPT ಶಿಕ್ಷರೆಂದು ಸೇವಾ ಜೇಷ್ಠತೆಯೊಂದಿಗೆ ಪದನಾಮೀಕರಣ ಮಾಡುವುದರಿಂದ ನಿಯಮ ಪಾಲನೆ ಮಾಡಿ, ಶಿಕ್ಷಕರಿಗೆ ಅನುಕೂಲ ಮಾಡಿಕೊಡುವ ವಿಚಾರಕ್ಕೆ ಸಂಬಂಧಪಟ್ಟಂತೆ ನಾನು ತಮ್ಮ ಮೂಲಕ ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಿಗೆ ಕೇಳಬಯಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

(ಮುಂದು)

(675) 24.07.2024 1.20 ಟಿಸಿಹೆಚ್-(ಎಂಡಿ )ವಿಕೆ (ಸಭಾಪತಿಯವರ ಉಪಸ್ಥಿತಿ)

**ಒ) ವಿಷಯ:- ಹಿಂದಿನ ಸರ್ಕಾರದ ಅವಧಿಯಲ್ಲಿ ಸಂಬಂಧವೇ ಇಲ್ಲದವರಿಗೆ ಬೆಳೆ ನಷ್ಟ ಪರಿಹಾರ ಪಾವತಿಸಿರುವ ಪ್ರಕರಣದ ಬಗ್ಗೆ ಸಮಗ್ರ ತನಿಖೆ ನಡೆಸಿ, ಕಾನೂನು ರೀತ್ಯಾ ಕ್ರಮ ಜರುಗಿಸುವ ಕುರಿತು.**

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಸಂಬಂಧವೇ ಇಲ್ಲದವರಿಗೆ ಬೆಳೆ ನಷ್ಟ ಪರಿಹಾರ ಪಾವತಿಸಿರುವ ಪ್ರಕರಣ ಕುರಿತು ಸಾರ್ವಜನಿಕ ಮಹತ್ವದ ಜರೂರು ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

ಹಿಂದಿನ ಸರ್ಕಾರದ ಅವಧಿಯಲ್ಲಿ ಮುಂಗಾರು ಹಂಗಾಮಿನಲ್ಲಿ ಅತಿವೃಷ್ಟಿಯಿಂದ ಬೆಳೆ ನಷ್ಟ ಆದಂತಹ ರೈತರಿಗೆ ಪರಿಹಾರ ಪಾವತಿಯಲ್ಲಿಯೂ ಬಹು ಕೋಟಿ ರೂಪಾಯಿಗಳ ಅಕ್ರಮ ನಡೆದಿರುತ್ತದೆ. ಸಂತ್ರಸ್ತ ರೈತರಿಗೆ ತಲುಪಬೇಕಿದ್ದ ಬೆಳೆ ನಷ್ಟದ ಪರಿಹಾರ ಮೊತ್ತವು ಸಂಬಂಧವೇ ಇಲ್ಲದವರಿಗೆ ಪಾವತಿಯಾಗಿರುವ ಬಗ್ಗೆ ದಿನಾಂಕ 22.07.2024ರ 'ವಾರ್ತಾಭಾರತಿ' ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

2022-23ನೇ ಸಾಲಿನಲ್ಲಿ ಮುಂಗಾರು ಹಂಗಾಮಿನಲ್ಲಿ ಅತಿವೃಷ್ಟಿಯಿಂದಾಗಿ ಬೆಳೆ ನಷ್ಟ ಹೊಂದಿರುವ ರೈತರಲ್ಲಿ 651 ಪ್ರಕರಣಗಳಲ್ಲಿ, ರೂ. 2.01 ಕೋಟಿಗಳನ್ನು ಪಾವತಿಸದೇ ಸುಳ್ಳು ದಾಖಲೆಗಳನ್ನು ಸೃಷ್ಟಿಸಲಾಗಿದೆ. ಕಡೂರು ತಾಲ್ಲೂಕಿನ ಅಜ್ಜಂಪುರ ಠಾಣಾ ವ್ಯಾಪ್ತಿಯ ಕಲ್ಕೆರೆ ಗ್ರಾಮ ಪಂಚಾಯಿಯ ಗ್ರಾಮ ಆಡಳತಾಧಿಕಾರಿಯವರು ತಮ್ಮ ಲಾಗಿನ್ ಐ.ಡಿ.,ಯನ್ನು ದುರುಪಯೋಗಪಡಿಸಿಕೊಂಡು ಈ ಹಣವನ್ನು ಅನ್ಯ ಖಾತೆದಾರರಿಗೆ

ಪಾವತಿಸಿರುವುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿರುತ್ತದೆ. ಈ ಬೆಳೆ ಪರಿಹಾರವನ್ನು ನಕಲಿ ಬ್ಯಾಂಕ್ ಖಾತೆ, ಆಧಾರ್ ಕಾರ್ಡ್ ಆಧರಿಸಿ ಪಾವತಿಸಲಾಗಿದೆ. ಬಡ ರೈತರಿಗೆ ಪರಿಹಾರ ಹಣ ವಿತರಣೆಯಲ್ಲಿಯೂ ಅಕ್ರಮದ ವಾಸನೆ ಬಡಿದಿದ್ದು, ಒಂದೇ ಒಂದು ಗ್ರಾಮ ಪಂಚಾಯಿತಿಯಲ್ಲಿ ರೂ.6 ಕೋಟಿಗಳಿಗೂ ಹೆಚ್ಚು ಹಣ ಡ್ರಾ ಮಾಡಲಾಗಿದೆ.

ಬಡ ರೈತರಿಗೆ ಇದರಿಂದ ಅನ್ಯಾಯವಾಗಿದ್ದು, ಹಿಂದಿನ ಸರ್ಕಾರದ ಅವಧಿಯಲ್ಲಿ ಸಂಬಂಧವೇ ಇಲ್ಲದವರಿಗೆ ಬೆಳೆನಷ್ಟ ಪರಿಹಾರ ಪಾವತಿಸಿರುವ ಪ್ರಕರಣದ ಬಗ್ಗೆ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ಮೇಲೆ ಕಾನೂನು ರೀತ್ಯಾ ಕ್ರಮ ಜರುಗಿಸಬೇಕೆಂದು ಶೂನ್ಯವೇಳೆಯಲ್ಲಿ ಮಾನ್ಯ ಕಂದಾಯ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶ್ ರವರು ಹೇಳಿದಂತೆ, 2022ನೇ ಸಾಲಿನಲ್ಲಿ ಪ್ರಕೃತಿ ವಿಕೋಪ ಆಗಿ ಪ್ರವಾಹಕ್ಕೆ ಕೊಟ್ಟಂತಹ ಪರಿಹಾರ ಹಣ ವ್ಯಾಪಕವಾಗಿ ನಾನಾ ರೀತಿಯಲ್ಲಿ ದುರುಪಯೋಗ ಆಗಿದೆ. ಯಾರದೋ ಜಮೀನು ಇರುತ್ತದೆ, ಯಾರಿಗೋ ಪರಿಹಾರ ಕೊಟ್ಟಿದ್ದಾರೆ; ಅವರು ಯಾವುದೋ ಬೆಳೆ ಇಟ್ಟಿರುತ್ತಾರೆ, ಯಾವುದೋ ಬೆಳೆಗೆ ಪರಿಹಾರ ಕೊಟ್ಟಿದ್ದಾರೆ. ಚಿಕ್ಕಮಗಳೂರಿನಲ್ಲಂತೂ ಕೆಲವು ಊರುಗಳಲ್ಲಿ ಎಲ್ಲರಿಗೂ ರೂ.49,999 ಗಳನ್ನು ಅವರವರ ಖಾತೆಗೆ ಹಾಕಿದ್ದಾರೆ. ಯಾರೋ ತುಮಕೂರು ಜಿಲ್ಲೆಯವರ ಅಕೌಂಟಿಗೆ ದುಡ್ಡು ಹೋಗಿದೆ. ಹೆಸರು ಚಿಕ್ಕಮಗಳೂರು ಜಿಲ್ಲೆಯಿಂದ ಹೋಗಿದೆ. ನಿಜವಾಗಲೂ ನೀವು ನೋಡಿಬಿಟ್ಟರೆ, ಅಲ್ಲಿಯ ರೈತರು ಕೂಡ ಸೇರಿಕೊಂಡಿದ್ದಾರೆ. ಈ ವಿಷಯದಲ್ಲಿ ಅವರೇನು ಕಡಿಮೆಯಿಲ್ಲ. ಅಧಿಕಾರಿಗಳು ಕೂಡ ಸೇರಿಕೊಂಡಿದ್ದಾರೆ. 'ಸಿಕ್ಕವರಿಗೆ ಸೀರುಂಡೆ' ಎಂದು ಸಾಯಿನಾಥ್ ರವರು "Everybody loves a good drought" ಎಂದು ತಮ್ಮ ಪುಸ್ತಕದಲ್ಲಿ ಹೇಳಿದ್ದಾರೆ. Everybody loves natural disasters.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸದನಕ್ಕೆ ತಪ್ಪು ಮಾಹಿತಿ ಹೋಗಬಾರದು. ಕಡೂರು ತಾಲ್ಲೂಕಿನ ಒಂದೇ ಹೋಬಳಿಯಲ್ಲಿ ಪೂರ್ಣ ಪ್ರಮಾಣದಲ್ಲಿ ಒಂದು ಹಳ್ಳಿಯಲ್ಲಿ ಆಗಿದೆ. ಅದರ ಬಗ್ಗೆ enquiry ಮಾಡುವುದಕ್ಕೂ ಕೂಡ ಆದೇಶ ಆಗಿದೆ.

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಅದನ್ನೇ ಹೇಳುತ್ತಿರುವುದು. ನಾನು ಆ ರೀತಿ ಹೇಳಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಅಲ್ಲಿ ಯಾವುದೇ ಕಾಫಿ ಬೆಳೆಗಾರರು ಇಲ್ಲ. ಚಿಕ್ಕಮಗಳೂರು ಜಿಲ್ಲೆಯನ್ನು ತೆಗೆದುಕೊಂಡಾಗ ಪಂಚನಹಳ್ಳಿ ಹೋಬಳಿಯಲ್ಲಿ ಒಂದು ಊರಿನಲ್ಲಿ ಆಗಿದೆ. ಅದರ ಬಗ್ಗೆ

ದೊಡ್ಡ enquiry ಕೂಡ ನಡೆಯುತ್ತಿದೆ. ಸಂಬಂಧಪಟ್ಟ ತಹಶೀಲ್ದಾರ್ ರವರು ಕೂಡ suspend ಆಗಿದ್ದಾರೆ. ಇಬ್ಬರು ರಾಜಸ್ವ ನಿರೀಕ್ಷಕರು ಹಾಗೂ ಒಬ್ಬರು Village Accountant suspend ಆಗಿದ್ದಾರೆ.

**ಸಭಾಪತಿಯವರು:-** ಶ್ರೀ ಎಸ್.ಎಲ್.ಭೋಜೇಗೌಡ ರವರೇ, ಇದು ಶೂನ್ಯವೇಳೆ. ಅವರಿಗೆ ಗೊತ್ತಿದೆ, ಜನ ಕೂಡ ನಿನ್ನಂತೆಯೇ ಬುದ್ಧಿವಂತರಿದ್ದಾರೆ. ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೇ, ಅದರ ತನಿಖೆಗೆ ಆದೇಶ ಮಾಡಿರುವುದು, ತನಿಖೆ ಮಾಡಿಸುತ್ತಿರುವುದು ಕೂಡ ನಾನೇ.

**ಶ್ರೀ ಎಸ್.ಎಲ್.ಭೋಜೇಗೌಡ:-** ಆಯಿತು, ಕ್ರಮ ತೆಗೆದುಕೊಳ್ಳಿ.

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಭೋಜೇಗೌಡರವರೇ, ಅದು ನನಗೆ ಗೊತ್ತಿದೆ. ಆ ಅಧಿಕಾರಿಗಳು ಇನ್ನೂ ಯಾರ್ಯಾರು ಭಾಗಿಯಾಗಿದ್ದಾರೆ ಅಷ್ಟೇ ಅಲ್ಲದೇ, ಈಗ ಅದನ್ನು ಹೇಳಿದರೆ . . . ದಯವಿಟ್ಟು ತಪ್ಪು ತಿಳಿದುಕೊಳ್ಳಬೇಡಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಕಾರ್ಯಕರ್ತರೇ ಇದ್ದಾರೆ.

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಭೋಜೇಗೌಡರವರೇ, ನಾನು ಕಾರ್ಯಕರ್ತರ ಮಾತಿಗೆ ಹೋಗುತ್ತಿಲ್ಲ. ಆ ಕಾರ್ಯಕರ್ತರು ಯಾವ ಪಕ್ಷದವರೋ ಏನೋ ಯಾರಿಗೆ ಗೊತ್ತಿದೆ? ಇದರಲ್ಲಿ ಯಾವುದೇ ಪಕ್ಷ ಇಲ್ಲ. ಇದರಲ್ಲಿ ಎಲ್ಲರೂ ಸೇರಿಕೊಂಡಿದ್ದಾರೆ. ಸಿಕ್ಕವರಿಗೆ ಸೀರುಂಡೆ. ಆ ಸಂದರ್ಭದಲ್ಲಿ 6,000 ಎಕರೆ bogus grant ಮಾಡಿದ್ದಾರೆ. ಚಿಕ್ಕಮಗಳೂರು ಜಿಲ್ಲೆ ಒಂದರಲ್ಲೇ ಬಡವರಿಗೆ ಸಿಗಬೇಕಾಗಿರತಕ್ಕಂಥ 6,000 ಎಕರೆ forest land grant ಮಾಡಿದ್ದಾರೆ. ಅಲ್ಲಿ ವಾಸ ಮಾಡದೇ ಇರತಕ್ಕಂಥವರಿಗೂ grant ಮಾಡಿದ್ದಾರೆ. 26 ಜನ ಅಧಿಕಾರಿಗಳು ಭಾಗಿಯಾಗಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯನ್ನು ನಾನು ಬರೀ ಉದಾಹರಣೆಗೆ ಹೇಳಿದೆನು. ಯಾರು ತಪ್ಪು ತಿಳಿದುಕೊಳ್ಳಬೇಡಿ. ಈ ರೀತಿ ಚಿತ್ರದುರ್ಗ, ಕಲಬುರಗಿ ಮತ್ತು ಹಾವೇರಿಯಲ್ಲಿ ಆಗಿದೆ. ನಾನು ಹಾವೇರಿಯದ್ದು ಹೇಳುವುದಕ್ಕೆ ಇಲ್ಲಿ ಸಮಯವಿಲ್ಲ. ನಾನು ಕಡೂರು ತಾಲ್ಲೂಕು ಒಂದರದ್ದು ತನಿಖೆಗೆ ಆದೇಶ ಮಾಡಿರುವುದು. ಬೇರೆ ಕಡೆ ಆ ರೀತಿ ನಡೆದಿಲ್ಲ ಎಂದೇನಿಲ್ಲ. ನನಗೆ ಕಡೂರು ತಾಲ್ಲೂಕಿನಲ್ಲಿ ದಾಖಲೆ ಸಿಕ್ಕಿರುವುದರಿಂದ ಅಲ್ಲಿ ತನಿಖೆ ಮಾಡಿಸುತ್ತಿದ್ದೇನೆ. ಇನ್ನು ಸಾಕಷ್ಟು ಕಡೆ ದಾಖಲೆಗಳು ನಮ್ಮ ಕಣ್ಣಿಗೆ ಕಾಣದೇ ಇರುವುದು ವ್ಯಾಪಕವಾಗಿ ನಡೆದಿದೆ. ಮಾನ್ಯ ಸದಸ್ಯರು ತನಿಖೆಗೆ ಆದೇಶ ಮಾಡಿದ್ದೀರಿ. ಆದರೆ ಅದಕ್ಕೆ ಏನು ಬೆಳಕು ಕಾಣುತ್ತದೋ, ಇಲ್ಲವೋ; ಒಂದು logical end ಗೆ ಒಯ್ಯುತ್ತೀರೋ, ಇಲ್ಲವೋ ಎಂದು ಕೇಳಿರುವುದು ಸರಿಯಿದೆ. ನಾನು ಮೂರ್ನಾಲ್ಕು ಕಡೆ

enquiry ಗೆ order ಮಾಡಿದ್ದೇನೆ. ಖಂಡಿತವಾಗಿಯು ನಾವು ಅದನ್ನು follow up ಮಾಡಿ, ಒಂದು logical end ಗೆ ಒಯ್ದು ತಪ್ಪು ಮಾಡಿದವರಿಗೆ ಶಿಕ್ಷೆ ಆಗಬೇಕು. ಆ ಕೆಲಸವನ್ನು ಶ್ರದ್ಧೆಯಿಂದ ಮಾಡುತ್ತೇವೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಮತ್ತು ಸಿ.ಟಿ.ರವಿಯವರು ಕೆ.ಡಿ.ಪಿ., ಸಭೆಗೆ ಹೋಗಿದ್ದೆವು. ಕಡೂರು ತಾಲ್ಲೂಕಿನಲ್ಲಿ Assistant Commissioner ರವರು ಈ ಒತ್ತುವರಿ ಮಾಡಿರುವುದನ್ನು 24 ಗಂಟೆಯಲ್ಲಿ ಖಾಲಿ ಮಾಡಿಸಬೇಕು ಎಂದು ಕೆ.ಡಿ.ಪಿ., ಸಭೆಯಲ್ಲಿ ಹೇಳಿದ ನಂತರ, ಆ ಕೆಲಸವನ್ನು ಮಾಡಿಸಿದ್ದಾರೆ. ಅದಕ್ಕೆ ನಾವು ತುಂಬಾ ಧನ್ಯವಾದಗಳನ್ನು ಹೇಳುತ್ತೇವೆ. ಹಾಗಾಗಿ, ವಿಷಯದ ಬಗ್ಗೆ ಸಂಪೂರ್ಣವಾದ ಮಾಹಿತಿ ಇರಬೇಕು. ಒಬ್ಬ ಅಧಿಕಾರಿ Assistant Commissioner cadre level ರವರು 24 ಗಂಟೆಯಲ್ಲಿ ಖಾಲಿ ಮಾಡಿಸಿದ್ದಾರೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, . . .

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಚಿಕ್ಕಮಗಳೂರು ಜಿಲ್ಲೆ ಎಂದಾಗ, ನಿರ್ದಿಷ್ಟವಾಗಿ ಎಲ್ಲಿ ನಡೆದಿದೆ ಎಂಬ ವಿಚಾರವನ್ನು ಹೇಳಬೇಕಾಗುತ್ತದೆ.

**ಸಭಾಪತಿಯವರು:-** ಭೋಜೇಗೌಡರೇ, ಈ ರೀತಿ ಎದ್ದು ನಿಂತು ಮಾತನಾಡಿದರೆ ನಾನು ಸದನವನ್ನು ನಡೆಸುವುದು ಹೇಗೆ? ಇದಕ್ಕೆ ಏನಾದರೂ ರೀತಿ-ನೀತಿ ಇದೆಯೇ? **(ಗೊಂದಲ)** ಅದಕ್ಕೂ ನಿಮಗೂ ಏನು ಸಂಬಂಧ ಇದೆ? ಇದು ಶೂನ್ಯವೇಳೆ ಆಗಿರುವುದರಿಂದ ನೀವು disturb ಮಾಡಿಕೊಂಡು ಕುಳಿತರೆ ಏನು ಮಾಡುವುದು?

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು disturb ಮಾಡುತ್ತಿಲ್ಲ. ಇದು ಬಹಳ ಗಂಭೀರವಾಗಿರತಕ್ಕಂಥ ವಿಚಾರವಾಗಿದೆ.

**ಸಭಾಪತಿಯವರು:-** ನೀವು ಬೇರೆ ನಿಯಮದಲ್ಲಿ ಕಳುಹಿಸಿ, ಅವಕಾಶ ಕೊಡಲಾಗುವುದು. ನಾನು ಸುಮ್ಮನೆ ಇದ್ದೇನೆ ಎಂದು ಮಾತನಾಡುವುದೇ?

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ತಮ್ಮ ಅಪ್ಪಣೆಯಂತೆ ತಾವು ಹೇಳಿದಂತೆ . . .

**ಓ) ವಿಷಯ:- ದಕ್ಷಿಣ ಕನ್ನಡ, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಆಸುಪಾಸಿನ ಅಡಿಕೆ ಕೃಷಿಕರಿಗೆ ಕೊಳೆರೋಗ ಭೀತಿ ಎದುರಾಗಿರುವ ಬಗ್ಗೆ.**

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. "ಅಡಿಕೆ ಕೃಷಿಕರಿಗೆ ಈ ಬಾರಿ ಮತ್ತೆ ಕೊಳೆರೋಗ ಭೀತಿ; ಮಳೆಯಿಂದ ಶಿಲೀಂಧ್ರ ರೋಗ" ಎಂದು ಉದಯವಾಣಿ ಕನ್ನಡ ದಿನ ಪತ್ರಿಕೆಯಲ್ಲಿ ಪ್ರಕಟವಾಗಿದೆ. 2018ರಲ್ಲಿ ಕೊನೆಯ ಬಾರಿಗೆ ಜಿಲ್ಲೆಯಲ್ಲಿ ಕೊಳೆರೋಗ ಕಾಣಿಸಿಕೊಂಡಿತ್ತು. ಆ ಬಳಿಕದ ವರ್ಷಗಳಲ್ಲಿ ಜುಲೈ ತಿಂಗಳಿನಲ್ಲಿ ಮಳೆ ಕ್ಷೀಣವಾಗಿ ಸುರಿದಿದ್ದು, ಮಧ್ಯೆ ಹಲವು ಬಿಸಿಲಿನ ವಾತಾವರಣವೇ ಇತ್ತು. ಹಾಗಾಗಿ. ಕೊಳೆರೋಗಬಾಧೆ ಇರಲಿಲ್ಲ. ಇದ್ದರೂ ಕೆಲವು ಕಡೆ ಮಾತ್ರ ಕಾಣಿಸಿಕೊಂಡಿತ್ತು. ಆದರೆ ಈ ಬಾರಿ ಕಳೆದ ಸುಮಾರು 15-20 ದಿನಗಳಿಂದ ಮಳೆ ತೀವ್ರವಾಗಿ ಹೆಚ್ಚಾಗಿದೆ. ವಾತಾವರಣದ ತಾಪಮಾನವೂ 18 ಡಿಗ್ರಿಯಿಂದ 22 ಡಿಗ್ರಿ ಸೆಲ್ಸಿಯಸ್ ಆಸುಪಾಸಿನಲ್ಲಿರುತ್ತದೆ. ಜೊತೆಗೆ ಆದ್ರತೆ ಶೇ.85 ರಿಂದ 90 ರಷ್ಟು ಇರುವುದರಿಂದ ಮಹಾಳಿ ರೋಗಕ್ಕೆ ಕಾರಣವಾಗಿರುವ ಶಿಲೀಂಧ್ರದ ಕ್ಷಿಪ್ರ ಬೆಳವಣಿಗೆ ಮತ್ತು ಪ್ರಸಾರಗೊಳ್ಳುವುದಕ್ಕೆ ಪೂರಕ ಪರಿಸ್ಥಿತಿ ಸೃಷ್ಟಿಸಿದೆ. ಇದು ಕೊಳೆರೋಗದ ಭೀತಿ ಹೆಚ್ಚಾಗಲು ಕಾರಣವಾಗಿದೆ.

ಈ ಬಾರಿಯ ಹವಾಮಾನ ಬದಲಾವಣೆಯಂತಹ ಕಾರಣಗಳಿಂದಾಗಿ, ಕೊಳೆರೋಗವಲ್ಲದೆ ಅಡಿಕೆಗೆ ನಳ್ಳಿ ಹಂತದಲ್ಲೇ ಉದುರಿ ಹೋಗುತ್ತಿರುವುದು ಕೂಡ ಕಳವಳ ಸೃಷ್ಟಿಸಿದೆ. ದಕ್ಷಣ ಕನ್ನಡ ಜಿಲ್ಲೆಯ ಸುಳ್ಯ, ಸುಬ್ರಮಣ್ಯ, ಪುತ್ತೂರು, ಉತ್ತರಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಅಲ್ಲದೇ ಇತರೆ ಭಾಗದ ಆಸುಪಾಸಿನ ಘಟ್ಟದ ತಪ್ಪಲಿನಲ್ಲಿರುವ ರೈತರು ಹವಾಮಾನ ಬದಲಾವಣೆಯಿಂದಾಗಿ ಆಗಿರುವ ಈ ಪರಿಣಾಮವನ್ನು ಎದುರಿಸುತ್ತಿದ್ದಾರೆ. ಸಾಮಾನ್ಯವಾಗಿ ಅಡಿಕೆಗೆ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಮಳೆ ಬಂದರೆ, ಉತ್ತಮ ಬೆಳವಣಿಗೆಯಾಗುತ್ತದೆ. ಆದರೆ ಈ ಬಾರಿ ಮಳೆ ಬಾರದೆ ಹೋದರೆ ಬಿಸಿಲಿನ ಝಳಕ್ಕೆ ಅತ್ತ ಬೆಳವಣಿಗೆಯೂ ಆಗದೇ, ಇತ್ತ ಎಳೆಯೂ ಇಲ್ಲದೇ ಅಡಿಕೆಗಳು ನಳ್ಳಿ ಹಂತದಲ್ಲಿಯೇ ಬೀಳತೊಡಗುತ್ತದೆ. ಈ ರೋಗ ಮತ್ತು ನಳ್ಳಿ ಹಂತದಲ್ಲಿ ಉದುರತೊಡಗಿರುವ ಅಂಶವನ್ನು ಗಮನಿಸಿ, ಈ ಬಗ್ಗೆ ತೋಟಗಾರಿಕೆ ಮಾತ್ರವಲ್ಲ ಸರ್ಕಾರವು ಕೂಡ ಕೊಳೆರೋಗ ನಿಯಂತ್ರಿಸಲು ಕನಿಷ್ಟ ರೂ.50 ಕೋಟಿಗಳನ್ನು ಬಿಡುಗಡೆ ಮಾಡಿ ರೈತರಿಗೆ ಸಹಾಯ ಮಾಡುವಂತಹ ಅವಶ್ಯಕತೆ ಇರುತ್ತದೆ. ಆದುದರಿಂದ ರೈತರ ಸಹಾಯಕ್ಕೆ ಸರ್ಕಾರ ಬರಬೇಕು ಎಂಬ ಬೇಡಿಕೆಯೊಂದಿಗೆ ಇದೊಂದು ಸಾರ್ವಜನಿಕ ಮಹತ್ವವುಳ್ಳ ವಿಷಯವಾಗಿರುವುದರಿಂದ ಮಾನ್ಯ ತೋಟಗಾರಿಕೆ ಸಚಿವರ ಗಮನಕ್ಕೆ ತರಲು ತಮ್ಮ ಮುಖಾಂತರ ಶೂನ್ಯವೇಳೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಲು ಬಯಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**9. ಕಾಲಾವಕಾಶದ ಕೊರತೆಯಿಂದ ಹಾಗೂ ಸದನದಲ್ಲಿ ಉದ್ಭವವಾದ ಗೊಂದಲದ ವಾತಾವರಣದಿಂದ ಮೊಟಕುಗೊಂಡ ಪ್ರಶ್ನೋತ್ತರವನ್ನು ಕೈಗೆತ್ತಿಕೊಳ್ಳುವಂತೆ ಮಾನ್ಯ ಸದಸ್ಯರಿಂದ ಒತ್ತಾಯ**

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ದಯಮಾಡಿ ನನ್ನ ನಿವೇದನೆಯನ್ನು ಕೇಳಿಕೊಳ್ಳಬೇಕು. ಅಪರೂಪಕ್ಕೊಮ್ಮೆ ಚುಕ್ಕೆ ಗುರುತಿನ ಪ್ರಶ್ನೆಯಾಗಿ ಬರುವುದು. ಸಂತ್ರಸ್ತರ ಪರವಾಗಿ ಇರುವುದನ್ನು ಇಲ್ಲಿ ಯಾವೊಬ್ಬ ಸದಸ್ಯರು ಕೂಡ ಧ್ವನಿ ಎತ್ತುತ್ತಿಲ್ಲ. ಅದನ್ನು ಹತ್ತಿಕ್ಕುವಂತಹ ಕೆಲಸ ಸಾಕಷ್ಟು ವರ್ಷಗಳಿಂದ ವ್ಯವಸ್ಥಿತವಾಗಿ ನಡೆದುಕೊಂಡು ಬರುತ್ತಿದೆ. ನನ್ನದು ಒಂದು ಕೊನೆಯ ಚುಕ್ಕೆ ಗುರುತಿನ ಪ್ರಶ್ನೆ ಇತ್ತು. ಸಂತ್ರಸ್ತರ ಜಮೀನುಗಳಿಗೆ ಪರಿಹಾರ ಸಿಗಬೇಕು ಎನ್ನತಕ್ಕಂಥ ಒಂದು ಕೂಗು ಅದರಲ್ಲಿತ್ತು. ದಂಡೆಯ ಆ ಕಡೆಯ ಜಮೀನುಗಳಿಗೆ ಎಕರೆಗೆ ರೂ.16 ಲಕ್ಷ ದಿಂದ ರೂ. 20 ಲಕ್ಷಗಳು ಮಾರ್ಗಸೂಚಿ ದರ ನಿಗದಿಪಡಿಸಲಾಗಿದೆ. ಆದರೆ ಕೃಷ್ಣಾ ಮೇಲ್ದಂಡೆ ಮುಳುಗಡೆ ಭಾಗದ ಊರುಗಳ ಜಮೀನುಗಳಿಗೆ ರೂ.2 ಲಕ್ಷ ದಿಂದ ರೂ. 4 ಲಕ್ಷಗಳು ಮಾರ್ಗಸೂಚಿ ದರ ನಿಗದಿಪಡಿಸಲಾಗಿದೆ. ಸರ್ಕಾರ ಎಂತಹ ತಾರತಮ್ಯ ಮಾಡುತ್ತಿದೆ ಎಂದರೆ, ಬೇಕಂತಲೇ ತಾರತಮ್ಯ ಮಾಡುತ್ತಿದೆ. ಇದರ ಬಗ್ಗೆ ನನ್ನದು ಕೊನೆಯ ಪ್ರಶ್ನೆಯಾಗಿತ್ತು. ದಯಮಾಡಿ ಏನಾದರೂ ಮಾಡಿ ನಾನು ಅದರ ಬಗ್ಗೆ ಮಾತನಾಡಲು ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಪಿ.ಹೆಚ್.ಪೂಜಾರ್ ರವರೇ, ನಾನು ನಿಮ್ಮ ಹೆಸರನ್ನು ಕರೆದಿದ್ದೇನೆ.

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ತಾವು ನನ್ನ ಹೆಸರನ್ನು ಕರೆದಿದ್ದೀರಿ. ಆಗ ನಾನು ಮಾತನಾಡಲು ಪ್ರಾಂಭಿಸಿದ್ದೆನು.

**ಸಭಾಪತಿಯವರು:-** ಹೌದು, ನೀವು ಮಾತನಾಡಲು ಪ್ರಾರಂಭಿಸಿದ್ದೀರಿ. ಆದರೆ ಗಲಾಟೆ ಆಯಿತು.

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ನನಗೇಕೆ ಶಿಕ್ಷೆ ಎಂದು ದಯಮಾಡಿ ತಿಳಿಸಬೇಕು. ಏಕೆಂದರೆ ನೀವು ಕೂಡ ಸಂತ್ರಸ್ತರಾದವರೇ ಆಗಿದ್ದೀರಿ. ದಯಮಾಡಿ ನನಗೆ ಅವಕಾಶ ಮಾಡಿಕೊಡಿ.

**10. ಸದನದಲ್ಲಿ ಮೌಖಿಕವಾಗಿ ಉತ್ತರಿಸುವ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳ ಮಂಡನೆ**

**ಸಭಾಪತಿಯವರು:–** ಸದನದಲ್ಲಿ ಮೌಖಿಕವಾಗಿ ಉತ್ತರಿಸುವ ಶ್ರೀ ಪಿ.ಹೆಚ್.ಪೂಜಾರ್ (ಪ್ರಶ್ನೆ ಸಂಖ್ಯೆ: 996), ಶ್ರೀ ದಿನೇಶ್ ಗೂಳಿಗೌಡ (ಪ್ರಶ್ನೆ ಸಂಖ್ಯೆ: 865), ಶ್ರೀ ಹೆಚ್.ಎಸ್.ಗೋಪಿನಾಥ್(ಪ್ರಶ್ನೆ ಸಂಖ್ಯೆ: 984) ಮತ್ತು ಶ್ರೀ ಗೋವಿಂದ ರಾಜು ಇವರ ತಡೆಹಿಡಿಯಲಾದ ಪ್ರಶ್ನೆ ಸಂಖ್ಯೆ:750ಕ್ಕೆ ಲಿಖಿತ ಮೂಲಕ ನೀಡಲಾದ ಉತ್ತರಗಳನ್ನು ಸದನದ ಮುಂದೆ ಮಂಡಿಸಿದ್ದೇನೆ. ಆಮೇಲೆ ನಾನು ಬೇರೆ ಹೇಳುತ್ತೇನೆ.

**(ಉತ್ತರಗಳನ್ನು ಲಗತ್ತಿಸಲಾಗಿದೆ)**

(ಮುಂದು)

(676) 24.7.2024/1.30/ಎಂ.ಎಂ-ಎಂ.ಡಿ (ಸಭಾಪತಿಯವರ ಉಪಸ್ಥಿತಿ)

**11. ವಿಧಾನಪರಿಷತ್ತಿನ ಸಭಾಂಗಣ ಪ್ರವೇಶ ದ್ವಾರದ ಆವರಣಕ್ಕೆ ಹೊಂದಿಕೊಂಡಿರುವ ಉಪಹಾರ ಗೃಹದ ಮುಂಭಾಗದಲ್ಲಿ ಅಧಿವೇಶನದ ಸಂದರ್ಭದಲ್ಲಿ ಜನಸಂದಣಿ ಉಂಟಾಗುತ್ತಿರುವುದರಿಂದ ಸದನಕ್ಕೆ ಆಗಮಿಸುವ ಮಾನ್ಯ ಸಚಿವರು ಹಾಗೂ ಶಾಸಕರ ಚಲನವಲನಕ್ಕೆ ತೊಂದರೆ ಆಗುತ್ತಿರುವ ಕುರಿತು.**

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ದಯಮಾಡಿ, ಮೊದಲನೇ ಮಹಡಿಯಲ್ಲಿ ಒಂದು ಕ್ಯಾಂಟೀನ್ ಇದೆ . . .

**ಶ್ರೀ ಪಿ.ಹೆಚ್. ಪೂಜಾರ್:-** ಮಾನ್ಯ ಸಭಾಪತಿಯವರೇ, ದಯಮಾಡಿ ಒಂದು ಅವಕಾಶ ಕೊಡಿ. ಸಂಬಂಧಿಸಿದ ಸಚಿವರು ಇಲ್ಲಿಯೇ ಇದ್ದಾರೆ.

**ಸಭಾಪತಿಯವರು:-** ನಾನು ಒಂದು ಸಲ ಹೇಳಿದ್ದೇನೆ ನೀವೇ ವಿಚಾರ ಮಾಡಿ. ಒಬ್ಬೊಬ್ಬರ ಪ್ರಶ್ನೆಗೆ 14 ನಿಮಿಷ ತೆಗೆದುಕೊಂಡಿದ್ದೇನೆ. 10 ನಿಮಿಷ ಆಯಿತು.

**ಶ್ರೀ ಪಿ.ಹೆಚ್. ಪೂಜಾರ್:-** ಮಾನ್ಯ ಸಭಾಪತಿಯವರೇ, ಸಂಬಂಧಿಸಿದ ಸಚಿವರಿದ್ದಾರೆ ದಯಮಾಡಿ ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದೇ ನಿಮಿಷದಲ್ಲಿ ಮುಗಿಸುತ್ತೇನೆ. ನಮ್ಮದೊಂದು ನಿವೇದನೆ ಇದೆ. ಪಕ್ಕದಲ್ಲಿರುವ ಕ್ಯಾಂಟೀನ್‌ನಿಂದಾಗಿ ನಾವು ಸಭೆಯಿಂದ ಆಚೆ ಹೋಗಬೇಕಾದರೆ, ಬರಬೇಕಾದರೆ ಬಹಳ nuisance ಆಗುತ್ತದೆ. ನಾವು ಓಡಾಡುವುದಕ್ಕೆ ಆಗುವುದಿಲ್ಲ. ನಾವು ನಮ್ಮ ಕೊಠಡಿಗಳಿಗೆ ಹೋಗಬೇಕಾದರೆ ಬಹಳ ಕಷ್ಟ ಪಟ್ಟು ಜನರನ್ನು ನೂಕಿಕೊಂಡು ಹೋಗಬೇಕಾಗುತ್ತದೆ. ಕ್ಯಾಂಟೀನ್‌ಗೆ ಬರುವ ಜನರು ದಾರಿಯಲ್ಲೇ ತಿಂಡಿ ತಿನ್ನುತ್ತಾರೆ ಕಾಫಿ ಕುಡಿಯುತ್ತಾರೆ. ಅದಕ್ಕೇನಾದರೂ ವ್ಯವಸ್ಥೆ ಮಾಡಬೇಕಲ್ಲವೇ? ಹಿಂದೆ ಮುಂದೆ ದಾರಿ ಬಿಡಿ ಎಂದು ಹೇಳುವುದಕ್ಕೆ ನಮಗ್ಯಾರೂ Gunman ಇಲ್ಲ. ದಯಮಾಡಿ ಅದರ ಬಗ್ಗೆ ಗಂಭೀರವಾಗಿ ಪರಿಗಣಿಸಿ.

**ಸಭಾಪತಿಯವರು:-** ಆಯಿತು.

**ಶ್ರೀ ಪಿ.ಹೆಚ್. ಪೂಜಾರ್:-** ಮಾನ್ಯ ಸಭಾಪತಿಯವರೇ, ದಯಮಾಡಿ ನನಗೆ ಅವಕಾಶ ಮಾಡಿಕೊಡಿ.

**ಸಭಾಪತಿಯವರು:-** ಮಾನ್ಯ ಪೂಜಾರ್‌ರವರೇ, ಒಂದು ನಿಮಿಷ ನಾನು ಹೇಳುತ್ತೇನೆ ಕೇಳಿ.

**ಶ್ರೀ ಪ್ರಾಣೇಶ್ ಎಂ.ಕೆ. (ಉಪ ಸಭಾಪತಿಯವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಭೋಜೇಗೌಡರು ಏನು ಪ್ರಸ್ತಾಪ ಮಾಡಿದರು ಅದು ಸರಿಯಾಗಿದೆ. ಅಲ್ಲಿ ಓಡಾಡುವುದಕ್ಕೆ ತುಂಬಾ ಕಷ್ಟವಾಗುತ್ತಿದೆ. ಏಕೆಂದರೆ, ಮಾನ್ಯ ಸಭಾನಾಯಕರ ಕೊಠಡಿ, ಉಪ ಸಭಾಪತಿಯವರ ಕೊಠಡಿ ಇರುವುದು ಅಲ್ಲಿಯೆ. ಈಗ ವಿರೋಧ ಪಕ್ಷದ ನಾಯಕರ

ಕೊಠಡಿ ಇರುವುದು ಸಹ ಅದೇ ಭಾಗದಲ್ಲಿ. ಕ್ಯಾಂಟೀನ್ ಮುಂದೆ ಹೋಗಬೇಕು ಎಂದರೆ ಹೋಗುವುದಕ್ಕೆ ಸಾಧ್ಯವೇ ಇಲ್ಲ. ನಾನೇನು ಮಾಡುತ್ತೇನೆ ಎಂದರೆ ಹೊರಗೆ ಹೋಗಬೇಕಾದರೆ Gunman ಇಟ್ಟುಕೊಂಡು ಹೋಗಬೇಕಾಗಿದೆ. ಅದು ಅವರ ತಪ್ಪು ಎಂದಲ್ಲ. ವ್ಯವಸ್ಥೆ ಮಾಡಿರುವುದು ತಪ್ಪು. ಯಾರೋ ಬಂದು ಅಲ್ಲಿ ಕ್ಯಾಂಟೀನ್ ಅನ್ನು ಉಪಯೋಗಿಸುವುದು ತಪ್ಪಲ್ಲ. ಆದರೆ ಅದನ್ನು ಇಲ್ಲೇ ಮಾಡುವಂತಹ ವ್ಯವಸ್ಥೆ ಮಾಡಿ. ಖಂಡಿತವಾಗಿಯೂ ತುಂಬಾ ಸಮಸ್ಯೆಯಾಗಿದೆ. ನಾನು ಹಿಂದೆ ಸಹ ಇದರ ಬಗ್ಗೆ ನಿಮ್ಮೊಟ್ಟಿಗೆ ಪ್ರಸ್ತಾಪ ಮಾಡಿದ್ದೆ. ಅದನ್ನು ಮಾಡುತ್ತೇನೆ ಎಂದಿದ್ದಿರಿ. ಇದನ್ನು ಕಾರ್ಯದರ್ಶಿಯವರ ಗಮನಕ್ಕೂ ತಂದಿದ್ದೆ. ಆದರೆ ಇದಕ್ಕೆ ಏನೂ ಪರಿಹಾರ ಸಿಕ್ಕಿಲ್ಲ. ತುಂಬಾ ಸಮಸ್ಯೆಯಾಗುತ್ತಿದೆ ಹೋಗುವುದಕ್ಕೆ ಬರುವುದಕ್ಕೆ ಆಗುತ್ತಿಲ್ಲ. ಆ ಕಡೆ ಎಲ್ಲಾ ಸದಸ್ಯರೂ, ಮಂತ್ರಿಗಳು ಹೋಗುತ್ತಾರೆ. ಯಾರಿಗೂ ಹೋಗುವುದಕ್ಕೆ ಆಗುತ್ತಿಲ್ಲ.

**ಸಭಾಪತಿಯವರು:-** ಒಂದು ನಿಮಿಷ. ನೀವು ನನ್ನ ಪರಿಸ್ಥಿತಿಯನ್ನು ತಿಳಿದುಕೊಳ್ಳಿ. ಅವರ ಅವಧಿ ಯಾವಾಗ ಮುಗಿಯುತ್ತದೆಂದು ಕೇಳಿದ್ದೇನೆ, ಕ್ಯಾಂಟೀನ್ ಅನ್ನು ಬಂದ್ ಮಾಡಲು ಹೇಳಿದ್ದೇನೆ. ಹೊರಗೆ ಯಾರೂ ತಿನ್ನಬಾರದೆಂದು ಬೋರ್ಡ್ ಹಾಕುವಂತೆ ತಿಳಿಸಿದ್ದೇನೆ. ಆ ಕ್ಯಾಂಟೀನ್‌ನ ಅವಧಿ ಇದೇ ತಿಂಗಳು ಮುಗಿಯಬಹುದು. ಆ ಹಿನ್ನೆಲೆಯಲ್ಲಿ ಅದರ ಅವಧಿ ಮುಗಿದ ನಂತರ ಇದಕ್ಕೊಂದು ತೀರ್ಮಾನ ಮಾಡುತ್ತೇನೆ.

**ಶ್ರೀ ಎಸ್.ಎಲ್. ಭೋಜೇಗೌಡ:-** ನಿಮ್ಮ ದಾರಿ ಆ ಕಡೆ ನಮ್ಮ ದಾರಿ ಈ ಕಡೆ.

**ಸಭಾಪತಿಯವರು:-** ಸುಮ್ಮನೆ ಕುಳಿತುಕೊಳ್ಳಪ್ಪ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ,

**ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ಆಮೇಲೆ ಮಾಡುತ್ತೇನೆ. ನಾನು ಒಂದು ಸಲ declare ಮಾಡಿದ ಮೇಲೆ ನನಗೆ ಗೊತ್ತಿದೆ.

**ಶ್ರೀ ಎಂ.ಕೆ. ಪ್ರಾಣೇಶ್ (ಉಪ ಸಭಾಪತಿಯವರು):-** ಅಲ್ಲಿ ಜನಜಂಗುಳಿಯಿಂದ jam-pack ಆಗುತ್ತಿದೆ.

**ಸಭಾಪತಿಯವರು:-** ಅದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಎಂ.ಕೆ. ಪ್ರಾಣೇಶ್ (ಉಪ ಸಭಾಪತಿಯವರು):-** ಮಾನ್ಯ ಸಭಾಪತಿಯವರೇ, ಯಾವ ರೀತಿ ಕ್ರಮ ತೆಗೆದುಕೊಳ್ಳುತ್ತೀರಿ? ಇನ್ನೊಂದು ವಿಚಾರವನ್ನು ನಾನು ನಿಮಗೆ ಹೇಳುತ್ತೇನೆ. ಆ ದಾರಿಯಲ್ಲಿ ಸಿಂಕ್ ಅನ್ನು ಇಟ್ಟಿದ್ದಾರೆ. ನಾವು ತಿರುಗಾಡುವ ದಾರಿಯಲ್ಲಿ ಸಿಂಕ್ ಇದೆ. ಒಮ್ಮೆ ನಾನು ಆ ದಾರಿಯಲ್ಲಿ ಹೋಗುತ್ತಿದ್ದಾಗ ನನ್ನ ಹಿಂದಿನಿಂದ ಬಂದ ಯಾರೋ ಒಬ್ಬರು ಕ್ಯಾಂಟೀನ್ ಪಕ್ಕ ಇರುವ ಸಿಂಕ್ ಮುಂದೆ ಚೆಲ್ಲಿದ್ದ ನೀರಿನಿಂದ ಜಾರಿ ಬಿದ್ದರು. ವಿಧಾನಸೌಧದ ಒಳಗಡೆ ನಾವು ತಿರುಗಾಡುವ ಜಾಗದಲ್ಲಿ ಈ ರೀತಿಯ ಪರಿಸ್ಥಿತಿಗಳಾಗಬಾರದು ಎನ್ನುವುದು ನನ್ನ ಅಭಿಪ್ರಾಯವಾಗಿದೆ.

**ಸಭಾಪತಿಯವರು:-** ಆಯಿತು, ಕ್ರಮ ತೆಗೆದುಕೊಳ್ಳೋಣ. ನಿಮ್ಮ ಜೊತೆ ಸೇರಿ ಇದಕ್ಕೊಂದು ತೀರ್ಮಾನ ಮಾಡುತ್ತೇನೆ.

**ಶ್ರೀ ಪಿ.ಹೆಚ್. ಪೂಜಾರ್:-** ಮಾನ್ಯ ಸಭಾಪತಿಯವರೇ, ನಾನು ನಿಯಮ 330 ಮೇಲೆ ಒಂದು ವಿಷಯವನ್ನು ಕೊಟ್ಟಿದ್ದೆ. ಅದನ್ನು ತೆಗೆದುಕೊಳ್ಳಬೇಕಾಗಿತ್ತು ಅದಕ್ಕೂ;

**ಸಭಾಪತಿಯವರು:-** ಮಾನ್ಯ ಪೂಜಾರ್‌ರವರೇ, ಒಂದೊಂದು ವಿಷಯಗಳಲ್ಲಿ ಒಂದೊಂದು ತೀರ್ಮಾನ ಮಾಡಬೇಕಾಗುತ್ತದೆ. ಆಗ ಕೆಲವರಿಗೆ affect ಆಗುತ್ತದೆ. ಅದನ್ನು ಸರಿಪಡಿಸುವ ಕೆಲಸ ಮಾಡುತ್ತೇನೆ.

**ಶ್ರೀ ಮಂಜುನಾಥ್ ಭಂಡಾರಿ:-** ಮಾನ್ಯ ಸಭಾಪತಿಯವರೇ, ಶೌಚಾಲಯದ ಸ್ಥಿತಿ ಸಹ ಶೋಚನೀಯವಾಗಿದೆ ಅದನ್ನೂ ಸ್ವಲ್ಪ ಸರಿ ಮಾಡಬೇಕು.

**12. ನಿಯಮ 59ರ ಮೇರೆಗೆ ನಿಲುವಳಿ ಸೂಚನೆಯಡಿ ವಿಷಯ ಮಂಡಿಸಲು ಅನುಮತಿ ಕೋರಿಕೆ, ಒತ್ತಾಯ ಮತ್ತು ಧರಣಿ.**

**ವಿಷಯ:- ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನ ಹಂಚಿಕೆಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಕುರಿತು.**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ನಿಲುವಳಿ ಸೂಚನೆಯನ್ನು ಮಂಡಿಸುವುದಕ್ಕೆ ಅವಕಾಶ ಕೇಳಿದ್ದೇನೆ. ಅದನ್ನು ಮಂಡಿಸುವುದಕ್ಕೆ ದಯವಿಟ್ಟು ಅವಕಾಶ ಕೊಡಬೇಕೆಂಬುದು ನನ್ನ ಮನವಿ.

**ಸಭಾಪತಿಯವರು:-** ಎರಡೇ ನಿಮಿಷ ಮಾತನಾಡಿ ಜಾಸ್ತಿ ಮಾತನಾಡಬೇಡಿ, ಭಾಷಣ ಮಾಡುವ ಹಾಗಿಲ್ಲ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದನ್ನು ಓದಬೇಕಲ್ಲವೇ? ತಮಗೇನು ಕೊಟ್ಟಿದ್ದೇನೆ ಅದನ್ನು ಓದುತ್ತೇನೆ ಅಷ್ಟೇ. ಭಾಷಣ ಮಾಡುವುದಿಲ್ಲ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳು ನಿಯಮ 59ರ . . .

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಅವರು ಕೊಟ್ಟಿರುವುದು ಈಗಾಗಲೇ ಎಲ್ಲರಿಗೂ ಬಂದಿದೆ. ಈಗಾಗಲೇ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಕಮಿಷನ್ ಮಾಡಿದ್ದಾರೆ (**ಗೊಂದಲ**)

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ನಮಗೆ ಅವಕಾಶ ಕೊಟ್ಟಿದ್ದಾರೆ ಓದಬೇಕಾಗಿದೆ.

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು:-** ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ (ಗೊಂದಲ) ಕಮಿಷನ್ ಮಾಡಿದ ನಂತರ ಇದನ್ನು ಮಾಡುವುದಕ್ಕೆ ಬರುವುದಿಲ್ಲ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ನಮಗೆ ಅವಕಾಶ ಕೊಟ್ಟಿದ್ದಾರೆ ದಯವಿಟ್ಟು ಸಹಕಾರ ಕೊಡಿ.

**ಸಭಾಪತಿಯವರು:-** ನಾನು ಹೇಳುತ್ತೇನೆ.

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು:-** ನಮ್ಮೆಲ್ಲರಿಗೂ ಕಾನೂನು ಗೊತ್ತಿದೆ (ಗೊಂದಲ) ಈಗಾಗಲೇ ಕಮಿಷನ್ ರಚನೆಯಾಗಿದೆ (ಗೊಂದಲ) ಈ ಸದನದಲ್ಲಿ ಅವಕಾಶ ಇಲ್ಲ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ನಿಯಮ . . .

**ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ಒಂದು ನಿಮಿಷ ಕುಳಿತುಕೊಳ್ಳಿ. ನಿಮ್ಮ ನೋಟೀಸನ್ನು ಎಲ್ಲರಿಗೂ ಕಳುಹಿಸಿಕೊಟ್ಟಿದ್ದೇನೆ. ಎಲ್ಲರಿಗೂ ವಿಷಯ ಗೊತ್ತಿದೆ. ಆ ಹಿನ್ನೆಲೆಯಲ್ಲಿ ನಾನೊಂದು ತೀರ್ಮಾನ ಮಾಡಿದ್ದೇನೆ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 62 ಅನ್ನು ಓದಿ ನಿಮಗೆ ಗೊತ್ತಾಗುತ್ತದೆ. ಅದರಲ್ಲಿ ಹೀಗಿದೆ;

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನನಗೆ ತಾವು ಓದುವುದಕ್ಕೆ ಅವಕಾಶ ಕೊಟ್ಟಿದ್ದೀರಿ, ನಾನು submit ಮಾಡುತ್ತೇನೆ. ತಾವು ಅದಾದ ನಂತರ ತೀರ್ಮಾನ ಮಾಡಿ.

**ಡಾ: ಜಿ. ಪರಮೇಶ್ವರ್ (ಗೃಹ ಸಚಿವರು) :-** ಮಾನ್ಯ ಸಭಾಪತಿಯವರೇ, . . . .

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಪ್ರಸಕ್ತ ವಿಧಾನ ಸಭೆ ಅಧಿವೇಶನ (ಗೊಂದಲ) ವಿಷಯದ ಬಗ್ಗೆ ನಿಲುವಳಿ ಸೂಚನೆಯನ್ನು ಮಂಡಿಸುತ್ತಿದ್ದೇನೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನ ಹಂಚಿಕೆ . . .

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಇದು ರೆಕಾರ್ಡ್‌ಗೆ ಹೋಗಬಾರದು.

**(ಗೊಂದಲ)**

**ಸಭಾಪತಿಯವರು:-** ನಾನು ಹೇಳುತ್ತೇನೆ ಕುಳಿತುಕೊಳ್ಳಿ (**ಗೊಂದಲ**) ಅದು ಕಡತಕ್ಕೆ ಹೋಗುವುದಿಲ್ಲ.

**(ಮಾನ್ಯ ಸಭಾಪತಿಯವರ ಆದೇಶದಂತೆ ಸದನದ ಈ ಹಂತದಲ್ಲಿನ ನಡವಳಿಯನ್ನು ದಾಖಲಿಸಿರುವುದಿಲ್ಲ)**

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು:-** ವಿರೋಧ ಪಕ್ಷದ ನಾಯಕರು ಹಾಗೆ ಮಾತನಾಡಬಾರದು.

**(ಗೊಂದಲ)**

**(ಈ ಹಂತದಲ್ಲಿ ಆಡಳಿತ ಪಕ್ಷದ ಎಲ್ಲಾ ಮಾನ್ಯ ಸದಸ್ಯರುಗಳೂ ಎದ್ದು ನಿಂತು ಮಾತನಾಡುತ್ತಿದ್ದರು)**

**ಸಭಾಪತಿಯವರು:-** ಯಾವುದೂ ಕಡತಕ್ಕೆ ಹೋಗಬಾರದು. ಮಾನ್ಯ ಛಲವಾದಿ ನಾರಾಯಣಸ್ವಾಮಿಯವರೇ, ಕಡತಕ್ಕೆ ಹೋಗುವುದಿಲ್ಲ ಬಿಡಿ ಏನು ಹೇಳುತ್ತೀರಿ? ಕುಳಿತುಕೊಳ್ಳಿ.

**(ಮಾನ್ಯ ಸಭಾಪತಿಯವರ ಆದೇಶದಂತೆ ಈ ಹಂತದಲ್ಲಿನ ಸದನದ ನಡವಳಿಯನ್ನು ದಾಖಲಿಸಿರುವುದಿಲ್ಲ)**

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಅವರಾಗಲೀ ನಾವಾಗಲಿ ಹಾಗೆ ಮಾಡಬಾರದು. ಓದುತ್ತಾ ಹೋದರೆ . . . ಅವರಿಗೆ ನೀವು ಅವಕಾಶ ನೀಡಬಾರದು.

**(ಗೊಂದಲ)**

**ಸಭಾಪತಿಯವರು:-** ಯಾವುದೂ ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶದಂತೆ ಈ ಹಂತದಲ್ಲಿನ ಸದನದ ನಡವಳಿಯನ್ನು ದಾಖಲಿಸಿರುವುದಿಲ್ಲ)**

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷ ಕುಳಿತುಕೊಳ್ಳಿ. ರಾಜ್ಯ ಸರ್ಕಾರವು ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಸದರಿ ವಿಷಯದ ಬಗ್ಗೆ ಆಯೋಗವನ್ನು ನೇಮಿಸಿದೆ. ವರದಿ ನೀಡಲು ಆಯೋಗವನ್ನು ರಚಿಸಿರುವುದರಿಂದ ನಿಯಮ 62ರಡಿ ಚರ್ಚೆಗೆ ಅವಕಾಶವನ್ನು ತಿರಸ್ಕರಿಸಲಾಗಿದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಆಯೋಗ ಏನು ಕೆಲಸ ಮಾಡುತ್ತಿದೆ ಅದಕ್ಕೆ ನಾವು ವಿರುದ್ಧ ಇಲ್ಲ. ಏನಾಗಿದೆ ಎಂದರೆ,

**ಸಭಾಪತಿಯವರು:-** ಈಗ ಸದನವನ್ನು 2 ಗಂಟೆ 30 ನಿಮಿಷದವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 01 ಗಂಟೆ 38 ನಿಮಿಷಕ್ಕೆ ಮುಂದೂಡಲ್ಪಟ್ಟು, ಪುನಃ ಮಧ್ಯಾಹ್ನ 02 ಗಂಟೆ 30 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)**

(677) 24.07.2024 (3.30) ಕೆಜಿ-ಎಕೆ (ಸಭಾಪತಿಯವರ ಉಪಸ್ಥಿತಿ)

**(ಮಧ್ಯಾಹ್ನ 1 ಗಂಟೆ 38 ನಿಮಿಷಗಳಿಗೆ ಭೋಜನ ವಿರಾಮಕ್ಕಾಗಿ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 3 ಗಂಟೆ 30 ನಿಮಿಷಗಳಿಗೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದರು)**

**ಸಭಾಪತಿಯವರು:-** ಈಗ ಗಮನ ಸೆಳೆಯುವ ಸೂಚನೆಗಳು.

**ನಿಯಮ 59ರ ಮೇರೆಗೆ ನಿಲುವಳಿ ಸೂಚನೆಯಡಿ ವಿಷಯ ಮಂಡಿಸಲು ಮುಂದುವರೆದ ಅನುಮತಿ ಕೋರಿಕೆ, ಒತ್ತಾಯ ಮತ್ತು ಧರಣಿ.**

**ವಿಷಯ:- ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನ ಹಂಚಿಕೆಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಕುರಿತು.**

\- - - -

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ತಾವು ನನಗೆ ನಿಲುವಳಿ ಸೂಚನೆಯನ್ನು ಮಂಡಿಸುವುದಕ್ಕೆ ಒಪ್ಪಿಗೆ ಕೊಟ್ಟಿದ್ದೀರಿ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಅದು ಎಲ್ಲಾ ಮುಗಿಯಿತು ಅಲ್ಲವೇ?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಇಲ್ಲ. ಒಂದು ನಿಮಿಷ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ. ನನ್ನ ಮಾತು ಕೇಳಿ. ತಮಗೆ ನಾನು ಓದಿ ಎಂದು ಹೇಳಿದೆ. ಆಗ ತಾವು ಎಲ್ಲವನ್ನು ಓದುವುದಕ್ಕೆ ಪ್ರಾರಂಭ ಮಾಡಿದಿರಿ, ತಮಗೆ read and recorded ಎಂದು ಹೇಳಿದೆ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ತಾವು record ಗೆ ತೆಗೆದುಕೊಳ್ಳಬೇಡಿ ಎಂದು ಹೇಳಿದ್ದೀರಿ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ಆಮೇಲೆ ತೆಗೆದುಕೊಳ್ಳಬೇಡಿ ಎಂದು ಹೇಳಿದೆ.

**ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಏಕೆ?

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಅದು ಆಯಿತು ಅಲ್ಲವೇ, ಬಿಡಿ.

**(ಗೊಂದಲ)**

**ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದೀರಿ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಮೊದಲಿನಿಂದ ಓದುವುದಲ್ಲ. ಅದಕ್ಕೆ read and recorded ಎಂದು ಹೇಳಿದೆ.

**ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟ ಮೇಲೆ ನಾನು ಓದುವುದಕ್ಕೆ ಪ್ರಾರಂಭ ಮಾಡಿದ್ದೇನೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, read and recorded ಎಂದು ಹೇಳಿದ್ದೇನೆ.

**ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಅದನ್ನು ಓದುವುದಕ್ಕೆ ಪ್ರಾರಂಭ ಮಾಡಿದಾಗ, ತಾವು ಅದನ್ನು record ಗೆ ತೆಗೆದುಕೊಳ್ಳಬೇಡಿ ಎಂದು ಹೇಳಿದ್ದೀರಿ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ತಮಗೆ ಅಷ್ಟೇ ಓದಿ ಎಂದು ಹೇಳಿದೆ. ಅದು ತಮಗೆ ಕೇಳಿಸಿತ್ತೋ, ಇಲ್ಲವೋ ಗೊತ್ತಿಲ್ಲ. ತಾವು ಎಲ್ಲವನ್ನು ಓದುವುದಕ್ಕೆ ಪ್ರಾರಂಭ ಮಾಡಿದ್ದೀರಿ. ನಾನು ಆ ನಡುವೆ ತೆಗೆದುಕೊಳ್ಳಬೇಡಿ ಎಂದು ಹೇಳಿದೆ. ಅದು ಆಯಿತು. ನಿಮ್ಮದು record ಗೆ ಹೋಗಿದೆ.

**ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇಲ್ಲ. ಅದಲ್ಲ. record ಗೆ ಎಲ್ಲಿ ಹೋಗಿದೆ? ತಾವು record ಗೆ ತೆಗೆದುಕೊಳ್ಳಬೇಡಿ, ತೆಗೆದುಬಿಡಿ ಎಂದು ಹೇಳಿದ್ದೀರಿ. ನಾನು ಏನಾದರೂ unconstitutional ವಿಚಾರವನ್ನು ಎತ್ತಿದ್ದರೆ, ತಾವು ಹೇಳಬಹುದು. ಅದಕ್ಕೆ ನನ್ನ objection ಇಲ್ಲ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಇಲ್ಲ. ನಾನು ನಿಮಗೆ ಏನು ಹೇಳಿದೆ ಎಂದರೆ, …

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈಗ ತಾವು ಅವಕಾಶ ಕೊಟ್ಟಿದ್ದೀರಿ, ನಾನು ಓದಲಿಕ್ಕೆ ಪ್ರಾರಂಭ ಮಾಡಿದ್ದೇನೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ತಮಗೆ ಪೂರ್ತಿ ಓದಬೇಡಿ ಎಂದು ಹೇಳಿದೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅಲ್ಲ. ತಾವು ಏನು ಹೇಳಿದ್ದೀರಿ, ಇದನ್ನು ಮಂಡಿಸಬೇಕೇ ಅಥವಾ ಬೇಡವೇ? ಮಂಡಿಸಬೇಕೆಂದರೆ, ಕೊಟ್ಟಿರುವುದನ್ನು ನಾನು ಓದಬೇಕಾಗುತ್ತದೆ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ತಾವು ruling ಕೊಟ್ಟಾಗಿದೆ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ತಾವು ruling ಕೊಟ್ಟ ಮೇಲೆಯೂ ಸಹ, ನಾವು ಮನವಿ ಮಾಡಬಹುದು.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ನೋಡುತ್ತೇನೆ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ನಡೆದಿರತಕ್ಕಂತಹ ಅನೇಕ ಹಗರಣಗಳಲ್ಲಿ ಬಹು ದೊಡ್ಡ ಹಗರಣ ಇದಾಗಿದೆ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ತಾವು ruling ಕೊಟ್ಟಿದ್ದಿರಿ, ಹಾಗಾಗಿ, ಅದರ ಮೇಲೆ ಮತ್ತೆ ಚರ್ಚೆಯಾಗಬಾರದು. ಅಲ್ಲಿಗೆ ಅದು ಮುಗಿಯಿತು.

**(ಗೊಂದಲ)**

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರರು):-** ಮಾನ್ಯ ಸಭಾಪತಿಯವರೇ, ತಾವು ruling ಕೊಟ್ಟ ಮೇಲೆ, ಮತ್ತೆ ಅವಕಾಶ ಕೊಟ್ಟರೆ, ಅದು wrong precedent ಆಗುತ್ತದೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಆ ಕಾರಣದಿಂದ ಇದನ್ನು ತಾವು ಮಂಡಿಸಲು ಅವಕಾಶ ಕೊಡಬೇಕೆಂದು ನಮ್ಮ ಮನವಿ ಇದೆ. ಹಾಗಾಗಿ, ತಾವು ನನಗೆ ದಯಮಾಡಿ ಅನುಮತಿಯನ್ನು ಕೊಡಬೇಕು. ಇದನ್ನು ತಾವು ಪುನಃ ಪರಿಶೀಲನೆ ಮಾಡಿ ಚರ್ಚೆಗೆ ಅವಕಾಶ ಕೊಡಬೇಕೆಂದು ಮನವಿ ಮಾಡುತ್ತೇನೆ.

**(ಈ ಹಂತದಲ್ಲಿ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷ ಎರಡೂ ಪಕ್ಷಗಳ ಮಾನ್ಯ ಸದಸ್ಯರುಗಳು ಒಟ್ಟಿಗೆ ಎದ್ದುನಿಂತು ಮಾತನಾಡತೊಡಗಿದರು)**

**(ಗೊಂದಲ)**

**ಸಭಾಪತಿಯವರು:-** ದಯವಿಟ್ಟು, ಒಂದು ನಿಮಿಷ. ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಪುಟ್ಟಣ್ಣನವರೇ, ತಮ್ಮದು ಅತಿ ಆಯಿತು. ತಾವು ಏನು ಮಾತನಾಡುತ್ತೀರಿ? ತಮಗೆ ಹೇಳುವವರು ಕೇಳುವವರು ಇಲ್ಲವೇ? ತಮಗೆ ಸ್ವಲ್ಪವಾದರೂ ತಿಳುವಳಿಕೆ ಬೇಡವೇ? ನೀವು-ನೀವೇ ಮಾತನಾಡಿಕೊಳ್ಳುವುದಲ್ಲ. ನನಗೆ ಮಾತನಾಡುವುದಕ್ಕೆ ಬಿಡಿ. **(ಗೊಂದಲ)** ಒಂದು ನಿಮಿಷ ಕೇಳಿ. ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ಅದನ್ನು ಪೂರ್ತಿ ಓದಬೇಡಿ ಎಂದು ಹೇಳಿದ್ದೆ. ಅದು ಕೊಡಿ record ಗೆ ಹಾಕಲಿ. Record ಗೆ ಹಾಕುವುದಕ್ಕೆ ಅನುಮತಿ ಮಾಡಿದ್ದೇನೆ. But, ನಾನು reject ಮಾಡಿದ್ದೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, record ಗೆ ಹಾಕುವ ವಿಚಾರ ಬೇರೆ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಈಗ ಆಯಿತು ಅಲ್ಲವೇ; ಈಗ ಒಪ್ಪಿದ್ದೇನೆ ಅಲ್ಲವೇ? ಅದನ್ನು ಕೊಡಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅದಲ್ಲ. ಇದನ್ನು ತಾವು ಚರ್ಚೆಗೆ ಕೊಡಬೇಕು.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಇಲ್ಲ. ನಾನು reject ಮಾಡಿದ್ದೇನೆ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ನಡೆದಿರುವಂತಹ ಹಗರಣಗಳಲ್ಲಿ ಇದು ಬಹು ದೊಡ್ಡ ಹಗರಣವಾಗಿದೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ. ನನ್ನ ಮಾತು ಕೇಳಿ. ನಾನು reject ಮಾಡಿದ್ದೇನೆಂದರೆ, ಮತ್ತೆ ಅದನ್ನು ತೆಗೆದುಕೊಳ್ಳುವುದಿಲ್ಲ. ಇದು ಯಾವುದು ಕಡತಕ್ಕೆ ಹೋಗಬಾರದು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ್ದು ಯಾವುದು ಕಡತಕ್ಕೆ ಹೋಗಬಾರದು ಎಂದು ಸೂಚಿಸಿದ್ದರಿಂದ ಈ ಹಂತದಲ್ಲಿನ ಅವರ ಹೇಳಿಕೆಯನ್ನು ದಾಖಲಿಸಿರುವುದಿಲ್ಲ)**

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದೊಂದು ದೊಡ್ಡ ಹಗರಣ. ಮೂಡಾ ಹಗರಣ. ಇವತ್ತು. ರಾಷ್ಟ್ರೀಯ...

**(ಗೊಂದಲ)**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ ನನ್ನ ಮಾತು ಕೇಳಿ. ನಾನು ಒಂದು ಬಾರಿ ತೀರ್ಮಾನ ಮಾಡಿ decision ತೆಗೆದುಕೊಂಡ ನಂತರ ಪದೇ ಪದೇ ಅದರ ಬಗ್ಗೆ ಹೇಳುವಂತಿಲ್ಲ. ತಾವು record ಗೆ ಹೋಗಿಲ್ಲ ಎಂದು ಹೇಳಿದ್ದೀರಿ, ಅದಕ್ಕೆ ನಾನು ತೆಗೆದುಕೊಳ್ಳಬೇಡಿ ಎಂದು ಹೇಳಿದೆ. ಈಗ ಅದನ್ನು record ಗೆ ಕೊಡಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾವು ಮನವಿಯನ್ನು ಮತ್ತೆ ಮಾಡಿದರೆ, ...

**(ಗೊಂದಲ)**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಇಲ್ಲ. ಅದು ಮನವಿ ಅಲ್ಲ. ಅದನ್ನು record ಗೆ ಅಷ್ಟೇ ಕೊಡಬೇಕು.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಪುನರ್ ಪರಿಶೀಲಿಸುವ ಅಧಿಕಾರ ತಮಗೆ ಇದೆ. ಇದು ಜರೂರು ವಿಷಯವಾಗಿರುವುದರಿಂದ ಮೂಡಾ ವಿಚಾರವನ್ನು ತಕ್ಷಣ ತೆಗೆದುಕೊಳ್ಳಬೇಕೆಂದು ಮನವಿ ಮಾಡುತ್ತೇನೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಇಲ್ಲ. ನಾನು reject ಮಾಡಿದ್ದೇನೆ. ನಾನು ತೆಗೆದುಕೊಳ್ಳುವುದಿಲ್ಲ. ನಾನು reject ಮಾಡಿದ ಮೇಲೆ, ಅದು ಮುಗಿದು ಹೋಯಿತು. ಒಂದು ಬಾರಿ reject ಮಾಡಿದ ಮೇಲೆ ಅದು ಮುಗಿಯಿತು. ನಾನು ಮೊನ್ನೆ ದಿವಸ ಇದೇರೀತಿ reject ಮಾಡಿದಾಗ, ತಾವುಗಳು ಏಕೆ ಚಪ್ಪಾಳೆ ತಟ್ಟಿದ್ದಿರಿ?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ತಾವು reject ಮಾಡಿ. ನಾವು ಬೇಡ ಅನ್ನುವುದಿಲ್ಲ. ಆದರೆ, ತಾವು ಅವಕಾಶ ಕೊಟ್ಟಾಗ ನಾವು ಓದಬೇಕಲ್ಲವೇ?

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಈಗ ಯಾವುದು ಅವಕಾಶ ಇಲ್ಲ. ತಾವು Rule 62 ಪ್ರಕಾರ ಹೇಳಿದ್ದೀರಿ. ತಾವು ruling ಕೊಟ್ಟಿದ್ದೀರಿ. ಆದರೂ ಸಹ. ತಾವು ಅದನ್ನು ಕೊಡಿ record ಗೆ ಹೋಗಲಿ ಎಂದು ಹೇಳಿದ್ದೀರಿ. ಅವರು ಅದನ್ನೇ ಪುನಃ ಹೇಳಿದರೆ,

**(ಗೊಂದಲ)**

**(ಈ ಹಂತದಲ್ಲಿ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷ ಎರಡೂ ಪಕ್ಷಗಳ ಮಾನ್ಯ ಸದಸ್ಯರುಗಳು ಒಟ್ಟಿಗೆ ಎದ್ದುನಿಂತು ಮಾತನಾಡತೊಡಗಿದರು)**

**ಸಭಾಪತಿಯವರು:-** ತಾವುಗಳು ಈ ರೀತಿ ಮಾಡಿದರೆ, ನಾನು ಸಭೆಯನ್ನು ಹೇಗೆ ನಡೆಸಬೇಕು? ದಯವಿಟ್ಟು ನಾನು ಹೇಳುವವರೆಗೂ ಕುಳಿತುಕೊಳ್ಳಿ. ಮಾನ್ಯ ಸಭಾನಾಯಕರೇ, ಒಂದು ನಿಮಿಷ ಕೇಳಿ. ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ತಾವು ಓದುವಂತಹ ದಾಖಲೆ ಆಗಲೇ ಎಲ್ಲರ ಕಡೆಗೆ ಬಂದಿದೆ. ಮುಂದೆ ಮಾತನಾಡುವಂತಹ ಅವಶ್ಯಕತೆ ಇಲ್ಲ, record ಗೆ ಹೋಗುವುದು ಬೇಡ ಎಂದು ನಾನು ಹೇಳಿದೆ. Okay, ತಾವು objection ಮಾಡುತ್ತೀದ್ದೀರಿ ಅಲ್ಲವೇ; ಅದನ್ನು ಕೊಟ್ಟುಬಿಡಿ. Record ಗೆ ಹಾಕಿಬಿಡುತ್ತಾರೆ. ಆದರೂ ಸಹ, ನಾನು ಒಂದು ಬಾರಿ ಅದನ್ನು reject ಮಾಡಿದ್ದೇನೆ. ಅದನ್ನು ಪುನಃ ಪರಿಶೀಲನೆ ಮಾಡುವಂತಹ ಪ್ರಶ್ನೆ ಉದ್ಭವವಾಗುವುದಿಲ್ಲ. Reject ಮಾಡಿದ್ದೇನೆ. ಅದರ ಬಗ್ಗೆ ಮಾತನಾಡಬೇಡಿ.

**ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ,

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಇದರ ಬಗ್ಗೆ ಮಾತನಾಡುವಂತಿಲ್ಲ. ಇದು ಯಾವುದು ಕಡತಕ್ಕೆ ಹೋಗಬಾರದು. ಇದರ ಬಗ್ಗೆ ಯಾರಿಗೂ **(ಗೊಂದಲ)**....

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಇದು ಯಾವುದು ಕಡತಕ್ಕೆ ಹೋಗಬಾರದು ಎಂದು ಸೂಚಿಸಿದ್ದರಿಂದ, ಸದನದ ಈ ಹಂತದಲ್ಲಿನ ನಡವಳಿಯನ್ನು ದಾಖಲಿಸಿರುವುದಿಲ್ಲ)**

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಏಕೆ Reject ಮಾಡಬಾರದು? ನಾನು ನೋಡಿಯೇ reject ಮಾಡಿದ್ದೇನೆ. ಅದು ನನ್ನ ಹಕ್ಕು.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು ತಮ್ಮ ಹಕ್ಕನ್ನು ಪ್ರಶ್ನೆ ಮಾಡುವುದಿಲ್ಲ.

**(ಗೊಂದಲ)**

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರರು)** ಮಾನ್ಯ ಸಭಾಪತಿಯವರೇ, ಅವರು ಯಾವ ಉದ್ದೇಶಕ್ಕೆ ...

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಲೀಂ ಅಹಮದ್‌ರವರೇ, ನಾನು ಅವರಿಗೆ Rule 62ರ ಅಡಿ ಹೇಳಿದ್ದೇನೆ. ನಾನು ಏನು ಮಾಡಬೇಕು ಹೇಳಿ? ಅವರಿಗೆ ತಿಳಿಯುತ್ತಿಲ್ಲ. ಎಲ್ಲರಿಗೂ ಕುಳಿತುಕೊಳ್ಳುವಂತೆ ಹೇಳಿದ್ದೇನೆ.

**(ಗೊಂದಲ)**

**ಶ್ರೀ ಎಲ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗ ಆಯಿತು. ಮಾನ್ಯ ವಿರೋಧ ಪಕ್ಷದ ನಾಯಕರು ತಮಗೆ ಅರ್ಜಿಯನ್ನು ಕೊಟ್ಟರೆ, it is the bounden duty of the Chair or any officer of the investigation or any other thing that an opportunity should be given. ತಾವು opportunity ಕೊಡದೆ ...

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಒಂದು ನಿಮಿಷ. ಯಾವುದಕ್ಕೆ opportunity ಕೊಡಬೇಕು?

**(ಗೊಂದಲ)**

**ಶ್ರೀ ಎಲ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಅವರು ಏನೆಂದು ಹೇಳಬೇಕಲ್ಲವೇ?

**(ಗೊಂದಲ)**

**Sri PRAKASH K. RATHOD:** When it is against the rules, you need not have to give an opportunity, Sir.

**(ಗೊಂದಲ)**

**(ಈ ಹಂತದಲ್ಲಿ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷ ಎರಡೂ ಪಕ್ಷಗಳ ಮಾನ್ಯ ಸದಸ್ಯರುಗಳು ಒಟ್ಟಿಗೆ ಎದ್ದುನಿಂತು ಮಾತನಾಡತೊಡಗಿದರು)**

**ಸಭಾಪತಿಯವರು:-** ತಾವುಗಳು ಎಲ್ಲವನ್ನು ಹೇಳಿದರೆ, ನಾನು ಹೇಗೆ ತಮಗೆ ಹೇಳಲಿ? ದಯವಿಟ್ಟು ಕುಳಿತುಕೊಳ್ಳಿ. ನೀವೇ ಎಲ್ಲಾ ಮಾಡಿಕೊಳ್ಳಿ. ಒಂದು ನಿಮಿಷ.

**(ಗೊಂದಲ)**

**Sri K.S. NAVEEN:** Sir, I am on a Point of Order.

**ಸಭಾಪತಿಯವರು:-** ಶ್ರೀ ಕೆ.ಎಸ್.ನವೀನ್‌ರವರೇ**,** ಇಲ್ಲ, Point of Order ಪ್ರಶ್ನೆ ಬರುವಂತಿಲ್ಲ. ಅದರ ಬಗ್ಗೆ ಚರ್ಚೆ ಇಲ್ಲ.

**(ಗೊಂದಲ)**

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, Rule Book ನಲ್ಲಿ ಇದೆ ಅಲ್ಲವೇ, ಅದನ್ನು ತಮ್ಮ ಗಮನಕ್ಕೆ ತರುತ್ತೇವೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಎಸ್.ಎಲ್.ಭೋಜೇಗೌಡರವರೇ, ನಾನು ಒಂದು ಮಾತನ್ನು ಹೇಳಿದ್ದೇನೆ. Record ಅನ್ನು ತೆಗೆದು ನೋಡಿ. ಇದು ಎಲ್ಲರ ಕಡೆಗೆ ಬಂದಿದೆ. ವಿಷಯ ಗೊತ್ತಿದೆ. ನಾನು ಓದಿ ಎಂದು ಹೇಳಿದೆ. ನಾನು ಅವರು ಓದಿ ಬಿಡುತ್ತಾರೆಂದು ತಿಳಿದುಕೊಂಡೆ. ಆಗ ಎಲ್ಲರ ಕಡೆಗೂ ಅದು ಬಂದಿದೆ. ಅದಕ್ಕೆ stop ಮಾಡಿ ಎಂದು ಹೇಳಿದೆ. ಆಗ ಅವರು ಮುಂದೆ ಓದುತ್ತಿದ್ದರು, ಆಗ ನಾನು ಮುಂದಿನದ್ದು record ಗೆ ಹೋಗಬಾರದು ಎಂದು ಹೇಳಿದೆ. **(ಗೊಂದಲ)** ಒಂದು ನಿಮಿಷ. ಈಗ ಆಯಿತು.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾನು ನಿನ್ನೆ ದಿವಸ ನಾನು ಕೊಟ್ಟಿದ್ದೆ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ...

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೇ, ತಾವು ಇಲ್ಲಿಗೆ ಬಂದು ಕುಳಿತುಕೊಂಡು ಮಾತನಾಡಿ.

**(ಗೊಂದಲ)**

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ಇದನ್ನು ಓದುವುದಕ್ಕೆ ಅವಕಾಶ ಮಾಡಿಕೊಡಿ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಕೆ.ಎಸ್.ನವೀನ್‌ರವರೇ, ಈಗ ಆ ಪ್ರಶ್ನೆ ಉದ್ಭವವಾಗುವುದಿಲ್ಲ.

**(ಗೊಂದಲ)**

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ಅದರಲ್ಲಿ ಏನಿದೆ ಎಂದು ಹೇಳುತ್ತೇವೆ ಅಷ್ಟೇ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಕೆ.ಎಸ್.ನವೀನ್‌ರವರೇ, ಅದರಲ್ಲಿ ಏನಿದೆ ಎಂದು ನಿಮಗಿಂತ ಚೆನ್ನಾಗಿ ನನಗೆ ಗೊತ್ತಿದೆ. **(ಗೊಂದಲ)** ಈಗ ಓದುವುದು ಬೇಡ. ನಾನು ಒಂದು ಬಾರಿ ತೀರ್ಮಾನ ಕೊಟ್ಟಿದ್ದೇನೆ. ನಾನು ಅದನ್ನು ಓದಿ study ಮಾಡಿ ತೀರ್ಮಾನ ಕೊಟ್ಟಿದ್ದೇನೆ. **(ಗೊಂದಲ)** ಇದರ ಬಗ್ಗೆ ಮಾತನಾಡಬೇಡಿ. ಬೇರೆ ಮಾತನಾಡಿ. ಬೇರೆ ವಿಷಯ ಇದ್ದರೆ, ಹೇಳಿ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಾವು ಮುಡಾದ ಬಗ್ಗೆ ಪ್ರಸ್ತಾಪ ಮಾಡಬೇಕು. ಮತ್ತೆ ಪರಿಶೀಲನೆ ಮಾಡಿ ನಮಗೆ ಅವಕಾಶ ಕೊಡಬೇಕು, ಏಕೆಂದರೆ,

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೇ, ನಾನು ಅವಕಾಶ ಕೊಡುವುದಿಲ್ಲ. ನಾನು reject ಮಾಡಿದ್ದೇನೆ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಅವರು ದಬ್ಬಾಳಿಕೆ ಮಾಡುತ್ತಿದ್ದಾರೆ. ಈ ಬಿಜೆಪಿಯವರದ್ದು ಇದೇ ಕೆಲಸ. ಸತ್ಯಕ್ಕೆ ದೂರವಾದುದನ್ನು ಹೇಳುವುದು, ಜನರನ್ನು ದಾರಿ ತಪ್ಪಿಸುವುದು ಇದೇ ಕೆಲಸ ಅವರದ್ದು. ಅವರು ಸತ್ಯಕ್ಕೆ ದೂರವಾದುದನ್ನು ಹೇಳಿ ಹೇಳಿ ಜನರನ್ನು ದಾರಿ ತಪ್ಪಿಸುತ್ತಿದ್ದಾರೆ. ಅವರು ಪೀಠಕ್ಕೆ ದಬ್ಬಾಳಿಕೆ ಮಾಡುತ್ತಾರೆಯೇ? ಅವರು ಮಾಡಲೇಬೇಕೆಂದು ಹೇಳುತ್ತಾರೆ. ರೂಲಿಂಗ್ ಅದ ಮೇಲೆ ಅವರು ದಬ್ಬಾಳಿಕೆ ಮಾಡುತ್ತಾರೆ, ಅವರಿಗೆ ಪೀಠದ ಮೇಲೆ ಗೌರವ ಇಲ್ಲ. ಅವರು ಇದೇ ಮಾಡುವ ಕೆಲಸ. ಅವರದ್ದು ಬೇರೆ ಏನಿಲ್ಲ, ... **(ಗೊಂದಲ)** ಇಡೀ ದೇಶದಲ್ಲಿ dictatorship ಇದೇ ರೀತಿ ನಡೆದಿದೆ, ಸದನದ ಬಗ್ಗೆ ಅವರಿಗೆ ಗೌರವ ಇದೆಯೇ?

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಈ dictatorship ...

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:-** ಇದೇ ಅವರು ಮಾಡುವ ಕೆಲಸ. Dictatorship ಮಾಡುವುದು **(ಗೊಂದಲ)** ಸತ್ಯಕ್ಕೆ ದೂರವಾದುದನ್ನು ಹೇಳುವುದು ಇದೇ ಕೆಲಸ ಅವರದ್ದು ಬೇರೆ ಏನಿಲ್ಲ. **(ಗೊಂದಲ)** ನೀವು ಅದನ್ನು pursue ಮಾಡುವುದಕ್ಕೆ ಹೋಗಬೇಡಿ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಾವು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ನಮಗೆ ಅವಕಾಶ ಕೊಡಬೇಕು.

**(ಗೊಂದಲ)**

**(ಈ ಹಂತದಲ್ಲಿ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷ ಎರಡೂ ಪಕ್ಷಗಳ ಮಾನ್ಯ ಸದಸ್ಯರು ಒಟ್ಟಿಗೆ ಎದ್ದುನಿಂತು ಮಾತನಾಡತೊಡಗಿದರು)**

**ಸಭಾಪತಿಯವರು:-** ಈಗ ಗಮನ ಸೆಳೆಯುವ ಸೂಚನೆ, ಶ್ರೀ ಯು.ಬಿ.ವೆಂಕಟೇಶ್‌ರವರೇ, ತಾವು ಮಾತನಾಡಿ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ತಾವು ಇದನ್ನು ಪರಿಗಣಿಸಬೇಕಾಗಿತ್ತು. ಏಕೆಂದರೆ, ಈಗ ತಾವು ಒಂದು ಮಾತನ್ನು ಹೇಳಿದ್ದೀರಿ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ಕೊಟ್ಟಿದಕ್ಕಾಗಿ ತಮಗೆ ಧನ್ಯವಾದಗಳು.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಕೊಟ್ಟಿರುವಂತಹ ವಿಷಯ ಎಲ್ಲರಿಗೂ ಗೊತ್ತಿದೆ ಎಂದು ಹೇಳಿದ್ದೀರಿ. ಆದರೆ, ಇದು ಇತ್ಯಾರ್ಥವಾಗಲಿಲ್ಲ.

**(ಗೊಂದಲ)**

**ಸಭಾಪತಿಯವರು:-** ಶ್ರೀ ಯು.ಬಿ.ವೆಂಕಟೇಶ್‌ರವರೇ, ಒಂದು ನಿಮಿಷ ಇರಿ. ಉಳಿದವರು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ತಾವು ನನ್ನನ್ನು ಕರೆದಂತೆ ಆಯಿತು.

**(ಗೊಂದಲ)**

**ಸಭಾಪತಿಯವರು:-** ಶ್ರೀ ಯು.ಬಿ.ವೆಂಕಟೇಶ್‌ರವರೇ, ಒಂದು ನಿಮಿಷ. ತಮ್ಮನ್ನು ಕರೆದಿದ್ದೇನೆ. **(ಗೊಂದಲ)** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ತಮಗೆ ಇನ್ನೊಂದು ಬಾರಿ ಹೇಳುತ್ತೇನೆ. ನಾನು ಅದು ಎಲ್ಲರ ಕಡೆ ಇದೆ ಎಂದು ಹೇಳಿದ್ದೇನೆ. ಅದು ಗೊತ್ತಿರುವ ವಿಷಯ, ತಾವು ಅದನ್ನು ಓದುತ್ತಿದ್ದೀರಿ, ಆಗ ತಾವು ಅದರ ಪೂರ್ತಿ ಭಾಗವನ್ನು ಓದುವುದಕ್ಕೆ ಹೊರಟ್ಟಿದ್ದೀರಿ, ಆಗ ನಾನು record ಗೆ ಹೋಗಬಾರದು ಎಂದು ಹೇಳಿದೆ. ಈಗ ತಾವು ಎಲ್ಲ record ಗೆ ಹೋಗಲಿ ಎಂದರೆ, ಇದನ್ನು ಕೊಟ್ಟರೆ record ಗೆ ಹಾಕಿಸುತ್ತೇನೆ. ಅಲ್ಲಿಗೆ record ದು ಮುಗಿಯಿತು.

(ಮುಂದು)

(678) 24-07-2024 (3.40) ವೈಎಲ್-ಎಕೆ (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು (ಮುಂದು):**

ಅದನ್ನು ನೋಡಿ ನಿಯಮ 62 ರ ಪ್ರಕಾರ reject ಮಾಡಿದ್ದೀನಿ ಎಂದು ಹೇಳಿದ್ದೇನೆ. ಏಕೆಂದರೆ, ಸಾಮಾನ್ಯವಾಗಿರುವಂಥದು. ಅದನ್ನು reject ಮಾಡಿದ್ದೀನಿ ಎಂದು ಹೇಳಿದ್ದೇನೆ. ತಾವು ಯಾವುದಕ್ಕೂ reconsider ಮಾಡಿ ಎಂದು ಕೇಳಿದಿರಿ. ಒಂದು ಸಲ ತೀರ್ಮಾನ ಮಾಡಿ, ತಿರಸ್ಕರಿಸಿದ ಮೇಲೆ ಮತ್ತೆ ಅದರ ಮೇಲೆ ಮಾತನಾಡುವಂಥ ಅವಶ್ಯಕತೆ ಇರುವುದಿಲ್ಲ.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹಾಗಾದರೆ ಯಾವ ಸೆಕ್ಷನ್, ಯಾವ ನಿಯಮದಲ್ಲಿ ಅವಕಾಶ ಮಾಡಿಕೊಡಲಾಗುತ್ತದೆ?

**(ಗೊಂದಲ)**

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಅವರ ಪತ್ನಿಯವರ ಹೆಸರಿನಲ್ಲಿ 14 ನಿವೇಶನಗಳನ್ನು ಅಕ್ರಮವಾಗಿ ಮಾಡಿಕೊಟ್ಟಿದಾರೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಪಾಯಿಂಟ್ ಆಫ್ ಆರ್ಡರ್.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಯಾವ ಸೆಕ್ಷನ್, ನಿಯಮದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೀರಿ?

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಿ.ಟಿ.ರವಿರವರು ಬಾಯಿಗೆ ಬಂದ ಹಾಗೆ ಮಾತನಾಡುತ್ತಾರೆ.

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಇದು ಅನ್ಯಾಯ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಸಭಾಪತಿಯವರೇ, ಆರೂವರೆ ಸಾವಿರ ಕೋಟಿ **(ಗೊಂದಲ)** ಮಾನ್ಯ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಮತ್ತು ಕೇಂದ್ರದ ಗೃಹ ಸಚಿವರಾದ ಶ್ರೀ ಅಮಿತ್ ಶಾ ರವರು ಇಡೀ ದೇಶವನ್ನೇ ಲೂಟಿ ಮಾಡಿದ್ದಾರೆ. **(ಗೊಂದಲ)** ಅವರು ನಮ್ಮ ಮೇಲೆ ಆಪಾದನೆ ಮಾಡುತ್ತಿದ್ದಾರೆಯೇ? ನಾವು ಅವರ ಮೇಲೆ ಹೇಳುತ್ತೇವೆ. **(ಗೊಂದಲ)** ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರ ಹೆಸರನ್ನು ಪ್ರಸ್ತಾಪ ಮಾಡಿರುವುದರಿಂದ ಅವರು ಹೇಳಿದ ವಿಚಾರಗಳು ಯಾವುದು ದಯವಿಟ್ಟು ರೆಕಾರ್ಡ್‌ಗೆ ಹೋಗಬಾರದು. **(ಗೊಂದಲ)** ಅವರು ನಮಗೆ ಪಾಠ ಹೇಳುತ್ತಾರೆಯೇ?

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ದೊಡ್ಡ ದೊಡ್ಡದಾಗಿ ದಂಧೆಯಾಗಿದೆ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಪಾಯಿಂಟ್ ಆಫ್ ಆರ್ಡರ್ ಮೇಲೆ ಮಾತನಾಡಲು ಅವಕಾಶ ಮಾಡಿಕೊಡಬೇಕು.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಸಭಾಪತಿಯವರೇ, ಅವರೇ ಆರೂವರೆ ಸಾವಿರ ಕೋಟಿ ರೂಪಾಯಿಗಳನ್ನು ಕಳ್ಳತನ ಮಾಡಿರುವುದು.

**(ಗೊಂದಲ)**

**ಸಭಾಪತಿಯವರು:–** ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಪಾಯಿಂಟ್ ಆಫ್ ಆರ್ಡರ್ ಮೇಲೆ ನಮಗೆ ಮಾತನಾಡಲು ಅವಕಾಶ ಮಾಡಿಕೊಡಬೇಕು.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಕೆ.ಎಸ್.ನವೀನ್‌ರವರೇ, ನಿಮಗಿಂತ ಮೊದಲೇ ನಾನು ಹುಟ್ಟಿದ್ದು, ನಾನು ಎಂ.ಎಲ್.ಸಿ. ಆದಾಗ ನೀನು ಇನ್ನೂ ಹುಟ್ಟಿಯೇ ಇರಲಿಲ್ಲ. ನಿಮಗಿಂತ ಎಲ್ಲಾ ವಿಚಾರದಲ್ಲಿ ಮುಂದೆ ಇದ್ದೀನಿ, ಕುಳಿತುಕೊಳ್ಳಿ. ಒಂದು ನಿಮಿಷ ನಾನು ಹೇಳುವುದನ್ನು ಕೇಳಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಪಾಯಿಂಟ್ ಆಫ್ ಆರ್ಡರ್.

**ಸಭಾಪತಿಯವರು:-** ನಾನು ಹೇಳುವುದೇನೆಂದರೆ, ಯಾವ ನಿಯಮದ ಅಡಿಯಲ್ಲಿ ಮುಡಾ ಹಗರಣದ ಬಗ್ಗೆ ಪ್ರಸ್ತಾಪ ಮಾಡಲು ಅವಕಾಶ ಕೊಡುತ್ತೀರಿ ಎಂದು ಕೇಳಿದ್ದೀರಿ. ಅದಕ್ಕೆ ನಾನು ತಿರಸ್ಕರಿಸಿದ ಮೇಲೆ ಮತ್ತೆ ಆ ವಿಚಾರದ ಮೇಲೆ ಚರ್ಚೆ ಮಾಡಲು ಅವಕಾಶ ಕೊಡುವಂಥ ಪ್ರಶ್ನೆ ಉದ್ಭವಿಸುವುದಿಲ್ಲ. ಹಾಗಾಗಿ, ಆ ವಿಚಾರ ಅಲ್ಲಿಗೆ ಮುಗಿದು ಹೋಗಿತ್ತು. ಮುಂದಿನ ವಿಚಾರ ಬೇರೆ ಏನಾದರೂ ಇದ್ದರೆ ಹೇಳಿ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ತಾವು ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರಿಗೆ present ಮಾಡಲು ಬಿಡಲಿಲ್ಲ.

**ಸಭಾಪತಿಯವರು:-** ಅವರಿಗೆ present ಮಾಡಲು ಬಿಟ್ಟಿದ್ದೇನೆ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ತಮ್ಮ ಪೀಠಕ್ಕೆ ಗೌರವ ಕೊಡುತ್ತಾ, ಮಾನ್ಯ ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿಯವರು ಮಾತನಾಡಿದರೆ, ಅದನ್ನು ರೆಕಾರ್ಡ್ ಹೋಗುವುದು ಬೇಡ ಎಂದು ಹೇಳಿದ್ದೀರಿ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಭಾಷಣ ಮಾಡಬೇಡಿ, ಓದಿ ಎಂದು ಹೇಳಿದ್ದೀರಿ. ಅದರಂತೆ ಮಾನ್ಯ ವಿರೋಧ ಪಕ್ಷದ ನಾಯಕರು ಓದಲು ಪ್ರಾರಂಭ ಮಾಡಿದರು. ಓದಲು ಪ್ರಾರಂಭ ಮಾಡುತ್ತಿದ್ದಾಗಲೇ,...

**ಸಭಾಪತಿಯವರು:-** ಮಾನ್ಯ ಸಿ.ಟಿ.ರವಿರವರೇ, ನಾನು ಏನೆಂದು ಹೇಳಿದ್ದೆನು ಎಂಬುದನ್ನು ಕೇಳಿ. ನಾನು ಏನೆಂದು ಹೇಳಿದ್ದೇನೆ ರೆಕಾರ್ಡ್ ತೆಗೆದು ನೋಡಿ. ಅದು read and recorded ಎಂದು ಹೇಳಲಾಗಿದೆ. ಸಾಕು ಎಂದು ಹೇಳಿದೆ. ಓದಿದರೆ ಅದು ರೆಕಾರ್ಡ್‌ಗೆ ಹೋಗಬಾರದು ಎಂದು ಹೇಳಿದ್ದೇನೆ. ಈಗಾಗಲೇ ಒಪ್ಪಿಗೆ ನೀಡಿದ್ದೇನೆ, ತೀರ್ಮಾನ ಕೂಡಾ ಮಾಡಿ ಆಗಿದೆ. ಅದರ ಮೇಲೆ ಮಾತನಾಡಿದರೆ, ನಾನು ಯಾವುದಕ್ಕೂ allow ಮಾಡುವುದಿಲ್ಲ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಪೀಠಕ್ಕೆ ವಿನಂತಿಸುವುದೇನೆಂದರೆ,...

**ಸಭಾಪತಿಯವರು:-** ಒಂದು ನಿಮಿಷ, ನಾನು ಹೇಳುವುದನ್ನು ಕೇಳಿ. ಈಗಾಗಲೇ ನಾನು ತೀರ್ಪು ಕೊಟ್ಟಿದ್ದೇನೆ. ಅದರ ಮುಂದಿನ ವಿಚಾರ ಏನಾದರೂ ಇದ್ದರೆ ಕೊಡಿ. ನಾನು ನೋಡುತ್ತೇನೆ. ಅದರ ಬಗ್ಗೆ ಮಾತನಾಡುವಂತಿಲ್ಲ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಈ ಸದನದ ಇತಿಹಾಸದಲ್ಲಿ ಈ ರೀತಿ ತೀರ್ಪು ಕೊಟ್ಟಿರುವುದನ್ನು ಪುನರ್ ಪರಿಶೀಲಿಸಿರುವಂಥ ಉದಾಹರಣೆಗಳು ಮತ್ತು ಬೇರೆ ಸ್ವರೂಪದಲ್ಲಿ ಕನ್ವರ್ಟ್ ಮಾಡಿಕೊಟ್ಟಿರುವಂಥ ಉದಾಹರಣೆಗಳಿವೆ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಸದನದ ದಾರಿ ತಪ್ಪಿಸುವಂಥ ಕೆಲಸ ಮಾಡುತ್ತಾರೆ. ಮಾನ್ಯ ಸಿ.ಟಿ.ರವಿರವರು ಇದೇ ರೀತಿಯ ಕೆಲಸವನ್ನು ಮಾಡುತ್ತಾರೆ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ನಾವು ಪೀಠಕ್ಕೆ ವಿನಂತಿಸುವುದೇನೆಂದರೆ, ಅಕ್ರಮದ ಸೂತ್ರದಾರರು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರೇ ಇರುವ ಕಾರಣಕೋಸ್ಕರ ನಾವು ಇದನ್ನು

ತಾವು ಇದನ್ನು ಪುನರ್ ಪರಿಶೀಲನೆ ಮಾಡಿ ಎಂದು ಕೇಳುತ್ತಿದ್ದೇವೆ. ಏಕೆಂದರೆ, ಇದು ಸಾರ್ವಜನಿಕದ ಮಹತ್ವ ವಿಚಾರ ಮತ್ತು ಈ ಸದನದ ಘನತೆ ಉಳಿಯಬೇಕು.

**(ಗೊಂದಲ)**

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ನಿಮ್ಮ ಸಹಾಯಕ್ಕಾಗಿ ಒಂದು ವಿಚಾರವನ್ನು ಹೇಳುತ್ತಿದ್ದೇನೆ. ನಿಮಗೂ ಗೊತ್ತು, ನಮಗೂ ಗೊತ್ತು. ಈ ನಿಲುವಳಿ ಸೂಚನೆಯನ್ನು ಏನು ಮಂಡಿಸಿದ್ದಾರೆ **(ಗೊಂದಲ)** ಅವಕಾಶ ಕೊಡಬೇಕೆಂದು... (ಗೊಂದಲ)

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ನಿರ್ದೋಷಿ ಎಂದು ಸಾಬೀತಾಗಬೇಕು.

**ಸಭಾಪತಿಯವರು:–** ತಾವು ನನಗೆ ಕೊಟ್ಟಿಯೇ ಇಲ್ಲ ಅಲ್ಲವೇ?

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಸಭಾಪತಿಯವರೇ, ಮಾನ್ಯ ಸಿ.ಟಿ.ರವಿರವರು ಹೇಳುತ್ತಿರುವುದು ರೆಕಾರ್ಡ್‌ಗೆ ಹೋಗಬಾರದು. ಮತ್ತೆ ಮತ್ತೆ ಮಾನ್ಯ ಮುಖ್ಯಮಂತ್ರಿಗಳ ಹೆಸರನ್ನೇ ಹೇಳುತ್ತಿದ್ದಾರೆ. **(ಗೊಂದಲ)** ಇವರದು ಇದೇ ಕೆಲಸವಾಗಿದೆ. ಎಲ್ಲಿಗೆ ಬಂದರೂ ಮತ್ತೆ ಅಲ್ಲಿಗೆ ಹೋಗುವುದು. **(ಗೊಂದಲ)** ದಾರಿ ತಪ್ಪಿಸುವಂಥ ಕೆಲಸ ಮಾಡುತ್ತಾರೆ. **(ಗೊಂದಲ)** ಸದನದ ದಾರಿ ತಪ್ಪಿಸಬೇಕು **(ಗೊಂದಲ)** ಜನರ ದಾರಿ ತಪ್ಪಿಸಬೇಕು. **(ಗೊಂದಲ)** ಅವರದು ಲೂಟಿ ಮಾಡುವಂಥ ಕೆಲಸ.

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ನಮ್ಮ ವಿನಂತಿಯೇನೆಂದರೆ, ಆ ಕಳಂಕವು ಆಡಳಿತ ಪಕ್ಷಗಳಿಗೆ ಬರಬಾರದು ಎನ್ನುವ ಕಾರಣಕ್ಕೆ ಚರ್ಚೆಗೆ ಅವಕಾಶ ಕೊಡಿ. **(ಗೊಂದಲ)** ನಾವು ಅವರ ಮೇಲೆ ಆಪಾದನೆ ಮಾಡಿದರೆ, ಅವರು ದಾಖಲೆ ಕೊಟ್ಟು, ಈ ಸದನದ ಮೂಲಕ ನಿರ್ದೋಷಿ ಎಂದು ಸಾಬೀತುಪಡಿಸಲು ಈ ಸದನಕ್ಕಿಂತ ದೊಡ್ಡ ವೇದಿಕೆ ಇಲ್ಲ. **(ಗೊಂದಲ)** ಈ ಸದನದ ಮೂಲಕ ಅವರು ನಿರಪರಾಧಿಗಳು ಎಂದು ಹೊರಗೆ ಬರಬೇಕು. ನಮ್ಮದು ಆಪಾದನೆ ಮಾತ್ರ.

**(ಗೊಂದಲ)**

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಅವರು ಲೂಟಿ ಮಾಡಿರುವುದು.

**(ಗೊಂದಲ)**

**ಸಭಾಪತಿಯವರು:–** ಒಂದು ನಿಮಿಷ ಸ್ವಲ್ಪ ನಾನು ಹೇಳುವುದನ್ನು ಕೇಳಿ. ಈ ರೀತಿ ಮಾಡಿದರೆ ನಾನು ಹೇಗೆ ಸದನ ನಡೆಸಬೇಕು.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ.

**ಸಭಾಪತಿಯವರು:-** ಆಯಿತು ಅದೇನು ಹೇಳಿ.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ನಾವು ಕೂಡಾ ಪಾಯಿಂಟ್ ಆಫ್ ಆರ್ಡರ್ ಮೇಲೆ ಅವಕಾಶ ಕೇಳಿದ್ದೆವು.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಕೆ.ಎಸ್.ನವೀನ್‌ರವರೇ, ನಾನು ಹೇಳಿದ ಮೇಲೆ ಮಾತನಾಡಿ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ತಾವು ಈಗಾಗಲೇ ಮಾನ್ಯ ಬಿ.ಕೆ.ಹರಿಪ್ರಸಾದ್‌ರವರಿಗೆ ಪಾಯಿಂಟ್ ಆಫ್ ಆರ್ಡರ್ ಬಗ್ಗೆ ರೂಲಿಂಗ್ ಕೊಟ್ಟಿದ್ದೀರಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಎಸ್.ನವೀನ್‌ರವರು ಸಹ ಪಾಯಿಂಟ್ ಆಫ್ ಆರ್ಡರ್ ಬಗ್ಗೆ ಹೇಳಲಿ.

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷ.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಎಸ್.ನವೀನ್‌ರವರು ಮೊದಲೇ ಪಾಯಿಂಟ್ ಆಫ್ ಆರ್ಡರ್ ಮೇಲೆ ಮಾತನಾಡಲು ಅವಕಾಶ ಕೇಳಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಆಗಲಿ. ಮೊದಲು ನಾನು ಹೇಳುವುದನ್ನು ಕೇಳಿ. ಎಲ್ಲರೂ ಕುಳಿತುಕೊಳ್ಳಿ. ಈ ವಿಷಯದ ಮೇಲೆ ಕುರಿತು ಎರಡೂ ಕಡೆಯಿಂದ ಪಾಯಿಂಟ್ ಆಫ್ ಆರ್ಡರ್ ರೂಲಿಂಗ್ ಅನ್ನು consider ಮಾಡುವಂತಿಲ್ಲ. ಈ ವಿಷಯ ಬಿಟ್ಟು, ಬೇರೆ ಯಾವುದಾದರೂ ಇದ್ದರೆ ಹೇಳಿ. ಅದು ಮುಗಿದು ಹೋದ ವಿಚಾರ.

**(ಗೊಂದಲ)**

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ಆ ವಿಚಾರವಾಗಿಲ್ಲ. ರೂಲ್ ಬಗ್ಗೆ ಏನಿದೆ, ಅದನ್ನು ಓದಿ ಹೇಳುತ್ತೇವೆ.

**ಸಭಾಪತಿಯವರು:-** ರೂಲ್ ಬಗ್ಗೆ ನನಗೆ ಏನು ಕಳುಹಿಸುತ್ತೀರಿ?

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಆ ವಿಷಯದ ಮೇಲೆ ಮಾತನಾಡಲು ಕೇಳಿಲ್ಲ. ರೂಲಿಂಗ್ ಬಗ್ಗೆ ಮಾತ್ರ ಓದಿ ಹೇಳಲು ಪಾಯಿಂಟ್ ಆಫ್ ಆರ್ಡರ್ ಹೇಳಲು ಅವಕಾಶ ಕೇಳುತ್ತಿರುವುದು.

**ಸಭಾಪತಿಯವರು:-** ಆಯಿತು. ಅದೇನು ಎಂಬುದನ್ನು ಹೇಳಿ.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ಪುಸ್ತಕದ ಪುಟ ಸಂಖ್ಯೆ 47 ರಲ್ಲಿ ನಿಯಮ 63 ರಲ್ಲಿ ತಿಳಿಸಿರುವಂತೆ "ನಿಲುವಳಿ ಸೂಚನೆಯನ್ನು ತರಲು ನೀಡಲಾದ ಅನುಮತಿಗೆ ಆಕ್ಷೇಪಣೆಗಳು ಬಂದಲ್ಲಿ ಸಭಾಪತಿಯವರು ಆ ನಿಲುವಳಿ ಸೂಚನೆಯು ಸಭೆಯಲ್ಲಿ ಬರಬೇಕೆಂದು ಬಯಸುವ ಸದಸ್ಯರುಗಳು ತಮ್ಮ ಸ್ಥಾನಗಳಲ್ಲಿ ಎದ್ದು ನಿಲ್ಲುವಂತೆ ವಿನಂತಿಸಿಕೊಳ್ಳಬೇಕು, ಹತ್ತು ಸದಸ್ಯರುಗಳಿಗೆ ಕಡಿಮೆ ಇಲ್ಲದಷ್ಟು ಸದಸ್ಯರು ಎದ್ದು ನಿಂತರೆ, ನಿಲುವಳಿ ಸೂಚನೆಗೆ ಅನುಮತಿ ಅನುಮತಿ ಸಿಕ್ಕಿದೆ ಎಂದು ಸದನಕ್ಕೆ ತಿಳಿಸಬೇಕು. ಹತ್ತು ಸದಸ್ಯರುಗಳಿಗಿಂತ ಕಡಿಮೆ ಸದಸ್ಯರು ಎದ್ದು ನಿಂತರೆ ನಿಲುವಳಿ ಸೂಚನೆಯನ್ನು ತರಲು ಆ ಸದಸ್ಯನಿಗೆ ಸದನವು ಅನುಮತಿ ನೀಡಿಲ್ಲವೆಂಬುದಾಗಿ ಸಭಾಪತಿಯವರು ತಿಳಿಸತಕ್ಕದು." ಎಂಬುದನ್ನು ರೂಲ್ ಬುಕ್‌ನಲ್ಲಿರುವುದನ್ನು ತಮ್ಮ ಗಮನಕ್ಕೆ ತರಲು ಬಯಸಿದ್ದೇನು.

**ಡಾ॥ ಯತೀಂದ್ರ ಎಸ್. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ಪುಸ್ತಕದ 64 ರಲ್ಲಿ ಏನಿದೆ ಎಂಬುದನ್ನು ನೋಡಲಿ.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ನಿಲುವಳಿ ಸೂಚನೆಯನ್ನು ಮಂಡಿಸುತ್ತಿದ್ದಾಗಲೇ ತಿರಸ್ಕರಿಸಲಾಗಿದೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಪುಟ ಸಂಖ್ಯೆ: 46 ರಲ್ಲಿರುವ (63) ನಿಲುವಳಿ ಸೂಚನೆ ತರಲು ಅನುಮತಿ ಕೇಳುವುದು; ಅದರ 2ನೇ ಭಾಗದಲ್ಲಿ "ಪರಂತು, ಸಭಾಪತಿಯವರು 59ನೇ ನಿಯಮದ ಮೇರೆಗೆ ತನ್ನ ಒಪ್ಪಿಗೆ ನೀಡಲು ನಿರಾಕರಿಸಿದರೆ ಅಥವಾ ಚರ್ಚಿಸಲು ಉದ್ದೇಶಿಸಿರುವ ವಿಷಯವು ಕ್ರಮಬದ್ಧವಾಗಿಲ್ಲವೆಂದು ಅಭಿಪ್ರಾಯಪಟ್ಟರೆ ತಾನು ಅವಶ್ಯವೆಂದು ಭಾವಿಸಿದರೆ ನಿಲುವಳಿ ಸೂಚನೆಯನ್ನು ಓದಿ ಹೇಳಬಹುದು ಮತ್ತು ತಾನು ನಿಲುವಳಿ ಸೂಚನೆಯನ್ನು ತರಲು ಒಪ್ಪಿಗೆಯನ್ನು ನಿರಾಕರಿಸುವುದರ ಹಾಗೂ ನಿಲುವಳಿ ಸೂಚನೆ ಕ್ರಮಬದ್ಧವಾಗಿಲ್ಲವೆಂದು ಅಭಿಪ್ರಾಯಪಟ್ಟ ಕಾರಣಗಳನ್ನು ತಿಳಿಸಬಹುದು;" ಅದರಂತೆ ಈಗಾಗಲೇ ಮಾನ್ಯ ಸಭಾಪತಿಯವರು ಓದಿ table ಮೇಲೆ ಇಟ್ಟಿದ್ದಾರೆ. ಅಲ್ಲಿಗೆ ಆ ವಿಚಾರ ಮುಗಿಯಿತು.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರು ಎಲ್ಲಿ ಓದಿದ್ದಾರೆ? ಓದಿಯೇ ಇಲ್ಲ. ಓದುವುದಕ್ಕೆ ಬಿಟ್ಟಿಲ್ಲ.

**(ಗೊಂದಲ)**

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ತೀರ್ಮಾನ ಕೊಟ್ಟಾಗಿದೆ. ನಿಮಗೆ ಮಾನ್ಯ ಕೆ.ಎಸ್.ನವೀನ್‌ರವರು ಪ್ರಶ್ನೆ ಮಾಡುತ್ತಾರೆಯೇ?

**(ಗೊಂದಲ)**

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ಮಂಡನೆಯೇ ಆಗಿಲ್ಲ. ಆಡಳಿತ ಪಕ್ಷದವರಿಗೆ ಬೇಕಾದಂತೆ ಬೇಕಾಬಿಟ್ಟಿಯಾಗಿ ಮಾಡಲು ಆಗುವುದಿಲ್ಲ.

**(ಗೊಂದಲ)**

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ಏನು ಮಾಡಬೇಕೆಂದು ತಮಗೆ ಗೊತ್ತಿಲ್ಲವೇ? **(ಗೊಂದಲ)** ನಿಮಗೆ ಬುದ್ಧಿ ಹೇಳುತ್ತಾರೆಯೇ? **(ಗೊಂದಲ)** ಮಾನ್ಯ ಕೆ.ಎಸ್.ನವೀನ್‌ರವರೇ ಮಾನ್ಯ ಸಭಾಪತಿಯವರಿಗೆ ಏನು ಮಾಡಬೇಕೆಂಬುದು ಗೊತ್ತಿಲ್ಲವೇ? **(ಗೊಂದಲ)** ಅವರಿಗೆ ಪ್ರಶ್ನೆ ಮಾಡಲು ಹೋಗಬೇಡಿ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಚಾರವನ್ನು ಈಗಾಗಲೇ ತಿರಸ್ಕರಿಸಲಾಗಿದೆ.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ತಮಗೆ ಮಂಡನೆ ಮಾಡುವುದಕ್ಕೆ ಬಿಡಲಿಲ್ಲ.

**(ಗೊಂದಲ)**

**ಶ್ರೀ ಸಲೀಂ ಅಹಮದ್:-** ಮಾನ್ಯ ಕೆ.ಎಸ್.ನವೀನ್‌ರವರೇ, don't question the Chair.

**(ಗೊಂದಲ)**

**ಸಭಾಪತಿಯವರು:-** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಆಪಾದನೆ ಕಾಂಗ್ರೆಸ್ ಪಕ್ಷದ ಮೇಲೆ ಬಂದಿರುವುದು.

**(ಗೊಂದಲ)**

**ಸಭಾಪತಿಯವರು:-** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಬಿ.ಜೆ.ಪಿ.ಯವರು ಸುಮ್ಮನೆ ಇದ್ದರೂ ನಾವು ಸುಮ್ಮನೆ ಇರುವುದಿಲ್ಲ ಎಂದು ಹೇಳಿದ್ದಾರೆ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಆ ವಿಚಾರದ ಬಗ್ಗೆ ಪ್ರಶ್ನೆ ಇಲ್ಲ.

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಪುಟ ಸಂಖ್ಯೆ 62 ಅನ್ನು ತೆಗೆದು ನೋಡಿ.

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷ ನನ್ನ ಮಾತನ್ನು ಕೇಳಿ. ಈ ವಿಷಯದ ಬಗ್ಗೆ ನಾನು ಯಾರ ಮಾತನ್ನು ಕೇಳುವುದಿಲ್ಲ.

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನಾನು ತಮ್ಮ ಸಹಾಯಕ್ಕೆ ಹೇಳುತ್ತಿದ್ದೇನೆ. ನಿಯಮ 62 ರಲ್ಲಿ ಯಾವುದೇ ಆಯೋಗವನ್ನು ರಚನೆ ಮಾಡಿದರೆ ಅವಕಾಶವನ್ನು ನಿರಾಕರಿಸತಕ್ಕದು.

**(ಗೊಂದಲ)**

**ಸಭಾಪತಿಯವರು:-** ಈಗಾಗಲೇ ನಾನು ಓದಿ ಹೇಳಿದ್ದೇನೆ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಅದು ಕ್ರಮಬದ್ಧವಾಗಿಲ್ಲವೆಂದರೆ ಮಾತ್ರ ಅವಕಾಶ ಇದೆ.

**(ಗೊಂದಲ)**

**ಸಭಾಪತಿಯವರು:-** ಯಾವುದು ಕಡತಕ್ಕೆ ಹೋಗಬಾರದು. ಯಾರು ಏನೇ ಮಾತನಾಡಲಿ, ಅದ್ಯಾವುದೂ ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶದಂತೆ ಈ ಹಂತದಲ್ಲಿನ ಸದನದ ನಡವಳಿಯನ್ನು ದಾಖಲಿಸಿರುವುದಿಲ್ಲ)**

**ಸಭಾಪತಿಯವರು:-** ಈಗಾಗಲೇ ನಾನು ಹೇಳಿದಂತೆ whether it is right or wrong ಎಂಬುದು ನನಗೆ ಗೊತ್ತಿಲ್ಲ.

(ಮುಂದು)

(679) 24.07.2024/3.50/ಎಸ್‌ಕೆ-ವಿಕೆ (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು (ಮುಂದು):-**

Whether it is right or wrong, ಒಂದು ಬಾರಿ decision ನೀಡಿದ ಮೇಲೆ ಅದು final decision. ನಾನು ಹೇಳುವುದನ್ನು ಒಂದು ನಿಮಿಷ ಕೇಳಿ. ಮಾನ್ಯ ಸಿ.ಟಿ. ರವಿಯವರೇ, ತಾವು ಏನು ಹೇಳುತ್ತಿದ್ದಿರಲ್ಲ, ಅದನ್ನು ತಾವು ಬರೆದುಕೊಡಿ. ಅದರ ಬಗ್ಗೆ ನಾನು ವಿಚಾರ ಮಾಡುತ್ತೇನೆ. ಇದರ ಬಗ್ಗೆ ಮಾತನಾಡುವಂತಹ ಅವಶ್ಯಕತೆ ಇಲ್ಲ.

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದನ್ನು ಪೀಠ ಪರಿಶೀಲನೆ ಮಾಡಬೇಕೆಂದು ನಾವು ತಮಗೆ ನಿವೇದನೆ ಮಾಡಿಕೊಳ್ಳುತ್ತಿದ್ದೇವೆ.

**ಸಭಾಪತಿಯವರು:-** ಮಾನ್ಯ ರವಿಯವರೇ, ಆಯಿತು. ತಾವು ಈಗ ಕುಳಿತುಕೊಳ್ಳಿ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ಈ ಗಂಭೀರವಾದ ವಿಷಯದ ಕುರಿತು ಚರ್ಚೆಗೆ ಅವಕಾಶ ಕೊಡದೇ ಇದ್ದರೆ, ನಮ್ಮೆಲ್ಲರ ಮೇಲೆ ಜನರು ಅನುಮಾನದಿಂದ ಮಾತನಾಡಿಕೊಳ್ಳುತ್ತಾರೆ. ಮಾನ್ಯ ಹರಿಪ್ರಸಾದ್

ಸಾಹೇಬರೇ ಅನುಮಾನದಲ್ಲಿ ಮಾತನಾಡುತ್ತಾರೆ. ಈ ಬಿ.ಜೆ.ಪಿ., ಯವರು ಈ ಅಕ್ರಮದಲ್ಲಿ ಶಾಮೀಲಾಗಿದ್ದಾರೆ ಎಂಬ ಅನುಮಾನವನ್ನು ವ್ಯಕ್ತಪಡಿಸುತ್ತಾರೆ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಈಗಾಗಲೇ ಆಯೋಗ ರಚನೆಯಾಗಿದೆ.

**(ಗೊಂದಲ)**

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ಬಿ.ಜೆ.ಪಿ.ಯವರು ಕೂಡ ಅಕ್ರಮದಲ್ಲಿ ಪಾಲುದಾರರಾಗಿದ್ದಾರೆ ಎಂದು ಜನರು ಅನುಮಾನವನ್ನು ವ್ಯಕ್ತಪಡಿಸುತ್ತಾರೆ. ನಾವ್ಯಾರು ಪಾಲುದಾರರಲ್ಲ. ಇದಕ್ಕೆ ಪಾಲುದಾರರು ಕೇವಲ ಮಾನ್ಯ ಮುಖ್ಯಮಂತ್ರಿಗಳ ಕುಟುಂಬದವರು ಮತ್ತು ಅವರ ಸಹವರ್ತಿಗಳು.

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಪಾಲುದಾರರು ಮೂಲ ಕುಟುಂಬ ಬಿ.ಜೆ.ಪಿ., ಯವರು. ಇದನ್ನು ನಾವು ಮಾಡಿದ್ದಲ್ಲ. ನಿಮ್ಮ ಸರ್ಕಾರ ಮತ್ತು ನಿಮ್ಮ Chairman ಇದ್ದಾಗ ಮಾಡಿದ್ದು. ನೀವು ಲೂಟಿದಾರರು. ಅದನ್ನು ನೀವು ಮಾಡಿದ್ದು. ನಮ್ಮ ಮುಖ್ಯಮಂತ್ರಿಯವರು ಮಾಡಿದ್ದಲ್ಲ. ನಮ್ಮವರು ಲೂಟಿ ಮಾಡಿದ್ದಲ್ಲ. ನಿಮ್ಮವರು ಲೂಟಿ ಮಾಡಿದವರು. ಅದನ್ನು ನೀವು ಮಾಡಿರುವಂತಹದ್ದು.

**(ಗೊಂದಲ)**

**ಶ್ರೀ ಸಿ.ಟಿ. ರವಿ:-** ಇದು ಆಚೆಗೆ ಬರಲಿ.

**(ಗೊಂದಲ)**

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಸದನ ನಡೆಸಬಾರದೆಂಬುದು ಇವರ ಉದ್ದೇಶವಾಗಿದೆ.

**(ಗೊಂದಲ)**

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು "ಲೂಟಿ ಮಾಡಿದ ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ" ಎಂಬ ಘೋಷಣೆಗಳನ್ನು ಕೂಗಿದರು)**

**(ಗೊಂದಲ)**

**(ಈ ಹಂತದಲ್ಲಿ ಆಡಳಿತ ಪಕ್ಷದ ಮಾನ್ಯ ಸದಸ್ಯರೆಲ್ಲರೂ ಸಾಕು, ಸಾಕು; ಲೂಟಿ ಸಾಕು ಎಂದು ಘೋಷಣೆ ಕೂಗಿದರು)**

**(ಗೊಂದಲ)**

**ಸಭಾಪತಿಯವರು:–** ಒಂದು ನಿಮಿಷವಿರಿ. ಯಾರು ಮಾತನಾಡಿದ್ದೂ ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶದ ಮೇರೆಗೆ ಈ ಹಂತದಲ್ಲಿ ಮಾನ್ಯ ಸದಸ್ಯರು ಮಾತನಾಡಿದ್ದನ್ನು ನಡವಳಿಯಲ್ಲಿ ದಾಖಲಿಸಿರುವುದಿಲ್ಲ)**

**(ಗೊಂದಲ)**

**ಸಭಾಪತಿಯವರು:–** ಯಾರು ಮಾತಾಡಿದ್ದೂ ಕಡತಕ್ಕೆ ಹೋಗಬಾರದು, ನಾನು ಹೇಳಿದ್ದೇನೆ. ರೂಲಿಂಗ್ ಪಾರ್ಟಿಯವರೇ, ಏನ್ರಿ ಇದು? **(ಗೊಂದಲ)** ಒಂದು ನಿಮಿಷವಿರಿ. ಇದು ಮೇಲ್ಮನೆ. ಇಲ್ಲಿ ಏನು ಮಾತನಾಡುತ್ತಾರೆ ಎಂದು ಜನರು ನೋಡಲಿ ಎಂದು ನಾನು ಸುಮ್ಮನೆ ಕುಳಿತಿದ್ದೇನೆ.

**(ಗೊಂದಲ)**

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ,..

**(ಗೊಂದಲ)**

**ಸಭಾಪತಿಯವರು:–** ಮಾನ್ಯ ರವಿಯವರೇ, ತಾವು ಕುಳಿತುಕೊಳ್ಳಿ. ತಾವು ಏನೂ ಹುಡುಗಾಟ ಮಾಡುತ್ತೀರಾ; ಇಲ್ಲಿ ಏನು ದೊಡ್ಡ ಧಿಮಾಕು ಮಾಡುತ್ತೀರಾ? ಮಾನ್ಯ ರವಿಯವರೇ ಈ ತರಹ ಗಲಾಟೆ ಮಾಡುವುದು ಸರಿಯಲ್ಲ. ಇದು ಅತಿಯಾದರೆ ಬೇರೆ ಅಸ್ತ್ರ ಇದೆ. ನೀವೆಲ್ಲರೂ ಮಾತನಾಡಿದರೆ, ಸರಿ ಕಾಣುವುದಿಲ್ಲ. ಒಂದು ಬಾರಿ ಹೇಳಿದ ಮೇಲೆ ಮತ್ತೆ ಮಾತನಾಡತಕ್ಕದ್ದಲ್ಲ.

**(ಗೊಂದಲ)**

**ಶ್ರೀ ಎನ್ ರವಿಕುಮಾರ್ (ವಿಧಾನಸಭಾ ಕ್ಷೇತ್ರ):–** ಎಸ್.ಸಿ. ಸೈಟ್‌ಗಳನ್ನು ಹೊಡೆದ ಸರ್ಕಾರಕ್ಕೆ ಧಿಕ್ಕಾರ, ಧಿಕ್ಕಾರ ಎಂದು ಕೂಗಿದರು.

**(ಗೊಂದಲ)**

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ಎಸ್.ಸಿ. ಸೈಟ್‌ಗಳನ್ನು ಹೊಡೆದಿರುವ ಕೆಟ್ಟ ಸಂದೇಶ ಪ್ರಜಾಪ್ರಭುತ್ವಕ್ಕೆ ಹೋಗುವುದು ಬೇಡ.

**(ಗೊಂದಲ)**

**ಸಭಾಪತಿಯವರು:–** ಒಂದು ನಿಮಿಷ. ತಮಗೆ ಬೇಡ ಎಂದರೆ ಅವಿಶ್ವಾಸ ನಿರ್ಣಯವನ್ನು ಮಂಡಿಸಿ. ನಾನು ಪೀಠದಿಂದ ಎದ್ದು ಹೋಗುತ್ತೇನೆ. ನಾನು ನಿಮ್ಮಂಥವರ ಹತ್ತಿರ ಸದನ ನಡೆಸುವುದಕ್ಕಾಗುವುದಿಲ್ಲ. ನಿಮಗೇನಾದರೂ

ಮಾನ ಮಾರ್ಯಾದೆ ಇದೆಯೇ? ಎಲ್ಲರೂ ಎದ್ದರೆ ಸದನದ ಘನತೆ ಗೌರವ ಏನಾಗಬೇಕು? ನನಗೆ ನೀವು ಕಾಯಿದೆ ಹೇಳುತ್ತೀರಾ?

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ದಯಮಾಡಿ, ತಮ್ಮ ನಿರ್ಧಾರವನ್ನು ಪುನರ್ ಪರಿಶೀಲನೆ ಮಾಡಬೇಕು. ನಾನು ನಿಮಗೆ ಕೈಜೋಡಿಸಿ ಪ್ರಾರ್ಥನೆ ಮಾಡುತ್ತೇನೆ. ನಮ್ಮಿಂದ ಈ ಪ್ರಜಾಪ್ರಭುತ್ವದ ವ್ಯವಸ್ಥೆಯೊಳಗಡೆ ಭ್ರಷ್ಟರ ರಕ್ಷಣೆಗೆ ಈ ಕಡೆ ಮತ್ತು ಆ ಕಡೆ ನಿಂತಿದ್ದಾರೆ ಎಂಬ ಸಂದೇಶ ಹೋಗಬಾರದು.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಭೋಜೇಗೌಡರೇ, ಒಂದು ಸಾರಿ ನಾನು ತೀರ್ಮಾನ ತೆಗೆದುಕೊಂಡಿದ್ದೇನೆ ಎಂದು ಹೇಳಿದ್ದೇನೆ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ತಾವು ಹೇಳಿರುವಂತಹದ್ದು ಸರಿಯಿದೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಭೋಜೇಗೌಡರೇ, ಅದರ ಬಗ್ಗೆ ಚರ್ಚೆ ಇಲ್ಲ. ನಾವು ಮುಂದಿನ ವಿಷಯ ತೆಗೆದುಕೊಳ್ಳಬೇಕೋ ಬೇಡವೋ ಎಂಬುದನ್ನು ಅಷ್ಟೇ ಹೇಳಿ. ಈ ಸದನ ನಡೆಸಬೇಕೋ ಬೇಡವೋ ಎಂಬುದನ್ನು ಹೇಳಿ.

**(ಗೊಂದಲ)**

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಾವು..

**(ಗೊಂದಲ)**

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ,..

**ಸಭಾಪತಿಯವರು:–** ಮಾನ್ಯ ರವಿಯವರೇ, ಬೇಡ. ತಮ್ಮದು ಅತಿಯಾಯಿತು. ಇಲ್ಲಿ ಹುಡುಗಾಟಿಕೆ ಮಾಡುತ್ತೀರಾ?

**(ಗೊಂದಲ)**

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಇದನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

**ಸಭಾಪತಿಯವರು:–** ಮಾನ್ಯ ರವಿಕುಮಾರ್‌ರವರೇ, ಸದನದಲ್ಲಿ ಒಂದು ಪದ್ಧತಿ ಇದೆ. ತಮಗೆ ಅವಕಾಶ ಏತಕ್ಕೆ ಕೊಡಬೇಕು? ತಮಗೆ ಏನು ತಿಳಿಯವುದಿಲ್ಲವೇ, ತಾವು ಏನು ಧಿಮಾಕು ಮಾಡುತ್ತೀರಾ? ತಾವು ಸುಮ್ಮನೆ ಕುಳಿತುಕೊಳ್ಳಿ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಈ ತರಹದ ನಿಲುವಳಿ ಸೂಚನೆ ತಂದಾಗ, ಇಲ್ಲಿ ಚರ್ಚೆಯಾಗಿಲ್ಲವೇ?

**(ಗೊಂದಲ)**

**ಸಭಾಪತಿಯವರು:-** ಆಯಿತು. ನೀವು ಶಂಖ ಹೊಡೆಯಿರಿ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ಈ ಸದನದ ಇತಿಹಾಸದಲ್ಲಿ ಈ ತರಹ ವಿಷಯ ಬಂದಾಗ ಚರ್ಚೆ ನಡೆದಿದೆ.

**ಸಭಾಪತಿಯವರು:-** ತಾವು ಚರ್ಚೆ ಮಾಡುವುದಕ್ಕೆ ಬಿಡುತ್ತಿಲ್ಲವಲ್ಲ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಅವರು ನಿಷ್ಕಳಂಕರಾಗಿ ಉಳಿಯಬೇಕು. ನಾಳೆ ಜನರಿಗೆ ಹೇಗೆ ಮುಖ ತೋರಿಸಬೇಕು ಎಂದು ಅವರಿಗೆ ಅನಿಸಬೇಕು. ಯಾವ ಮುಖವನ್ನಿಟ್ಟುಕೊಂಡು ಅವರು ಜನರ ಹತ್ತಿರ ಹೋಗುತ್ತಾರೆ? ಅವರು ನಿಷ್ಕಳಂಕರಾಗಲಿ ಎಂದು ನಾವು ಹೇಳುತ್ತಿದ್ದೇವೆ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ರವಿಯವರೇ, ಒಂದು ನಿಮಿಷ. ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ತಾವು ಮಾನ್ಯ ಉಚ್ಚ ನ್ಯಾಯಾಲಯದ ವಕೀಲರಾಗಿದ್ದವರು. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಒಂದು ಬಾರಿ ತೀರ್ಪು ನೀಡಿದರೆ, ಆ ತೀರ್ಪು ಮುಗಿದಂತಲ್ಲವೇ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, appealing authority ಇದೆ.

**(ಗೊಂದಲ)**

**Sri C.T. RAVI:-** Review Petition ಹಾಕಬಹುದು.

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷವಿರಿ. ನಾನು ಮಾತನಾಡುವುದನ್ನು ಕೇಳಿ. ಆಯಿತು, ತಾವು ಏನು Review Petition ಕೊಡುತ್ತೀರಾ ಕೊಡಿ. ನಾನು ಆಮೇಲೆ ನೋಡುತ್ತೇನೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ತಾವು ಈಗ ಕೇಳಿದಿರಿ. ಒಂದು ಬಾರಿ ತೀರ್ಪು ಕೊಟ್ಟರೆ, ..

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷವಿರಿ. ಇದೆಲ್ಲವನ್ನು ನೋಡಿ, ತಾವು ಕೊಟ್ಟಿರುವ ನಿಲುವಳಿ ಸೂಚನೆಯನ್ನು ಓದಿದ್ದೇನೆ.

**(ಗೊಂದಲ)**

**ಶ್ರೀ ಸಿ.ಟಿ. ರವಿ:-** ಇಷ್ಟೊಂದು scam ಆಗಬಾರದು.

**(ಗೊಂದಲ)**

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಆಗ pressure ಮಾಡುತ್ತಾರೆ. ಮಾನ್ಯ ಸಭಾಪತಿಯವರೇ, ಇದು ಏನು? ಇಷ್ಟೊಂದು ಕೇಳಿಕೊಂಡರೂ, ಇವರು ದಬ್ಬಾಳಿಕೆ ...

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಒಂದು ತೀರ್ಪು ಕೊಟ್ಟರೆ, ಮತ್ತೆ ಆ ತೀರ್ಪನ್ನು ತಿರುಚುವುದಕ್ಕಾಗುವುದಿಲ್ಲ...

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ನನಗೆ ಬರೆದುಕೊಡಿ. **(ಗೊಂದಲ)** ಒಂದು ನಿಮಿಷವಿರಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಕೇಸ್ Hearing ಮಾಡದೇ ತೀರ್ಪು ಕೊಡುವುದಕ್ಕೆ ಯಾವ ಗೌರವ ಇರುವುದಿಲ್ಲ. ಕೇಸ್‌ನ್ನು Hearing ಮಾಡದೇ ತೀರ್ಪು ಕೊಡುವುದು ಎಂದರೆ ಅರ್ಥ ಏನು ಹೇಳಿ?

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು Hearing ಮಾಡಿದ್ದೇನೆ.

**(ಗೊಂದಲ)**

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವರು ಕೇಂದ್ರ ತನಿಖಾ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಂಡರು. ಈ ಪೀಠವನ್ನು ಕೂಡ ದುರುಪಯೋಗಪಡಿಸಿಕೊಳ್ಳಬೇಕೆಂಬ ಮನಸ್ಥಿತಿಯಲ್ಲಿ ಮಾತನಾಡುತ್ತಿದ್ದಾರೆ. ಮಾನ್ಯ ಸಭಾಪತಿಯವರೇ, ತಮಗೆ ಗೌರವವಿಲ್ಲವೇ; ಆ ಪೀಠಕ್ಕೆ ಗೌರವವಿಲ್ಲವೇ?

**(ಗೊಂದಲ)**

**ಶ್ರೀ ಸಿ.ಟಿ. ರವಿ:-** ಆ ಪೀಠವನ್ನು ಯಾರು ದುರುಪಯೋಗ ಪಡಿಸಿಕೊಳ್ಳುವುದಕ್ಕಾಗುವುದಿಲ್ಲ.

**(ಗೊಂದಲ)**

**ಶ್ರೀ ಎನ್. ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ರವಿಯವರೇ, ನೀವು ಹೇಗೆ ಬೇಕಾದರೂ ದಬ್ಬಾಳಕೆ ಮಾಡುವುದಾ? ಮಾನ್ಯ ಸಭಾಪತಿಯವರೇ, ತಾವು ಹೇಳಿದರೂ ಕೂಡ ಈಗ ಅವರು ದಬ್ಬಾಳಕೆ ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಇವರಿಗೆ ಮಾನ ಮರ್ಯಾದೆ ಇದೆಯೇ; ಇವರಿಗೆ ಯೋಗ್ಯತೆ ಇದೆಯೇ?

**(ಗೊಂದಲ)**

**ಶ್ರೀ ಸಿ.ಟಿ. ರವಿ:-** ಲೂಟಿ ಹೊಡೆಯಬೇಕಾದರೆ, ನಿಮಗೆ ಯೋಗ್ಯತೆ ಇತ್ತಾ?

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ರವಿಯವರೇ, ಈ ದೇಶವನ್ನು change ಮಾಡಿ, ಎಲ್ಲವನ್ನೂ ಮುಗಿಸಿದ್ದೀರಿ. **(ಗೊಂದಲ)** ನೀವು ಸಂವಿಧಾನಕ್ಕೆ ಗೌರವ ಕೊಡುವವರಲ್ಲ. ನೀವು ಸಂವಿಧಾನಬಾಹಿರವಾಗಿ ಮಾತನಾಡುವಂತಹವರು. ಸಂವಿಧಾನದ ಕಾಯಿದೆ ಪ್ರಕಾರ ಮಾತನಾಡುವವರಲ್ಲ ನೀವು, ಸಂವಿಧಾನಕ್ಕೆ ವಿರುದ್ಧವಾಗಿ ಮಾತನಾಡುತ್ತೀರಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಾಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಿಯಮ 68 ಕ್ಕೆ convert ಮಾಡಿಕೊಡಿ. ರಾಜ್ಯದ ಜನರು ಲೂಟಿ ಹೊಡೆದಿದ್ದಾರೆ ಎಂದು ಜನರು ಮಾತನಾಡಿಕೊಳ್ಳುತ್ತಿದ್ದಾರೆ. ನಮಗೆ ಅದನ್ನು ನಿಯಮ 68 ಕ್ಕೆ convert ಮಾಡಿಕೊಡಿ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ,... **(ಗೊಂದಲ)** ವಿರೋಧ ಪಕ್ಷದವರು ಭ್ರಷ್ಟಾಚಾರದಲ್ಲಿ ಮುಳುಗಿದ್ದಾರೆ ಎಂದು ಸರ್ಕಾರ ಗುರುತಿಸಿದೆ. ನಮಗೆ ನೀವು ಪಾಠ ಹೇಳುತ್ತೀರಾ?

**(ಗೊಂದಲ)**

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ಇವರಿಗೆ ಹೆದರಿಕೆ ಏಕೆ? **(ಗೊಂದಲ)** ಜೈಲಿಗೆ ಹೋಗುತ್ತೀರಾ ಎನ್ನುವ ಭಯ ನಿಮಗೆ ....

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಇವರಿಗೆ ಮಾನ ಮಾರ್ಯಾದೆ ಇಲ್ಲ.

**(ಗೊಂದಲ)**

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಯಾರು ಎದ್ದು ನಿಂತುಕೊಳ್ಳಬಾರದು ಎಂಬ ಬಗ್ಗೆ ತಾವು ಒಂದು ಆದೇಶವನ್ನು ಕೊಟ್ಟಿರಿ. ಹಾಗಾಗಿ ನಾವೆಲ್ಲ ಕುಳಿತಿದ್ದೇವೆ. ಇವರು ತಮ್ಮ ಮಾತಿಗೆ ಗೌರವ ಕೊಡುತ್ತಿಲ್ಲ. ಸದನ ಹೇಗೆ ನಡೆಯುತ್ತದೆ?

**(ಗೊಂದಲ)**

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಚರ್ಚೆಗೆ ಅವಕಾಶವಿಲ್ಲವೆಂದರೆ ಹೇಗೆ?

**(ಗೊಂದಲ)**

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ನೋಡಿ ಅವರೆಲ್ಲರೂ ಎದ್ದು ನಿಂತುಕೊಂಡಿದ್ದಾರೆ. ಮೊದಲು ಅವರಿಗೆ ಕುಳಿತುಕೊಳ್ಳುವುದಕ್ಕೆ ಹೇಳಿ. ಅವರು ಕುಳಿತುಕೊಳ್ಳಲಿಲ್ಲವೆಂದರೆ, ನಾವೆಲ್ಲರೂ ಎದ್ದು ನಿಂತುಕೊಳ್ಳಬೇಕಾಗುತ್ತದೆ.

**(ಗೊಂದಲ)**

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸರ್ಕಾರದ ಮುಖ್ಯ ಸಚೇತಕರೇ, ಒಂದು ನಿಮಿಷ.

**(ಗೊಂದಲ)**

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ತಾವು ಹೇಳಿದ್ದಕ್ಕೆ ಎಲ್ಲರೂ ಕುಳಿತುಕೊಂಡಿದ್ದಾರೆ. ಅವರಿಗೆ ಹೇಳಿ.

**(ಗೊಂದಲ)**

**ಶ್ರೀ ಎಸ್.ಎಲ್. ಭೋಜೇಗೌಡ:-** ಆಯಿತು, ನಾವು ಕುಳಿತುಕೊಳ್ಳುತ್ತೇವೆ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ನಿನ್ನೆ ಚರ್ಚೆ ಮಾಡುವುದಕ್ಕೆ ನಮಗೆ ತಾವು ಅವಕಾಶ ಕೊಟ್ಟಿರಾ? ನಾವು adjournment motion ಕೊಟ್ಟಿದ್ದೇವೆ. ನಾವು ನಿಮ್ಮ ಮೇಲೆ protest ಮಾಡಿದ್ದೇವೆಯೇ? ನಾವು ಪೀಠಕ್ಕೆ ಗೌರವ ಕೊಟ್ಟು, ನಾವು ನಿಮ್ಮ ಮೇಲೆ protest ಮಾಡಲಿಲ್ಲ.

**(ಗೊಂದಲ)**

**ಶ್ರೀ ಸಿ.ಟಿ. ರವಿ:-** ಈಗ ಚರ್ಚೆ ಆಗಬಾರದೆಂದರೆ, ಪ್ರಜಾಪ್ರಭುತ್ವದಲ್ಲಿ ಕುಸ್ತಿ ಆಡೋಣವೇ ನಾವು.

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನಾನು ನಿನ್ನೆ ಒಂದು ಅರ್ಜಿ ಕೊಟ್ಟಿದ್ದೆ. ಅದನ್ನು ಏತಕ್ಕೆ reject ಮಾಡಿದರು?

(680) 24.07.2024 4.00 ಟಿಸಿಹೆಚ್-ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವರೇ ಏನಾದರೂ ವಿರೋಧ ಪಕ್ಷದಲ್ಲಿದ್ದು ಈ ಹಗರಣದ ಬಗ್ಗೆ ಚರ್ಚೆ ಮಾಡಬಾರದು ಎಂದು ಹೇಳಿದ್ದರೆ ಇವರು ಸುಮ್ಮನೆ ಇರುತ್ತಿದ್ದರೇ? **(ಗೊಂದಲ)** ಇವತ್ತು ಇವರು ಆಡಳಿತ ಪಕ್ಷದಲ್ಲಿದ್ದಾರೆ, ನಾಳೆ ದಿವಸ ನಾವು ಆಡಳಿತ ಪಕ್ಷದಲ್ಲಿ ಕುಳಿತುಕೊಳ್ಳಬಹುದು. ಈ ವಿಷಯ ಚರ್ಚೆ ಆಗಬಾರದೇ? **(ಗೊಂದಲ)** ಒಂದುವೇಳೆ ಇವರು ಇದರಲ್ಲಿ ನಿರ್ದೋಷಿಗಳಾಗಿದ್ದರೆ, ಅಕ್ರಮ ನಡೆಸದಿದ್ದರೆ ಏಕೆ ಹೆದರಿಕೆ? **(ಗೊಂದಲ)** ಇದರಲ್ಲಿ ಅಕ್ರಮ ನಡೆದಿರುವುದಕ್ಕೆ ಇವರು ಹೆದರುತ್ತಿರುವುದು.

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, . . .

**(ಗೊಂದಲ)**

**ಸಭಾಪತಿಯವರು:-** ಸದನದ ಗ್ಯಾಲರಿಯಲ್ಲಿ ಶಾಲಾ-ಕಾಲೇಜ್ ಮಕ್ಕಳೆಲ್ಲಾ ಕುಳಿತುಕೊಂಡು ನಿಮ್ಮನ್ನು ನೋಡುತ್ತಾರೆ. ಮರ್ಯಾದೆ ಹೋಗಬಾರದೆಂದು ನಾನು ಸುಮ್ಮನೆ ಕುಳಿತಿದ್ದೇನೆ. ಇಲ್ಲದಿದ್ದರೆ ನಾನು House adjourn ಮಾಡಿ ನಿಮ್ಮನ್ನು ಒಳಗೆ ಕರೆಯುತ್ತಿದ್ದೆ. ನೀವುಗಳು ಎಷ್ಟು ಮಾತನಾಡುತ್ತೀರಿ ಎಂದು ಜಗತ್ತು ನೋಡಲಿ ಎಂದು ಬಿಟ್ಟಿದ್ದೇನೆ. ಈಗ ನನ್ನ ಒಂದು ಮಾತನ್ನು ಕೇಳುತ್ತಿರಾ? ನೋಡಿ, ವಿರೋಧ ಪಕ್ಷದವರು ನಾನು ಈಗಾಗಲೇ ನೀಡಿರುವಂತಹ decision ಅನ್ನು reconsider ಮಾಡಿ ಎಂದು ಕೇಳುವುದಕ್ಕೆ ನಿಮಗೆ ಸಂಪೂರ್ಣ ಅಧಿಕಾರ ಇದೆ. ಹಾಗಾಗಿ ನೀವು ಅದನ್ನು writing ನಲ್ಲಿ ಕೊಡಿ. ನೀವು ಕೊಟ್ಟ ನಂತರ ನಾನು ಅದರ ಬಗ್ಗೆ ವಿಚಾರ ಮಾಡಿ ನೋಡುತ್ತೇನೆ. ಅದನ್ನು ನೋಡಿದ ನಂತರ ಸದನಕ್ಕೆ ತಿಳಿಸುತ್ತೇನೆ. ಆಗ ನಾನು ಯಾವ ತೀರ್ಮಾನವನ್ನು ಹೇಳುತ್ತೇನೋ ಅದರಂತೆ ನೀವು ನಡೆಯಬಹುದು.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ವಿಷಯ...

**ಸಭಾಪತಿಯವರು:-** ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ಮಾನ್ಯ ವಿರೋಧ ಪಕ್ಷದವರಿಗೆ decision ಅನ್ನು reconsider ಮಾಡಬೇಕೆಂದು ಕೇಳುವುದಕ್ಕೆ ಅಧಿಕಾರ ಇದೆ. ಅದರ ಬಗ್ಗೆ ನೀವು ಒಂದು writing ನಲ್ಲಿ ಕೊಡಿ. ನಾನು ಅದರ ಬಗ್ಗೆ ವಿಚಾರ ಮಾಡಿ, ನನ್ನ ತೀರ್ಮಾನವನ್ನು ಆಮೇಲೆ ಹೇಳುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಈಗಲೇ ನಾವು ಕೊಡುತ್ತೇವೆ.

**ಸಭಾಪತಿಯವರು:-** ಶ್ರೀ ಎಸ್.ಎಲ್.ಭೋಜೇಗೌಡರವರೇ, ನೀವು ಒಂದು writing ನಲ್ಲಿ ಕೊಡಿ. ಅದನ್ನು ನೋಡುವುದಕ್ಕಾದರೂ ನನಗೆ ಸಮಯ ಬೇಕಲ್ಲವೇ?

**(ಗೊಂದಲ)**

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮ ಮನವಿಯನ್ನೇ ನೀವು ಅರ್ಜಿಯನ್ನಾಗಿ ಪರಿಗಣಿಸಿ.

**(ಗೊಂದಲ)**

**ಸಭಾಪತಿಯವರು:-** ಶ್ರೀ ಸಿ.ಟಿ.ರವಿ ಯವರೇ, ಇದಕ್ಕಿಂತ ನಾನು ಹೆಚ್ಚಿಗೆ ಏನೂ ಹೇಳುವುದಿಲ್ಲ. ನಾನು ಈಗಾಗಲೇ ಹೇಳಿದ್ದೇನೆ. ನೀವು writing ನಲ್ಲಿ ನನಗೆ ಒಂದು ಸೂಚನೆಯನ್ನು ಕೊಡಿ. ನಾನು ಅದನ್ನು reconsider ಮಾಡಬೇಕೋ, ಮಾಡಬಾರದೋ ಎಂದು ನೋಡಿ ತೀರ್ಮಾನ ಕೊಡುತ್ತೇನೆ.

**(ಗೊಂದಲ)**

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮ ಮನವಿಯನ್ನೇ ನೀವು ಅರ್ಜಿ ಎಂದು ಪರಿಗಣಿಸಿ. ಅಲ್ಲಿಯವರೆಗೂ . . .

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಿಯಮದಲ್ಲಿ 10 ಜನ ಮಾನ್ಯ ಸದಸ್ಯರು ಎದ್ದು ನಿಂತು ಹೇಳಿದರೆ, ಅದನ್ನೇ consider ಮಾಡಬೇಕು ಎಂದು ಇದೆ. ನಾವು ಇಷ್ಟೊಂದು ಜನ ಮಾನ್ಯ ಸದಸ್ಯರುಗಳು ಎದ್ದು ನಿಂತು ಹೇಳಿದ್ದೇವೆ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇಲ್ಲ ತಪ್ಪು.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣನವರೇ, ನಾನು ಪೀಠಕ್ಕೆ ಹೇಳುತ್ತಿದ್ದೇನೆ. ನೀವು ಏಕೆ interfere ಮಾಡುತ್ತೀರಿ?

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವರು ಹೇಳಲಿ. ಮಾನ್ಯ ಭೋಜೇಗೌಡರವರು ನಿಯಮ 68 ನ್ನು ಓದಲಿ. ನಮ್ಮದು ಏನೂ ತಕರಾರು ಇಲ್ಲ. **(ಗೊಂದಲ)** ಇವೆರಡನ್ನೂ ಹೇಳಬೇಕು ಎಂದು ಹೇಳುತ್ತಿದ್ದೇವೆ ಅಷ್ಟೇ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನನಗೆ ಓದುವುದಕ್ಕೆ ಬರುವುದಿಲ್ಲ. **(ಗೊಂದಲ)** ನಾನು ವಕ್ಕಾಲು ವಿದ್ಯೆ ಮತ್ತು ಮುಕ್ಕಾಲು ಬುದ್ಧಿಯಲ್ಲಿ ಮಾತನಾಡುತ್ತಿದ್ದೇನೆ. ಮಾನ್ಯ ಪುಟ್ಟಣ್ಣನವರು ವಿದ್ಯಾವಂತರಿದ್ದಾರೆ. ಓದಿಕೊಳ್ಳಲಿ ಪರವಾಗಿಲ್ಲ. **(ಗೊಂದಲ)** ನಾವೆಲ್ಲಾ ಒಂದೇ ಒಂದು ಮನದಾಳದ ಹೃದಯ ಅಂತರಾಳದ ಮಾತಿನಲ್ಲಿ ಹೇಳುತ್ತಿದ್ದೇವೆ. ನಮ್ಮ ಮುಖ್ಯಮಂತ್ರಿಯವರ ಮೇಲೆ ನಮಗೆ ಬಹಳ ಅಗಾಧವಾದ ಗೌರವವಿದೆ. ಅವರು ನಿರ್ದೋಷಿ ಆಗಬೇಕು ಎಂಬುದು ನಮ್ಮ ಆಸೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಎಲ್ಲಾ ಸದಸ್ಯರು ಒಟ್ಟಿಗೆ ಎದ್ದು ನಿಂತು ಮಾತನಾಡಿದರು)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಾವು ರಾಜಕೀಯದಲ್ಲಿ ಇದ್ದು ಕಲಿತಿದ್ದೇವೆ. ನಮಗೂ ಮಾತನಾಡುವುದಕ್ಕೆ ಗೊತ್ತಿದೆ. ತಾವು ಬರೆದುಕೊಡಿ ಎಂದು ಹೇಳುತ್ತಿದ್ದೀರಿ, ಬರೆದು ಕೊಡಲಿ. ಇವರು ನಿಮಗೆ ಅವಕಾಶವೇ ಕೊಡುತ್ತಿಲ್ಲ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಇವರು ಚರ್ಚೆಯನ್ನು ಮುಚ್ಚಿಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಕೆ.ಜೆ.ಜಾರ್ಜ್ (ಇಂಧನ ಸಚಿವರು):-** ಮಾನ್ಯ ಸಭಾಪತಿಯವರೇ, ನಾವು correct ಆಗಿ legal ಆಗಿದ್ದೀವಿ, ನಾವು ಯಾವುದೂ ಮುಚ್ಚಿಡುತ್ತಿಲ್ಲ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, legal ಆಗಿಲ್ಲ. ಅಕ್ರಮವಾಗಿ ನಿವೇಶನಗಳನ್ನು ಕೊಟ್ಟಿದ್ದಾರೆ. ನಿವು ಲೀಗಲ್ ಆಗಿಲ್ಲ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಕೆ.ಎಸ್.ನವೀನ್ ರವರು ಹೇಳಿದ್ದಕ್ಕೆ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯ ಲೈನ್ ಓದುತ್ತೇನೆ. ನಿಲುವಳಿ ಸೂಚನೆಯನ್ನು ತರಲು ನೀಡಲಾದ ಅನುಮತಿಗೆ ಆಕ್ಷೇಪಣೆ ಬಂದಲ್ಲಿ ನೀಡಲಾದ ಅನುಮತಿಗೆ, ಅಂದರೆ ನಾನು ಅನುಮತಿಯನ್ನೇ ಕೊಟ್ಟಿಲ್ಲ. ಮುಗಿದು ಹೋಯಿತು. ನೀವು ಎದ್ದು ನಿಲ್ಲತಕ್ಕಂಥ ಪ್ರಶ್ನೆಯೇ ಬರುವುದಿಲ್ಲ. ನೀವೆಲ್ಲಾ ಏಕೆ ಎದ್ದು ನಿಲ್ಲುತ್ತೀರಿ? ನಾನು ನಿಮಗೆ ಅನುಮತಿಯನ್ನು ಕೊಟ್ಟಿಲ್ಲ. ನಾನು ಅನುಮತಿಯೇ ಕೊಡದಿದ್ದರೆ ನೀವು ಎದ್ದು ನಿಲ್ಲುವ ಪ್ರಶ್ನೆ ಎಲ್ಲಿ ಬರುತ್ತದೆ?

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಈಗ ಮಂಡನೆ . . .

**ಸಭಾಪತಿಯವರು:–** ಮಾನ್ಯ ಸಿ.ಟಿ.ರವಿಯವರೇ, ನಾನು ಎಷ್ಟು ಪ್ರತ್ನಗಳನ್ನು ಮಾಡಬೇಕೋ ಅಷ್ಟು ಪ್ರಯತ್ನಗಳನ್ನು ಮಾಡಿದ್ದೇನೆ. ಈ ಹಿಂದೆ ನಾನು ಎರಡೆರಡು ಬಾರಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೇನೆ. ಈಗ ನಾವು ಇದನ್ನು ಓದಿದ್ದೇವೆ, ರೂಲ್‌ನಲ್ಲಿ ಬರುವುದಿಲ್ಲವೆಂದು ಹೇಳಿದ್ದೇನೆ. ಸ್ಟಡಿ ಮಾಡಿದ್ದೇನೆ. ನೋಡಿ ಎಲ್ಲಾ ವಿಚಾರ ಮಾಡಿ ತೀರ್ಮಾನ ಹೇಳಿದ್ದೇನೆ. ಆ ತೀರ್ಮಾನದ ವಿರುದ್ಧ ಮಾತನಾಡಿ ನೀವು ನನ್ನ ಮೇಲೆ ಗೂಬೆ ಕೂರಿಸಿದರೆ ನಾನು ಏನೂ ಮಾತನಾಡುವುದಕ್ಕೆ ಆಗುವುದಿಲ್ಲ. ಅದು ನಿಮಗೆ ಬಿಟ್ಟಿದ್ದು.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಇದು ಏಕೆ ಬರುತ್ತದೆ ಎಂದು convince ಮಾಡುವುದಕ್ಕೂ ಕೂಡ ನಮಗೆ ಅವಕಾಶ ಕೊಡಲಿಲ್ಲವಲ್ಲ.

**ಸಭಾಪತಿಯವರು:–** ಸಿ.ಟಿ.ಯವರೇ, ನಾನು ನಿಮಗೆ ಕೈಮುಗಿಯಲೇನು?

**ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ತಾವು ಸರಿಯಾಗಿ ಹೇಳಿದ್ದೀರಿ.

**ಸಭಾಪತಿಯವರು:–** ಶ್ರೀ ಪ್ರಕಾಶ್ ಕೆ.ರಾಥೋಡ್ ರವರೇ, ನೀನು ಯಾರು ನನಗೆ ಹೇಳುವುದಕ್ಕೆ. ನಿಮಗೆ ಏನಾದರೂ ತಿಳಿಯುತ್ತದೆಯೇ?

**ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, TV ಯಲ್ಲಿ ಬರಲಿ ಎಂದು ಮಾತನಾಡುತ್ತಿದ್ದಾರೆ. ಅದಕ್ಕೆ ಅವರು ನಿಮ್ಮ ಮಾತು ಕೇಳುತ್ತಿಲ್ಲ.

**(ಗೊಂದಲ)**

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, . . . .

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, . . .

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಕೆ.ಜೆ.ಜಾರ್ಜ್ (ಇಂಧನ ಸಚಿವರು):–** ಮಾನ್ಯ ಸಭಾಪತಿಯವರೇ . . .

**ಸಭಾಪತಿಯವರು:-** ನನ್ನ ಅನುಮತಿ ಇಲ್ಲದೇ ಯಾರು ಮಾತನಾಡಿದರು ಕೂಡ ಯಾವುದೂ ಕಡತಕ್ಕೆ ಹೋಗಬಾರದು. ನನ್ನ ಅನುಮತಿಯನ್ನು ಪಡೆದುಕೊಂಡು ಯಾರು ಮಾತನಾಡುತ್ತಾರೆ ಅವರು ಮಾತನಾಡಿದ್ದು ಮಾತ್ರ ಕಡತದಲ್ಲಿ ದಾಖಲಿಸಬೇಕು. ಅವರೆಲ್ಲಾ ಎಷ್ಟು ಮಾತನಾಡುತ್ತಾರೋ ಮಾತನಾಡಲಿ. ಹೇಳುವುದಕ್ಕೂ ಒಂದು limit ಇರುತ್ತದೆ. ಈ ಮೇಲ್ಮನೆಯಲ್ಲಿ ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ಹೇಳಿದರೆ ಅರ್ಥ ಮಾಡಿಕೊಳ್ಳದಿದ್ದೆ ಏನು ಮಾಡುವುದು, ನಾನೇನು ದೇವರೆ?

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಆದೇಶದಂತೆ ಮಾನ್ಯ ಸದಸ್ಯರುಗಳಾದ ಶ್ರೀ ಕೆ.ಎಸ್.ನವೀನ್, ಶ್ರೀ ಡಿ.ಎಸ್.ಅರುಣ್, ಶ್ರೀ ಸಿ.ಟಿ.ರವಿ, ಹಾಗೂ ಶ್ರೀ ಕೆ.ಜೆ.ಜಾರ್ಜ್ ಮತ್ತು ಇತರರು ಮಾತನಾಡಿದ್ದು ಯಾವುದನ್ನೂ ನಡವಳಿಯಲ್ಲಿ ದಾಖಲಿಸಿರುವುದಿಲ್ಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ನಾವು ಪೀಠಕ್ಕೆ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೆವು.

**ಸಭಾಪತಿಯವರು:-** ಮಾನ್ಯ ಸಿ.ಟಿ.ರವಿಯವರೇ, ಒಂದು ನಿಮಿಷ ನನ್ನ ಮಾತು ಕೇಳಿ. ಅದು ಎಲ್ಲರಿಂದಲೂ ಬಂದಿದೆ ಎಂದು ನೀವು ನಿಲುವಳಿ ಸೂಚನೆಗೆ ಕೊಟ್ಟಿದ್ದಿರಿ. ಅವರಲ್ಲಿ ಯಾರಾದರೊಬ್ಬರು ಓದಿ ಅದನ್ನು read and recorded ಮಾಡೋಣ ಎಂದು ಹೇಳಿದೆನು. ಆಮೇಲೆ ಅದು ಕಡತಕ್ಕೆ ಹೋಗಬಾರದೆಂದು ಹೇಳಿದೆನು. ಆಯಿತು ಅದನ್ನು ಕಡತಕ್ಕೆ ಕೊಡುತ್ತೇನೆ ಕೊಡಿ ಎಂದು ಹೇಳಿದೆನು.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಪುನರ್ ಪರಿಶೀಲನೆ ಮಾಡಿ convince ಮಾಡುವುದಕ್ಕೂ ಅವಕಾಶ ಕೊಡದಿದ್ದರೆ ಈಗ ನಾವೆಲ್ಲರೂ ನಿಯಮದ ಪ್ರಕಾರ ಕಾರ್ಯನಿರ್ವಹಿಸಬೇಕು ಅಲ್ಲವೇ? ಆ ಪೀಠವು ಕೂಡ ನಿಯಮದ ಅಡಿಯಲ್ಲಿ ಕಾರ್ಯನಿರ್ವಹಿಸಬೇಕಲ್ಲವೇ?

**ಸಭಾಪತಿಯವರು:-** ಶ್ರೀ ಸಿ.ಟಿ.ರವಿಯವರೇ, ನನಗೆ convince ಆಗಿದೆ. ನನಗೆ convince ಆದ ಮೇಲೆ ನಾನು decision ಕೊಟ್ಟಿದ್ದೇನೆ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಮತ್ತೆ ನಾವು convince ಮಾಡುವುದಕ್ಕೆ ಬಿಟ್ಟೇ ಇಲ್ಲ.

**ಸಭಾಪತಿಯವರು:-** ಶ್ರೀ ಸಿ.ಟಿ.ರವಿಯವರೇ, ಇದರ ಮೇಲೆ ನಿಮಗೆ ಗೊತ್ತಾಗುತ್ತದೋ ಇಲ್ಲವೋ?

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಯಾವ ಹಿನ್ನೆಲೆಯಲ್ಲಿ ಯಾವ ನಿಯಮದಡಿಯಲ್ಲಿ ಆ ಪೀಠವನ್ನು convince ಮಾಡುವುದಕ್ಕೆ ಕೊಡಬೇಕಾಗಿತ್ತು.

**ಸಭಾಪತಿಯವರು:-** ಶ್ರೀ ಸಿ.ಟಿ.ರವಿಯವರೇ, ಈ ಹಿಂದೆ ನೀವು 2 ವಿಷಯಗಳನ್ನು ನಿಯಮದಲ್ಲಿ ತಂದಾಗ ನಾನು ನಿಯಮ 330 ಕ್ಕೆ convert ಮಾಡಿ ಕೊಟ್ಟಿದ್ದೇನೋ ಇಲ್ಲವೋ?

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಈ ವಿಷಯದಲ್ಲಿ ನಾವು convince ಮಾಡುವುದಕ್ಕೆ ಅವಕಾಶ ಕೊಡಲಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನೀವು ನಮಗೆ ಒಂದು opportunity ಕೊಡಬೇಕು. ಆದರೆ ಆ opportunity ನ್ನು ಕೊಡದೇ ನೀವು reject ಮಾಡಿದ್ದರಿಂದ ನಾವು ಇಷ್ಟೊಂದು ಕೇಳಬೇಕಾಗಿದೆ. ನಮ್ಮನ್ನು ಕೇಳದ್ದರೆ . . .

**(ಗೊಂದಲ)**

**ಸಭಾಪತಿಯವರು:-** ಶ್ರೀ ಎಸ್.ಎಲ್.ಭೋಜೇಗೌಡರವರೇ, ನಾನು ನೋಡಿದ್ದೇನೆ. ಮಾತನಾಡುವಾಗ ಎಲ್ಲಾ ಮಾತನಾಡಿದ್ದೀರಲ್ಲ. **(ಗೊಂದಲ)** ನೀವು ಮಾತನಾಡುವುದನ್ನು ಈ ರಾಜ್ಯ ಮತ್ತು ಜಗತ್ತು ನೋಡಲಿ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಮಗೆ ಒಂದು ಅವಕಾಶ ಮಾಡಿಕೊಡಿ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರೆಲ್ಲರೂ ಒಟ್ಟಿಗೆ ಎದ್ದು ನಿಂತು ಮಾತನಾಡಿದರು)**

**ಸಭಾಪತಿಯವರು:-** ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ. ನನ್ನ ಬಾಯಲ್ಲಿ ಬಹಳ ಕೆಟ್ಟ ಕೆಟ್ಟ ಪದಗಳು ಬರುತ್ತವೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇಷ್ಟೊತ್ತಿನಿಂದ ನೀವು ಮನವಿ ಮಾಡುತ್ತಿದ್ದೀರಿ. ಅವರನ್ನೆಲ್ಲಾ ಒಂದೊಂದು ಗಂಟೆಗಳ ಕಾಲ ಆ ಪೀಠದ ಮೇಲೆ ಕುಳಿತುಕೊಳ್ಳಲು ಹೇಳಿ. ನಾವೆಲ್ಲರೂ ಅವರ ಹತ್ತಿರವೇ ಕೇಳಿಕೊಳ್ಳುತ್ತೇವೆ.

**ಸಭಾಪತಿಯವರು:-** ಎಲ್ಲರೂ ಅವರೇ. ಈಗ ನೀವು ಕೊಟ್ಟಿದ್ದೀರಿ, ಅದರ ಬಗ್ಗೆ ನಾನು study ಮಾಡಿ ನೋಡುತ್ತೇನೆ. ನೋಡಿದ ನಂತರ ತೀರ್ಮಾನ ಮಾಡುತ್ತೇನೆ. ಈಗ ಗಮನ ಸೆಳೆಯುವ ಸೂಚನೆಗಳು.

(ಗೊಂದಲ)

**13. ಗಮನ ಸೆಳೆಯುವ ಸೂಚನೆ**

**ವಿಷಯ:- ರಾಜ್ಯ ಸರ್ಕಾರದ ಅಧಿಕಾರಿಗೆ ಕೇಂದ್ರ ಸರ್ಕಾರದ ಅಧಿಕಾರಿಗಳು ನಮ್ಮ ರಾಜ್ಯ ಸರ್ಕಾರ ಹಾಗೂ ಮುಖ್ಯಮಂತ್ರಿಗಳು ಮತ್ತು ಸಚಿವರುಗಳ ವಿರುದ್ಧ ಹೇಳಿಕೆಯನ್ನು ದಾಖಲಿಸುವಂತೆ ಒತ್ತಾಯವನ್ನು ಹೇರಿ, ಜೀವ ಬೆದರಿಕೆಯನ್ನು ಹಾಕಿರುವ ಸಂಬಂಧದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಹೆಚ್ಚುವರಿ ನಿರ್ದೇಶಕರು ದಿನಾಂಕ 22.07.2024ರಂದು ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿದ್ದು, ಕೇಂದ್ರ ಸರ್ಕಾರದ ಉನ್ನತ ಅಧಿಕಾರಿಗಳು ರಾಜ್ಯ ಸರ್ಕಾರಿ ಅಧಿಕಾರಿಗಳ ಕೆಲಸಕ್ಕೆ ಅಡ್ಡಿಯುಂಟು ಮಾಡುತ್ತಿರುವ ಕುರಿತು.**

-----

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ದಿನಾಂಕ 22.07.2024ರಂದು ನಮ್ಮ ರಾಜ್ಯ ಸರ್ಕಾರದ ಅಧಿಕಾರಿಗೆ ಕೇಂದ್ರ ಸರ್ಕಾರದ ಅಧಿಕಾರಿಗಳು ನಮ್ಮ ರಾಜ್ಯ ಸರ್ಕಾರ ಹಾಗೂ ಮುಖ್ಯಮಂತ್ರಿಗಳು ಮತ್ತು ಸಚಿವರುಗಳ ಹೇಳಿಕೆಯನ್ನು ದಾಖಲಿಸುವಂತೆ ಒತ್ತಾಯವನ್ನು ಹೇರಿ, ಜೀವ ಬೆದರಿಕೆಯನ್ನು ಹಾಕಿರುತ್ತಾರೆ. ಈ ಸಂಬಂಧ ಸಮಾಜ ಕಲ್ಯಾಣ ಇಲಾಖೆಯ ಹೆಚ್ಚುವರಿ ನಿರ್ದೇಶಕರು ದಿನಾಂಕ 22.07.2024ರಂದು ವಿಲ್ಸನ್ ಗಾರ್ಡ್‌ನ್ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿದ್ದು, ಕೇಂದ್ರ ಸರ್ಕಾರದ ಉನ್ನತ ಅಧಿಕಾರಿಗಳು ರಾಜ್ಯ ಸರ್ಕಾರಿ ಅಧಿಕಾರಿಗಳ ಕೆಲಸಕ್ಕೆ ಅಡ್ಡಿಯುಂಟು ಮಾಡುತ್ತಿರುವ ಕುರಿತು ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತಿದ್ದೇನೆ.

**(ಗೊಂದಲ)**

**14. ನಿಯಮ 59ರ ಮೇರೆಗೆ ನಿಲುವಳಿ ಸೂಚನೆಯಡಿ ವಿಷಯ ಮಂಡಿಸಲು ಮುಂದುವರೆದ ಅನುಮತಿ ಕೋರಿಕೆ, ಒತ್ತಾಯ ಮತ್ತು ಧರಣಿ.**

**ವಿಷಯ:- ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನ ಹಂಚಿಕೆಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಕುರಿತು.**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ತಾವು ದಯಮಾಡಿ ಏನಾದರೂ ಒಂದು ತೀರ್ಮಾನ ಮಾಡಿ.. .

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ...

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ. ಒಂದು ನಿಮಿಷ. ಇವರು ಈ ಸದನ ನಡೆಯಬಾರದೆಂದು . . .

**(ಗೊಂದಲ)**

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದು ಸನ್ಮಾನ್ಯ ಮುಖ್ಯಮಂತ್ರಿಯವರ ಮೇಲೆ ಆರೋಪ ಬಂದಿರುವುದಕ್ಕೆ ಇವರು ತೆಗೆದುಕೊಳ್ಳಬೇಡಿ ಎಂದು ಹೇಳುತ್ತಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಯವರು ಸತ್ಯಹರಿಶ್ಚಂದ್ರ ಆಗಿದ್ದರೆ ಏಕೆ ಹೆದರಬೇಕು?

**(ಗೊಂದಲ)**

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಮುಖ್ಯಮಂತ್ರಿಗಳ ಮೇಲೆ ಇಲ್ಲಸಲ್ಲದ ಆಪಾದನೆಯನ್ನು ಹೊರಿಸಿ ಮಾತನಾಡುತ್ತಿದ್ದಾರೆ. . ..

**(ಗೊಂದಲ)**

**ಸಭಾಪತಿಯವರು:-** ಶ್ರೀ ಎಂ.ನಾಗರಾಜು ರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ. ನಿಮಗೆ ಏನೂ ಅನಿಸುವುದಿಲ್ಲವೇ?

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಇವರು ಏಕೆ ಹೆದರಿಕೊಳ್ಳುತ್ತಿದ್ದಾರೆ?

**(ಗೊಂದಲ)**

**ಸಭಾಪತಿಯವರು:-** ಈಗ ನೀವು ಒಂದು ಸೂಚನೆಯನ್ನು ಕೊಟ್ಟಿದ್ದೀರಿ. ನಾನು ಅದನ್ನು study ಮಾಡಿ ಒಂದು decision ಕೊಡುತ್ತೇನೆ. ಈಗ ನಾನು decision pending ಇಟ್ಟಿದ್ದೇನೆ. ನಾನು ಒಂದು ತೀರ್ಪು ಕೊಡುತ್ತೇನೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಕನ್ವರ್ಟ್ ಮಾಡಿ ಒಂದು ತೀರ್ಮಾನ ಮಾಡಿ. ತಮ್ಮ ಬಗ್ಗೆ ಬಹಳ ಗೌರವ ಇದೆ. ಇಷ್ಟು ಜನರೆಲ್ಲರೂ ಒತ್ತಾಯ ಮಾಡುತ್ತಿದ್ದೇವೆ, ವಿರೋಧ ಪಕ್ಷದ 34 ಜನ ಸದಸ್ಯರುಗಳು ಒತ್ತಾಯ ಮಾಡುತ್ತಿದ್ದೇವೆ.

**(ಗೊಂದಲ)**

(ಮುಂದು)

(681)24.7.2024/4.10/ಎಂ.ಎಂ-ಕೆ.ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಯು.ಬಿ. ವೆಂಕಟೇಶ್:-** ದಿನಾಂಕ 22-7-2024 ಇದು ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್. ಆಗಿದೆ. ಶ್ರೀ ಕಲ್ಲೇಶ್ ಎಂಬ ಗೆಜೆಟೆಡ್ ಅಧಿಕಾರಿಯು ...

**ಶ್ರೀ ಎನ್. ರವಿಕುಮಾರ್:-** ಪ್ರತಿಪಕ್ಷದ 34 ಜನರು ಸಹಿ ಮಾಡಿ ಕೊಡುತ್ತೇವೆ. ದಯವಿಟ್ಟು ಈ ವಿಷಯದ ಚರ್ಚೆಗೆ ಅವಕಾಶ ಕೊಡಿ.

**ಶ್ರೀ ಯು.ಬಿ. ವೆಂಕಟೇಶ್:-** ಕೇಂದ್ರ ಸರ್ಕಾರದ ಅಧಿಕಾರಿಗಳಾದ ಶ್ರೀ ಮಿತ್ತಲ್ ಮತ್ತು . . .

(**ಗೊಂದಲ**)

**ಶ್ರೀ ಎನ್. ರವಿಕುಮಾರ್:-** ಏಕೆಂದರೆ ಇದು ಅತ್ಯಂತ ಸಾರ್ವಜನಿಕ ಮಹತ್ವದ ವಿಷಯವಾಗಿದೆ. ಇದರ ಗಂಭೀರತೆಯನ್ನು

(**ಗೊಂದಲ**)

**ಶ್ರೀ ಯು.ಬಿ. ವೆಂಕಟೇಶ್:-** ಇವರ ಮೇಲೆ ದೂರನ್ನು ಕೊಡಲಾಗಿದೆ.

**(ಗೊಂದಲ)**

**Sri S.L. BHOJEGOWDA (TEACHERS' CONSTITUENCY):-** Hon'ble Chairman sir, the House is not in order.

**ಶ್ರೀ ಯು.ಬಿ.ವೆಂಕಟೇಶ್:-** ಇದರಲ್ಲಿ ಬಂದಂತಹ ಅಧಿಕಾರಿಗಳು ಹಣವನ್ನು ವಸೂಲಿ ಮಾಡುವುದನ್ನು ಬಿಟ್ಟು;

**(ಗೊಂದಲ)**

**ಸಭಾಪತಿಯವರು:-** ಸುಮ್ಮನೆ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಸ್.ಎಲ್. ಭೋಜೇಗೌಡ:-** ಸದನವನ್ನು ತಹಬದಿಗೆ ತನ್ನಿ ಆಮೇಲೆ ಅವಕಾಶ ಕೊಡಿ. The House is not in order.

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್:-** ಬಂದಂತಹ ಅಧಿಕಾರಿಗಳು ತಾವೇನು ಕೆಲಸ ಮಾಡಬೇಕಾಗಿತ್ತೋ ಅದನ್ನು ಬಿಟ್ಟು "ಭ್ರಷ್ಟರನ್ನು ಹುಡುಕಿರಿ, ಹಣವನ್ನು ಹುಡುಕಿರಿ" ಎಂದರೆ ಯಾರು ಇದರಲ್ಲಿ ಅಪರಾಧ ಮಾಡಿಲ್ಲ ಅವರನ್ನು ಸೇರಿಸಬೇಕು. ಸರ್ಕಾರದಲ್ಲಿ ಇರುವವರನ್ನು ಎಸ್.ಐ.ಟಿ.ಗೆ ಸೇರಿಸಿ....

(**ಗೊಂದಲ**)

**(ಈ ಹಂತದಲ್ಲಿ ಬಿ.ಜೆ.ಪಿ. ಪಕ್ಷದ ಕೆಲವು ಸದಸ್ಯರು ಮತ್ತು ಶ್ರೀ ಎಸ್.ಎಲ್. ಭೋಜೇಗೌಡರನ್ನು ಹೊರತುಪಡಿಸಿ ಜೆ.ಡಿ(ಎಸ್) ಪಕ್ಷದ ಸದಸ್ಯರುಗಳು ಸದನದ ಬಾವಿಗೆ**

**ಬಂದು ಧರಣಿ ನಿರತರಾದರು)**

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಎಲ್ಲಾ ಹಿರಿಯ ಸದಸ್ಯರುಗಳು ಇಲ್ಲಿ ಬಂದು ಮಾತನಾಡುತ್ತಿದ್ದಾರಲ್ಲಾ (**ಗೊಂದಲ**)

**ಸಭಾಪತಿಯವರು:-** ಸದನವನ್ನು 10 ನಿಮಿಷಗಳ ಕಾಲ ಮುಂದೂಡುತ್ತಿದ್ದೇನೆ.

**(ಸದನವನ್ನು ಸಂಜೆ 04 ಗಂಟೆ 11 ನಿಮಿಷದಲ್ಲಿ 10 ನಿಮಿಷಗಳ ಕಾಲ ಮುಂದೂಡಲಾಯಿತು)**

(682) 24-07-2024 (5.50) ವೈಎಲ್-ಎಂಡಿ

**(ಸಂಜೆ 4 ಗಂಟೆ 11 ನಿಮಿಷದಲ್ಲಿ 10 ನಿಮಿಷಗಳ ಕಾಲ ಮುಂದೂಡಲ್ಪಟ್ಟ ಸದನವು ಪುನಃ ಸಂಜೆ 5 ಗಂಟೆ 54 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**(ಸಭೆ ಪ್ರಾರಂಭವಾಗುತ್ತಿದ್ದಂತೆ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ, ಬಿ.ಜೆ.ಪಿ.ಯ ಎಲ್ಲಾ ಮಾನ್ಯ ಸದಸ್ಯರುಗಳು ಹಾಗೂ ಮಾನ್ಯ ಎಸ್.ಎಲ್.ಭೋಜೇಗೌಡರವರನ್ನು ಹೊರತುಪಡಿಸಿ ಜೆ.ಡಿ.(ಎಸ್) ಪಕ್ಷದ ಎಲ್ಲಾ ಮಾನ್ಯ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಿರತರಾದರು)**

**ನಿಯಮ 59ರ ಮೇರೆಗೆ ನಿಲುವಳಿ ಸೂಚನೆಯಡಿ ವಿಷಯ ಮಂಡಿಸಲು ಮುಂದುವರೆದ ಅನುಮತಿ ಕೋರಿಕೆ, ಒತ್ತಾಯ ಮತ್ತು ಧರಣಿ.**

**ವಿಷಯ:- "ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನ ಹಂಚಿಕೆಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಕುರಿತು."**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾವು ಈಗಾಗಲೇ ಮಂಡಿಸಿರುವಂಥ ಪ್ರಸ್ತಾಪ ಏನಿದೆ, ಅದು ತಮ್ಮ ಮುಂದೆ ಇದೆ. ಅದನ್ನು ಬೇರೆ ರೀತಿ ಪರಿವರ್ತನೆ ಮಾಡಿಕೊಡುತ್ತೇನೆ ಎಂದು ತಾವು ಹೇಳಿದ್ದೀರಿ.

**ಸಭಾಪತಿಯವರು:-** ಪರಿವರ್ತನೆ ಮಾಡಿಕೊಡುತ್ತೇನೆ ಎಂದು ಹೇಳಿಲ್ಲ. Consider ಮಾಡುತ್ತೇನೆ ಎಂದು ಹೇಳಿರುವುದು.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, Consider, ಪರಿವರ್ತನೆ ಎರಡೂ ಒಂದೇ ಅಲ್ಲವೇ? ಆ consider ಅನ್ನು ಪರಿಗಣಿಸಿ.

**ಸಭಾಪತಿಯವರು:-** ನಾನು ನೋಡಿ ತೀರ್ಮಾನ ತೆಗೆದುಕೊಳ್ಳುತ್ತೇನೆಂದು ಹೇಳಿರುವುದು.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರು ಪರಿಶೀಲನೆ ಮಾಡುತ್ತೇನೆ ಎಂದು ಹೇಳಿರುವುದು.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಆಗಲಿ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ನೇರವಾಗಿ ಸಭಾಪತಿಗಳ ತೀರ್ಪನ್ನು ಪ್ರಶ್ನಿಸುವುದಲ್ಲ. ಅದನ್ನು ನೀವು ಸರಿ ಮಾಡಿಕೊಳ್ಳಬೇಕು.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ತಾವು consider ಮಾಡಿದರೆ ಚರ್ಚೆ ಮಾಡೋಣ. ಇಲ್ಲದಿದ್ದರೆ ಈಗಾಗಲೇ ವಿರೋಧ ಪಕ್ಷದ ಸದಸ್ಯರು ಬಾವಿಗೆ ಇಳಿದಿರುವ ವಿಚಾರ ತಮಗೂ ಗೊತ್ತಿದೆ. ಹಾಗಾಗಿ, ತಮ್ಮ ತೀರ್ಮಾನ ಏನೆಂಬುದನ್ನು ತಿಳಿಸಬೇಕೆಂದು ಮನವಿ ಮಾಡುತ್ತೇನೆ.

**ಸಭಾಪತಿಯವರು:-** ನಾನು ಹೇಳುವುದೇನೆಂದರೆ, ಈಗಾಗಲೇ ಇಷ್ಟೆಲ್ಲಾ ಚರ್ಚೆಯಾಗಿದ್ದು, ಬಾವಿಗೆ ಇಳಿದು ಎಲ್ಲಾ ಹೇಳಿದ್ದೀರಿ. ಮತ್ತೆ ತಕ್ಷಣವೇ ತೀರ್ಮಾನ ಹೇಳಲು ಆಗುವುದಿಲ್ಲ. ಅದರ ಬಗ್ಗೆ ಅಧ್ಯಯನ ಮಾಡಿ, ಹಿಂದಿನ ರೂಲ್ ಏನಿದೆ ಎಂಬುದನ್ನು ನೋಡಿ, ನಂತರ ನನ್ನ ತೀರ್ಮಾನವನ್ನು ಹೇಳುತ್ತೇನೆಂದು ರೂಲಿಂಗ್ ಅನ್ನು ಕಾಯ್ದಿರಿಸಿದ್ದೇನೆ. ದಯವಿಟ್ಟು ಸಹಕರಿಸಿ, ತಮ್ಮ ತಮ್ಮ ಸ್ಥಳಗಳಿಗೆ ಹೋಗಿ ಕುಳಿತುಕೊಳ್ಳಿ. ಬೇರೆ ಬೇರೆ ವಿಚಾರದ ಬಗ್ಗೆ ಚರ್ಚೆ ಮಾಡೋಣ ಎಂದು ವಿನಂತಿಸುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಹಾಗಾದರೆ, ತಾವು ಹಿಂದೆ ಅರ್ಜಿ ಕೊಟ್ಟಂತಹ ಸಂದರ್ಭದಲ್ಲಿ ಕಾಲಾವಕಾಶವನ್ನೇ ತೆಗೆದುಕೊಳ್ಳಲಿಲ್ಲ. ನಿರ್ಧಾರ ಮಾಡಿಬಿಟ್ಟಿದ್ದೀರಿ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, Point of Order.

**ಸಭಾಪತಿಯವರು:-** ಮಾನ್ಯ ಯು.ಬಿ.ವೆಂಕಟೇಶ್‌ರವರೇ, ಒಂದು ನಿಮಿಷ. ತಮಗೂ ಮಾತನಾಡಲು ಅವಕಾಶ ಕೊಡುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಓದಲು ಯಾವುದೇ ಸಮಯವನ್ನು ತೆಗೆದುಕೊಳ್ಳದೇ, ರೂಲಿಂಗ್ ಕೊಟ್ಟು ತಿರಸ್ಕರಿಸಲಾಗಿದೆ ಎಂದು ಹೇಳಿದ್ದೀರಿ. ಅದೇ ರೀತಿ ಈ ಅರ್ಜಿಯನ್ನು ತೆಗೆದುಕೊಳ್ಳಿ.

**ಸಭಾಪತಿಯವರು:-** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ತಾವು ಆ ಅರ್ಜಿಯನ್ನು ನಾನು ಓದಿ, ನೋಡಿಯೇ ಹೇಳಿರುವುದು. ಚರ್ಚೆಗೆ ಹೋದರೆ ಏನಾಗುತ್ತದೆ ಎಂದರೆ, ಇದು ಹಳೆಯದು. ಯಾವುದೇ ಒಂದು ಕೇಸ್ ತಂದಾಗ ರಾಜ್ಯಕ್ಕೆ ಏನು ದೊಡ್ಡ ಸಮಸ್ಯೆ ಆಗಿಲ್ಲ. ಯಾವುದು ಆ ತರಹ ಬರುವುದಿಲ್ಲ. ಹಾಗಾಗಿ, ನಾನು ಹೇಳುವುದನ್ನು ಕೇಳಿ. ವಿರೋಧ ಪಕ್ಷದ ಸದಸ್ಯರು ಅರ್ಜಿ ಕೊಟ್ಟರು, ನಾನು ವಿಚಾರ ಮಾಡುತ್ತೇನೆ, ಸ್ವಲ್ಪ ಸಮಯ ಕೊಡಿ ಎಂದು ಹೇಳಿದ್ದೇನೆ. ಇಷ್ಟೆಲ್ಲಾ ಆದ ನಂತರ ಇನ್ನೊಂದು ರೂಲಿಂಗ್ ಕೊಡಬೇಕಾದರೆ ಸಾರಾಂಶವನ್ನು ವಿಚಾರ ಮಾಡಬೇಕಲ್ಲವೇ? ಹಿಂದಿನ ರೂಲಿಂಗ್ ಅನ್ನು ನೋಡಬೇಕಲ್ಲವೇ? ಇಷ್ಟೆಲ್ಲಾ ಆದ ಕಾರಣ ಸ್ವಲ್ಪ ಸಮಯ ತೆಗೆದುಕೊಳ್ಳುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು ನಿಮ್ಮನ್ನು ಹೊಗಳುತ್ತಿಲ್ಲ. ತಾವು ಈ ಸದನಕ್ಕೆ ಬಂದು ಸುಮಾರು 40 ವರ್ಷಗಳು ಕಳೆದಿವೆ. ನಾವೆಲ್ಲರೂ you are an authority ಎಂದು ತಿಳಿದುಕೊಂಡಿದ್ದೇವೆ. You are an authority now.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ತಾವು authority ಪ್ರಕಾರವೇ ಹೇಳಿರುವುದು. ಅದನ್ನು ಪಾಲಿಸಿ ಎಂದು ಹೇಳಿದ್ದೀರಿ ಅಲ್ಲವೇ? **(ಗೊಂದಲ)** ತಾವು authority ಇಟ್ಟುಕೊಂಡೇ ಮಾತನಾಡಿರುವುದು.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಆ ವಿಚಾರ ಬಿಡಿ.

15. <u>ಪ್ರಕಟಣೆ</u>

**"ಕರ್ನಾಟಕ ವಿಧಾನ ಸಭೆಯು ದಿನಾಂಕ: 24.07.2024 ರಂದು ಅಂಗೀಕರಿಸಿರುವ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುವ ಕುರಿತು."**

**ಸಭಾಪತಿಯವರು:-**

ಕರ್ನಾಟಕ ವಿಧಾನಸಭೆ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನಸಭೆಯು ದಿನಾಂಕ: 24.07.2024 ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1) ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2024
2) ಕರ್ನಾಟಕ ಮುನಿಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2024
3) ಕರ್ನಾಟಕ ನೀರಾವರಿ (ತಿದ್ದುಪಡಿ) ವಿಧೇಯಕ, 2024
4) ಕರ್ನಾಟಕ ಧನವಿನಿಯೋಗ (ಸಂ:04) ವಿಧೇಯಕ, 2024

ಇದಕ್ಕೆ ಸಭೆ ಅನುಮತಿ ಕೊಟ್ಟಿದೆ ಎಂದು ಭಾವಿಸುತ್ತೇನೆ.

**16. ನಿಯಮ 59ರ ಮೇರೆಗೆ ನಿಲುವಳಿ ಸೂಚನೆಯಡಿ ವಿಷಯ ಮಂಡಿಸಲು ಅನುಮತಿ ಕೋರಿಕೆ, ಒತ್ತಾಯ ಮತ್ತು ಧರಣಿ.**

**ವಿಷಯ:- "ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನ ಹಂಚಿಕೆಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಕುರಿತು"**

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅದಕ್ಕೆಲ್ಲಾ ನಾವು ಪೂರ್ಣ ಸಹಕಾರ ಕೊಡುತ್ತೇವೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ತಾವು ಮಂಡಿಸಿರುವ ಪ್ರಕಟಣೆ ಏನಿದೆ, ಅದಕ್ಕೆ ಸಹಕಾರ ನೀಡುತ್ತೇವೆ. ಮೊದಲು ನಾವು ಕೊಟ್ಟಿರುವಂಥ ಅರ್ಜಿಗೆ ತೀರ್ಮಾನ ಕೊಡಿ, ಅನಂತರ ನಮ್ಮ ಅಭ್ಯಂತರವೇನಿಲ್ಲ.

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವರು ಕೊಟ್ಟಿರುವಂಥ ಅರ್ಜಿಗೆ ಈಗಾಗಲೇ ತಾವು ರೂಲಿಂಗ್ ಕೊಟ್ಟಿದ್ದೀರಿ. ಮತ್ತೆ ಅವರು ಪುನರ್ ಪರಿಶೀಲನೆಗೆ ಅರ್ಜಿ ಕೊಟ್ಟಿದ್ದಾರೆ. ಆದರೆ, ಕಾನೂನಾತ್ಮಕವಾಗಿ ಮಾತನಾಡುವುದಾದರೆ, In M.N.Kaul and S.L.Shakdher's 'Practice and Procedure of Parliament' book, it is stated as:

> *"....Speaker's rulings, as already stated, cannot be questioned except on a substantive motion. A member who protests against the ruling of the Speaker commits contempt of the House and the Speaker. The Speaker's decision is equally binding whether given in the House or on a departmental file. The Speaker is not bound to give reasons for the decisions so taken...."*

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾವು ಒಪ್ಪಿಗೆ ನೀಡಿದ್ದೇವೆ ಅಲ್ಲವೇ? ಅದರಲ್ಲಿ ಯಾವುದೇ ಪ್ರಶ್ನೆ ಇಲ್ಲ. **(ಗೊಂದಲ)** ಆದಾದ ಮೇಲೆ ನಾವು ಇನ್ನೊಂದು ಅರ್ಜಿ ಕೊಟ್ಟಿರುವುದು. **(ಗೊಂದಲ)** ತಮ್ಮ ಆದೇಶವನ್ನು ಪಾಲಿಸಿದ್ದೇವೆ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು ಒಪ್ಪಿಗೆ ನೀಡಿದ್ದೇವೆ. **(ಗೊಂದಲ)** ನಾವು ವಿರೋಧಿಸಿಲ್ಲ, **(ಗೊಂದಲ)** ತಮ್ಮ ತೀರ್ಮಾನವನ್ನು ನಾವು ಧಿಕ್ಕರಿಸಿಲ್ಲ, **(ಗೊಂದಲ)** ವಿರೋಧಿಸಿಲ್ಲ, **(ಗೊಂದಲ)** ತಮ್ಮ ತೀರ್ಮಾನವನ್ನು ವಿರೋಧ ಮಾಡಿಲ್ಲ.

**Sri S.L.BOJEGOWDA:-** We have not questioned the sanctity of the Chair.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ. ಈಗಾಗಲೇ ಒಂದು ತೀರ್ಮಾನ ಕೊಟ್ಟಿದ್ದು, ಇಷ್ಟೆಲ್ಲಾ ಚರ್ಚೆಯಾಗಿದೆ. ತಾವು ಕೂಡಾ ಅನೇಕ ವಿಚಾರಗಳನ್ನು ಹೇಳಿದ್ದೀರಿ. ಕೊನೆಪಕ್ಷ ಅದರ ಬಗ್ಗೆ ಅಧ್ಯಯನ ಮಾಡಲು ಸಮಯವಾದರೂ ಬೇಕಲ್ಲವೇ?

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾವು ಮುಂಚೆ ಕೊಟ್ಟಿರುವುದು 25 ಲೈನ್ ಇತ್ತು.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಿನ್ನೆ ನಾವು ಕೂಡಾ ಅರ್ಜಿ ಕೊಟ್ಟಿದ್ದೆವು. ಹಾಗಾದರೆ, ನಮ್ಮದು ಏನಾಗಿತ್ತು? ಏತಕ್ಕೆ ನಿನ್ನೆ ನಮ್ಮ ಅರ್ಜಿಯನ್ನು ಪುರಸ್ಕರಿಸದೇ punish ಮಾಡಿದ್ದೀರಿ?

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಯು.ಬಿ.ವೆಂಕಟೇಶ್‌ರವರು ಇನ್ನೊಂದು ಪುನರ್ ಪರಿಶೀಲನೆಗೆ ಅರ್ಜಿ ಕೊಡಲಿ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಒಬ್ಬೊಬ್ಬರಿಗೂ ಒಂದೊಂದು ರೀತಿ ಮಾಡಿದರೆ ಆಗುವುದಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಅವರನ್ನು ಯಾರು ತಡೆದಿರುವುದು? ಯಾರು ಅವರನ್ನು ತಡೆದಿಲ್ಲ. **(ಗೊಂದಲ)** ನಾವು ಪುನರ್ ಪರಿಶೀಲನೆಗೆ ಅರ್ಜಿ ಕೊಟ್ಟಿದ್ದೇವೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಅವರು ಅರ್ಜಿ ಕೊಟ್ಟರು. ನಾವು ಏನು ಮಾತನಾಡಲಿಲ್ಲ. ಮತ್ತೆ ಪುನರ್ ಪರಿಶೀಲನೆಗೆ ಅರ್ಜಿ ಕೊಟ್ಟರು, ನಾವು ಸುಮ್ಮನಾಗಿದ್ದೆವು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇನ್ನೊಂದು ಅರ್ಜಿ ಕೊಡಲಿ. ಯಾರು ಬೇಡ ಎಂದು ಹೇಳಿರುವುದು.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಹಾಗಾದರೆ, ಅವರು ಅದೇ ಕೆಲಸ ಮಾಡಲಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾವು ಈಗಾಗಲೇ ಅರ್ಜಿ ಕೊಟ್ಟಿದ್ದೇವೆ. **(ಗೊಂದಲ)** ಹಾಗಾಗಿ, ನಾವು ಈಗ ಆ ವಿಚಾರವಾಗಿ ಮಂಡನೆ ಮಾಡಲು ಅವಕಾಶ ಕೇಳುತ್ತಿರುವುದು.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಯೋಚನೆ ಮಾಡಿ ಹೇಳುತ್ತೇನೆ ಎಂದು ಹೇಳಿದ್ದೀರಿ ಅಲ್ಲವೇ?

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, It is our right. **(ಗೊಂದಲ)** ನಮಗೆ ಕೇಳಲು ಹಕ್ಕಿದೆ ಅದರಂತೆ ಅರ್ಜಿ ಕೊಟ್ಟಿದ್ದೇವೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಮಗೂ ಹಕ್ಕಿದೆ. ನಾವು ಅರ್ಜಿ ಕೊಟ್ಟಾಗ ನಮಗೂ ಹಕ್ಕಿತ್ತು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ರೂಲಿಂಗ್‌ಗೆ ಏನಿದೆ ಅದನ್ನು ಕೊಡಿ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, unconstitutionally ನಾವು ಏನನ್ನೂ ಕೊಟ್ಟಿಲ್ಲ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಸಂವಿಧಾನಕ್ಕೆ ಅಪಚಾರವಾಗಿದೆ ಎಂದೇ ಇಲ್ಲಿ ಚರ್ಚೆ ಮಾಡಲು ಅರ್ಜಿ ಕೊಟ್ಟಿರುವುದು. ಸಂವಿಧಾನದ ಅಡಿಯಲ್ಲಿಯೇ ಚರ್ಚೆ ಮಾಡಲು ಅರ್ಜಿ ಕೊಟ್ಟಿರುವಂತಹದ್ದು.

(ಮುಂದು)

(683) 24.07.2024/6.00/ಎಸ್‌ಕೆ-ಎಂಡಿ (ಸಭಾಪತಿಯವರ ಉಪಸ್ಥಿತಿ)

**(ಗೊಂದಲ)**

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ತಾವು ರೂಲಿಂಗ್ ಕೊಟ್ಟಿದ್ದೀರಿ, which is exactly a correct ruling. ಹಾಗಾದರೆ ಮತ್ತೆ ಪುನರ್ ಪರಿಶೀಲನೆ ಎಂದರೇನು?

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹಾಗಾದರೆ...

**ಶ್ರೀ ಸಲೀಂ ಅಹಮದ್:-** ಮಾನ್ಯ ಭೋಜೇಗೌಡರೇ ಒಂದು ನಿಮಿಷವಿರಿ. ನಾನು ಮಾತನಾಡುತ್ತೇನೆ. ಮಾನ್ಯ ಸಭಾಪತಿಯವರೇ, ರೂಲಿಂಗ್ ಪುಸ್ತಕ ನೋಡಿ, M.N.Kaul and S.L.Shakdher ರವರ Practice and Procedure of Parliament book ನೋಡಿ, ತಾವು ಒಂದು ರೂಲಿಂಗ್ ಕೊಟ್ಟಿದ್ದೀರಿ.

**Sri S.L.BOJEGOWDA:-** The Chair will answer.

**ಶ್ರೀ ಸಲೀಂ ಅಹಮದ್:-** ಮಾನ್ಯ ಭೋಜೇಗೌಡರೇ ಒಂದು ನಿಮಿಷವಿರಿ. ತಪ್ಪು ಮಾಡಿದರೆ ತಾನೇ ತಪ್ಪು ಎಂದು ಹೇಳಬೇಕು. ತಾವು ತಪ್ಪು ಮಾಡಿಲ್ಲ. ಕಾನೂನಿನ ಪ್ರಕಾರ ಮತ್ತು ನಿಯಮಗಳ ಪ್ರಕಾರ ರೂಲಿಂಗ್ ಕೊಟ್ಟಿದ್ದಾರೆ.

**(ಗೊಂದಲ)**

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಲೀಂ ಅಹಮದ್‌ರವರೇ, ನಾವೇನೂ ತಪ್ಪು ಮಾಡಿಲ್ಲ.

**(ಗೊಂದಲ)**

**ಶ್ರೀ ಸಲೀಂ ಅಹಮದ್:-** ಆ ರೂಲ್‌ನ್ನು ಮತ್ತೆ ಏಕೆ ಪ್ರಶ್ನೆ ಮಾಡಬೇಕು? ಅದನ್ನು ಮತ್ತೆ reconsider ಏತಕ್ಕೆ ಮಾಡಬೇಕು?

**(ಗೊಂದಲ)**

**ಶ್ರೀ ಛಲವಾಧಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಅವರಿಗೆ ಇಷ್ಟವಾದಂತಹ ಆದೇಶ ಬಂದರೆ, ಅವರಿಗೆ ಸಂತೋಷವಾಗಿರಬಹುದು. **(ಗೊಂದಲ)** ಆಗ ಪ್ರಶ್ನೆಯಾಗುವುದಿಲ್ಲ. ಮಾನ್ಯ ಸಭಾಪತಿಯವರೇ, ನನ್ನ ತೀರ್ಮಾನವನ್ನು ವಿರೋಧಿಸಬಾರದು ಎಂದು ತಾವು ಹೇಳಿದ್ದೀರಿ. ನಾವು ತಮ್ಮ ತೀರ್ಮಾನವನ್ನು ವಿರೋಧಿಸಿಲ್ಲ. ತಾವು convert ಮಾಡುತ್ತೇನೆ ಅರ್ಜಿ ಕೊಡಿ ಎಂದಿದ್ದಕ್ಕೆ ನಾವು ಕೊಟ್ಟಿದ್ದೇವೆ. ಅದರ ಮೇಲಿನ ತೀರ್ಪು ಕೊಡಿ.

**(ಗೊಂದಲ)**

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ತಮ್ಮ ಆದೇಶವನ್ನು ನಾವು ಪಾಲಿಸಿದ್ದೇವೆ.

**ಸಭಾಪತಿಯವರು:–** ಮಾನ್ಯ ಭೋಜೇಗೌಡರೇ, ತಾವೊಬ್ಬ ವಕೀಲರಾಗಿದ್ದಂತಹವರು.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:–** ಮಾನ್ಯ ಹರಿಪ್ರಸಾದ್‌ರವರೇ, ಹೇಳಿ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳನ್ನು ನೋಡಿದಾಗ, ಅರ್ಜಿಯನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ ಮತ್ತು ತಮಗೆ ಕೊಡುವುದಕ್ಕೆ ಅವರಿಗೆ ಎಲ್ಲವೂ ಹಕ್ಕಿದೆ.

**ಸಭಾಪತಿಯವರು:–** ನಾನು ಅದನ್ನೇ ಹೇಳಿದ್ದೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, normal practice ಏನೆಂದರೆ, ನಾವು ತಮಗೆ ಏನಾದರೊಂದು ಅರ್ಜಿ ಮತ್ತೊಂದು ಕೊಡುವುದಿದ್ದರೆ, ಅದನ್ನು ಬೆಳಗ್ಗೆ ೯.೦೦ ಗಂಟೆಯೊಳಗಡೆ ಕೊಡಬೇಕು. ತಾವು ಇವತ್ತಿಗೆ ಅದನ್ನು reject ಮಾಡಿದ್ದೀರಿ. ಅದೇನಿದ್ದರೂ ನಾಳೆ ತೆಗೆದುಕೊಳ್ಳಬೇಕು. ನಾಳೆ ಇದನ್ನು ತೆಗೆದುಕೊಂಡಾಗ, ಅವರಿಗೆ ಅವಕಾಶ ಕೊಟ್ಟರೆ, ಅದರ ಬಗ್ಗೆ ಚರ್ಚೆ ಮಾಡೋಣ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಹರಿಪ್ರಸಾದ್‌ರವರೇ, ಇದು rare and rarest case. ಇದನ್ನು ನಾವು think ಮಾಡಿದ್ದೇವೆ. ತಾವೇನಾದರೂ ಹೇಳಿಕೊಳ್ಳಿ. ಇದು rare and rarest case ಎಂದು ನಾವು ತೀರ್ಮಾನ ಮಾಡಿದ್ದೇವೆ. ನಿಮ್ಮ ತೀರ್ಮಾನ ಏನುಬೇಕಾದರೂ ಇರಲಿ.

**(ಗೊಂದಲ)**

**Sri B.K. HARIPRASAD:–** Rare and rarest case, ಉತ್ತರ ಕನ್ನಡ ಜಿಲ್ಲೆಯಲ್ಲಿ ಮಣ್ಣು ಕುಸಿದು ಹೋಗಿ ಎಂಟು ಜನ ಸತ್ತು ಹೋಗಿದ್ದಾರೆ. ಇಲ್ಲಿ ಅದರ ಬಗ್ಗೆ ಚರ್ಚೆಯಾಗಬೇಕಾಗಿದೆ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಹರಿಪ್ರಸಾದ್‌ರವರೇ, ಅದನ್ನು ಮಾನ್ಯ ಸಭಾಪತಿಯವರಿಗೆ ಕೊಡಿ ಸ್ವಾಮಿ. ನಾವು ಬೇಡ ಎಂದು ಹೇಳಲಿಲ್ಲವಲ್ಲ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ನಾವು ಚರ್ಚೆ ಮಾಡುವುದಕ್ಕೆ ಸರ್ಕಾರ ಅಲ್ಲಿ ಹೋಗಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಮಣ್ಣು ಕುಸಿದು ಹೋಗಿ, ಎಂಟು ಜನರು ಮಣ್ಣಲ್ಲಿ ಹೂತು ಹೋಗಿದ್ದಾರೆ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಅದರ ಬಗ್ಗೆ ಚರ್ಚೆ ಮಾಡೋಣ. ಮಾನ್ಯ ಹರಿಪ್ರಸಾದ್‌ರವರೇ, ತಾವು ಅರ್ಜಿ ಕೊಡಿ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಭೋಜೇಗೌಡರೇ, ಇನ್ನೂ ಹೆಣ ಸಿಕ್ಕಿಲ್ಲ..

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಹರಿಪ್ರಸಾದ್‌ರವರೇ, ತಮಗೆ ಅದರ ಬಗ್ಗೆ ಕಾಳಜಿ ಇಲ್ಲ. **(ಗೊಂದಲ)** ಅಲ್ಲಿ ಎಷ್ಟೊಂದು ಅತಿವೃಷ್ಟಿಯಾಗಿದೆ. ಅದರ ಬಗ್ಗೆ ಕಾಳಜಿಯಿದ್ದರೆ, Government ಇಷ್ಟು ಹೊತ್ತಿಗೆ ಪರಿಹಾರ ಕೊಡಬೇಕಾಗಿತ್ತು.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರು ಏನು ಹೇಳಿದ್ದಾರೆ ಎಂದರೆ, ಸಂಪೂರ್ಣವಾದ ಹಕ್ಕು ಇದೆ ಎಂದು ಮಾನ್ಯ ಸಭಾಪತಿಯವರು ಹೇಳಿದ್ದಾರೆ. ಮಾನ್ಯ ಸಭಾಪತಿಯವರೇ, ತಾವು ಅವರಿಗೆ ಅವಕಾಶ ಕೊಡುತ್ತೀರೋ ಇಲ್ಲವೋ ಎನ್ನುವಂತಹ ವಿಚಾರ ತಮಗೆ ಬಿಟ್ಟಿರುವಂತಹದ್ದು.

**ಶ್ರೀ ಎಸ್‌ಎಲ್. ಭೋಜೇಗೌಡ:-** ಮಾನ್ಯ ಹರಿಪ್ರಸಾದ್‌ರವರೇ, ತಾವು ಈಗ ಹೇಳುತ್ತಿರುವ ಮಾತನ್ನು ಒಪ್ಪುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಿಯಮಾವಳಿಯ ಪ್ರಕಾರ ತಮಗೆ ನಾವೇನಾದರೂ ಅರ್ಜಿ ಸಲ್ಲಿಸುವ ಹಾಗಿದ್ದರೆ, ಬೆಳಗ್ಗೆ ೯ ಗಂಟೆ ೩೦ ನಿಮಿಷದೊಳಗೆ ಕೊಡಬೇಕಾಗಿತ್ತು. ಪ್ರತಿಪಕ್ಷದವರು ನಿನ್ನೆ ಮೊನ್ನೆ ಕೊಟ್ಟಿರುವಂತಹದ್ದಕ್ಕೆ ತಾವು ತೀರ್ಮಾನವನ್ನು ಕೊಟ್ಟಿದ್ದೀರಿ. ಅದನ್ನು ಪುನರ್ ಪರಿಶೀಲನೆ ಮಾಡಬೇಕೆಂದರೆ ನಾಳೆ ಬೆಳಗ್ಗೆ ತೀರ್ಮಾನ ತೆಗೆದುಕೊಳ್ಳಿ. ಯಾವ ತೀರ್ಮಾನ ತೆಗೆದುಕೊಂಡರೂ ನಾವು ಅದಕ್ಕೆ ಬದ್ಧರಾಗಿದ್ದೇವೆ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾಳೆ ತೀರ್ಮಾನ ಕೊಡಿ ಎಂದು ಅವರು ಹೇಗೆ ಹೇಳುತ್ತಾರೆ? ಅವರು ತೀರ್ಮಾನ ಕೊಡಿ ಎಂದು ಹೇಳಬಹುದು. ಈಗ ತೀರ್ಮಾನ ಕೊಡಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾವು ಅರ್ಜಿ ಕೊಟ್ಟಿರುವುದು ನಿಜ. ನಮ್ಮ ಮನವಿಯನ್ನು ತೀರಸ್ಕಾರ ಮಾಡಿದ ಮೇಲೆ ಈಗ ಮತ್ತೊಮ್ಮೆ ಬರೆದುಕೊಡಿ ಎಂದು ಹೇಳಿದ್ದಕ್ಕೆ ನಾವು ಈಗಲೇ ಬರೆದುಕೊಟ್ಟಿದ್ದೇವೆ. ಇಲ್ಲಿ ನಿಮ್ಮ ಅರ್ಜಿ ಇಲ್ಲ.

**(ಗೊಂದಲ)**

**ಡಾ॥ ಯತೀಂದ್ರ ಎಸ್. (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ...

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಯತೀಂದ್ರ ಸಿದ್ದರಾಮಯ್ಯನವರೇ, ತಾವು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಸ್.ಎಲ್. ಭೋಜೇಗೌಡ:–** ನಾವು ಅರ್ಜಿ ಕೊಟ್ಟಿರುವಂತಹದ್ದು. ನಾಳೆ ಅಥವಾ ನಾಡಿದ್ದು ಕೊಡಿ ಎನ್ನುವುದಕ್ಕೆ ಅವರ ಅರ್ಜಿ ಇದೆಯೇ?

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಭೋಜೇಗೌಡರೇ, ಅವರು ಹೇಳಿರುವುದು.

**(ಗೊಂದಲ)**

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನಮ್ಮ ಅರ್ಜಿ ಇರುವಂತಹದ್ದು. We are asking our right. ನಾಳೆ ಅರ್ಜಿ ಕೊಡಿ ಎಂದು ಹೇಳುವುದಕ್ಕೆ ಅವರು ಯಾರು ಸ್ವಾಮಿ?

**ಸಭಾಪತಿಯವರು:–** ಮಾನ್ಯ ಭೋಜೇಗೌಡರೇ ಒಂದು ನಿಮಿಷವಿರಿ. ಅರ್ಜಿಯನ್ನು ನಾಳೆ ಕೊಡೋಣ, ನಾಡಿದ್ದು ಕೊಡೋಣ ಎಂದಿರಿ. ನಾನು ಹೇಳುವುದನ್ನು ತಾವು ಸ್ವಲ್ಪ ಕೇಳಿ. ನನಗೆ ಸ್ವಲ್ಪ ಬುದ್ಧಿ ಇದೆ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ತಮಗೆ ಖಂಡಿತ ಬುದ್ಧಿ ಇದೆ.

**ಸಭಾಪತಿಯವರು:–** ಧರಣಿ ಮಾಡುವ ಸ್ಥಿತಿಗೆ ಬಂದಾಗ ಅನೇಕ ಕಾರಣಗಳನ್ನು ಹೇಳಿದಿರಿ. ಅನೇಕ ಕಾರಣಗಳನ್ನು ಹೇಳಿದಾಗ, ಇದರ ಬಗ್ಗೆ ಹಿಂದಿನದೆಲ್ಲಾ ನಾನು ಸಂಪೂರ್ಣವಾಗಿ ನೋಡಿದ ನಂತರ ಒಂದು ತೀರ್ಮಾನ ಕೊಡಬೇಕಲ್ಲ. ಪ್ರತಿಯೊಂದು ಕೇಳುವಂತಹ ಅಧಿಕಾರ ಇದೆ ಮತ್ತು ಆ ಅರ್ಜಿಯನ್ನು reconsider ಮಾಡಿಕೊಡಿ ಎಂದು ಕೇಳುವುದಕ್ಕೆ ಅಧಿಕಾರ ಇದೆ. ಹಾಗಾಗಿ ಅರ್ಜಿಯನ್ನು ಕೊಟ್ಟಿದ್ದೀರಿ. ಅರ್ಜಿ ಕೊಟ್ಟಿರುವುದು ಸರಿ ಇದೆ ಎಂದು ಹೇಳಿದ್ದೇನೆ. ಇಷ್ಟೆಲ್ಲಾ ಗಲಾಟೆಯಾದಾಗ, ನಾನು study ಮಾಡಿ ಹೇಳಬೇಕಲ್ಲ.

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಾವು ಈ ಸದನದಲ್ಲಿ ಐದು ದಶಕಗಳಿಗಿಂತ ಹೆಚ್ಚು ಕಾಲ ಇದ್ದೀರಿ. ಎಲ್ಲಾ ವಿಷಯವನ್ನು ಅರೆದು ಕುಡಿದಿದ್ದೀರಿ.

**(ಗೊಂದಲ)**

**ಸಭಾಪತಿಯವರು:–** ನಾನು ಈ ತರಹ ಯಾವಾಗಲೂ ನೋಡಿರಲಿಲ್ಲ.

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ತಾವು ಸರ್ವಜ್ಞರಿಗಿಂತ ಒಂದು ತೂಕ ಜಾಸ್ತಿನೇ ಇದ್ದೀರಿ. ತಾವು ಇದರಲ್ಲಿ ತಿಳಿದುಕೊಳ್ಳುವುದು ಏನಿದೆ?

**Sri B.K.HARIPRASAD:–** Mr. Chairman Sir, Point of Order.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಆ ಪುಸ್ತಕದಲ್ಲಿರುವುದಕ್ಕಿಂತ, ತಮಗೆ ಅನುಭವ ಜಾಸ್ತಿ ಇದೆ.

**(ಗೊಂದಲ)**

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ತಮಗೆ ಪುಸ್ತಕ ಬೇಕಾಗಿಲ್ಲ. ನಮ್ಮಂಥವರು ಪುಸ್ತಕವನ್ನು ನೋಡಬೇಕು. ಆ ಪುಸ್ತಕದಲ್ಲಿರುವುದೆಲ್ಲಾ ತಮ್ಮ ಜ್ಞಾನದಲ್ಲಿ ಇದೆ.

**ಸಭಾಪತಿಯವರು:–** ಮಾನ್ಯ ರವಿಯವರೇ, ಒಂದು ನಿಮಿಷವಿರಿ. ತಮಗೆ ಮಾತನಾಡಲು ಅನುಮತಿ ಕೊಡುತ್ತೇನೆ. ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ, ಸದನದ ಬಾವಿಯಲ್ಲಿದ್ದವರು ಅಲ್ಲಿಗೆ ಹೋಗಿ ಮಾತನಾಡುವ ಅಧಿಕಾರ ಇಲ್ಲ ಎಂಬ ಬಗ್ಗೆ ನಿಯಮದಲ್ಲಿದೆ. ಅದನ್ನು ತಾವು ಓದಿ. ಆದರೆ ತಾವು ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ಹೋಗಿ ಮಾತನಾಡುತ್ತೀರಿ, ಮತ್ತೆ ಸದನದ ಬಾವಿಯೊಳಗೆ ಬರುತ್ತೀರಿ. ತಾವು ನಿಯಮವನ್ನು ಏನು ಅನುಸರಿಸುತ್ತೀರಾ? ವಿರೋಧ ಪಕ್ಷದ ನಾಯಕರು ಸದನದ ಬಾವಿಯಲ್ಲಿದ್ದು, ಅವರು ತಮ್ಮ ಸ್ಥಾನಕ್ಕೆ ಹೋಗಿ ಮಾತನಾಡುವ ಅಧಿಕಾರ ಅವರಿಬ್ಬರಿಗೆ ಮಾತ್ರ ಇರುವಂತಹದ್ದು. ಉಳಿದವರಿಗೆ ಯಾರಿಗೂ ಅಧಿಕಾರ ಇಲ್ಲ. ತಾವು ರೂಲ್ ಪುಸ್ತಕವನ್ನು ಓದಿ. ತಾವು ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ಹೋಗಿ ಮಾತನಾಡುತ್ತೀರಿ ಮತ್ತೆ ಸದನದ ಬಾವಿಯೊಳಗೆ ಬರುತ್ತೀರಿ, ಏನಿದು ಹುಡುಗಾಟಿಕೆಯೇ? ಸದನ ಹೇಗೆ ನಡೆಸುವುದು ಹೇಳಿ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಅವರಿಗೆ ನಿಯಮಾವಳಿ ಬೇಕಿಲ್ಲ.

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ತಾವು ಯಾವ ಪುಸ್ತಕವನ್ನು ನೋಡದೇ, ತಮಗೆ ಇಷ್ಟೊಂದು ತಿಳುವಳಿಕೆ ಇದೆ. ತಾವು ಈಗ ರೂಲಿಂಗ್ ಕೊಟ್ಟುಬಿಡಿ.

**ಸಭಾಪತಿಯವರು:–** ಮಾನ್ಯ ರವಿಕುಮಾರ್‌ರವರೇ ಒಂದು ನಿಮಿಷವಿರಿ. ನಿನ್ನೆ ಮೊನ್ನೆ ಕೊಟ್ಟಿರುವಂತಹದ್ದನ್ನು ತಕ್ಷಣವೇ ನಾನು ಅದನ್ನು ನಿಯಮ ೩೩೦ಕ್ಕೆ ಪರಿವರ್ತನೆ ಮಾಡಿದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ತಾವು ಈಗ ಅದೇ ರೀತಿ ಮಾಡಿ.

**ಸಭಾಪತಿಯವರು:–** ಇಷ್ಟೆಲ್ಲಾ ರಾಡಿಯಾಗಿದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಏಕೆಂದರೆ, ನಾಳೆ ಮತ್ತು ನಾಡಿದ್ದು ಎರಡು ದಿನ ಮಾತ್ರ ಅಧಿವೇಶನ ಇರುವುದು.

**ಶ್ರೀ ಎನ್. ರವಿಕುಮಾರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಎಲ್ಲಾ ಹೊರಗಡೆ ಬರುತ್ತದೆ ಎಂದು…

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇಲ್ಲವೆಂದರೆ, ತಾವು ಈ ಅಧಿವೇಶನವನ್ನು ಇನ್ನು ಒಂದು ವಾರ ಮುಂದುವರೆಸಿ.

**ಸಭಾಪತಿಯವರು:-** ಮಾನ್ಯ ರವಿಯವರೇ ಒಂದು ನಿಮಿಷ ಕೇಳಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 61 ನಿಯಮ ಏನು ಹೇಳುತ್ತದೆಂದರೆ;

*"61. **Restrictions on right to move motion: –***

*61 The right to move the motion for adjournment of the House for the purpose of discussing a definite matter of urgent public importance shall be subject to the following restrictions, namely:–*

*(i) not more than one such motion shall be made at the same sitting;...."*

ಬಹಳ ಸ್ಪಷ್ಟವಾಗಿದೆ. ಇವತ್ತು ಇನ್ನೊಂದು motion move ಮಾಡುವುದಕ್ಕೆ ಅವಕಾಶವಿಲ್ಲ ಎಂಬ ಬಗ್ಗೆ ಬಹಳ ಸ್ಪಷ್ಟವಾಗಿದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದು ಇನ್ನೊಂದು motion ಅಲ್ಲ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ನಾನು ಮಾತನಾಡಿದ ನಂತರ ತಾವು ಹೇಳಿ.

**ಶ್ರೀ ಸಿ.ಟಿ.ರವಿ:-** ಮಾನ್ಯ ಹರಿಪ್ರಸಾದ್‌ರವರೇ, ತಾವು ಬುದ್ಧಿವಂತರು. ಈ ರೀತಿ ಹೇಳುತ್ತೀರೆಂದೇ ನಾವು ಬೇರೆ ನಿಯಮದಲ್ಲಿ ಅರ್ಜಿಯನ್ನು ಕೊಟ್ಟಿದ್ದೇವೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 61ನೆಯ ನಿಯಮ ಈ ರೀತಿ ಇದೆ:-

**"61 ನಿಲುವಳಿ ಸೂಚನೆ ಕೊಡುವ ಹಕ್ಕನ್ನು ನಾವು ನಿರ್ಬಂಧಿಸುವುದು; ಸಾರ್ವಜನಿಕ ಮಹತ್ವವುಳ್ಳ ಒಂದು ಜರೂರು ವಿಷಯದ ಮೇಲೆ ಚರ್ಚೆ ನಡೆಸುವ ಉದ್ದೇಶಕ್ಕಾಗಿ ನಿಲುವಳಿ ಸೂಚನೆಯನ್ನು ತರುವ ಹಕ್ಕು ಕೆಳಕಂಡ ನಿರ್ಬಂಧಗಳಿಗೆ ಒಳಪಟ್ಟಿರತಕ್ಕುದು;**

**1) ಒಂದು ಉಪವೇಶನದಲ್ಲಿ ಅಂಥ ಒಂದಕ್ಕಿಂತ ಹೆಚ್ಚು ನಿಲುವಳಿ ಸೂಚನೆಯನ್ನು ಕೊಡತಕ್ಕದಲ್ಲ;"**

ಈ ನಿಯಮಾವಳಿಯಲ್ಲಿ ಬಹಳ ಸ್ಪಷ್ಟವಾಗಿದೆ.

**ಶ್ರೀ ಸಿ.ಟಿ.ರವಿ:-** ಮುಖ್ಯಮಂತ್ರಿಯವರು kingpin ಎಂದ ಮೇಲೆ ಸಾರ್ವಜನಿಕ ಮಹತ್ವ ಇಲ್ಲ ಎನ್ನುವುದಕ್ಕಾಗುತ್ತದೆಯೇ?

**ಶ್ರೀ ಬಿ.ಕೆ.ಹರಿಪ್ರಸಾದ್:-** ಅದರ ಮೇಲೆ ತಮಗೆ ಇಷ್ಟ ಬಂದ ಹಾಗೇ ಏನು ಬೇಕಾದರೂ ಮಾಡಿ. ಅದಲ್ಲದೇ ಒಂದು ನಿಲುವಳ ಸೂಚನೆಯನ್ನು ಒಂದಕ್ಕಿಂತ ಹೆಚ್ಚು ವಿಷಯವನ್ನು ಚರ್ಚಿಸಕೂಡದು. ನಿಲುವಳ ಸೂಚನೆಯು ಇತ್ತೀಚೆಗೆ ನಡೆದ ನಿರ್ದಿಷ್ಟ ವಿಷಯಕ್ಕಷ್ಟೆ ಸೀಮಿತವಾಗಿರಬೇಕು

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಈಗ ಮಾನ್ಯ ಸಭಾಪತಿಯವರು ಹೇಳಿದ್ದಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:-** ಮಾನ್ಯ ಹರಿಪ್ರಸಾದ್‌ರವರೇ, ಒಂದು ನಿಮಿಷವಿರಿ. ನಾನು ಇದರ ಬಗ್ಗೆ ಹೇಳುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈಗ ನಿಲುವಳ ಸೂಚನೆ ಇಲ್ಲ.

**(ಗೊಂದಲ)**

**ಸಭಾಪತಿಯವರು:-** ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳು ಪುಸ್ತಕದಲ್ಲಿನ ಪುಟ ಸಂಖ್ಯೆ 44 ರಲ್ಲಿರುವ ನಿಯಮ 61 ನ್ನು ಓದಿ.

**"ಒಂದು ಉಪವೇಶನದಲ್ಲಿ ಅಂಥ ಒಂದಕ್ಕಿಂತ ಹೆಚ್ಚು ನಿಲುವಳ ಸೂಚನೆಯನ್ನು ಕೊಡತಕ್ಕದ್ದಲ್ಲ."**

ಅವರು ಇನ್ನೊಂದು ನಿಲುವಳ ಸೂಚನೆ ತಂದಿಲ್ಲ. ನಿಲುವಳ ಸೂಚನೆ ಅದನ್ನು reconsider ಮಾಡಿ ಎಂದು ಹೇಳಿದ್ದಾರೆ.

**ಶ್ರೀ ಛಲವಾದಿ ಟಿ.ನರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದು ಅಷ್ಟೇ ಇರುವಂತಹದ್ದು. ತಾವು ಯಾವುದಕ್ಕಾದರೂ convert ಮಾಡಿ. ಅದನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಆ ರೀತಿ ಇನ್ನೊಂದು ಅರ್ಜಿ ಕೊಟ್ಟಿಲ್ಲ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಬಿಲ್‌ಗಳನ್ನು ತೆಗೆದುಕೊಳ್ಳಿ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮೈಸೂರು ನಗರದಲ್ಲಿ ಹದಿನಾಲ್ಕು ನಿವೇಶನಗಳನ್ನು ಮಾನ್ಯ ಮುಖ್ಯಮಂತ್ರಿಯವರ ಪತ್ನಿಗೆ ಕೊಡಿಸಿದ್ದಾರೆ. ಈ ವಿಷಯ ಕೂಡ ಚರ್ಚೆಯಾಗಬೇಕು.

**(ಗೊಂದಲ)**

**ಸಭಾಪತಿಯವರು:-** ಸದನವನ್ನು ಗುರುವಾರ ಬೆಳಗ್ಗೆ 10 ಗಂಟೆ 30 ನಿಮಿಷದವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಸಂಜೆ 06 ಗಂಟೆ 07 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ 25ನೇ ಜುಲೈ ಮಾಹೆ 2024ರ ಗುರುವಾರ ಬೆಳಗ್ಗೆ 10.30 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)**

><><>